
ಮನುಷ್ಯ ಜಾತಿ
ತಾನೊಂದೆ ವಲಂ

ಚೆಂಬೆಳಕಿನ ಕವಿ

ಚೆನ್ನವೀರ ಕಣವಿ

ಡಾ. ಜಿ. ಎಂ. ಹೆಗಡೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

ಚೆಂಬೆಳಕಿನ ಕವಿ ಚೆನ್ನವೀರ ಕಣವಿ

ಡಾ. ಜಿ. ಎಂ. ಹೆಗಡೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಚೆಂಬೆಳಕಿನ ಕವಿ ಚೆನ್ನವೀರ ಕಣವಿ

ಡಾ. ಜಿ. ಎಂ. ಹೆಗಡೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮.

CHEMBELAKINA KAVI CHENNAVEERA KANAVI - Written by : Dr. G.M. Hegde, Dharwad- *Published by* : **Nadoja Dr. Manu Baligar,** President, **Kannada Sahitya Parishattu**, Pampa Mahakavi Road, Chamarajapete, Bengaluru - 560018 : Pages : vi + 128 : Rs. 120=00 : **2019**

ಪರಿಷತ್ತಿನಿಂದ ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೫೦೦

ಬೆಲೆ : ಒಂದು ನೂರ ಇಪ್ಪತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು – ಡಾ. ಚಂದ್ರಶೇಖರ ಕಂಬಾರ
೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ – ಡಾ. ಪದ್ಮರಾಜ ದಂಡಾವತಿ

ಸದಸ್ಯರು

ಶ್ರೀ ಜರಗನಹಳ್ಳಿ ಶಿವಶಂಕರ್
ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ಪ್ರೊ. ಧರಣೇಂದ್ರ ಕುರಕುರಿ
ಶ್ರೀ ರಂಜಾನ್ ದರ್ಗಾ
ಡಾ. ಬಿ.ಕೆ. ರವಿ
ಡಾ. ತಮಿಳ್ ಸೆಲ್ವಿ
ಡಾ. ದೊಡ್ಡಮಲ್ಲಯ್ಯ
ಡಾ. ಎಚ್.ಎಲ್. ಪುಷ್ಪ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಎ.ಆರ್. ಉಜ್ಜನಪ್ಪ
ಶ್ರೀ ಸಂಜಯ ಅಡಿಗ
ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಗೌರವ ಕಾರ್ಯದರ್ಶಿಗಳು
ಡಾ. ರಾಜಶೇಖರ ಹತಗುಂದಿ
ಶ್ರೀ ವ.ಚ. ಚನ್ನೇಗೌಡ

ಗೌರವ ಕೋಶಾಧ್ಯಕ್ಷರು
ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

ಅಧ್ಯಕ್ಷರ ನುಡಿ

ಇದೀಗ ೯೨ನೇ ವರ್ಷಕ್ಕೆ ಕಾಲಿರಿಸಿರುವ ನಾಡೋಜ ಡಾ. ಚೆನ್ನವೀರ ಕಣವಿಯವರು ಅಂತಃಕರಣದ ಕವಿಯಾಗಿ ಸುಪ್ರಸಿದ್ಧರು. ಕೈಯಲ್ಲಿ ಒಂದು ಕೋಲು ಹಿಡಿದುಕೊಂಡು ತಲೆ ಮೇಲೆ ಒಂದು ಟೋಪಿ ಹಾಕಿಕೊಂಡು ಸದಾ ಬಾಯಿ ತುಂಬ ನಗುವ ಕಣವಿಯವರು ಕನ್ನಡಿಗರ ಪ್ರೀತಿಯ ಕವಿ.


ಅವರು ಎಷ್ಟು ಪ್ರಸಿದ್ಧ ಕವಿ ಎಂದರೆ ಅವರ 'ಸಮಗ್ರ ಕಾವ್ಯ' ಕೃತಿಯೇ ಐದು ಬಾರಿ ಪುನರ್ ಮುದ್ರಣ ಕಂಡಿದೆ. ೧೯೪೯ರಲ್ಲಿ 'ಕಾವ್ಯಾಕ್ಷಿ' ಕವನ ಸಂಕಲನದ ಜೊತೆಗೆ ತಮ್ಮ ಕಾವ್ಯಕೃಷಿಯನ್ನು ಆರಂಭಿಸಿದ ಈ ಸಮನ್ವಯ ಕವಿ, ಇದುವರೆಗೆ ಮೂವತ್ತು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾವ್ಯ ಅವರ ಮುಖ್ಯ ಅಭಿವ್ಯಕ್ತಿ ಎಂಬುದಕ್ಕೆ ಇಷ್ಟು ಸಂಖ್ಯೆಯ ಸಂಕಲನಗಳನ್ನು ಅವರು ಪ್ರಕಟಿಸಿರುವುದೇ ಸಾಕ್ಷಿ. ಅದರ ಜೊತೆಗೆ ವಿಮರ್ಶೆ, ಪ್ರಬಂಧ, ಸಂಪಾದನೆ ಮುಂತಾದ ಪ್ರಕಾರಗಳಲ್ಲಿಯೂ ಅವರದು ಅಸಾಧಾರಣ ಎನ್ನುವ ಕೃಷಿ.

ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಅವಿರತ ಸೇವೆಯನ್ನು ಪರಿಗಣಿಸಿ ಅವರಿಗೆ ಹಾಸನದಲ್ಲಿ ನಡೆದ ೬೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಗೌರವ ನೀಡಿದ್ದ ಕನ್ನಡ ಸಾಹಿತ್ಯ ಪರಿಷತ್ತು ಇದೀಗ ಕನ್ನಡ ನಾಡಿನ ಅತ್ಯಂತ ಪ್ರತಿಷ್ಠಿತವಾದ ನೃಪತುಂಗ ಪ್ರಶಸ್ತಿಯನ್ನು ನೀಡುತ್ತಿದೆ.

ಈ ಸುಸಂದರ್ಭದಲ್ಲಿ ಚೆನ್ನವೀರ ಕಣವಿ ಅವರನ್ನು ಕುರಿತು ಕನ್ನಡದ ಖ್ಯಾತ ವಿಮರ್ಶಕರಾದ ಡಾ. ಜಿ.ಎಂ. ಹೆಗಡೆ ಅವರು ಬರೆದಿರುವ "ಚೆಂಬೆಳಕಿನ ಕವಿ ಚೆನ್ನವೀರ ಕಣವಿ" ಎಂಬ ರಸವಿಮರ್ಶೆಯ ಪುಸ್ತಕ ಪ್ರಕಟವಾಗುತ್ತಿರುವುದು ಸಕಾಲಿಕವಾಗಿದೆ. ಈ ಪುಸ್ತಕ ಬರೆದುಕೊಟ್ಟ ಹೆಗಡೆ ಅವರಿಗೆ ನನ್ನ ಕೃತಜ್ಞತೆಗಳು.

ಕವಿ ಕಣವಿಯವರನ್ನು ಅರ್ಥ ಮಾಡಿಕೊಳ್ಳಲು ಈ ಕೃತಿ ಸಹಾಯಕವಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

ಕಡಿಮೆ ಅವಧಿಯಲ್ಲಿ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿಗೆ ಕೃತಜ್ಞತೆಗಳು.



೩೦-೦೮-೨೦೧೯

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು

ಲೇಖಕರ ನುಡಿ

ಕನ್ನಡಿಗರ ಪ್ರೀತಿಯ ಕವಿಯಾದ ಚೆನ್ನವೀರ ಕಣವಿ ಅವರು ಜೀವನವೇ ಕಾವ್ಯವಾಗಿ ಬಾಳಿದ ನಾಡಿನ ಹಿರಿಯ ಚೇತನವಾಗಿದ್ದಾರೆ. ಪ್ರಾಥಮಿಕ ಶಾಲೆಯ ಶಿಕ್ಷಕರ ಮಕ್ಕಳಾದ ಚೆನ್ನವೀರ ಕಣವಿ ಮತ್ತು ಜಿ. ಎಸ್. ಶಿವರುದ್ರಪ್ಪನವರು ಆಧುನಿಕ ಕನ್ನಡ ಕಾವ್ಯದ ಶ್ರೇಷ್ಠ ಕವಿಗಳಾಗಿ ಖ್ಯಾತರಾಗಿದ್ದಾರೆ. 'ಏನಾದರೂ ಇರಲಿ ಹಾಡು ನಿಲ್ಲಿಸಬೇಡ, ದೀಪ ತಟ್ಟನೆ ಆರಿ ಹೋಗಬಹುದು' ಎಂಬ ಆಳವಾದ ಕಾವ್ಯಶ್ರದ್ಧೆಯಿಂದ ಕಣವಿಯವರು ಏಳು ದಶಕಗಳಿಂದ ಕವಿತೆಯನ್ನು ನಿರಂತರವಾಗಿ ರಚಿಸುತ್ತಲಿದ್ದಾರೆ.

ಕಣವಿಯವರ ಸಮಗ್ರಕಾವ್ಯ ಐದು ಬಾರಿ ಮುದ್ರಣಗೊಂಡು ಕನ್ನಡಿಗರ ಅಪಾರ ಪ್ರೀತಿ ಗಳಿಸಿದೆ. ಅವರ 'ಹೂವು ಹೊರಳುವವು ಸೂರ್ಯನ ಕಡೆಗೆ' ಐದು ಬಾರಿ ಮುದ್ರಣಗೊಂಡಿದೆ. ಕಣವಿ ಅವರ ಭಾವಗೀತೆಗಳ ನಾಲ್ಕು ಧ್ವನಿ ಸುರುಳಿಗಳು ಕನ್ನಡಿಗರ, ರಸಿಕ ಶ್ರೋತೃಗಳ ಮನ ತಣಿಸಿವೆ. 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ', 'ವಿಶ್ವ ವಿನೂತನ ವಿದ್ಯಾ ಚೇತನ', 'ಹೂವು ಹೊರಳುವವು ಸೂರ್ಯನ ಕಡೆಗೆ' ಕೇಳದ ಕನ್ನಡಿಗನಿಲ್ಲ ಎಂಬಷ್ಟರ ಮಟ್ಟಿಗೆ ಅವುಗಳ ಖ್ಯಾತಿ ಇದೆ. ಕಣವಿ ಕಾವ್ಯಭಂಡಾರ ಮತ್ತು ಕಣವಿ ಗದ್ಯದ ಎರಡು ಬೃಹತ್ ಸಂಪುಟಗಳನ್ನು ಕರ್ನಾಟಕ ಸರಕಾರ ಪ್ರಕಟಿಸಿದೆ.

ಕಣವಿಯವರು ಕನ್ನಡ ಲೋಕದಲ್ಲಿ ಸ್ನೇಹ, ಪ್ರೀತಿ, ಸೌಜನ್ಯ, ಮಾನವೀಯ ಅಂತಃಕರಣದ ಕವಿಯಾಗಿ ಪ್ರಸಿದ್ಧರು. ಅವರ ಜೀವನವೂ ಸಹಜವಾಗಿಯೇ ಸಮೃದ್ಧವಾದದ್ದು. ೨೦೧೯ರ ಜೂನ್ ೨೮ ರಂದು ಚೆನ್ನವೀರ ಕಣವಿ ಅವರು ತೊಂಬತ್ತೆರಡರ ಹೊಸ್ತಿಲಲ್ಲಿ ಕಾಲಿರಿಸಿದ್ದಾರೆ. ಕಣವಿಯವರ ತೊಂಬತ್ತರ ಸಂಭ್ರಮದಲ್ಲಿ ಅವರ ಜೀವನ ಸಾಹಿತ್ಯ ಸಾಧನೆಯ ಸಮೀಕ್ಷೆಯ ಪುಸ್ತಕವನ್ನು ಪ್ರಕಟಿಸಿದ ಕನ್ನಡದ ಜಗದ್ಗುರು ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳವರಿಗೆ ನನ್ನ ನಮನಗಳು.

ಈಗ ಪ್ರಕಟವಾಗುತ್ತಿರುವ 'ಚೆಂಬೆಳಕಿನ ಕವಿ ಚೆನ್ನವೀರ ಕಣವಿ' ಕಣವಿಯವರನ್ನು ಕುರಿತ ನನ್ನ ಆರನೆಯ ಪುಸ್ತಕ. ಕಣವಿಯವರು ಹಾಸನದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದಾಗ ಬರೆದ ನನ್ನ 'ಕವಿ ಕಣವಿ' ಪುಸ್ತಕ ಮೂರು ಆವೃತ್ತಿಗಳನ್ನು ಕಂಡಿತು. ಗಡಿನಾಡಿನ ಕನ್ನಡ ಜಾಗೃತಿ ಪುಸ್ತಕ ಮಾಲೆ ನಾನು ಸಂಪಾದಿಸಿದ 'ಕವಿ ಕಣವಿ ಸಂದರ್ಶನ' ಪ್ರಕಟಿಸಿತು. ಕಣವಿಯವರಿಗೆ ಎಪ್ಪತ್ತೈದು ತುಂಬಿದಾಗ ಡಾ. ಗುರುಲಿಂಗ ಕಾಪಸೆಯವರೊಂದಿಗೆ 'ಬೆಳ್ಳಿ ತೇರಿನ ದಾರಿ' ಅಭಿನಂದನ ಗ್ರಂಥ, ಎಂಬತ್ತು ತುಂಬಿದಾಗ 'ಕಣವಿಯವರ ಕವಿತೆ ಹೊಸ ಓದು' ಪುಸ್ತಕ, ಎಂಬತ್ತೈದು

ತುಂಬಿದಾಗ 'ಚೆನ್ನವೀರ ಕಣವಿಯವರ ಆಯ್ದ ಕವಿತೆಗಳ ಅನುಸಂಧಾನ' ಗ್ರಂಥಗಳನ್ನು ಸಂಪಾದಿಸಿದ್ದು ಅವುಗಳಲ್ಲಿರುವ ನಾಡಿನ ಖ್ಯಾತ ವಿಮರ್ಶಕರ ವಿಮರ್ಶಾ ಲೇಖನಗಳು ಕಣವಿ ಕಾವ್ಯಾಧ್ಯಯನಕ್ಕೆ ಸಹಾಯಕವಾಗಿವೆ.

ಕಣವಿಯವರು ನನ್ನ ಪ್ರೀತಿಯ ಕವಿ. ಕಳೆದ ಅರ್ಧ ಶತಮಾನದಿಂದ ಅವರ ಕಾವ್ಯದ ಓದು ನನ್ನ ಅರಿವಿನ ವಿಸ್ತಾರವನ್ನು ಮಾಡುತ್ತಲೆ ಬಂದಿದೆ. ನನ್ನನ್ನು ಬಹುವಾಗಿ ಪ್ರಭಾವಿಸಿದ ಚೆನ್ನವೀರ ಕಣವಿಯವರ ಮನೆ–ಮನಗಳ ನಡುವೆ ಇರುವಂತಾದುದು ನನ್ನ ಜೀವನದ ಭಾಗ್ಯವೆಂದೇ ಹೇಳಬೇಕು. ಕಣವಿಯವರ ನಿರ್ಮಲಾಂತಃಕರಣ, ಅವ್ಯಾಜ ಪ್ರೀತಿ–ವಾತ್ಸಲ್ಯಕ್ಕೆ ಅನಂತ ಪ್ರಣಾಮಗಳು.

ನಾಡೋಜ ಚೆನ್ನವೀರ ಕಣವಿಯವರಿಗೆ ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಪ್ರತಿಷ್ಠಿತ ನೃಪತುಂಗ ಪ್ರಶಸ್ತಿ ಈ ವರ್ಷ ಲಭಿಸಿರುವದು ಹರ್ಷದಾಯಕ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಚೆನ್ನವೀರ ಕಣವಿಯವರ ಜೀವನ ಕಾವ್ಯದರ್ಶನದ 'ಚೆಂಬೆಳಕಿನ ಕವಿ ಚೆನ್ನವೀರ ಕಣವಿ' ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಈ ಪುಸ್ತಕದ ಮೊದಲ ಆವೃತ್ತಿಯ ಪುನರ್ಮುದ್ರಣಕ್ಕೆ ಅನುಮತಿ ನೀಡಿದ ಗದಗಿನ ತೋಂಟದಾರ್ಯ ಮಠದ ಜಗದ್ಗುರು ಡಾ. ಸಿದ್ಧರಾಮ ಮಹಾಸ್ವಾಮಿಗಳವರಿಗೆ ಪ್ರಣಾಮಗಳು. ಈ ಪುಸ್ತಕ ಪ್ರಕಟನೆಗೆ ಕಾರಣರಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ವ. ಚ. ಚೆನ್ನೇಗೌಡರು, ರಾಜಶೇಖರ ಹುತಗುಂದಿ, ವಿಶೇಷ ಅಧಿಕಾರಿಗಳಾದ ಪದ್ಮರಾಜ ದಂಡಾವತಿ, ಕೋಶಾಧ್ಯಕ್ಷರಾದ ಮಲ್ಲಿಕಾರ್ಜುನಯ್ಯ ಹಾಗೂ ಪ್ರಕಟನ ಸಮಿತಿಯ ಎಲ್ಲ ಸದಸ್ಯರಿಗೆ ಧನ್ಯವಾದಗಳು.

ಕವಿ ಕಣವಿಯವರು ತಮ್ಮ 'ಅರವತ್ತರಾಚೆ' ಸುನೀತವೊಂದರಲ್ಲಿ ಹೇಳಿದಂತೆ,

ಬಿಡುವಿಲ್ಲದೋಡಾಡಿ ದಣಿಯದ ರೆಕ್ಕೆ
ಮನೆ ಹಿಡಿದು ಕೂಡುವದೇ ಮೌನದಲಿ ಏನಾದರೂ
ಒಂದು ಸೃಷ್ಟಿಸಬೇಕು ನೆಲ ಅಗೆದು ಬೀಜ ಹಾಕಿ

ಕವಿ ಕಣವಿಯವರ ಜೀವನಾದರ್ಶ ನಮಗೆ ಸ್ಫೂರ್ತಿದಾಯಕವಾಗಿದೆ. 'ಚೆಂಬೆಳಕಿನ ಕವಿ ಚೆನ್ನವೀರ ಕಣವಿ' ಪುಸ್ತಕ ಕಣವಿ ಕಾವ್ಯಾಧ್ಯಯನ ಮಾಡುವ ಓದುಗರಿಗೆ ಉಪಯುಕ್ತವಾಗಲೆಂದು ನಾನು ಆಶಿಸುತ್ತೇನೆ. ನಮ್ಮೆಲ್ಲರ ಪ್ರೀತಿಯ ಕವಿ ಚೆನ್ನವೀರ ಕಣವಿ ಅವರು ನೂರು ಮಳೆಗಾಲಗಳ ಕಾಲ ಬಾಳಿ ಕಾವ್ಯದ ಹೂಮಳೆಯನ್ನು ಸದಾ ಸುರಿಸುತ್ತಿರಲಿ ಎಂದು ಹಾರೈಸೋಣ.

ಧಾರವಾಡ
೨೮ ಅಗಷ್ಟ ೨೦೧೯

ಡಾ. ಜಿ. ಎಂ. ಹೆಗಡೆ
೯೯೪೫೨೯೯೨೭೨

ಪರಿವಿಡಿ

ಚೆನ್ನವೀರ ಕಣವಿ ಜೀವನಪಥ

ಧಾರವಾಡದ ನೆಲದ ಗುಣವೇನೊ ಋಣವೇನೊ
ಕವಿಗಾಳಿ ಸವಿಗಾಳಿ ತೀಡುತಿಹುದು
ಧಾರವಾಡದ ತಾಯ ಮಡಿಲಲ್ಲಿ ಮೊರೆಯಿಟ್ಟ
ದತ್ತವಾಣಿಗೆ ಎದೆಯು ಕೋಡುತಿಹುದು.
....
ಹಸಿರು ಕಣ್ಮನಗಳಲಿ ರಸಭಾವ ಸಂಚಾರ
ಕಿರುವಕ್ಕಳೂ ಕವಿಗಳಾಗಬಹುದು

(ಭಾವಜೀವಿ)

ಆಧುನಿಕ ಕನ್ನಡ ಕಾವ್ಯ ಪ್ರಪಂಚಕ್ಕೆ ಧಾರವಾಡವು ನೀಡಿದ ಮೊದಲ ತಲೆಮಾರಿನ ಕವಿಗಳಾದ ಬೇಂದ್ರೆ, ಗೋಕಾಕರ ನಂತರ ಚೆನ್ನವೀರ ಕಣವಿ ಅವರಿಗೆ ಮಹತ್ವದ ಸ್ಥಾನವಿದೆ. ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಚೆನ್ನವೀರ ಕಣವಿಯವರ ಮನಸ್ಸು ಪಾರಿಜಾತದಂತೆ ಕೋಮಲವಾದದ್ದು. ಹೃದಯ ಹೂವಿನ ಪರಿಮಳದಂತೆ ಮೋಹಕವಾದದ್ದು. ಅವರ ಪ್ರತಿಭೆ ಅನನ್ಯವಾದದ್ದು.

ಚೆನ್ನವೀರ ಕಣವಿ ಅವರು ಭಾವಜೀವಿಯಾಗಿ, ಸ್ನೇಹಜೀವಿಯಾಗಿ, ಪ್ರೀತಿ, ಅಂತಃಕರಣಗಳಿಂದ ಮಾನವೀಯ ಸಂಬಂಧಗಳನ್ನು ಹೊಳೆಯಾಗಿ ಹರಿಸಿದವರು. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಕನ್ನಡ ಕಾವ್ಯ ಪರಂಪರೆಯಲ್ಲಿ ಕಣವಿ ಅವರ ಕಾವ್ಯ ಕಳೆದ ಸುಮಾರು ಏಳು ದಶಕಗಳಲ್ಲಿ ಜೀವಧ್ವನಿಯಾಗಿ ಪ್ರಕಟವಾಗುತ್ತ ಬಂದಿದೆ. ಬತ್ತಲಾರದ ಗಂಗೆಯಂತೆ ಕಾವ್ಯವನ್ನು ನಿರಂತರವಾಗಿ ನೀಡುತ್ತಲಿರುವ ಕಣವಿಯವರ ಸೃಜನಶೀಲತೆ ಅಗಾಧವಾದದ್ದು. ನಿಸರ್ಗದ ಬಗೆಗೆ ಗಾಢವಾದ ಪ್ರೀತಿ, ಮಾನವ ಬದುಕಿನ ಬಗೆಗೆ ಆಳವಾದ ಆಸ್ಥೆ ಹೊಂದಿರುವ ಕಣವಿ ಅವರ ಕವಿತೆಗಳು ಸುಸಂಸ್ಕೃತ ಮನಸ್ಸಿನ ಪ್ರತಿಬಿಂಬವಾಗಿವೆ. ಕಣವಿಯವರ ಜೀವನವೇ ಕಾವ್ಯ, ಕಾವ್ಯವೇ ಜೀವನ ಎನ್ನುವ ರೀತಿಯಲ್ಲಿ ಅವರ ಕವಿ ವ್ಯಕ್ತಿತ್ವ ಬೆಳೆದುಬಂದಿದೆ.

ಚೆನ್ನವೀರ ಕಣವಿ ಅವರು ಹುಟ್ಟಿದ್ದು ಗದಗ ತಾಲೂಕಿನ 'ಹೊಂಬಳ' ಗ್ರಾಮದಲ್ಲಿ (೨೮ ಜೂನ್ ೧೯೨೮). ಅದು ಅವರ ತಾಯಿ ಪಾರ್ವತಮ್ಮನವರ ತವರೂರು. ತಂದೆ ಸಕ್ಕರೆಪ್ಪನವರು ಅದೇ ತಾಲೂಕಿನ ಶಿರುಂದದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ಅದು ನಾಲ್ಕನೆಯ ತರಗತಿಯವರೆಗಿದ್ದ ಏಕೋಪಾಧ್ಯಾಯ ಶಾಲೆಯಾಗಿತ್ತು. ಅವರು ತಮ್ಮ ಸುಸಂಸ್ಕೃತ ನಡವಳಿಕೆಯಿಂದ ಶಿಸ್ತಿನ ಜೀವನದಿಂದ ಊರಿನ ಜನರ ಪ್ರೀತಿ, ಗೌರವಕ್ಕೆ ಪಾತ್ರರಾಗಿದ್ದರು.

ಸಾಹಿತ್ಯ ಪ್ರೇರಣೆ :

ಕಣವಿ ಅವರ ಬಾಲ್ಯಜೀವನ ಕಳೆದದ್ದು ಶಿರುಂದ ಗ್ರಾಮದಲ್ಲಿ. ಹಳ್ಳಿಯ ಬದುಕಿನ ಪರಿಸರ, ಜಾನಪದ ಜೀವನ, ಹಬ್ಬಹುಣ್ಣಿವೆ, ಜಾತ್ರೆ ಉತ್ಸವ, ಜನರ ಪ್ರೀತಿಯ ಬದುಕು ಸಹಜವಾಗಿಯೇ ಕಣವಿಯವರ ಮೇಲೆ ಪ್ರಭಾವ ಬೀರಿತು. ಮನೆಯಲ್ಲಿ ಸಕ್ಕರೆಪ್ಪ ಮಾಸ್ತರರು ತಮ್ಮಷ್ಟಕ್ಕೆ ಹಾಡಿಕೊಳ್ಳುತ್ತಿದ್ದ ತತ್ವಪದ, ಸರ್ಪಭೂಷಣ ಶಿವಯೋಗಿ, ನಿಜಗುಣ ಶಿವಯೋಗಿಯವರ ಅನುಭಾವ ಪದಗಳು, ಅವುಗಳ ನಾದ-ಲಯಗಳು ಕಣವಿಯವರ ಮೇಲೆ ಆಗಲೇ ಪ್ರಭಾವ ಬೀರಿದವು. ಶಾಲೆಯ ವಿವಿಧ ಸ್ಪರ್ಧೆಗಳಲ್ಲಿ ಕಣವಿಯವರು ಮೊದಲಿಗರಾಗಿ ಬರುತ್ತಿದ್ದರಲ್ಲದೆ 'ಮಾಸ್ತರರ ಮಗ ಬಹಳ ಶಾಣ್ಯಾ' ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು. ತಂದೆಯ ಸಾಹಿತ್ಯಾಸಕ್ತಿ, ಓದಿನ ಹವ್ಯಾಸ ಚೆನ್ನವೀರ ಕಣವಿಯವರಲ್ಲೂ ಅಂಕುರಿಸಿತು.

ಶಿರುಂದದ ಪರಿಸರ, ಗ್ರಾಮೀಣ ಸಂಸ್ಕೃತಿ ಕಣವಿಯವರ ಭಾವಜೀವನದ ವಿಕಾಸಕ್ಕೆ ಕಾರಣವಾಯಿತು. ಪಠ್ಯದಲ್ಲಿಯ ಪದ್ಯಗಳನ್ನು ಹಾಡುವದು, ಶುದ್ಧಬರಹ ಬರೆಯುವದು, ಇವುಗಳಲ್ಲಿ ತೊಡಗಿಕೊಂಡಿದ್ದ ಕಣವಿಯವರಲ್ಲಿ ಕಾವ್ಯ ಪ್ರೀತಿ ಹೆಚ್ಚತೊಡಗಿತು. ಪ್ರಾಮಾಣಿಕತೆ, ಅಚ್ಚುಕಟ್ಟುತನ, ಶಿಸ್ತು, ಸಂಯಮಗಳೇ ಮೊದಲಾದ ಸದ್ಗುಣಗಳು ಮೊಳಕೆಯಿಟ್ಟ ಸನ್ನಿವೇಶವದು.

ಕಣವಿಯವರು ನಾಲ್ಕನೆಯ ತರಗತಿಯಲ್ಲಿ ತೇರ್ಗಡೆಯಾಗುವಷ್ಟರಲ್ಲಿ ಕಣವಿಯವರ ತಂದೆ ನಿವೃತ್ತರಾಗಿ ಅವರ ಸ್ಥಾನದಲ್ಲಿ ಅವರ ಹಿರಿಯಣ್ಣ ನೇಮಕವಾಗಿದ್ದರು. ಅವರಿಗೂ ಅಲ್ಲಿಂದ ವರ್ಗ ಆದದ್ದರಿಂದ ಶಿರುಂದದ ಮನೆ ಮಾರಿ, ತಾಯಿಯ ತವರುಮನೆಯಾದ ಹೊಂಬಳಕ್ಕೆ ಬಂದು ಸಕ್ಕರೆಪ್ಪ ಮಾಸ್ತರರು ನೆಲೆಸಿದರು. ಕಣವಿಯವರು ಮುಂದಿನ ವಿದ್ಯಾಭ್ಯಾಸಕ್ಕೆ ಅವರ ಭಾವ (ಶ್ರೀ ಚ. ಅ. ಗೋಗೇರಿ) ಮುಖ್ಯೋಪಾಧ್ಯಾಯರಾಗಿದ್ದ ಧಾರವಾಡದ ಹತ್ತಿರದ 'ಗರಗ' ಗ್ರಾಮಕ್ಕೆ ಬಂದು ಅಲ್ಲಿಯೇ ಮೂರು ವರ್ಷ ಓದಿದರು.

ದೇಶದೆಲ್ಲೆಡೆ ಸ್ವಾತಂತ್ರ್ಯ ಚಳುವಳಿ ಜೋರಾಗಿ ನಡೆಯುತ್ತಿದ್ದ ಕಾಲದಲ್ಲಿ ಕಣವಿಯವರು ಶಾಲೆಯ ಪ್ರಭಾತಪೇರಿಯಲ್ಲಿ ಭಾಗವಹಿಸಿ ದೇಶಭಕ್ತಿಯ ಹಾಡುಗಳನ್ನು ಹೇಳುತ್ತಿದ್ದರು. **'ಎಂಥಾ ಶಾಣ್ಯಾ ಮಹಾತ್ಮಾ ಗಾಂಧಿ ಹಿಂದುಸ್ತಾನಕವನೇ ತಂದಿ', 'ಝೇಂಡಾ ಊಂಚಾ ರಹೇ ಹಮಾರಾ', 'ಕರುನಾಡು ನಮ್ಮ ನಾಡು'** ಇವೇ ಮೊದಲಾದ ದೇಶಭಕ್ತಿ ಗೀತೆಗಳನ್ನು ಕಣವಿ ಹಾಡುತ್ತಿದ್ದರು. ಧಾರವಾಡದಿಂದ ಆಗಾಗ ಬರುತ್ತಿದ್ದ ರಾಜಕೀಯ ಮುಖಂಡರ ಭಾಷಣಗಳನ್ನೂ ಕೇಳುತ್ತಿದ್ದರು. ಗರಗದ ಮಡಿವಾಳೇಶ್ವರರು ಅನುಭಾವಿಗಳಾಗಿ ಖ್ಯಾತರಾದವರು. ಅವರ ಗದ್ದುಗೆಯ ಮಠಕ್ಕೆ ಆಗಾಗ ಹೋಗುತ್ತಿದ್ದರು. ತುಪರಿ ಹಳ್ಳದ ದಂಡೆಯ ಮೇಲೆ ಕುಳಿತು ಸೂರ್ಯಾಸ್ತ ನೋಡುತ್ತಿದ್ದರು. ಗರಗ ಶಾಲೆಯಲ್ಲಿ ಕಣವಿಯವರು **'ಗಾಂಧಿ ಟೋಪಿ'** ನಾಟಕದಲ್ಲಿ ಪಾತ್ರ ವಹಿಸಿದ್ದರು. ಸ್ವಾತಂತ್ರ್ಯದ ಕಲ್ಪನೆ, ಸಾಹಿತ್ಯದ ಅಭಿರುಚಿ ದೇಶಭಕ್ತಿ ಗೀತೆಗಳ ಹಾಡಿನ ಮೂಲಕ ಬೆಳೆದವು.

ಕಣವಿಯವರು ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದರು. ಆ ಕಾಲದಲ್ಲಿ ಮುಲ್ಕಿ ಪರೀಕ್ಷೆ ಪಾಸಾದವರಿಗೆ ಪ್ರಾಥಮಿಕ ಶಾಲೆಯ ಶಿಕ್ಷಕ

ಹುದ್ದೆ ದೊರೆಯುತ್ತಿತ್ತು. ತಮ್ಮ ಮಗ ಶಾಲೆಯ ಶಿಕ್ಷಕನಾದರೆ ಸಾಕು ಎಂದು ಸಕ್ರೆಪ್ಪ ಮಾಸ್ತರರು ಭಾವಿಸಿದ್ದ ಸಂದರ್ಭದಲ್ಲಿ ಚೆನ್ನವೀರ ಕಣವಿಯವರು ಮುಲ್ಕೀ ಪರೀಕ್ಷೆ ಪಾಸಾದ ಕೂಡಲೇ ಪ್ರಾಥಮಿಕ ಶಾಲೆಯ ಶಿಕ್ಷಕ ಹುದ್ದೆಗೆ ಅರ್ಜಿ ಹಾಕಿದ್ದರಾದರೂ ಪ್ರಥಮ ಸ್ಥಾನ ಪಡೆದುದರಿಂದ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಆಶಿಸಿದರು. ಜ್ಞಾನಾರ್ಜನೆಯ ಹಂಬಲ ಬೆಳೆಯುತ್ತಿದ್ದ ಕಾಲದಲ್ಲಿ ಕಣವಿಯವರು ೧೯೪೧ ರಲ್ಲಿ ಧಾರವಾಡಕ್ಕೆ ಬಂದು ರಾಜಾ ಲಖಮನಗೌಡ ಸರದೇಸಾಯಿ ಹೈಸ್ಕೂಲ ಸೇರಿದರು. ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಪಾಸಾದ್ದರಿಂದ ಸರಕಾರಿ ಶಿಷ್ಯವೇತನವೂ ದೊರೆಯಿತು.

ಧಾರವಾಡವು ನಮ್ಮ ನಾಡಿನ ಶೈಕ್ಷಣಿಕ ಕೇಂದ್ರವಾಗಿ, ಸಾಹಿತಿಗಳ ನೆಲೆವೀಡಾಗಿ ಪ್ರಸಿದ್ಧವಾಗಿದೆ. ಕಣವಿಯವರೆ ಹೇಳಿದ ಹಾಗೆ ಇಲ್ಲಿಯ ಸಾಂಸ್ಕೃತಿಕ ಪರಿಸರದಲ್ಲಿ 'ಕವಿಗಾಳಿ, ಸವಿಗಾಳಿ ತೀಡುತಿಹುದು'. ಸಾಹಿತ್ಯಾಭ್ಯಾಸ ಮಾಡುವವರಿಗೆ ಸಾಹಿತ್ಯ ರಚನೆ ಮಾಡುವವರಿಗೆ ಇಲ್ಲಿಯ ಪರಿಸರ ಸಹಜವಾಗಿಯೆ ಸ್ಫೂರ್ತಿ ಕೇಂದ್ರವಾಗಿದೆ. ಚೆನ್ನವೀರ ಕಣವಿಯವರು ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಲೇ ಕವಿತಾರಚನೆಗೆ ತೊಡಗಿದರು. ಸಾಹಿತ್ಯದ ವ್ಯಾಸಂಗ ಮಾಡಿದರು. ಕಿರಿಯರ ಬಳಗ ಕಟ್ಟಿಕೊಂಡ ಅವರು ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೂ ಗಮನ ಹರಿಸಿದರು.

ಮುರುಘಾಮಠದ ಪ್ರಸಾದ ನಿಲಯದಲ್ಲಿ :

ಧಾರವಾಡದಲ್ಲಿರುವ ಮುರುಘಾಮಠವು ಬಹುಕಾಲದಿಂದ ಪ್ರಸಾದ ನಿಲಯವನ್ನು ನಡೆಸಿಕೊಂಡು ಬರುತ್ತಿದೆಯಲ್ಲದೆ ಅನೇಕ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ, ಪ್ರಸಾದ ವ್ಯವಸ್ಥೆ ಮಾಡಿ ಅವರ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತ ಬಂದಿದೆ. ಚೆನ್ನವೀರ ಕಣವಿಯವರೂ ಮುರುಘಾಮಠದಲ್ಲಿದ್ದುಕೊಂಡು ಓದಿದವರು. ಅದನ್ನು ಅವರು ಕೃತಜ್ಞತೆಯಿಂದ ನೆನೆದು ಪ್ರತ್ಯೇಕ ಲೇಖನವನ್ನೇ ಬರೆದಿದ್ದಾರೆ. ಇಂದು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಖ್ಯಾತನಾಮರಾದ ಅನೇಕ ಪ್ರತಿಭಾವಂತರು ಧಾರವಾಡದ ಮುರುಘಾಮಠದಲ್ಲಿದ್ದುಕೊಂಡೇ ವಿದ್ಯಾಭ್ಯಾಸ ಮಾಡಿದ್ದಾರೆ. ಮಠದ ಶ್ರೀಗಳಾದ ಮೃತ್ಯುಂಜಯ ಸ್ವಾಮಿಗಳವರ ಕೃಪಾಶೀರ್ವಾದದಿಂದ ಬೆಳೆದವರು ಚೆನ್ನವೀರ ಕಣವಿಯವರು. ಮಠದಲ್ಲಿ ಪ್ರತಿನಿತ್ಯ ನಸುಕಿನಲ್ಲಿ ಪ್ರಾರ್ಥನೆ, ಸಂಜೆ ಶಿವಾನುಭವ ಪ್ರವಚನಗಳಲ್ಲಿ ಭಾಗಿಯಾಗಿರುತ್ತಿದ್ದ ಕಣವಿಯವರಲ್ಲಿ ವಚನ ಸಾಹಿತ್ಯದ ಬಗೆಗೆ ಒಲವು ಹೆಚ್ಚಿತು. ಅಲ್ಲಿ ಶ್ರಾವಣಮಾಸದಲ್ಲಿ ವಿದ್ವಾಂಸರ ಭಾಷಣಗಳು, ಸಂಗೀತ ಸಭೆಗಳು ನಡೆಯುತ್ತಿದ್ದವು. ಗಾನಗಂಧರ್ವರಾದ ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಸಂಗೀತ, ವಚನಗಳ ಹಾಡುಗಾರಿಕೆಯನ್ನು ಕೇಳಿದ ಕಣವಿಯವರು ಸಂಗೀತದ ರಸಲಹರಿಯನ್ನು ಅನುಭವಿಸಿದರು. ಸ್ವತಃ ಮೃತ್ಯುಂಜಯ ಮಹಾಸ್ವಾಮಿಗಳು ಅನುಭಾವ ಪದಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. ವಿದ್ವಾಂಸರಾದ ಶಿ. ಶಿ. ಬಸವನಾಳರು ವಚನಕಾರರ ಬಗೆಗೂ, ಉತ್ತಂಗಿ ಚೆನ್ನಪ್ಪನವರು ಸರ್ವಜ್ಞನ ಬಗೆಗೂ ಮಾಡಿದ ಉಪನ್ಯಾಸ ಕಣವಿಯವರ ಮೇಲೆ ಪ್ರಭಾವ ಬೀರಿದವು. ಆಲೂರು ವೆಂಕಟರಾಯರು, ಸ. ಸ. ಮಾಳವಾಡರು, ಸಂ. ಶಿ. ಭೂಸನೂರಮಠರು, ಹರ್ಡೇಕರ ಮಂಜಪ್ಪನವರು, ಮೊದಲಾದವರು ಭಾಗವಹಿಸಿದ್ದ ಪ್ರಸಾದ ನಿಲಯದ ಬೆಳ್ಳಿಹಬ್ಬದಲ್ಲಿ ನಡೆದ ಕಾರ್ಯಕ್ರಮಗಳಿಂದ ಅನುಭಾವದ ಚಿಂತನೆಗಳು ಕಣವಿಯವರ ಮನಸ್ಸನ್ನು

ತುಂಬಿಕೊಂಡವು. ಹೀಗೆ ವಚನಕಾರರು, ಸರ್ವಜ್ಞ, ಹರಿಹರ ಕವಿಯ ಬಗೆಗೆ ಕಣವಿಯವರಿಗೆ ವಿಶೇಷ ಆಸಕ್ತಿ ಬೆಳೆಯಿತು. ಮುರುಘಾಮಠಕ್ಕೆ ಆಗಾಗ ಬರುತ್ತಿದ್ದ ಸಾಹಿತಿಗಳು, ಕಲಾವಿದರು, ಸಂಗೀತಗಾರರು ಇವರೆಲ್ಲರ ಪ್ರಭಾವದಿಂದ ಕಣವಿಯವರಲ್ಲಿ ಸಾಂಸ್ಕೃತಿಕ ವ್ಯಕ್ತಿತ್ವವೊಂದು ರೂಪುಗೊಂಡಿತು.

ಆರ್.ಎಲ್.ಎಸ್. ಹೈಸ್ಕೂಲಿನಲ್ಲಿಯೂ ಚೆನ್ನವೀರ ಕಣವಿ ಅವರ ಪ್ರತಿಭೆಗೆ ಚಾಲನೆ ದೊರೆಯುವ ವಾತಾವರಣವಿತ್ತು. ಅಲ್ಲಿ ಮುಖ್ಯಾಧ್ಯಾಪಕರಾಗಿದ್ದ ವೀ.ರು. ಕೊಪ್ಪಳ ಅವರು ಕಣವಿಯವರ ಬರವಣಿಗೆಗೆ ಉತ್ತೇಜನ ನೀಡಿದರು. ಹೈಸ್ಕೂಲಿನ ಮಿಸಲೆನಿಯಲ್ಲಿ ಕಣವಿಯವರ ಕವಿತೆಗಳನ್ನು ಕಂಡು ಮೆಚ್ಚುಗೆಯ ಮಾತನ್ನಾಡಿ ಹುರಿದುಂಬಿಸಿದರು.

ಕಣವಿಯವರನ್ನು ಪ್ರಭಾವಿಸಿದ ಪುಸ್ತಕಗಳು :

ಸಾಹಿತ್ಯದ ಅಭಿರುಚಿ ವಿದ್ಯಾರ್ಥಿ ಜೀವನದಲ್ಲೇ ಕಣವಿಯವರಿಗುಂಟಾಯಿತು. ಗರಗದ ಶಾಲೆಯಲ್ಲಿರುವಾಗ ಗಳಗನಾಥರ 'ಮಾಧವ ಕರುಣಾ ವಿಲಾಸ' ಕೈಗೆ ಸಿಕ್ಕು ಅದನ್ನು ಓದಿದಾಗ ವಿಲಕ್ಷಣ ಅನುಭವವಾಯಿತು. ಧಾರವಾಡದಲ್ಲಿ ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಗ್ರಂಥಾಲಯದಲ್ಲಿದ್ದ ಬೇಂದ್ರೆಯವರ 'ಗರಿ', ಕುವೆಂಪು ಅವರ 'ನವಿಲು', ಮಧುರಚೆನ್ನರ 'ನನ್ನ ನಲ್ಲ', ಕಡೆಂಗೊಡ್ಲು ಶಂಕರಭಟ್ಟರ 'ನಲ್ಮೆ' ಮೊದಲಾದ ಕವನ ಸಂಗ್ರಹಗಳು ಕಣವಿಯವರ ಭಾವಜೀವನದ ಮೇಲೆ ತುಂಬ ಪ್ರಭಾವ ಬೀರಿದವು. ಮಾಸ್ತಿಯವರ ಸಣ್ಣಕತೆಗಳು, ಅ.ನ.ಕೃ. ಅವರ 'ಮಂಗಳಸೂತ್ರ' ಮತ್ತು 'ಸಂಧ್ಯಾರಾಗ', ಗೊರೂರರ 'ನಮ್ಮ ಊರಿನ ರಸಿಕರು', ಶರಶ್ಚಂದ್ರರ 'ದೇವದಾಸ', ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಸ್ವಾಮಿ ವಿವೇಕಾನಂದ', ಮೂರ್ತಿರಾಯರ 'ಲಲಿತ ಪ್ರಬಂಧಗಳು', ಶೇಕ್ಸ್‌ಪಿಯರನ ನಾಟಕಗಳು ಇತ್ಯಾದಿ ಒಂದೊಂದೂ ವಿಶಾಲವಾದ, ವೈವಿಧ್ಯಮಯವಾದ ಪ್ರಪಂಚವನ್ನು, ಮನುಷ್ಯ ವ್ಯಕ್ತಿಯ ಸ್ವಭಾವಗಳನ್ನು ಅವರ ಕಣ್ಣೆದುರು ತೆರೆದು ತೋರಿಸಿದವು. "ಇವುಗಳನ್ನು ಮೊದಲ ಸಲ ಓದಿದಾಗ ಒಂದು ಬಗೆಯ ಗುಂಗು ನನ್ನನ್ನು ಆವರಿಸಿಕೊಳ್ಳುತ್ತಿತ್ತು. ಉಲ್ಲಾಸದಿಂದಲೂ ಅನುಕಂಪದಿಂದಲೂ ಕೂಡಿದ ಮನಸ್ಸು ಅವುಗಳಲ್ಲಿ ಚಿತ್ರಿತವಾದ ಜೀವನದ ಬಗ್ಗೆ ಆಲೋಚನೆಗೆ ತೊಡಗುತ್ತಿತು" ಎಂದು ಚೆನ್ನವೀರ ಕಣವಿಯವರು 'ಪ್ರಭಾವ ಬೀರಿದ ಪುಸ್ತಕಗಳು' ಲೇಖನದಲ್ಲಿ ಹೇಳಿದ್ದಾರೆ.

ಕನ್ನಡ ನಾಡು ನುಡಿಗಳ ಅಭ್ಯುದಯಕ್ಕಾಗಿ ಹುಟ್ಟಿಕೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦) ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗೆ ಮಾತೃಸ್ಥಾನದಲ್ಲಿದೆ. ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಸ್ಥಾನವೂ ಆಗಿದೆ. ಅಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸಾಹಿತ್ಯ ಸಭೆಗಳು ಸಾಹಿತ್ಯ ಪ್ರೇಮಿಗಳನ್ನು ಆಕರ್ಷಿಸುತ್ತಿದ್ದವು. ಕನ್ನಡದ ಬೆಳವಣಿಗೆಗೆ ಅದು ಮಾಡಿದ ಕಾರ್ಯಗಳು ನಾಡಿನ ಚರಿತ್ರೆಯಲ್ಲಿ ಸ್ಮರಣೀಯವಾಗಿವೆ. ಕಣವಿಯವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಯ ಸಭೆಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಅಲ್ಲಿ ನಡೆಯುತ್ತಿದ್ದ ಸಭೆ ಸಮಾರಂಭಗಳಲ್ಲಿ ಬೇಂದ್ರೆ, ಕುವೆಂಪು, ಆನಂದಕಂದ ಮೊದಲಾದ ಕವಿಗಳ ಭಾವಗೀತಗಳ ಹಾಡುಗಾರಿಕೆಯನ್ನು ಕಣವಿಯವರು ತಪ್ಪದೇ ಕೇಳುತ್ತಿದ್ದರು. ಕಾವ್ಯದ ಬಗೆಗೆ ಸಂಭ್ರಮದ ವಾತಾವರಣ ಹರಡಿದ್ದ ಕಾಲವದು. ವಿದ್ಯಾವರ್ಧಕ ಸಂಘ ಏರ್ಪಡಿಸಿದ ಭಾಷಣ ಸ್ಪರ್ಧೆಯಲ್ಲಿಯೂ ಕಣವಿಯವರು ಭಾಗವಹಿಸಿ ಬಹುಮಾನ ಪಡೆದಿದ್ದರು.

ಕಣವಿಯವರು ಕಂಡ ಮೊದಲ ಸಾಹಿತ್ಯ ಸಮ್ಮೇಳನ :

ಚೆನ್ನವೀರ ಕಣವಿಯವರು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಶಿ. ಶಿ. ಬಸವನಾಳರ ಅಧ್ಯಕ್ಷತೆಯಲ್ಲಿ ರಬಕವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೪ರಲ್ಲಿ ಜರುಗಿತು. ರಬಕವಿಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಣವಿಯವರು ಬಹಳ ಉತ್ಸಾಹದಿಂದ ಹೋದರು. ಅಲ್ಲಿ ಕನ್ನಡ ಸಾಹಿತ್ಯದ ದಿಗ್ಗಜರಾದ ಬಿ.ಎಂ.ಶ್ರೀ., ಮಾಸ್ತಿ, ರಾಜರತ್ನಂ, ಅ.ನ.ಕೃ., ಸಿಂಪಿಲಿಂಗಣ್ಣ, ತ.ರಾ.ಸು., ನಿರಂಜನ, ಮಾ. ನಾ. ಚೌಡಪ್ಪ ಮೊದಲಾದ ಹಿರಿಯರನ್ನು ನೋಡಿದರು. ಹಾಗೂ ಅವರ ಭಾಷಣಗಳನ್ನು ಕೇಳಿದರು. ಪ್ರಗತಿಶೀಲ ಸಾಹಿತ್ಯದ ಚಳುವಳಿ ಜೋರಾಗಿದ್ದ ಕಾಲವದು. ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯದ ವಿಚಾರಗೋಷ್ಠಿ ಸಮ್ಮೇಳನದ ವಿಶೇಷ ಆಕರ್ಷಣೆಯಾಗಿತ್ತು. ಬಸವರಾಜ ಕಟ್ಟೀಮನಿ ಸಂಪಾದಿಸುತ್ತಿದ್ದ 'ಉಷಾ' ಪತ್ರಿಕೆಯಲ್ಲಿ ಪ್ರಗತಿಶೀಲ ಸಾಹಿತ್ಯ ಕುರಿತ ಲೇಖನಗಳನ್ನು ಕಣವಿಯವರು ಓದುತ್ತಿದ್ದರು.

ಕರ್ನಾಟಕ ಕಾಲೇಜಿನ ಪದವಿ ವ್ಯಾಸಂಗ :

ಚೆನ್ನವೀರ ಕಣವಿಯವರು ಮೆಟ್ರಿಕ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದುದರಿಂದ ಅವರಿಗೆ ಸರಕಾರಿ ಶಿಷ್ಯವೇತನ ಮುಂದುವರಿಕೆಯಾಗಿ ಕಾಲೇಜು ವ್ಯಾಸಂಗ ಮಾಡಲು ಸಾಧ್ಯವಾಯಿತು. ಧಾರವಾಡದ ಕರ್ನಾಟಕ ಕಾಲೇಜು ಸೇರಿದ ಕಣವಿಯವರು ಬಿ.ಎ. ಪರೀಕ್ಷೆಗೆ ಕನ್ನಡವನ್ನು ಪ್ರಧಾನ ವಿಷಯವಾಗಿ ಆಯ್ಕೆ ಮಾಡಿಕೊಂಡರು. ಇಂಗ್ಲೀಷ್ ಅವರ ಉಪಪ್ರಧಾನ ವಿಷಯವಾಗಿತ್ತು. ಆಗ ಕರ್ನಾಟಕ ಕಾಲೇಜು ಉತ್ತರ ಕರ್ನಾಟಕದಲ್ಲಿಯೇ ಪ್ರಸಿದ್ಧವಾದ ವಿದ್ಯಾಸಂಸ್ಥೆ. ಖ್ಯಾತನಾಮರಾದ ಪ್ರಾಧ್ಯಾಪಕರು ಅಲ್ಲಿದ್ದುದರಿಂದ ಶೈಕ್ಷಣಿಕ ಬೋಧನೆಯ ಜೊತೆಗೆ ಕಾಲೇಜಿನ ಕರ್ನಾಟಕ ಸಂಘದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳೂ ಹೆಚ್ಚಾಗಿ ನಡೆಯುತ್ತಿದ್ದವು. ಪ್ರೊ. ಸ. ಸ. ಮಾಳವಾಡರು ಕನ್ನಡ ಪ್ರಧ್ಯಾಪಕರಾಗಿ ಕಣವಿಯವರಿಗೆ ಸಾಹಿತ್ಯ ವಿಮರ್ಶನ ತತ್ತ್ವಗಳನ್ನು ಪರಿಚಯಿಸಿದರೆ, ಪ್ರೊ. ಆರ್ಮಂಡೊ ಮೆನೆಜೆಸ್ ಅವರು ಇಂಗ್ಲೀಷ್ ಕಾವ್ಯವನ್ನು ಬೋಧಿಸಿದರು. (ಕವಿಯಾಗಿದ್ದ ಪ್ರೊ. ಮೆನೆಜೆಸ್ ಅವರು ಮುಂದೆ ಕಣವಿಯವರ ಕೆಲವು ಕವಿತೆಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದನ್ನು ಇಲ್ಲಿ ಸ್ಮರಿಸಬಹುದು.) ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಕಣವಿಯವರು ಭಾಗವಹಿಸುತ್ತಿದ್ದರು. ಕಾಲೇಜಿನ ಮೊದಲ ವರ್ಷದಲ್ಲೇ ಕಾವ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಬಹುಮಾನವನ್ನು ಪಡೆದರು. ಆ ವರ್ಷ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿದ್ದ ಡಿ.ವಿ.ಜಿ. ಯವರ ಹಸ್ತದಿಂದ ಬಹುಮಾನ ಕೊಡಿಸಲಾಯಿತು. ಡಿ.ವಿ.ಜಿ. ಅವರು ಕಣವಿಯವರ ಬೆನ್ನುತಟ್ಟಿ 'ಎಲ್ಲಿ ನಿಮ್ಮ ಕವಿತೆಗಳು ?

ಅವುಗಳನ್ನು ನೋಡಬೇಕಲ್ಲ' ಎಂದಾಗ ಪ್ರೊ. ಮಳಗಿಯವರು ಅವರಿಗೆ ಕಣವಿಯವರ ಕವಿತೆಗಳನ್ನು ತೋರಿಸಿದರಂತೆ.

ಧಾರವಾಡದ ನಿಸರ್ಗ ಸೌಂದರ್ಯ, ಸಾಂಸ್ಕೃತಿಕ ಪರಿಸರ, ಅವರ ಭಾವ ವಿಕಾಸಕ್ಕೆ ಚೇತೋಹಾರಿಯಾಗಿತ್ತು. ಅಂದಿನ ಪ್ರಸಿದ್ಧ ಪತ್ರಿಕೆಗಳಾದ 'ಜೀವನ', 'ಜಯಂತಿ', 'ಜಯಕರ್ನಾಟಕ'ಗಳಲ್ಲಿ ಕಣವಿಯವರ ಕವಿತೆಗಳು ಪ್ರಕಟವಾಗಿ ಹಿರಿಯ ಕವಿಗಳ ಲಕ್ಷ್ಯ ಸೆಳೆದವು. ಅವರಿಗೆ ಪ್ರಸಿದ್ಧಿಯನ್ನೂ ತಂದುಕೊಟ್ಟವು. ಇಂದು ಖ್ಯಾತ ಲೇಖಕರಾದ, ಅಂದು ವಿದ್ಯಾರ್ಥಿಗಳಾಗಿದ್ದ ಕೀರ್ತಿನಾಥ ಕುರ್ತಕೋಟಿ, ಶಂಕರ ಮೋಕಾಶಿ ಪುಣೇಕರ, ವಸಂತ ಕವಲಿ, ಚಿದಂಬರ ದೀಕ್ಷಿತ, ಜಿ.ಎಚ್. ಕಣೇಕಲ್, ಶಿವೇಶ್ವರ ದೊಡ್ಡಮನಿ ಮೊದಲಾದ ಗೆಳೆಯರ ಬಳಗ ಚೆನ್ನವೀರ ಕಣವಿಯವರ ಕವಿತೆ ಕುರಿತು ಸ್ನೇಹಪೂರ್ಣ ವಿಮರ್ಶೆ ಚರ್ಚೆ ನಡೆಸುತ್ತಿತ್ತು.

ಕಾವ್ಯಾನುಭವ ಮಂಟಪ :

ಧಾರವಾಡದ ಮಾಳಮಡ್ಡಿಯ ವಿಶಾಲವಾದ ಕೋಣೆಯಲ್ಲಿ ವಾಸಿಸುತ್ತಿದ್ದ ಕಣವಿಯವರು ತಮ್ಮ ಕೋಣೆಯಲ್ಲೇ 'ಕಾವ್ಯಾನುಭವ ಮಂಟಪ' ಆರಂಭಿಸಿ ಅಲ್ಲಿ ಕವಿತಾವಾಚನ, ಅದರ ರಸವಿಮರ್ಶೆ, ಸಾಹಿತ್ಯ ವಿಚಾರ ಚರ್ಚೆ ನಡೆಸುತ್ತಿದ್ದರು. ಸಾಹಿತ್ಯಾಭ್ಯಾಸಿಗಳಾದ ಮೇಲೆ ಉಲ್ಲೇಖಿಸಿದ ಅವರ ಗೆಳೆಯರೆಲ್ಲಾ ಈ 'ಕಾವ್ಯಾನುಭವ ಮಂಟಪ'ದ ಸದಸ್ಯರಾಗಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಅಟ್ಟದಲ್ಲಿ ಹಿರಿಯ ಸಾಹಿತಿಗಳು 'ಸಾಹಿತ್ಯ ಮಂಟಪ'ದಲ್ಲಿ ಸಾಹಿತ್ಯಿಕ ಚರ್ಚೆ ನಡೆಸುತ್ತಿದ್ದರು. ಆಗ ಸೊಲ್ಲಾಪುರದಲ್ಲಿರುತ್ತಿದ್ದ ವರಕವಿ ಬೇಂದ್ರೆಯವರೂ ಕೊಲ್ಲಾಪುರದಲ್ಲಿದ್ದ ಗೋಕಾಕರೂ ಧಾರವಾಡಕ್ಕೆ ೧೯೪೮ ಮೇ ರಜೆಯಲ್ಲಿ ಬಂದಿದ್ದರು. ಕಣವಿಯವರ ಕೋರಿಕೆಯನ್ನು ಪ್ರೀತಿಯಿಂದ ಒಪ್ಪಿಕೊಂಡು ಬೇಂದ್ರೆಯವರು ಹಾಗೂ ಗೋಕಾಕರು 'ಕಾವ್ಯಾನುಭವ ಮಂಟಪ'ಕ್ಕೆ ಬಂದರು. ಅವರ ಭೆಟ್ಟಿಗೆ ಸಭೆಯ ಸ್ವರೂಪ ಬಂದು, ಎರಡು ಮೂರು ತಾಸಿನ ವರೆಗೆ ಹೊಸ ಕಾವ್ಯದ ಕುರಿತು ಭಾಷಣ, ಚರ್ಚೆ ನಡೆದವು. ತಾವು 'ಗೆಳೆಯರ ಗುಂಪ'ನ್ನು ಆರಂಭಿಸಿದ್ದನ್ನು ಬೇಂದ್ರೆಯವರು ಸ್ಮರಿಸಿದರು. ಬೇಂದ್ರೆ ಹಾಗೂ ಗೋಕಾಕರ ಭೆಟ್ಟಿಯ ನಂತರವೂ 'ಕಾವ್ಯಾನುಭವ ಮಂಟಪ' ಮೂರ್ನಾಲ್ಕು ವರ್ಷಗಳವರೆಗೆ ನಿರಂತರವಾಗಿ ನಡೆಯಿತು.

ಮೊದಲ ಸಾರ್ವಜನಿಕ ಕವಿತಾವಾಚನ :

ಚೆನ್ನವೀರ ಕಣವಿಯವರು ಗರಗದಲ್ಲಿರುವಾಗಲೇ ಸ್ವಾತಂತ್ರ್ಯ ಚಳುವಳಿಯ ಕಾರ್ಯಚಟುವಟಿಕೆಗಳ ಮೂಲಕ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಂಡಿದ್ದರು. ಖಾದಿಜುಬ್ಬ ತೊಡುತ್ತಿದ್ದ ಅವರು ಅಪ್ಪಟ ದೇಶಾಭಿಮಾನಿಯಾಗಿದ್ದರು. ಅವರು ಕರ್ನಾಟಕ ಕಾಲೇಜಿನಲ್ಲಿರುವಾಗಲೇ ಭಾರತ ದೇಶ ಸ್ವತಂತ್ರವಾಯಿತು. ಸ್ವಾತಂತ್ರ್ಯೋತ್ಸವ ಆಚರಿಸಲು ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಬೃಹತ್ ಸಭೆ ಸಂಘಟಿತವಾಯಿತು. 'ಬಂಧದಿಂ ಬಿಡುಗಡೆಗೆ' ಎಂಬ ತಮ್ಮ ಕವಿತೆಯನ್ನು ಆ ಬೃಹತ್ ಸಭೆಯಲ್ಲಿ ಓದಿದಾಗ ಕವಿಯೊಡನೆ

ಸಭಿಕರೂ ರೋಮಾಂಚನದ ಅನುಭವ ಪಡೆದರು. ಅದೇ ಕಣವಿಯವರು ಭಾಗವಹಿಸಿದ ಮೊದಲ ಸಾರ್ವಜನಿಕ ಕವಿತಾವಾಚನವಾಗಿತ್ತು. (ಈ ಕವಿತೆ ಅವರ ಪ್ರಥಮ ಸಂಕಲನ 'ಕಾವ್ಯಾಕ್ಷಿ'ಯಲ್ಲಿ ಪ್ರಕಟವಾಗಿದೆ.)

'ಕಾವ್ಯಾಕ್ಷಿ' ಪ್ರಕಟಣೆ :

ಕನ್ನಡದ ಪ್ರಸಿದ್ಧ ಲೇಖಕರಾದ ಹಿರೇಮಲ್ಲೂರ ಈಶ್ವರನ್ ಅವರು ಕಣವಿಯವರ ಕವಿತೆಗಳನ್ನು ನೋಡಿ ಸಂತೋಷಪಟ್ಟರಲ್ಲದೆ ತಮ್ಮ 'ಕಲ್ಪನಾ ಗ್ರಂಥಮಾಲೆ'ಯಲ್ಲಿ ಕಣವಿಯವರ ಮೊದಲ ಕವಿತಾ ಸಂಕಲನ 'ಕಾವ್ಯಾಕ್ಷಿ'ಯನ್ನು ಪ್ರಕಟಿಸಿದರು (೧೯೪೯). ಅದಕ್ಕೆ ಮುನ್ನುಡಿ ಬರೆದ ಬೇಂದ್ರೆಯವರು ಕವಿತೆಗಳ ವಿಶೇಷತೆಯನ್ನು ಮೆಚ್ಚಿಕೊಂಡು ಬರೆದಾಗ ಕಣವಿಯವರಿಗಾದ ಸಂತೋಷ ಅಷ್ಟಿಷ್ಟಲ್ಲ. ಕಣವಿಯವರ 'ಕಾವ್ಯಾಕ್ಷಿ'ಗೆ ಸಾಹಿತಿಗಳ ಹಾಗೂ ಕಾವ್ಯಾಸಕ್ತರ ಮೆಚ್ಚುಗೆಯೂ ಪ್ರಕಟವಾಯಿತು. ಆಗಿನ ಯುವಕವಿಗಳಲ್ಲಿ ಕಣವಿಯವರು ಮುಂಚೂಣಿಯಲ್ಲಿರುವುದು ಸಹೃದಯರ ಗಮನಕ್ಕೆ ಬಂದಿತು.

'ಭಾವಜೀವಿ' ಪ್ರಕಟಣೆ :

ಕವಿತೆಗಳ ರಚನೆಗೆ ಬೇಕಾದ ಪ್ರತಿಭೆ, ಅಭ್ಯಾಸ, ನಿರಂತರ ಪ್ರಯತ್ನ ಕಣವಿಯವರಲ್ಲಿದ್ದು ಅವರು ಶ್ರದ್ಧೆಯಿಂದ ತಮ್ಮ ಕಾವ್ಯ ರಚನೆಗೆ ತೊಡಗಿ ಒಬ್ಬ ಜನಪ್ರಿಯ ಕವಿಯೂ ಆದರು. ಕಣವಿಯವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಕಾವ್ಯಗಳಲ್ಲಿ ಬೇಂದ್ರೆಯವರ 'ಸಖಿಗೀತ', ಮಧುರಚೆನ್ನರ 'ನನ್ನ ನಲ್ಲ', ಕುವೆಂಪು ಅವರ 'ನವಿಲು' ಮುಂ. ಪ್ರಮುಖವಾದವುಗಳು. ಕಣವಿಯವರು ತಮ್ಮ ಕವಿ ವ್ಯಕ್ತಿತ್ವ ಬೆಳೆದು ಬಂದ ಬಗೆಯನ್ನು, ಭಾವ ಜೀವನದ ವಿಕಾಸವನ್ನು ಒಂದು ನೀಳ್ಗವಿತೆಯಲ್ಲಿ ಸೆರೆಹಿಡಿಯಲು ತೊಡಗಿದಾಗ ಅದು 'ಭಾವಜೀವಿ'ಯಾಗಿ ರೂಪುಗೊಂಡಿತು. ಅದರ ಕೆಲವು ಭಾಗ ಆನಂದಕಂದರ ಅಪೇಕ್ಷೆಯ ಮೇರೆಗೆ ಆಗ 'ಜಯಂತಿ'ಯಲ್ಲಿ ಪ್ರಕಟವಾಯಿತು. ಅದನ್ನು ಗಮನಿಸಿದ ಬಸವರಾಜ ಕಟ್ಟೀಮನಿಯವರು ಧಾರವಾಡಕ್ಕೆ ಬಂದಾಗ ಕಣವಿಯವರನ್ನು ಕಂಡರು. ಆಗಲೇ ಅವರಿಬ್ಬರಲ್ಲಿ ಪ್ರೀತಿ, ವಿಶ್ವಾಸಗಳು ಬೆಳೆದವು. ಪರಸ್ಪರ ಸ್ನೇಹಿತರೂ ಆದರು. ಕಣವಿಯವರ 'ಭಾವಜೀವಿ'ಯನ್ನು ಭಾಗಶಃ ಕಂಡು ಸಂತೋಷಪಟ್ಟ ಕಟ್ಟೀಮನಿಯವರು ಅದನ್ನು ಇಡಿಯಾಗಿ ತಮ್ಮ ಪ್ರಗತಿಶೀಲ ಸಾಹಿತ್ಯಮಾಲೆಯಲ್ಲಿ ಪ್ರಕಟಿಸಿದರು. ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಮೂಡಿಬಂದ ಆ ಕಾವ್ಯ ಕನ್ನಡ ಆತ್ಮಕಥನ ಕವನಗಳಲ್ಲಿಯೇ ಒಂದು ಮೈಲುಗಲ್ಲಾಗಿದೆ. 'ಕಾವ್ಯಾನುಭವ ಮಂಟಪ'ದಲ್ಲಿ ಕಣವಿಯವರ ಪ್ರತಿಭೆಯನ್ನು ಗುರುತಿಸಿದ್ದ ಗೋಕಾಕರು 'ಭಾವಜೀವಿ'ಗೆ ಮುನ್ನುಡಿ ಬರೆದು ಕಣವಿ ಪ್ರತಿಭೆಯ ವೈಶಿಷ್ಟ್ಯವನ್ನು ಎತ್ತಿ ಹೇಳಿದರು. ಹೀಗೆ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಚೆನ್ನವೀರ ಕಣವಿಯವರ ಎರಡನೆಯ ಕೃತಿ 'ಭಾವಜೀವಿ' (೧೯೫೦) ಪ್ರಕಟವಾಯಿತು. ಕಣವಿಯವರ ಕಾವ್ಯಶಕ್ತಿಯನ್ನು ವಿದ್ವಾಂಸರೆಲ್ಲ ಗುರುತಿಸಿ, 'ಭಾವಜೀವಿ'ಯನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸಿದರು. ಹೀಗೆ ಕಣವಿಯವರು ಕವಿಯಾಗಿ ವಿದ್ವಾಂಸರ, ಸಹೃದಯರ ಪ್ರೀತಿಯನ್ನು ಗಳಿಸುತ್ತ ತಮ್ಮ ಕಾವ್ಯಸಾಧನೆಯಲ್ಲಿ ಮುನ್ನಡೆದರು.

ಕನ್ನಡದಲ್ಲಿ ಸ್ನಾತಕೋತ್ತರ ಪದವಿ :

೧೯೫೦ ರಲ್ಲಿ ಚೆನ್ನವೀರ ಕಣವಿ ಅವರು ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ ಗಳಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಬಹುಮಾನ ಪಡೆದರು. ಇದರಿಂದ ಶಿಷ್ಯವೇತನ ಮುಂದುವರಿಕೆಯಾಯಿತು. ಅದೇ ತಾನೆ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಎಂ.ಎ. ಆರಂಭಿಸಿ ಒಂದು ವರ್ಷವಾಗಿತ್ತು. ಚೆನ್ನವೀರ ಕಣವಿ ಅವರು ೧೯೫೧ ರಲ್ಲಿ ಕನ್ನಡ ಎಂ.ಎ. ಪದವಿ ತರಗತಿಗೆ ಸೇರಿದಾಗ ಪ್ರೊ. ಸ. ಸ. ಮಾಳವಾಡ, ಪ್ರೊ. ಎಸ್. ಆರ್. ಮಳಗಿ, ಪ್ರೊ. ರಾ. ಯ. ಧಾರವಾಡಕರ ಮೊದಲಾದವರು ಉಪನ್ಯಾಸ ನೀಡುತ್ತಿದ್ದರು. ಅಂತಿಮ ವರ್ಷದಲ್ಲಿದ್ದಾಗ ಪ್ರೊ. ತೀ. ನಂ. ಶ್ರೀಕಂಠಯ್ಯ ಹಾಗೂ ಡಾ. ಆರ್. ಸಿ. ಹಿರೇಮಠರು ಕನ್ನಡ ವಿಭಾಗಕ್ಕೆ ಬಂದರು. ೧೯೫೨ ರಲ್ಲಿ ಉಚ್ಚ ವರ್ಗದಲ್ಲಿ ಕನ್ನಡ ಎಂ. ಎ. ಪದವಿ ಪಡೆದ ಚೆನ್ನವೀರ ಕಣವಿ ಅವರು ಅದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಹೊಸದಾಗಿ ಆರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗದ ಕಾರ್ಯದರ್ಶಿಯಾಗಿ ನೇಮಕಗೊಂಡರು.

ಸೌ. ಶಾಂತಾದೇವಿಯವರೊಂದಿಗೆ ಮದುವೆ :

ಚೆನ್ನವೀರ ಕಣವಿಯವರಿಗೆ ಮಾಳವಾಡ ದಂಪತಿಗಳ ಮೂಲಕ ವಿಜಾಪುರದಲ್ಲಿ ಮಾಮಲೆದಾರರಾಗಿದ್ದ ಎಸ್. ವಿ. ಗಿಡ್ನವರ ಅವರ ಪರಿಚಯವಾಯಿತು. ಗಿಡ್ನವರ ಅವರು ಕಂದಾಯ ಇಲಾಖೆಯಲ್ಲಿ ಅಪರೂಪದ ಅಧಿಕಾರಿಯಾಗಿದ್ದರು. ಬೇಂದ್ರೆ, ಸಿಂಪಿ ಲಿಂಗಣ್ಣ, ಮಧುರಚೆನ್ನರ ನಿಕಟ ಸಂಪರ್ಕ ಪಡೆದಿದ್ದ ಅವರ ಮನೆಯಲ್ಲಿ ಪುಸ್ತಕದ ದೊಡ್ಡ ಭಂಡಾರವಿತ್ತು. ಪುಸ್ತಕ ಪ್ರೀತಿಯ ಗಿಡ್ನವರ ಅವರ ಮನೆಗೆ ಕಣವಿಯವರು ಭೇಟಿ ನೀಡಿದರು. ವಿಜಾಪುರದಲ್ಲಿ ಅವರ ಭಾವ ಗೋಗೇರಿಯವರಲ್ಲಿ ಒಂದು ತಿಂಗಳ ರಜೆ ಕಳೆಯಲು ಕಣವಿಯವರು ಹೋದಾಗ ಗಿಡ್ನವರ ಅವರ ಮೂರನೆಯ ಮಗಳು ಶಾಂತಾ ಅವರು ಕಣವಿಯವರಿಗೆ ಬೇಕಾದ ಪುಸ್ತಕಗಳನ್ನು ಆಯ್ದುಕೊಡುತ್ತಿದ್ದರು. ಕಾವ್ಯಗಾಯನ, ಜನಪದ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಶಾಂತಾ ಭಾಗವಹಿಸುತ್ತಿದ್ದರಲ್ಲದೆ ಕಣವಿಯವರ 'ಕಾವ್ಯಾಕ್ಷಿ'ಯಲ್ಲಿಯ ಪದ್ಯಗಳಿಗೆ ಧಾಟಿ ಹಚ್ಚಿ ಹಾಡಿದ್ದು ಕಣವಿಯವರ ಗಮನ ಸೆಳೆಯಿತು. ರಜೆ ಮುಗಿಸಿ ಧಾರವಾಡಕ್ಕೆ ಬರುವ ಹಿಂದಿನ ದಿನ ಶ್ರೀಮತಿ ಗಿಡ್ನವರ ಅವರು 'ಹುಡುಗಿ ಮನಸ್ಸಿಗೆ ಬಂದಳೆ ?' ಎಂದು ಪ್ರಶ್ನಿಸಿದಾಗ ಕಣವಿ ಅವರಿಗೆ ಆಶ್ಚರ್ಯವಾಯಿತು. ತಮ್ಮ ಮನಸ್ಸಿನಲ್ಲಿದ್ದದ್ದು ಇವರಿಗೆ ಹೇಗೆ ತಿಳಿಯಿತೆಂದು ತಬ್ಬಿಬ್ಬಾದರು. ಕಣವಿಯವರು ಸಮಾನ ಆಸಕ್ತಿಯುಳ್ಳ ಶಾಂತಾರನ್ನು ಮದುವೆಯಾಗಲು ಒಪ್ಪಿದರು. ಎರಡು ವರ್ಷಗಳ ವರೆಗೆ ಅವರಿಬ್ಬರಲ್ಲಿ ಪತ್ರ ವ್ಯವಹಾರ ನಡೆಯುತ್ತಿತ್ತು. ಎಂ.ಎ. ಮುಗಿಸಿದ ಮೇಲೆ ಕಣವಿಯವರು ಶಾಂತಾ ಅವರೊಂದಿಗೆ ಧಾರವಾಡದಲ್ಲಿ ಮದುವೆಯಾದದ್ದು ಮೇ ೧೯೫೨ ರಲ್ಲಿ. ಹೀಗೆ ಧಾರವಾಡದಲ್ಲಿ ಕಣವಿಯವರು ಸುಖಸಂಸಾರ ನಡೆಸಲು ಆರಂಭಿಸಿದರು. ಪ್ರೊ. ಸ. ಸ. ಮಾಳವಾಡ ದಂಪತಿಗಳ ಸಂಬಂಧದಿಂದ ಅವರ ಮನೆ–ಮನಗಳ ನಡುವೆ ಕಣವಿ ದಂಪತಿಗಳು ಸಾಹಿತ್ಯ ಸಂಗಾತಿಗಳಾದರು.

ಮಧುರಚೆನ್ನ ದರ್ಶನ :

ಕಣವಿಯವರು ಮಧುರಚೆನ್ನರನ್ನು ಮೊದಲು ನೋಡಿದ್ದು ವಿಜಾಪುರದ ಗಿಡ್ನವರ ಮನೆಯಲ್ಲಿಯೇ. ಅವರು ಮಧುರಚೆನ್ನರ ಅನುಭಾವದರ್ಶನದಿಂದ ಕಾವ್ಯ ಸ್ಫೂರ್ತಿ ಪಡೆದಿದ್ದರು. ಕಣವಿಯವರು 'ಭಾವಜೀವಿ'ಯನ್ನು ಮಧುರಚೆನ್ನರಿಗೆ ಅರ್ಪಿಸಿದ್ದರು. ಮಧುರಚೆನ್ನರ ಪ್ರತ್ಯಕ್ಷ ದರ್ಶನದಿಂದ ಕಣವಿಯವರು ಪುಳಕಿತರಾದರು. ಕಣವಿಯವರ ಕವಿಜೀವನದ ಉತ್ಕರ್ಷ ಕಂಡು ಮಧುರಚೆನ್ನರೂ ಹರ್ಷ ವ್ಯಕ್ತಪಡಿಸಿದರು. ಅವರನ್ನು ಮತ್ತೊಮ್ಮೆ ಕಾಣುವ ತವಕದಲ್ಲಿದ್ದಾಗಲೇ ಮರುವರ್ಷವೇ ಮಧುರಚೆನ್ನರು ತೀರಿಕೊಂಡರು.

ಪ್ರಸಾರಾಂಗದ ನಿರ್ದೇಶಕರು :

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗದ ಪ್ರಾರಂಭಾವಸ್ಥೆಯಲ್ಲಿ ಕಾರ್ಯ ಮಾಡುವ ವಿಶೇಷ ಹೊಣೆ ಕಣವಿಯವರದಾಗಿತ್ತು. ವಿಶ್ವವಿದ್ಯಾಲಯದ ಜ್ಞಾನ ಪ್ರಸಾರವನ್ನು ಮಾಡುವ ಉದ್ದೇಶದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸುವದು, ಪುಸ್ತಕಗಳ ಪ್ರಕಟನೆ ಮಾಡುವುದು, ಉನ್ನತ ವ್ಯಾಸಂಗದ ನಿಯತಕಾಲಿಕೆಗಳನ್ನು ಆರಂಭಿಸುವುದು ಇವೇ ಮೊದಲಾದ ಘನ ಉದ್ದೇಶವುಳ್ಳ ಈ ಇಲಾಖೆಗೆ ಕಣವಿಯವರು ಕಾರ್ಯದರ್ಶಿಯಾಗಿ ಬಂದದ್ದು ಒಂದು ಶುಭ ಸಮಯವೆನ್ನಬೇಕು. ಆರಂಭದಲ್ಲೇ ಕಣವಿಯವರು ಗ್ರಾಮಗಳಲ್ಲಿ ಉಪನ್ಯಾಸ ಶಿಬಿರ ಏರ್ಪಡಿಸಿ ವಿಶ್ವವಿದ್ಯಾಲಯವು ಜನರ ಹತ್ತಿರ ಬರುವಂತೆ ಮಾಡಿದರು. ಜನಪ್ರಿಯವಾದ ವಿಷಯಗಳಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳ ಪರಿಣತ ಪ್ರಾಧ್ಯಾಪಕರನ್ನು ಕನ್ನಡದಲ್ಲಿ ಉಪನ್ಯಾಸ ಮಾಡಲು ಆಹ್ವಾನಿಸಿ ಅವರಿಂದ ಪುಸ್ತಕ ರೂಪದಲ್ಲಿ ಬರೆಯಿಸುವ ಕಾರ್ಯ ಆರಂಭಿಸಿದರು. ವ್ಯಾಸಂಗ ವಿಸ್ತರಣ ಮಾಲೆಯ ಉಪನ್ಯಾಸ ಶಿಬಿರಗಳು ಜನಪ್ರಿಯವಾಗತೊಡಗಿದವು. ಈ ಇಲಾಖೆಯನ್ನು ಬೆಳೆಸಲು ಕುಲಪತಿಗಳಾದ ಡಾ. ಡಿ. ಸಿ. ಪಾವಟೆಯವರು ಆಲೋಚಿಸಿದರು. ೧೯೫೬ ರಲ್ಲಿ ಕಣವಿಯವರನ್ನು ನಿರ್ದೇಶಕರನ್ನಾಗಿ ಮಾಡಿ ಆ ವಿಭಾಗವನ್ನು ವಿಸ್ತರಿಸಿದರು. ಮುಂದೆ ವ್ಯಾಸಂಗ ವಿಸ್ತರಣ ಇಲಾಖೆ 'ಪ್ರಸಾರಾಂಗ'ವಾಗಿ ಬೆಳೆದು ವಿಶ್ವವಿದ್ಯಾಲಯದ ಕೀರ್ತಿಗೆ ಭಾಜನವಾಗುವಂತೆ ಬಹುಮುಖ ಕಾರ್ಯಗಳನ್ನು ಕೈಕೊಂಡು ನಿರ್ವಹಿಸಿದ ಶ್ರೇಯಸ್ಸು ಕಣವಿಯವರಿಗೆ ಸಲ್ಲುತ್ತದೆ. ಸಂಶೋಧನ ಮಹಾಪ್ರಬಂಧಗಳು, ಜನಪದ ಸಾಹಿತ್ಯ ಕೃತಿಗಳು, ಸಮಾಜವಿಜ್ಞಾನ ಹಾಗೂ ವಿಜ್ಞಾನ ಗ್ರಂಥಗಳು, 'ಕಲಾ ಪ್ರಪಂಚ'ದಂತಹ ಹೆಬ್ಬೊತ್ತಿಗೆಗಳು, ವ್ಯಾಸಂಗ ವಿಸ್ತರಣ ಉಪನ್ಯಾಸ ಗ್ರಂಥಗಳು, ಪಠ್ಯಪುಸ್ತಕಗಳು, ಕನ್ನಡ ವಿಭಾಗದ ಯೋಜನೆಗಳಾದ ವಚನ ವಾಙ್ಮಯ ಪ್ರಕಟನೆ, ಸಂಪಾದನೆ, ಸಂಶೋಧನೆಯ ಗ್ರಂಥಗಳು, ಶಾಸನ ಸಂಪುಟಗಳು, ಭಾಷಾ ವಿಜ್ಞಾನ, ತಂತ್ರಜ್ಞಾನ, ಇತಿಹಾಸ –ಹೀಗೆ ಹಲವು ಸಾಹಿತ್ಯ ಶಾಸ್ತ್ರ ಗ್ರಂಥಗಳನ್ನು ಬೃಹತ್ ಪ್ರಮಾಣದಲ್ಲಿ ಪ್ರಕಟಿಸುವ ಗುರುತರ ಹೊಣೆಯನ್ನು ಕಣವಿಯವರು ನಡೆಸಿದ್ದಲ್ಲದೆ ನೂರಾರು ಮೌಲಿಕ ಗ್ರಂಥಗಳು ಬೆಳಕು ಕಾಣುವಂತಾದುದು ದೊಡ್ಡ ಸಾಧನೆಯಾಗಿದೆ.

ವಿಶ್ವವಿದ್ಯಾಲಯ ನಡೆಸುವ ವಿಶೇಷೋಪನ್ಯಾಸ ಮಾಲೆ ವಿದ್ವಜ್ಜನರ ಪ್ರೀತಿಗೆ

ಪಾತ್ರವಾಯಿತು. ವಿಶ್ವವಿದ್ಯಾಲಯದ ವಿದ್ವತ್ ಪತ್ರಿಕೆಗಳೂ, 'ಕರ್ನಾಟಕ ಭಾರತಿ'ಯಂಥ ಪತ್ರಿಕೆಗಳೂ ಪ್ರಾಧ್ಯಾಪಕರ ಸಾಹಿತ್ಯ ಸಂಶೋಧನೆಯ ವ್ಯವಸಾಯಕ್ಕೆ ಮುಕ್ತ ಅವಕಾಶ ಕಲ್ಪಿಸಿದವು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಗ್ರಂಥಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಿದವು. ಹೀಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಥಮ ನಿರ್ದೇಶಕರಾಗಿ ಹಲವು ಹತ್ತು ಯೋಜನೆಗಳನ್ನು ರೂಪಿಸಿ ಶ್ರದ್ಧೆಯಿಂದ ಕಾರ್ಯರೂಪಕ್ಕೆ ಬರುವಂತೆ ಮಾಡಿದ ಚೆನ್ನವೀರ ಕಣವಿಯವರ ಕಾರ್ಯದಕ್ಷತೆ, ಕನ್ನಡ ಪ್ರೀತಿ ಅದ್ವಿತೀಯವಾದದ್ದು. ಪುಸ್ತಕ ಪ್ರಕಟನೆ ಮಾಡುವುದರಲ್ಲಿ ಅವರಿಗಿರುವ ಅಪಾರ ಉತ್ಸಾಹದಿಂದಾಗಿ ಕನ್ನಡ ಪ್ರಕಟನ ಪ್ರಪಂಚಕ್ಕೂ, ಲೇಖಕ ಲೋಕಕ್ಕೂ ತುಂಬ ಉಪಕಾರವಾಗಿದೆ. ಇದರಿಂದ ವಿಶ್ವವಿದ್ಯಾಲಯಕ್ಕೂ, ಪ್ರಸಾರಾಂಗಕ್ಕೂ ಒಳ್ಳೆಯ ಹೆಸರು, ಪ್ರತಿಷ್ಠೆ ಬಂದಿದೆಯೆಂದು ಹೇಳಿದರೆ ಅದು ಸತ್ಯದ ಮಾತಾಗುತ್ತದೆ. ವಿಶ್ವವಿದ್ಯಾಲಯದ ಶಾಶ್ವತ ಕೀರ್ತಿ ಇರುವುದು ಅದು ಪ್ರಕಟಿಸಿದ ಸಂಶೋಧನೆ ಹಾಗೂ ವಿದ್ವತ್ ಸಾಧನೆಯ ಗ್ರಂಥ ಪ್ರಕಟನೆಯ ಮೂಲಕವೇ ಎಂಬುದನ್ನು ಚೆನ್ನಾಗಿ ಅರಿತಿದ್ದ ಕಣವಿಯವರು ಪ್ರಸಾರಾಂಗವನ್ನು ಪುಸ್ತಕ ಪ್ರಕಟಣೆಯ ಗಂಗೋತ್ರಿಯನ್ನಾಗಿಸಿದರು. ಪ್ರಸಾರಾಂಗದ ಬೆಳವಣಿಗೆಯ ಜೊತೆಗೆ ಬಿಡುವಿನಲ್ಲಿ ತಮ್ಮ ಕಾವ್ಯ ರಚನೆಯ ಕಾಯಕವನ್ನು ಕಣವಿಯವರು ನಡೆಸಿದ್ದು ಮುಖ್ಯವಾದ ಸಂಗತಿ. ಪ್ರಸಾರಾಂಗದ ನಿರ್ದೇಶಕರಾಗಿದ್ದ ಅವರಿಗೆ ನಾಡಿನ ಅದೆಷ್ಟೋ ಹಿರಿಕಿರಿಯ ಸಾಹಿತಿಗಳ ಸಂಪರ್ಕ ಸಾನ್ನಿಧ್ಯ ಪ್ರಾಪ್ತವಾಯಿತು. ಅವರು ವಿದ್ವಜ್ಜನರಿಗೂ ಸಾಮಾನ್ಯರಿಗೂ ಸಾಹಿತ್ಯ ಸಂವಹನ ನಡೆಸಿದ್ದು ಒಂದು ಸಾಧನೆಯಾಗಿದೆ. ಚೆನ್ನವೀರ ಕಣವಿಯವರು ಪ್ರಸಾರಾಂಗದ ಮುಖಾಂತರ ನಡೆಸಿದ ಜ್ಞಾನಪ್ರಸಾರದ ಯೋಜನೆಗಳಿಗೆ ಕುಲಸಚಿವರೂ, ಕುಲಪತಿಗಳೂ, ಕನ್ನಡ ವಿಭಾಗದ ಮುಖ್ಯಸ್ಥರೂ ಸಂಪೂರ್ಣ ಬೆಂಬಲ ನೀಡಿದ್ದನ್ನು ಕಣವಿಯವರು ಸ್ಮರಿಸಿಕೊಳ್ಳುತ್ತಾರೆ.

ಕುಲಪತಿ ಹಾಗೂ ಕುಲಸಚಿವರುಗಳು ಕಣವಿಯವರ ಕಾವ್ಯದ ಬಗೆಗೆ ತುಂಬ ಗೌರವಭಾವ ಹೊಂದಿದ್ದರು. ಕುಲಪತಿಗಳಾದ ಡಾ. ಡಿ.ಸಿ. ಪಾವಟೆಯವರ ಅಪೇಕ್ಷೆಯಂತೆ ಕಣವಿಯವರು ಬರೆದ 'ವಿಶ್ವಭಾರತಿಗೆ ಕನ್ನಡದಾರತಿ' ಗೀತೆಯನ್ನು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪ್ರಾರ್ಥನಾ ಗೀತೆಯಾಗಿ ಇಂದಿಗೂ ಹಾಡಲಾಗುತ್ತಿದೆ. (ಇದರ ರಾಗ ಸಂಯೋಜನೆ ಮಾಡಿದವರು ದಿ. ಶಾರದಾ ಹಾನಗಲ್ ಅವರು.) ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರದಾನ ಸಮಾರಂಭದ ಸಂದರ್ಭದಲ್ಲಿ ಆ ಗೀತವನ್ನು ಕೇಳಿ ತಮಗೆ ರೋಮಾಂಚನ ಉಂಟಾಯಿತೆಂದು ರಾಷ್ಟ್ರಕವಿ ಕುವೆಂಪು ಉದ್ಗರಿಸಿದ್ದುಂಟು. ವಿಶ್ವವಿದ್ಯಾಲಯಕ್ಕೆ ಬರುವ ಯುವಕವಿಗಳಿಗೆ ನಿರಂತರ ಮಾರ್ಗದರ್ಶನ ಮಾಡುತ್ತ, ವಿವಿಧ ಕವಿಗೋಷ್ಠಿ, ಸಾಹಿತ್ಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತ ಕಣವಿಯವರು ಪ್ರಸಾರಾಂಗವನ್ನು ಸಾಹಿತ್ಯ ಸಮ್ಮುಖಗೊಳಿಸಿದರು. ಜನಸಮ್ಮುಖರನ್ನಾಗಿಸಿದರು.

ಕಣವಿ ಶಿವರುದ್ರಪ್ಪ ಸ್ನೇಹಬಾಂಧವ್ಯ :

ಚೆನ್ನವೀರ ಕಣವಿ ಅವರಿಗೂ ಜಿ. ಎಸ್. ಶಿವರುದ್ರಪ್ಪನವರಿಗೂ ಅರವತ್ತೈದು ವರ್ಷಗಳಿಂದ ಅಪೂರ್ವವಾದ ಸ್ನೇಹ ಬಾಂಧವ್ಯ ಬೆಳೆದು ಬಂದಿದೆ. ಅವರಿಬ್ಬರೂ ಶಾಲಾ ಶಿಕ್ಷಕರ ಮಕ್ಕಳಾಗಿ ಕನ್ನಡದ ಶ್ರೇಷ್ಠ ಕವಿಗಳಾಗಿದ್ದಾರೆ. ಚೆನ್ನವೀರ ಕಣವಿ

ಅವರು ಧಾರವಾಡದ ಮುರುಘಾಮಠದ ಪ್ರಸಾದನಿಲಯದಲ್ಲಿದ್ದುಕೊಂಡು ವ್ಯಾಸಂಗ ಮಾಡಿದರೆ ಶಿವರುದ್ರಪ್ಪನವರು ತುಮಕೂರಿನ ಸಿದ್ಧಗಂಗೆಯ ಪ್ರಸಾದ ನಿಲಯದಲ್ಲಿದ್ದುಕೊಂಡು ವ್ಯಾಸಂಗ ಮಾಡಿದವರು. ಕಣವಿಯವರ ಮೊದಲ ಕವಿತಾಸಂಕಲನ ಕಾವ್ಯಾಕ್ಷಿಗೆ ಬೇಂದ್ರೆಯವರು ಮುನ್ನುಡಿ ಬರೆದರೆ ಶಿವರುದ್ರಪ್ಪನವರ ಮೊದಲ ಕವಿತಾಸಂಕಲನಕ್ಕೆ ಕುವೆಂಪು ಮುನ್ನುಡಿ ಬರೆದರು. ಕಣವಿಯವರ ಕವಿತೆ 'ಜೀವನ', 'ಜಯಂತಿ, 'ಜಯಕರ್ನಾಟಕ'ಗಳಲ್ಲಿ ಬಂದಂತೆ ಶಿವರುದ್ರಪ್ಪನವರ ಕವಿತೆಗಳೂ ಪ್ರಸಿದ್ಧ ಪತ್ರಿಕೆಗಳಲ್ಲಿ ಬಂದವು. ೧೯೫೦ ರಷ್ಟೊತ್ತಿಗೆ ದಾವಣಗೆರೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಶಿವರುದ್ರಪ್ಪನವರು ಧಾರವಾಡದ ಕಣವಿಯವರ ಸ್ನೇಹವಲಯದಲ್ಲಿ ಬೆರೆತು ಪರಸ್ಪರ ಸ್ನೇಹ ಸಂಬಂಧವನ್ನು ಕೊನೆಯವರೆಗೂ ಮುಂದುವರಿಸಿಕೊಂಡು ಬಂದುದು ಅವರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ. ಕವಿ ಬೇಂದ್ರೆಯವರು ಚೆನ್ನ–ವೀರ, ಶಿವ–ರುದ್ರ ಇವೆರಡೂ ಹೆಸರುಗಳ ಅರ್ಥ ಸೌಂದರ್ಯ ವಿಶಿಷ್ಟವಾಗಿದ್ದು, ಎಲ್ಲಿ ಚೆನ್ನ ಇರುತ್ತದೆಯೋ ಅಲ್ಲಿ ವೀರವೂ, ಎಲ್ಲಿ ಶಿವತ್ವವಿದೆಯೋ ಅಲ್ಲಿ ರುದ್ರಶಕ್ತಿಯೂ ತುಂಬಿರುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಅವರಿಬ್ಬರೂ ವ್ಯಕ್ತಿಯಾಗಿ, ಕವಿಯಾಗಿ, ಸಮಾನವಾಗಿ ಹೆಜ್ಜೆ ಹಾಕುತ್ತ ಆಧುನಿಕ ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದ್ದಾರೆ ಕನ್ನಡ ಕಾವ್ಯ ಪರಂಪರೆಯ ಸಂದರ್ಭದಲ್ಲೂ ಕಣವಿ – ಶಿವರುದ್ರಪ್ಪನವರ ಕಾವ್ಯ ಮಾರ್ಗವನ್ನು ನವ್ಯೋತ್ತರ ಕಾವ್ಯ ಮಾರ್ಗದಲ್ಲಿ ಮಾಡಿದ ಸಾಧನೆಯನ್ನು ವಿಮರ್ಶಕರು ಗುರುತಿಸುತ್ತ ಬಂದಿದ್ದಾರೆ.

ಮೈಸೂರಿನಲ್ಲಿ ೧೯೫೫ ರಲ್ಲಿ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚೆನ್ನವೀರ ಕಣವಿ ಅವರು ವಿಮರ್ಶೆ ಹಾಗೂ ಕವಿಗೋಷ್ಠಿಗಳಲ್ಲಿ ಮೊದಲ ಬಾರಿ ಭಾಗವಹಿಸಿದ್ದರು. ಆಗ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಕುವೆಂಪು ಸ್ವಾಗತಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಕನ್ನಡದ ಅನೇಕ ಹಿರಿಯ ಬರಹಗಾರರ ನಿಕಟ ಪರಿಚಯ ಕಣವಿಯವರಿಗಾಯಿತು. ವಿ.ಸೀ., ಚದುರಂಗ, ಪರಮೇಶ್ವರ ಭಟ್ಟ, ಕೆ.ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ ಮೊದಲಾದವರು ಪ್ರಮುಖರಾಗಿದ್ದರು.

ಸಾಹಿತ್ಯ ಸಂಘಟನೆ :

ಸಾಹಿತ್ಯ ಸಮ್ಮೇಳನ, ವಿಚಾರ ಸಂಕಿರಣ, ಕವಿಗೋಷ್ಠಿಗಳ ಸಂಘಟನೆಯಲ್ಲೂ ಚೆನ್ನವೀರ ಕಣವಿಯವರದು ನಿರಂತರ ದುಡಿಮೆ. ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ೧೯೫೭ ರಲ್ಲಿ ರಾಷ್ಟ್ರಕವಿ ಕುವೆಂಪು ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಸಾಹಿತ್ಯ ಪರಿಷತ್ತು ನಿರ್ಧರಿಸಿತು. ಆಗ ಕಣವಿಯವರು ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಊಟಿಯಲ್ಲಿ ಕಾರ್ಯಕಾರಿ ಸಮಿತಿಯ ಸಭೆ ಮುಗಿಸಿಕೊಂಡು ಬರುವಾಗ ಮೈಸೂರಿನಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ಶಿವಮೂರ್ತಿಶಾಸ್ತ್ರಿಗಳ ಜೊತೆಗೆ ಕುವೆಂಪು ಅವರನ್ನು ಸಮ್ಮೇಳನದ ಅಧ್ಯಕ್ಷತೆ ವಹಿಸಲು, ಆಮಂತ್ರಿಸಲು ತೆರಳಿದಾಗ 'ನೀವು ದಂಡಾಧಿಕಾರಿಗಳಾಗಿಯೇ ಬಂದಿದ್ದೀರಿ' ಎಂದು ಶಿವಮೂರ್ತಿ ಶಾಸ್ತ್ರಿಗಳಿಗೆ ಕುವೆಂಪು ಚೇಷ್ಟೆ ಮಾಡಿದರಂತೆ. ಕುವೆಂಪು ಅವರನ್ನು ಸಮ್ಮೇಳನಾಧ್ಯಕ್ಷರಾಗಿ ಒಪ್ಪಿಸಿಕೊಂಡು ಬಂದ ಸಂತೋಷವೂ ಕಣವಿಯವರದಾಯಿತು.

ಕುವೆಂಪು ತಮ್ಮ ಕುಟುಂಬದ ಸದಸ್ಯರೊಂದಿಗೆ ಧಾರವಾಡಕ್ಕೆ ಬಂದರು. ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಭಾಗವಹಿಸಿ ಸಭಿಕರ ಕಣ್ಮನಗಳನ್ನು ತಣಿಸಿದರು. ಪ್ರೊ. ಮಾಳವಾಡರು, ಕಣವಿಯವರು ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ತಮಗೆ ತೋರಿದ ಪ್ರೀತಿಯನ್ನು ಪ್ರಶಂಸಿಸಿದರು. ಕರ್ನಾಟಕ ಏಕೀಕರಣದ ನಂತರ ವಿಶಾಲ ವ್ಯಾಪ್ತಿಯಲ್ಲಿ ಜರುಗಿದ ಧಾರವಾಡದ ಸಾಹಿತ್ಯ ಸಮ್ಮೇಳನವು ನಾಡಿನ ಎಲ್ಲ ಭಾಗಗಳ ಸಾಹಿತಿಗಳ ಪಾಲ್ಗೊಳ್ಳುವಿಕೆಯಿಂದ ಅಪೂರ್ವ ರೀತಿಯಲ್ಲಿ ನೆರವೇರಿದ್ದನ್ನು ಇಂದಿಗೂ ಅನೇಕರು ನೆನೆದುಕೊಳ್ಳುತ್ತಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕಣವಿಯವರು ಸಾಹಿತ್ಯ ಮಂಟಪದ ಕಾರ್ಯದರ್ಶಿಯಾಗಿ ನಿರಂತರವಾಗಿ ಕಾರ್ಯಕ್ರಮ ಜರುಗಿಸುತ್ತ ಬಂದರಲ್ಲದೆ ಸಾರ್ವಜನಿಕರಲ್ಲಿ ಸಾಹಿತ್ಯ ಪ್ರೀತಿ ಬೆಳೆಸುವ ಕಾರ್ಯ ಮಾಡಿದರು. ಸೊಲ್ಲಾಪುರದಿಂದ ಪುನಃ ಧಾರವಾಡಕ್ಕೆ ಬಂದು ನೆಲೆಸಿದ ಬೇಂದ್ರೆಯವರ ಷಷ್ಟ್ಯಬ್ದಿ ಸಮಾರಂಭದ ಕಾರ್ಯದರ್ಶಿಯಾಗಿ ಡಾ. ಪಾವಟೆಯವರ ಅಧ್ಯಕ್ಷತೆಯಲ್ಲಿ ಅದನ್ನು ವೈಭವಪೂರ್ಣವಾಗಿ ಜರುಗಿಸಿದರು. ವಿಶ್ವವಿದ್ಯಾಲಯ ಹಾಗೂ ಅದರ ಹೊರಗೆ ನಡೆಯುವ ಸಾಹಿತ್ಯಿಕ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಸಾಮಾನ್ಯವಾಗಿ ಕಣವಿಯವರು ಇದ್ದೇ ಇರುತ್ತಿದ್ದುದು ಅವರ ಸಾಹಿತ್ಯ ಸಂಸ್ಕೃತಿಯ ಅನನ್ಯ ಪ್ರೀತಿಯ ದ್ಯೋತಕವಾಗಿದೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ, ಪ್ರಸಾರಾಂಗದ ಸಮಿತಿಗಳು, ರಾಜ್ಯ ಸಾಹಿತ್ಯ ಅಕಾಡಮಿ (ಆರು ವರ್ಷ), ಕೇಂದ್ರ ಸಾಹಿತ್ಯ ಅಕಾಡಮಿ ಜನರಲ್ ಕೌನ್ಸಿಲ್ ಹಾಗೂ ಕನ್ನಡ ಸಲಹಾ ಸಮಿತಿ, (ಹತ್ತು ವರ್ಷ), ನ್ಯಾಶನಲ್ ಬುಕ್ ಟ್ರಸ್ಟ್ (ಮೂರು ವರ್ಷ), ಕಾರ್ಯಕಾರಿ ಸಮಿತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ (ಮೂರು ವರ್ಷ), ಸಿಂಡಿಕೇಟ್ ಸದಸ್ಯರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ (ಮೂರು ವರ್ಷ), ಸದಸ್ಯರು ಕನ್ನಡ ಅಭಿವೃದ್ಧಿ ಪ್ರಾಧಿಕಾರ (ಮೂರು ವರ್ಷ); ಗೋಕಾಕ ಚಳುವಳಿ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿ (ಮೂರು ವರ್ಷ), ಗೌರವಾಧ್ಯಕ್ಷರು ಕನ್ನಡ ಶಕ್ತಿ ಕೇಂದ್ರ ಬೆಂಗಳೂರು (ಐದು ವರ್ಷ), ಅಧ್ಯಕ್ಷರು ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ ಧಾರವಾಡ (೧೯೯೧ ರಿಂದ ಇಲ್ಲಿಯವರೆಗೆ) ಸದಸ್ಯರು ಡಾ. ವಿ. ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಹಾವೇರಿ (೨೦೦೮ ರಿಂದ); ಗೌರವಾಧ್ಯಕ್ಷರು ಧಾರವಾಡ ಸಾಹಿತ್ಯ ಸಂಭ್ರಮ ಹೀಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಉನ್ನತ ಸಲಹಾ ಸಮಿತಿಗಳಲ್ಲಿ ಸದಸ್ಯರಾಗಿ ಕಣವಿಯವರು ಕಾರ್ಯ ಮಾಡಿದ್ದಾರೆ.

'ಚೆಂಬೆಳಕು' ಅಭಿನಂದನ ಗ್ರಂಥ :

ಚೆನ್ನವೀರ ಕಣವಿಯವರಿಗೆ ಐವತ್ತು ವರ್ಷಗಳು ತುಂಬಿದಾಗ 'ಚೆಂಬೆಳಕು' ಎಂಬ ಅಭಿನಂದನ ಗ್ರಂಥವನ್ನು ಡಾ. ಗುರುಲಿಂಗ ಕಾಪಸೆ ಸಂಪಾದಕತ್ವದಲ್ಲಿ ಹೊರತಂದು ಧಾರವಾಡ ಕಲಾಭವನದಲ್ಲಿ ವೈಭವದ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಪು.ತಿ.ನ., ಬೇಂದ್ರೆ, ಶಿವರುದ್ರಪ್ಪ ಬಸವರಾಜ ಕಟ್ಟೀಮನಿ, ಶಾಂತರಸ, ಪಾಟೀಲ ಪುಟ್ಟಪ್ಪ ಮೊದಲಾದವರು ಭಾಗವಹಿಸಿದ ಆ ಸಮಾರಂಭ ಹಲವು ದೃಷ್ಟಿಯಿಂದ ಸ್ಮರಣೀಯವಾದದ್ದು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವೂ

ಕಣವಿಯವರನ್ನು ಸತ್ಕರಿಸಿತಲ್ಲದೆ ಗೌರೀಶ ಕಾಯ್ಕಿಣಿಯವರು ಬರೆದ 'ಚೆನ್ನವೀರ ಕಣವಿ ಕಾವ್ಯದೃಷ್ಟಿ' ವಿಮರ್ಶಾ ಗ್ರಂಥವನ್ನು ಆ ಸಂದರ್ಭದಲ್ಲಿ ಪ್ರಕಟಿಸಿ ತನ್ನ ಗೌರವವನ್ನು ವ್ಯಕ್ತಪಡಿಸಿತು.

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ :

ಚೆನ್ನವೀರ ಕಣವಿ ಅವರ 'ಜೀವಧ್ವನಿ' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯು ಪ್ರಶಸ್ತಿ ನೀಡಿ ಗೌರವಿಸಿದ್ದು ೧೯೮೧ ರಲ್ಲಿ. ಆಗ ನಾಡಿನಾದ್ಯಂತ ಅವರಿಗೆ ಸತ್ಕಾರ ಸಮಾರಂಭಗಳು ಜರುಗಿದವು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಕವಿ ದಂಪತಿಗಳನ್ನು ಸನ್ಮಾನಿಸಿತು. ಅದೇ ವರ್ಷ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ಕಣವಿಯವರು ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರಸಾರಾಂಗದ ಕಾರ್ಯದ ಜೊತೆಗೆ ಎರಡು ವರ್ಷದ ಅವಧಿಗೆ ಅಂದರೆ ನಿವೃತ್ತಿಯವರೆಗೆ ನೇಮಕವಾದರು.

ಗೋಕಾಕ ಚಳುವಳಿಯಲ್ಲಿ ಸೆರೆಮನೆ ವಾಸ :

ಕನ್ನಡ ನಾಡಿನ ಕನ್ನಡಪರವಾದ ದೊಡ್ಡ ಚಳುವಳಿಯೆಂದರೆ ಗೋಕಾಕ ಚಳುವಳಿ. ಕನ್ನಡ ನಾಡಿನಲ್ಲಿ ಶಿಕ್ಷಣ ಕ್ರಮದಲ್ಲಿ ಕನ್ನಡ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಗೋಕಾಕ ಚಳುವಳಿಯಲ್ಲಿ ನಾಡಿನ ಕವಿ ಸಾಹಿತಿ ಕಲಾವಿದರು ಒಂದಾಗಿ ದೊಡ್ಡ ಹೋರಾಟ ನಡೆಸಿದರು. ಧಾರವಾಡ ಈ ಹೋರಾಟದ ಮೂಲ ನೆಲೆ. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಗೆ ಚೆನ್ನವೀರ ಕಣವಿಯವರು ಉಪಾಧ್ಯಕ್ಷರಾಗಿದ್ದರು. ಉಪವಾಸ ಸತ್ಯಾಗ್ರಹ, ಮೆರವಣಿಗೆ ಘೋಷಣೆ ಪ್ರತಿದಿನ ನಡೆಯಿತು. ಹೀಗೆ ಚಳುವಳಿಯ ಉಗ್ರಸ್ವರೂಪ ಭುಗಿಲೆದ್ದಾಗ ಕಣವಿ, ಪಾಟೀಲ ಪುಟ್ಟಪ್ಪ, ಆರ್. ಸಿ. ಹಿರೇಮಠ, ಧಾರವಾಡಕರ, ಬಸವರಾಜ ಕಟ್ಟೀಮನಿ ಮೊದಲಾದ ಸಾಹಿತಿಗಳು ಎಪ್ರಿಲ್ ೨೨, ೧೯೮೨ ರಂದು ಬಂಧನಕ್ಕೊಳಗಾದರು. ಕೊನೆಗೂ ಸರಕಾರ ಗೋಕಾಕ ಚಳುವಳಿಗೆ ಮಣಿದು ಗೋಕಾಕ ವರದಿಯನ್ನು ಸಮಗ್ರವಾಗಿ ಒಪ್ಪಿಕೊಂಡಿತು. ಈ ಹೋರಾಟದಲ್ಲಿ ಕನ್ನಡಪರವಾದ ವೀರಸಂಕಲ್ಪವನ್ನು ಕಣವಿ ಪ್ರಕಟಿಸಿದರು. 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಅವರ ಕವಿವಾಣಿ ಜನರ ಸ್ಫೂರ್ತಿವಾಣಿಯೂ ಆಯಿತು.

ಚೆನ್ನವೀರ ಕಣವಿಯವರು ಕನ್ನಡ ನಾಡಿನಾದ್ಯಂತ ಸಂಚರಿಸಿ ವಿವಿಧ ಸಂದರ್ಭಗಳಲ್ಲಿ, ಸಭೆಗಳಲ್ಲಿ ಸಾಹಿತ್ಯಿಕ ಉಪನ್ಯಾಸ ಮಾಡಿ ಜನತೆಯ ಹೃದಯದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ದೀಪವನ್ನು ಬೆಳಗಿಸಿದ್ದಾರೆ. ಕಣವಿ ಭಾಗವಹಿಸಿದ ಕವಿಗೋಷ್ಠಿಗಳು ಅಸಂಖ್ಯಾತ. ಕವಿಸಮ್ಮೇಳನಗಳಲ್ಲಿ ಕವಿತೆಗಳನ್ನು ಅರ್ಥಪೂರ್ಣವಾಗಿ ವಾಚಿಸುವುದರ ಜೊತೆಗೆ ಕಣವಿ ಅವರು ಕಾವ್ಯ ರಚನೆಯ ವಿಧಾನಗಳನ್ನು ಸಮಕಾಲೀನ ಕಾವ್ಯದ ಅಭಿವ್ಯಕ್ತಿಯ ಕುರಿತಾದ ಚರ್ಚೆಯನ್ನೂ, ವಸ್ತುನಿಷ್ಠವಾದ ವ್ಯಾಖ್ಯಾನವನ್ನೂ ವಿದಿತಪಡಿಸಿ ಹೊಸ ಕಾವ್ಯದ ದಿಕ್ಕುದೆಸೆಗಳನ್ನು ವಿವೇಚಿಸಿ ವಿಮರ್ಶನ ನೋಟವನ್ನು ಬೀರುತ್ತ ಬಂದಿದ್ದಾರೆ. ಕಣವಿಯವರ ಮಾರ್ಗದರ್ಶನದಿಂದ ಅನೇಕ ಯುವಕವಿಗಳು ತಮ್ಮ ಕಾವ್ಯ ಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಕಾವ್ಯದ ಬಗೆಗೆ ಕಣವಿ

ಅವರಿಗೆ ಅಪಾರ ಶ್ರದ್ಧೆ, ಕಾಳಜಿ. ಕಾವ್ಯದ ರಚನಾ ಪ್ರಕ್ರಿಯೆಯ ಬಗೆಗಿರುವ ಅವರ ನಿರಂತರವಾದ ಆಸಕ್ತಿಯ ಪರಿಣಾಮವಾಗಿ ಹೊಸ ಕಾವ್ಯ ವಿಶಿಷ್ಟ ಆಯಾಮ ಪಡೆದುಕೊಳ್ಳಲು ಸಾಧ್ಯವಾಗಿದೆ. ನಿಜವಾದ ಶ್ರೇಷ್ಠ ಕವಿ ಸಮಕಾಲೀನ ಕಾವ್ಯದ ಬಗ್ಗೆ ತಾಳುವ ಉದಾರ ಧೋರಣೆ ಕಣವಿಯವರಲ್ಲಿ ಅಂತಸ್ಥವಾದುದನ್ನು ನಾವು ಕಾಣುತ್ತೇವೆ. ತನ್ನ ಕಾವ್ಯದ ಉತ್ಕರ್ಷದ ಜೊತೆಗೆ ಸಮಕಾಲೀನ ಕವಿಗಳ ಕವಿತೆಯ ವಿಶೇಷತೆಗಳನ್ನು ವಿಶಾಲವಾದ ದೃಷ್ಟಿಯಿಂದ ಸ್ವೀಕರಿಸುತ್ತ ಬಂದ ಕಣವಿಯವರು ಉತ್ತಮ ಕಾವ್ಯದ ಆವಿಷ್ಕಾರವನ್ನು ಪ್ರೀತಿಸುವವರಾಗಿದ್ದಾರೆ. ಈ ದೃಷ್ಟಿಯಿಂದ ಕಣವಿಯವರ ನಿಲುವು ಉತ್ತಮಿಕೆಯನ್ನು ಸದಾ ಸ್ವಾಗತಿಸುವಂತಹದಾಗಿದೆ.

ಕಣವಿಯವರಿಗೆ ೮೫ ವರ್ಷ ತುಂಬಿದಾಗ ೨೦೧೩ ರಲ್ಲಿ ಬೆಂಗಳೂರಿನ ಸಪ್ನ ಬುಕ್ ಹೌಸ್‌ದವರು ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ ಸಂಪಾದಿಸಿದ 'ಚೆನ್ನವೀರ ಕಣವಿಯವರ ಆಯ್ದ ಕವಿತೆಗಳ ಅನುಸಂಧಾನ' ಬೃಹತ್ ಗ್ರಂಥವನ್ನು ಪ್ರಕಟಿಸಿ ಗೌರವಿಸಿದೆ.

ಕರ್ನಾಟಕ ರಾಜ್ಯ ಸರಕಾರದ ವಾರ್ತಾ ಇಲಾಖೆ, ಖ್ಯಾತ ಚಲನಚಿತ್ರ ನಿರ್ದೇಶಕ ನಾಗಾಭರಣ ನಿರ್ದೇಶನದಲ್ಲಿ 'ಕವಿ ಕಣವಿ' ಸಾಕ್ಷಿಚಿತ್ರ ನಿರ್ಮಿಸಿದೆ. ಮೈಸೂರಿನ ಭಾರತೀಯ ಭಾಷಾ ಅಧ್ಯಯನ ಕೇಂದ್ರದವರೂ ಕಣವಿ ಅವರ ಸಾಕ್ಷಿ ಚಿತ್ರ ನಿರ್ಮಿಸಿದ್ದಾರೆ. ಚೆನ್ನವೀರ ಕಣವಿ ಅವರಿಗೆ ನಾಡಿನ ಅದೆಷ್ಟೋ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ :

ಹಾಸನದಲ್ಲಿ ೧೯೯೬ ರ ಡಿಸೆಂಬರ್ ೨೧ ರಿಂದ ೨೪ ರ ವರೆಗೆ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಚೆನ್ನವೀರ ಕಣವಿ ಅವರು ಕನ್ನಡ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಯ ಅಭಿಮಾನದ ಜಾಗೃತಿಗೆ ಕರೆ ನೀಡಿದರು. 'ನಮ್ಮ ದೇಶ, ನಮ್ಮ ಸಮಾಜ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಲೇಖಕನಾದವನು ಅದರಿಂದ ಪ್ರತ್ಯೇಕವಾಗಿ ಉಳಿಯಲಾರ. ನಮ್ಮ ಎಲ್ಲ ಬಗೆಯ ಸೃಜನಾತ್ಮಕ ಬರವಣಿಗೆ ಹಾಗೂ ವಿಮರ್ಶೆಯ ಮೂಲಕ ಭಾರತದ ಪುನಶ್ಶೋಧ ಹಾಗೂ ಭಾರತೀಯತೆಯ ಪುನರ್ವ್ಯಾಖ್ಯಾನ ಅತ್ಯಂತ ಅಗತ್ಯವಾಗಿದೆ' ಎಂಬ ಮೌಲಿಕ ವಿಚಾರಗಳನ್ನು ವ್ಯಕ್ತಪಡಿಸಿ 'ನೀವೆಲ್ಲಿಯವರು ನಾವಲ್ಲಿಯವರೆ, ನಮ್ಮೂರು ದೂರವಿಲ್ಲ. ಕನ್ನಡದ ತವರು ಕರೆದಾಗ ನಮಗೆ ಮೈನವಿರು' ಎಂಬ ಭಾವಪೂರ್ಣ ಆತ್ಮನಿವೇದನೆಯ ಕವಿತೆ ವಾಚಿಸಿದಾಗ ತುಂಬಿದ ಜನಸ್ತೋಮ ಹರ್ಷೋಲ್ಲಾಸ ಅನುಭವಿಸಿತು.

ಚೆನ್ನವೀರ ಕಣವಿಯವರ ವ್ಯಕ್ತಿತ್ವ ತನಗೆ ತಾನೆ ಪರಿಪೂರ್ಣವಾದ ಜೀವನ ದೃಷ್ಟಿಯಿಂದ ಸಮೃದ್ಧವಾದದ್ದು. ಯಾರಿಗೂ ಕೆಡುಕನ್ನು ಬಯಸದ, ಸದಸದ್ವಿವೇಕದಿಂದ ಕೂಡಿದ ಚೇತನ ಅವರದು. ಅವರು ಸದುವಿನಯವೇ ಸದಾಶಿವನೊಲುಮೆ ಎಂದು ತಿಳಿದು ಬಾಳಿದ್ದಾರೆ. ಹಿತಮಿತವಾದ ಮಾತು, ಶುದ್ಧ ಮನದ ವಿಚಾರ, ಮೃದುವಾದ ಭಾವನೆ, ಸಮನ್ವಯ – ಸಮತೂಕದಿಂದ ಕೂಡಿದ ಅವರ ನಡೆನುಡಿಗಳು ಜನತೆಯ ಅಪಾರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗಿವೆ. ಕೆಟ್ಟದ್ದನ್ನು ಮಾಡದ ಯಾರಿಗೂ ಕೆಟ್ಟದ್ದನ್ನು ಬಯಸದ ಕಣವಿಯವರ ವ್ಯಕ್ತಿತ್ವದಲ್ಲಿ ಕಾಣುವ ಸಂಸ್ಕೃತಿ, ಸಜ್ಜನಿಕೆಯನ್ನು ನಾಡಿನ ಜನ ಆದರಭಾವದಿಂದ ಕೊಂಡಾಡುವುದನ್ನು ನಾವು ಕಾಣುತ್ತೇವೆ.

'ಮುಗಿಯದ ಹಾಡು' ಕಾವ್ಯಾಭಿನಂದನ ಗ್ರಂಥ :

ಶ್ರೀ ಕಣವಿಯವರಿಗೆ ಎಪ್ಪತ್ತು ವರ್ಷ ತುಂಬುತ್ತಿರುವ ಶುಭ ಸಂದರ್ಭದಲ್ಲಿ ಅವರ ಗೌರವಾರ್ಥ ಧಾರವಾಡದ 'ಸೃಜನ-ಚಿಂತನ ಬಳಗ'ವು ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿ (೨೮-೬-೧೯೯೮) 'ಮುಗಿಯದ ಹಾಡು' ಕವನ ಸಂಗ್ರಹವನ್ನು ಅವರಿಗೆ ಅರ್ಪಿಸಿತು. ಕನ್ನಡ ನಾಡಿನ ವಿವಿಧ ಭಾಗದ ೫೬ ಕವಿಗಳು ಕಣವಿಯವರನ್ನು ಕುರಿತು ಬರೆದ ಕವಿತೆಗಳನ್ನು ಈ ಸಂಗ್ರಹ ಒಳಗೊಂಡಿದೆ. ಈ ಸಂದರ್ಭದಲ್ಲಿ ಕಣವಿಯವರ ಕಾವ್ಯದ ಬಗ್ಗೆ ಯೋಜಿಸಿದ ವಿಚಾರ ಸಂಕಿರಣದಲ್ಲಿ ಡಾ. ಎಂ. ಎಂ. ಕಲಬುರ್ಗಿ, ಡಾ. ಗಿರಡ್ಡಿ ಗೋವಿಂದರಾಜ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಡಾ. ಸಿದ್ಧಲಿಂಗಯ್ಯ ಅವರು ಭಾಗವಹಿಸಿದ್ದರು.

ಚೆನ್ನವೀರ ಕಣವಿ ಅವರಿಗೆ ಕರ್ನಾಟಕ ಸರಕಾರ ೧೯೯೯ ನೆಯ ವರ್ಷದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

'ಬೆಳ್ಳಿ ತೇರಿನ ದಾರಿ' ಅಭಿನಂದನ ಗ್ರಂಥ :

ಕಣವಿಯವರಿಗೆ ಎಪ್ಪತ್ತೈದು ತುಂಬಿದ ಸಂದರ್ಭದಲ್ಲಿ (೨೦೦೩) ಧಾರವಾಡದಲ್ಲಿ ಸಾಹಿತ್ಯಾಭಿಮಾನಿಗಳು ಅದನ್ನು ಸಾಹಿತ್ಯೋತ್ಸವವನ್ನಾಗಿ ಆಚರಿಸಿದರು. ಕಣವಿಯವರ ಕಾವ್ಯ ಹಾಗೂ ಸಾಹಿತ್ಯ ಕುರಿತು ನಾಡಿನ ಗಣ್ಯ ವಿಮರ್ಶಕರ ವಿಚಾರ ಸಂಕಿರಣದೊಂದಿಗೆ ಅವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ 'ಬೆಳ್ಳಿ ತೇರಿನ ದಾರಿ' (ಕಣವಿ ಕಾವ್ಯದ ವಿಮರ್ಶಾ ಲೇಖನಗಳು) ಅಭಿನಂದನ ಗ್ರಂಥವನ್ನೂ ಕಣವಿಯವರಿಗೆ ಅರ್ಪಿಸಲಾಯಿತು.

'ಕಣವಿಯವರ ಕವಿತೆ ಹೊಸ ಓದು' :

ಕಣವಿಯವರಿಗೆ ೮೧ ತುಂಬಿದಾಗ ೨೦೦೮ ರಲ್ಲಿ ಧಾರವಾಡದ ಸೃಜನ ಚಿಂತನ ಬಳಗ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘ ಒಂದು ದಿನದ ಕಣವಿ ಸಾಹಿತ್ಯ ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ, ಅಭಿನಂದನ ಸಮಾರಂಭ ಏರ್ಪಡಿಸಿದವು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ನಾಡೋಜ ಪಾಪು ಅಧ್ಯಕ್ಷತೆ ವಹಿಸಿದ್ದರು. ಡಾ. ಗಿರಡ್ಡಿ ಗೋವಿಂದರಾಜ ಅಧ್ಯಕ್ಷತೆಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಡಾ. ಎಚ್. ಎಸ್. ವೆಂಕಟೇಶ ಮೂರ್ತಿ, ಡಾ. ಜಿ. ಎನ್. ಉಪಾಧ್ಯ, ಡಾ. ಪ್ರಹ್ಲಾದ ಅಗಸನಕಟ್ಟೆ, ಡಿ.ಎಸ್. ನಾಗಭೂಷಣ, ಡಾ. ವಿನಯಾ ಒಕ್ಕುಂದ ಅವರು ಭಾಗವಹಿಸಿ ಮಾತನಾಡಿದರು. ಸಂಜೆ ನಡೆದ ಅಭಿನಂದನ ಸಮಾರಂಭದಲ್ಲಿ ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪ ಅವರು ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ ಸಂಪಾದಿಸಿದ ಕಣವಿಯವರ ನೂರಾಐದು ಕವಿತೆಗಳ ಪ್ರಾಯೋಗಿಕ ವಿಮರ್ಶೆಯ ಬೃಹತ್ ಸಂಪುಟ 'ಕಣವಿಯವರ ಕವಿತೆ ಹೊಸ ಓದು' ಲೋಕಾರ್ಪಣೆ ಮಾಡಿದರು. ಡಾ. ಜಿ. ಎಸ್. ಆಮೂರ ಅಧ್ಯಕ್ಷತೆ ವಹಿಸಿದ ಸಮಾರಂಭದಲ್ಲಿ ಡಾ. ಎಂ.ಎಂ. ಕಲಬುರ್ಗಿ, ಡಾ. ಮಹೇಶ್ವರಯ್ಯ, ಸವಿತಾ ನಾಗಭೂಷಣ ಮೊದಲಾದವರು ಭಾಗವಹಿಸಿದ್ದರು.

ಚೆನ್ನವೀರ ಕಣವಿಯವರ ಆಯ್ದ ಕವಿತೆಗಳ ಅನುಸಂಧಾನ :

ಕಣವಿಯವರಿಗೆ ಎಂಬತ್ತೈದು ತುಂಬಿದಾಗ ಬೆಂಗಳೂರಿನ ಸಪ್ನಾ ಬುಕ್ ಹೌಸ್‌ದವರು ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ ಸಂಪಾದಿಸಿದ 'ಚೆನ್ನವೀರ ಕಣವಿ ಆಯ್ದ ಕವಿತೆಗಳ ಅನುಸಂಧಾನ' ಎಂಬ ಗ್ರಂಥವನ್ನು ಪ್ರಕಟಿಸಿ ಅವರನ್ನು ಗೌರವಿಸಿದೆ. ಇದರಲ್ಲಿ ಕಣವಿಯವರ ಆಯ್ದ ಕವಿತೆಗಳ ಆನ್ವಯಿಕ ವಿಮರ್ಶೆಯ ಲೇಖನಗಳಿವೆ.

ಕಣವಿಯವರ ಆಯ್ದ ಕವಿತೆಗಳ ಇಂಗ್ಲಿಷ್ ಅನುವಾದವನ್ನು ಕೇಂದ್ರ ಸಾಹಿತ್ಯ ಅಕಾಡಮಿ 'Inviting Life' ಶೀರ್ಷಿಕೆಯಲ್ಲಿ ಪ್ರಕಟಿಸಿದೆ (ಸಂ. ಡಾ. ಕೆ. ರಾಘವೇಂದ್ರರಾವ್).

ಸಮ್ಮೇಳನಗಳ ಅಧ್ಯಕ್ಷತೆ :

ಕಣವಿಯವರು ಅಮೇರಿಕಾದಲ್ಲಿ ೨೦೦೬ ರಲ್ಲಿ ಜರುಗಿದ ೪ನೆಯ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ಆಳ್ವಾಸ್ ನುಡಿಸಿರಿ ಸರ್ವಾಧ್ಯಕ್ಷತೆ (೨೦೦೮), ೨೦೧೦ ರಲ್ಲಿ ದುಬೈ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ವಿಶ್ವ ಕನ್ನಡ ಸಮ್ಮೇಳನ ಸಿರಿಗನ್ನಡ ಕವಿಗೋಷ್ಠಿ ಅಧ್ಯಕ್ಷತೆ (೨೦೧೧), ಮೈಸೂರು ದಸರಾ ಉದ್ಘಾಟನೆ (೨೦೧೬) ಹೀಗೆ ಹಲವು ಗೌರವಗಳು ಕಣವಿಯವರಿಗೆ ಬಂದಿವೆ.

ಕಣವಿ ಪರಿವಾರ :

ಸಾಂಸಾರಿಕ ಜೀವನದಲ್ಲೂ ಕಣವಿ ಅವರು ಭಾಗ್ಯಶಾಲಿಗಳು. ಅವರ ಬಾಳಸಂಗಾತಿ ಶಾಂತಾದೇವಿ ಕಣವಿಯವರು ಕನ್ನಡದ ಖ್ಯಾತ ಕಥೆಗಾರ್ತಿಯಾಗಿದ್ದಾರೆ. ಅವರ ಸಮಗ್ರ ಕಥೆಗಳ ಸಂಗ್ರಹ 'ಕಥಾಮಂಜರಿ' (೨೦೧೨) ಪ್ರಕಟವಾಗಿದೆ. ಕರ್ನಾಟಕ ಸರಕಾರ ೨೦೦೯ ರ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ. ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ೨೦೧೪ ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಅವರ ಮಕ್ಕಳಾದ ಶಿವಾನಂದ, ಚಂದ್ರಮೌಳಿ, ರಂಜನಾ, ಪ್ರಿಯದರ್ಶಿ, ಕರುಣಪ್ರಸಾದ ಅವರು ಬುದ್ಧಿವಂತರಾಗಿದ್ದಾರೆ. ಜೀವನದ ವಿವಿಧ ರಂಗಗಳಲ್ಲಿ ಅವರು ಸಾಧನೆ ಮಾಡಲು ಕಣವಿ ದಂಪತಿಗಳ ಮಾರ್ಗದರ್ಶನ ಉತ್ತೇಜನ ಕಾರಣವಾಗಿದೆ. ಪ್ರೀತಿ ತುಂಬಿದ ಆದರ್ಶ ಸಂಸಾರ ಕಣವಿ ದಂಪತಿಗಳದು. ಕನ್ನಡ ಸಾಹಿತಿ ದಂಪತಿಗಳಲ್ಲಿ ಅವರಿಗೆ ವಿಶಿಷ್ಟವಾದ ಸ್ಥಾನವಿದೆ.

ಕಣವಿಯವರ ವ್ಯಕ್ತಿತ್ವ ಮತ್ತು ಸಾಹಿತ್ಯದಲ್ಲಿ ನಾವು ಭಿನ್ನತೆ ಬಿರುಕು ಕಾಣುವುದು ಸಾಧ್ಯವಿಲ್ಲ. 'ಅಲ್ಲ ಸಲ್ಲದ ವಿಷಮ ವಿಪರೀತ ಭಾವನೆಯ ವಿಷಗಾಳಿ ಎನ್ನ ಬಳಿ ಸುಳಿಯದಿರಲಿ' ಎಂದು ಆಶಿಸಿದ ಕಣವಿ ಅವರಲ್ಲಿ ವಿಶ್ವಭಾವಾತ್ಮಕ ಧೋರಣೆಯಿದೆ. ನಯ-ವಿನಯಗಳು ಕಣವಿಯವರ ಸ್ವಭಾವದಲ್ಲಿ ಮೇಳೈಸಿವೆ. ಸಿಟ್ಟು, ಕ್ರೌರ್ಯ, ರೋಷ, ಆಕ್ರೋಶಗಳಿಂದ ದೂರವಿದ್ದು ಮನಸ್ಸಿನ ಸದಸದ್ವಿವೇಕವನ್ನು ಸದಾ ಜಾಗೃತವಾಗಿಟ್ಟುಕೊಳ್ಳುವ ಗುಣ ಚೆನ್ನವೀರ ಕಣವಿಯವರ ಚೇತನದ ವೈಶಿಷ್ಟ್ಯವಾಗಿದೆ.

ಕಣವಿ ಕಾವ್ಯ ಭಂಡಾರ

ಕಾವ್ಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ತಮ್ಮ ಪ್ರತಿಭೆಯನ್ನು ಕ್ರಿಯಾಶೀಲವಾಗಿಸುತ್ತ ಬಂದ ಕಣವಿಯವರು ಹೊಸ ಕಾವ್ಯಪರಂಪರೆಯಲ್ಲಿ ಶ್ರೇಷ್ಠ ಕವಿಯಾಗಿ ಕಂಗೊಳಿಸುತ್ತಾರೆ. ಚೆನ್ನವೀರ ಕಣವಿಯವರು ತಮ್ಮ ವಿದ್ಯಾರ್ಥಿ ಜೀವನದಲ್ಲೇ ಕಾವ್ಯ ರಚನೆಗೆ ತೊಡಗಿಕೊಂಡರು. ಅರ್ಧ ಶತಮಾನದ ಹಿಂದೆ, ಹೊಸ ಕಾವ್ಯ ಕನ್ನಡದಲ್ಲಿ ಉತ್ಕರ್ಷ ಹೊಂದುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಕಾವ್ಯ ರಚನೆಗೆ ಆರಂಭಿಸಿ ಅದನ್ನು ನಿರಂತರವಾಗಿ ಇಂದಿನವರೆಗೂ ಮುಂದುವರಿಸಿಕೊಂಡು ಬಂದಿದ್ದಾರೆ. 'ಕಾವ್ಯಾಕ್ಷಿ', 'ಭಾವಜೀವಿ' ಕೃತಿಗಳು ಕಣವಿಯವರು ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಪ್ರಕಟವಾದವುಗಳು. ಇಪ್ಪತ್ತರ ಹಿಂದು–ಮುಂದಿನ ತರುಣ ವಯಸ್ಸಿನಲ್ಲಿ ಅಂಥ ಪ್ರಬುದ್ಧ ಕಾವ್ಯ ಬಂದಿದ್ದುದನ್ನು ಗಮನಿಸಿದಾಗ, ಅವರ ಪ್ರತಿಭಾಶಕ್ತಿಯ ಅನನ್ಯತೆ ಲಕ್ಷ್ಯಕ್ಕೆ ಬರುತ್ತದೆ.

ಕಣವಿಯವರ ಕಾವ್ಯದ ಹರವು ವಿಸ್ತಾರವಾದದ್ದು. **ಕಾವ್ಯಾಕ್ಷಿ** (೩೪ ಕವಿತೆಗಳು), **ಭಾವಜೀವಿ** (ನೀಳ್ಗವಿತೆ), **ಆಕಾಶಬುಟ್ಟಿ** (೫೦ ಕವಿತೆಗಳು), **ಮಧುಚಂದ್ರ** (೩೪ ಕವಿತೆಗಳು), **ದೀಪಧಾರಿ** (೧೭ ಕವಿತೆಗಳು), **'ಮಣ್ಣಿನ ಮೆರವಣಿಗೆ'** (೯ ಕವಿತೆಗಳು), **ನೆಲ ಮುಗಿಲು** (೬೦ ಕವಿತೆಗಳು), **ಎರಡು ದಡ** (೨೮ ಕವಿತೆಗಳು), **'ನಗರದಲ್ಲಿ ನೆರಳು'** (೩೧ ಕವಿತೆಗಳು), **ಜೀವ ಧ್ವನಿ** (೪೦ ಕವಿತೆಗಳು), **'ಕಾರ್ತೀಕದ ಮೋಡ'** (೩೦ ಕವಿತೆಗಳು), **ಜೀನಿಯಾ** (೩೩ ಕವಿತೆಗಳು), **'ಶಿಶಿರದಲ್ಲಿ ಬಂದ ಸ್ನೇಹಿತ** (೪೦ ಕವಿತೆಗಳು), **ಹಕ್ಕಿಪುಚ್ಚ** (೧೩ ಕವಿತೆಗಳು), **ಬರೆದು ತೀರದ ಬದುಕು** (೫೪ ಕವಿತೆಗಳು), **ನೀವೇ ಪ್ರಮಾಣು** (೫೪ ಕವಿತೆಗಳು) ಅನುವಾದಿತ ಕವಿತೆಗಳು (೧೩ ಕವಿತೆಗಳು), ಅರೇಬಿಕ್ ಕವಿತೆಗಳು (೧೩ ಕವಿತೆಗಳು) ಹಾಗೂ **ಭೂಮಿ ಬದುಕು** (ಕವಿತೆಗಳು) ಹೀಗೆ ೧೮ ಕವಿತಾ ಸಂಕಲನಗಳಲ್ಲಿ ಬಂದ ಕಣವಿ ಅವರ ಕಾವ್ಯ ಭಂಡಾರದಲ್ಲಿ ೬೦೦ ಕ್ಕೂ ಮಿಕ್ಕಿ ಕವಿತೆಗಳ ಬೃಹತ್ ಸಂಚಯವನ್ನು ನಾವು ಕಾಣುತ್ತೇವೆ. ಕನ್ನಡ ಭಾಷೆಯ ಭಾವಸಂಪತ್ತನ್ನೂ, ಜೀವಧ್ವನಿಯನ್ನೂ ಸಾಕಾರಗೊಳಿಸುವ ಕಣವಿ ಕಾವ್ಯ ಬತ್ತಲಾರದ ಗಂಗೆಯಂತೆ ನಿರಂತರವಾಗಿ ಹರಿದು ಬಂದಿದೆ. ಕನ್ನಡದ ನೆಲದಲ್ಲಿ ಹೊಂಬೆಳಕಿನ ಪ್ರಭೆಯನ್ನು ಹರಡಿ ಹರ್ಷೋಲ್ಲಾಸವನ್ನು ಮೂಡಿಸಿದೆ.

ಚೆನ್ನವೀರ ಕಣವಿಯವರು ಕವಿಯಾಗಿ ಬೆಳೆದದ್ದು ಧಾರವಾಡದ ಪರಿಸರದಲ್ಲಿ. ಬೇಂದ್ರೆ, ಗೋಕಾಕ, ಆನಂದಕಂದ ಮೊದಲಾದ ಗೆಳೆಯರ ಗುಂಪಿನ ಕವಿಗಳು ಭಾವಗೀತೆಯ ಹಾದಿಯಲ್ಲಿ ನವಮನ್ವಂತರವನ್ನೇ ನಿರ್ಮಿಸಿದ ಕಾಲವದು. ಎಲ್ಲೆಲ್ಲೂ ಕಾವ್ಯದ ವಾತಾವರಣ ದುಮುದುಮಿಸುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಕವಿತೆಗಳ ರಚನೆಗೆ ತೊಡಗಿದ್ದು ಮುಖ್ಯವಾದ ಅಂಶ. ಗೆಳೆಯರ ಗುಂಪಿನ ವಾರಸುದಾರರಾದ

ಕಣವಿಯವರು ಅದರ ಆದರ್ಶಗಳನ್ನೆಲ್ಲ ಸ್ವೀಕರಿಸಿ, ಸ್ನೇಹ, ಪ್ರೀತಿ, ಅಂತಃಕರಣವನ್ನು ಕಾವ್ಯದ ಮೂಲಕ ಅಭಿವ್ಯಕ್ತಿಸಲು ಸನ್ನದ್ಧರಾದವರು. ಹೊಸ ಕಾವ್ಯದಲ್ಲಿ ಕಾಣುವ ರೊಮ್ಯಾಂಟಿಕ್ ಮನೋಧರ್ಮ ಕಣವಿಯವರಲ್ಲಿ ಆಗ ರೂಹು ಪಡೆದಿತ್ತು. ಆದ್ದರಿಂದಲೇ ಕಣವಿಯವರ ಆರಂಭದ ಕವಿತೆಗಳು ಉತ್ಕೃಷ್ಟ ಭಾವಗೀತೆಗಳಾಗಿವೆ. ವ್ಯಕ್ತಿನಿಷ್ಠವಾದ ಅನುಭವ, ಭಾವತೀವ್ರತೆ, ಕನಸುಗಾರಿಕೆ, ಗೇಯಗುಣಗಳಿಂದ ಕೂಡಿದ ಭಾವಗೀತೆ ಕಣವಿಯವರ ಕವಿಚೇತನವನ್ನು ಅರಳಿಸಿತು. ಇವತ್ತಿನ ಸಂದರ್ಭದಲ್ಲಿ ಕಣವಿಯವರ ಆರಂಭದ ಕವಿತೆಗಳನ್ನು ನೋಡಿದಾಗ ಅವುಗಳ ಪ್ರೌಢವಾದ ಅಭಿವ್ಯಕ್ತಿ ವಿಧಾನ ಅಚ್ಚರಿಯನ್ನುಂಟು ಮಾಡುತ್ತದೆ. ಇದಕ್ಕೆ ಮುಖ್ಯ ಕಾರಣ ಕಣವಿಯವರ ಕಾವ್ಯಾಭ್ಯಾಸ ಮತ್ತು ಸಮಕಾಲೀನ ಹಿರಿಯ ಕವಿಗಳ ಕಾವ್ಯಾಭಿವ್ಯಕ್ತಿ ವಿಧಾನವನ್ನು ತನ್ನದಾಗಿಸಿಕೊಳ್ಳಲು ನಡೆಸಿದ ಪ್ರಯತ್ನ ಎನ್ನಬಹುದು.

ಕುವೆಂಪು ಅವರ ನಿಸರ್ಗ ಪ್ರೀತಿ, ಮಧುರಚೆನ್ನರ ಅನುಭಾವ, ಬೇಂದ್ರೆಯವರ ಜಾನಪದ ಸತ್ವ, ಗೋಕಾಕರ ಧ್ಯೇಯವಾದ ಪು.ತಿ.ನ. ಅವರ ಚಿಂತನಪರತೆ, ಕೆ.ಎಸ್.ನರಸಿಂಹಸ್ವಾಮಿಯವರ ಸುಕುಮಾರತೆಯನ್ನು ಗರ್ಭೀಕರಿಸಿಕೊಂಡು ಬೆಳೆದ ಕಣವಿ ಕಾವ್ಯ ವಿಶಿಷ್ಟವಾದದ್ದು. ಕಣವಿ ಅವರ ಕವಿ ಪ್ರತಿಭೆಯನ್ನು ಕುರಿತು ಅರವತ್ತೆಂಟು ವರ್ಷಗಳಷ್ಟು ಹಿಂದೆಯೇ ವರಕವಿ ಬೇಂದ್ರೆಯವರು ಹೇಳಿದ ಮಹತ್ವದ ಮಾತುಗಳು ಗಮನಾರ್ಹವಾಗಿವೆ. ಕಣವಿ ಅವರನ್ನು ಪ್ರತ್ಯಕ್ಷ ನೋಡುವ ಪೂರ್ವದಲ್ಲಿಯೇ ಅವರ ಕವಿತೆಗಳನ್ನು ಗಮನಿಸಿದ್ದ ಬೇಂದ್ರೆಯವರು **'ಕಾವ್ಯಾಕ್ಷಿ'** (೧೯೪೯) ಕವಿತೆಯ ಸಂಕಲನಕ್ಕೆ ಅರ್ಥಪೂರ್ಣ ಮುನ್ನುಡಿ ಬರೆದು ಕನ್ನಡದ ಬೆಳೆಯುವ ಕವಿಯ ಕವಿ ವ್ಯಕ್ತಿತ್ವವನ್ನು ಗುರುತಿಸಿದರು. "ಮಾತೃ ವಾತ್ಸಲ್ಯ, ಮಾತೃ ಭಾಷಾ ವಾತ್ಸಲ್ಯ, ಸೌಂದರ್ಯ ದೃಷ್ಟಿ, ಅಭೀಪ್ಸೆಯ ತೀವ್ರತೆ, ನವಸ್ವಾತಂತ್ರ್ಯದ ಎಚ್ಚರ, ಹೊಸ ಮೌಲ್ಯಗಳ ಸ್ವೀಕಾರ, ದೇಶಾಭಿಮಾನ, ರಾಷ್ಟ್ರಭಕ್ತಿ, ಆದರ್ಶ ಪ್ರೀತಿ – ಇವೇ ಮೊದಲಾಗಿ ಅವರ ಕಾವ್ಯಸ್ಫೂರ್ತಿಯ ವಿಷಯಗಳಾಗಿವೆ. ಅವರ ಕವನದಲ್ಲಿ ಜೀವಂತ ಗತಿಯಿದೆ. ಮಾತಿಗೆ ಅಚ್ಚುಕಟ್ಟು ಇದೆ. ಅಲ್ಪ ಸಂತುಷ್ಟಿ ಇಲ್ಲ. ಮಹತ್ತಿನ ಕಡೆಯ ಎಳೆತವಿದೆ. ಅವರ ಬೆಳೆವ ಮನಸ್ಸೂ ಅಂತಃಕರಣವೂ ವಿಕೃತ ಕ್ಷೋಭದಿಂದ ಮುದುಡಿಕೊಂಡಿಲ್ಲ." ಬೇಂದ್ರೆಯವರ ಮುನ್ನುಡಿಯ ಈ ಮಾತುಗಳು ಕಣವಿಯವರ ಕಾವ್ಯದ ಬಗೆಗಿನ ವಸ್ತುನಿಷ್ಠವಾದ ವಿಮರ್ಶಾ ಮಾತುಗಳೇ ಆಗಿವೆ. ಬೇಂದ್ರೆಯವರಿಂದ ಸೈ ಎನ್ನಿಸಿಕೊಳ್ಳುವುದು ಸುಲಭವಾದ ಮಾತೇನೂ ಅಲ್ಲ. ಈ ಮಾತುಗಳು ಕಣವಿಯವರ ಮುಂದಿನ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದ್ದು ಸ್ವಾಭಾವಿಕವೇ ಆಗಿದೆ.

ಪ್ರೇಮಜೀವಿ ಪಟ್ಟ ಪಾಡು
ಕರುಳು ಬಗೆದು ಬಂದ ಹಾಡು
ತಾಯೆ ನಿನ್ನ ಮಡಿಲೊಳಿಡಲು ಇಂಬುಗೊಡುವೆಯಾ ?

(ತಾಯೆ ನಿನ್ನ ಮಡಿಲೊಳು – ಕಾವ್ಯಾಕ್ಷಿ)

ಎಂದು ಕವಿ ಆರಂಭದಲ್ಲಿಯೇ ಕಾವ್ಯದೇವಿಗೆ ಮೊರೆಹೊಕ್ಕಿದ್ದಾರೆ. ಕಣವಿ ಅವರ 'ಕಾವ್ಯಾಕ್ಷಿ' ಪ್ರಕೃತಿಯ ಸುಂದರ ಸೊಬಗನ್ನು ಭಾವಮಯವಾಗಿ ಚಿತ್ರಿಸುತ್ತದೆ.

ಆ ಗಿಡಾ ಈ ಗಿಡಾ
ಒಂದೊಂದೂ ಜೇಂಗೊಡಾ
ಬಾಂದೇವಿಗೆ
ನೆಲದಾಯಿಯ
ಹೂಗೊಂಡೆಯ ಹೊಂಗೊಡಾ (ಕಾವ್ಯಾಕ್ಷಿ)

ಕವಿತೆಯ ಕೊನೆಯ ಸಾಲಿನಲ್ಲಿ ಕವಿ ಆನಂದಪರವಶನಾಗಿ 'ತನಗೆ ತಾನೆ ತಿಳಿಯದಂತೆ ತುಳುಕಿತಹಹ ಭಾವನಾ' ಎಂದು ಕಾವ್ಯಾಕ್ಷಿಗೆ ವಂದನೆ ಹೇಳಿದ್ದಾರೆ. ಪ್ರಕೃತಿಯೋಪಾಸಕರಾದ ಕಣವಿಯವರು 'ನಾನು ಮಿಡಿಯುವ ಭಾವ ವೀಣೆ ತಂತಿಗಳೆಲ್ಲ ದೇವ ! ಜೀವಾಳದೋಂಕಾರಗುಡಲಿ' ಎಂದು 'ಬಿನ್ನಹ' ಮಾಡಿದ್ದಾರೆ. 'ಕಾಡುಮಲ್ಲಿಗೆ'ಯಲ್ಲೂ ಚೆಲುವು ಕಾಣುವ ಕಣ್ಣು ಕಣವಿಯವರದಾಗಿದೆ. ಬೆಳಗಿನ ವೈಭವ, ಬೆಳದಿಂಗಳಿನ ಮಾಧುರ್ಯಗಳು ಕಣವಿಯವರಿಗೆ ಪ್ರಿಯವಾಗಿವೆ. 'ಚಂದ್ರೋದಯ' ಕವಿತೆಯಲ್ಲಿ ಅವರ ಪ್ರಶಾಂತ ಮನಸ್ಸಿನ ಭಾವವಿದೆ. 'ಈಗತಾನೆ ಬಂದಿತೇನೆ ಮಧುರ ಕಂಠ ಕೋಗಿಲೆ ?' ಎಂದು ಕೇಳುವ ಕೌತುಕ 'ಕೋಗಿಲೆ' ಕವಿತೆಯಲ್ಲಿದೆ. ಕಣವಿಯವರ 'ಮೇಘೋಪಾಸನೆ' ನಿಸರ್ಗದ ವೈಭವವನ್ನು ಚಿತ್ರವತ್ತಾಗಿ ವರ್ಣಿಸುವ ವಿಶಿಷ್ಟ ಕವಿತೆ. 'ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯುವಾಸೆ' ತುಂಬಿಕೊಂಡ ಕಣವಿಯವರ ಭಾವವಿತಾನ 'ಕಾವ್ಯಾಕ್ಷಿ'ಯ ಅನೇಕ ಕವಿತೆಗಳಲ್ಲಿ ಕಣ್ಸೆಳೆಯುತ್ತದೆ.

ರಾಷ್ಟ್ರೀಯ ಪ್ರಜ್ಞೆ, ಆದರ್ಶವಾದ ತುಂಬಿ ಹರಿಯುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಅದಕ್ಕೆ ಸ್ಪಂದಿಸಿ ಕವಿತೆ ರಚಿಸಿದರು. ಭಾರತದ ಪ್ರಥಮ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ವಿಶಾಲವಾದ ಬಯಲಿನಲ್ಲಿ ತುಂಬಿದ ಜನಸಮೂಹದ ಮಧ್ಯೆ ಕಣವಿಯವರು ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ಸಭೆಯಲ್ಲಿ 'ಬಂಧದಿಂ ಬಿಡುಗಡೆ' ಕವಿತೆ ಓದಿದರು. 'ಭಾರತವು ಒಂದು, ಭಾರತಿಯು ತಾಯಿ, ಕುಲವೊಂದೆ ಭರತ ಕುಲವು' ಎಂದು ಹೃದಯ ತುಂಬಿ ಹಾಡಿದರು.

ಕಣವಿಯವರ 'ಭಾವಜೀವಿ' (೧೯೫೦) ಕನ್ನಡದ ಭಾವಗೀತೆಯ ಯುಗದಲ್ಲಿ ಪ್ರಮುಖವಾದದ್ದು. ಕವಿಯ ಆತ್ಮಕಥನ ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಕಣವಿಯವರ ಭಾವಜೀವನವು ಸಾಗರದ ತೆರೆಗಳಂತೆ ಪುಟಿದೆದ್ದು ಬರುವುದನ್ನು ನಾವು ಇಲ್ಲಿ ಕಾಣುತ್ತೇವೆ. ೫೮೦ ಪಂಕ್ತಿಗಳಷ್ಟು ಸುದೀರ್ಘವಾಗಿ ಹರಿಯುವ ಈ ನೀಳ್ಗವಿತೆ ಕವಿ ಜೀವನದ ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಪ್ರಕೃತಿಮಾತೆಯ ಮಡಿಲಿನಾಸರೆಗೆ ಆಸತ್ತು ಬೇಸತ್ತು ಬಂದು ಶಾಂತಿ ಬಯಸುವ ಕವಿ 'ಅಂತರಂಗದ ನಿಸ್ತರಂಗ ತಿಳಿಗೊಳದಲ್ಲಿ ಲಲಿತಾರವಿಂದಗಳ ಮಕರಂದ'ವನ್ನು ಸವಿಯುತ್ತಾನೆ. ತಾನು ಹುಟ್ಟಿ ಬೆಳೆದ ಗ್ರಾಮೀಣ ಪರಿಸರ, ತನ್ನ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು, ಸಾಂಸ್ಕೃತಿಕ ಉತ್ಸವಗಳು, ಬಾಲ್ಯಜೀವನದ ಆಟಪಾಠಗಳು, ವಿನೋದಗಳು, ಮನೆಯಲ್ಲಿ ತಂದೆಯಿಂದ ಕೇಳುತ್ತಿದ್ದ 'ಅನುಭವಾಮೃತ', 'ಮುಪ್ಪಿನ ಷಡಕ್ಷರಿಯ ಹಾಡುಗಳು', 'ಜನಪದ ಗೀತೆಗಳು' ಕವಿಯ ಮನೋಮಂದಿರದ ಸ್ಮೃತಿ ಚಿತ್ರಮಾಲೆಯಾಗಿಸಿದೆ.

ಬಾಳಸಂಪುಟದಲ್ಲಿ ಬಾಲ್ಯವೆಂಬುವದೊಂದು
ಅಳಿಸಲಾರದ ಮಧುರ ಭಾವಗೀತ ;
ಮುಂದೆ ಬಹ ಅನುಭವದ ಕಹಿಫಲವನುಣ್ಣುತಿರೆ
ಮರುಕಳಿಸಿ ನೆನೆಯುವದೆ ನಮ್ಮ ಸ್ವಾರ್ಥ । **(ಭಾವಜೀವಿ)**

ಬಾಲ್ಯದ ಮಧುರಸ್ಮೃತಿಯು ಭಾವಜೀವಿಯು ಏರುವ ಶಿಖರದ ಮೊದಲ ಮೆಟ್ಟಿಲಾಗಿದೆ. ಧಾರವಾಡಕ್ಕೆ ಬಂದ ಕವಿ ಕನ್ನಡ ಸರಸ್ವತಿಯ ಚೆಲುರಥೋತ್ಸವ ಕಂಡು ಪುಳಕಿತರಾಗುತ್ತಾರೆ. ಕಾವ್ಯ, ಕಲೆ, ಸಂಸ್ಕೃತಿಯ ತವರಿನಲ್ಲಿ ಕಣವಿ ಭಾವಜೀವನ ಮುಂದೋಡುತ್ತದೆ. ಸೌಂದರ್ಯ ದರ್ಶನಕೆ ದೀಪ್ತವಾಗಿಹ ಕವಿ ಮನವು ಪ್ರಕೃತಿಯೋಪಾಸನೆಯನ್ನು ಕೈಕೊಂಡು ಭಾವ ವೀಣೆಗೆ ಬೆರಳನಾಡಿಸುತ್ತದೆ.

ನಮ್ಮ ಬಾಳಿಗೆ ಪರಮ ಪ್ರೀತಿಯೇ ನೆಲೆಗಟ್ಟು
ಪ್ರೀತಿಯೇ ಚೌಕಟ್ಟು ಬೇರೆಯಿಲ್ಲ ;
ಪ್ರೇಮಕಾಗಿಯೆ ನವೆವ ಸತ್ಯಕಾಮರು ನಾವು
ಸತ್ಯವಾನ್ ಸಾವಿತ್ರಿಯಲ್ಲದಿಲ್ಲ. **(ಭಾವಜೀವಿ)**

ಕವಿಯ ಮನಸ್ಸಿನಲ್ಲಿ ಪ್ರೇಮ-ವಿರಹಗಳು ಬಂದು ಭಾವಜೀವಿಯನ್ನು ಜಾಗೃತಗೊಳಿಸುತ್ತವೆ. ಸೌಂದರ್ಯಯೋಗಿಯೊಲು ಕಾಮವಾಸನೆ ತ್ಯಜಿಸಿ ದರ್ಶನ ವಿಶುದ್ಧಿ ಪಡೆಯುವ ಹಂಬಲ ಮೂಡುತ್ತದೆ. ಕಾರುಣ್ಯದಾಯಿನಿಯಾದ ತಂಗಿಯ ಪ್ರೀತಿ, ಜ್ಞಾನಸಿಂಧುವಿನ ಕರೆ, ಸರ್ವಸಮಭಾವದಲಿ ಬಾಳಯಾನಗೈಯುವ ಹಿರಿಯಾಸೆ ಒಡಮೂಡುತ್ತದೆ. ಕವಿಗಾಳಿ, ಸವಿಗಾಳಿ ತೀಡುವ ಧಾರವಾಡದ ನೆಲದ ಗುಣ ದತ್ತವಾಣಿಯ ಪ್ರಭಾವವು ಕವಿಯನ್ನು ಆಕರ್ಷಿಸುತ್ತದೆ. ಆತ್ಮಾನುಸಂಧಾನಕ್ಕೆ ತೊಡಗುವ ಅಂತರಂಗ ದರ್ಶನ ನಮಗಾಗುತ್ತದೆ.

'ಮಧುರಚೆನ್ನರ ಮಧುರ ನುಡಿಯ ಮರ್ಮವನರಿತು ಮಾರುಹೋಯಿತು ನನ್ನ ಭಾವಭಕ್ತಿ' ಎಂದು ಹೇಳಿದ ಕವಿ ತನ್ನ ಭಾವಜೀವನದ ಮೇಲೆ ಪ್ರಭಾವ ಬೀರಿದ ಮಧುರಚೆನ್ನರನ್ನು ಸ್ಮರಿಸಿದ್ದಾರೆ.

ಭಾವಜೀವಿಯು ನಾನು, ನನ್ನೆದೆಯ ನಂಬಿರುವ
ತುಂಬಿರುವ ಕನಸುಗಳೆ ಕಲ್ಪವೃಕ್ಷ !
ಯಾವುದಾದರೂ ಏನು ಕೃತಿಯಲ್ಲಿ ಬರುವನಕ
ಕನಸಲ್ಲವೆ ? ಅಲ್ಲವೆನಲು ರುಕ್ಷ **(ಭಾವಜೀವಿ)**

ಎಂದು ನುಡಿದಿರುವ ಕವಿ 'ಮನೆಯ ಕಟ್ಟುವ ಮೊದಲು ನಕ್ಷೆಯನ್ನು ತೆಗೆವಂತೆ ಭಾವ ಕಾಣುವದದನು ಕನಸಾಗಿಸು'ವ ಬಗೆಯನ್ನು ವಿದಿತಪಡಿಸಿದ್ದಾರೆ. ಗೋಕಾಕರು 'ಭಾವಜೀವಿ'ಗೆ ಬರೆದ ಮುನ್ನುಡಿಯಲ್ಲಿ 'ವಿಶ್ವದ ಜೀವನವೇ ವ್ಯಕ್ತಿಯ ಜೀವನವಾಗಿ ವ್ಯಕ್ತಿ-ವಿಶ್ವಗಳ ದ್ವಂದ್ವವು ಹೊಸತೊಂದು ಪೌರುಷದಲ್ಲಿ ಇಲ್ಲವೆ ನವೀನ ವ್ಯಕ್ತಿತ್ವದ ನಿರ್ಮಿತಿಯಲ್ಲಿ ಒಂದಾಗಿ ಲೀನವಾಗುತ್ತದೆ. ಮಾನವನು ವಿಶ್ವಮಾನವನಾಗಬೇಕಾಗಿದೆ. ಈ ಮಹಾಕಾರ್ಯದಲ್ಲಿ ಭಾವಜೀವಿಯೂ ಒಂದು ಮಹತ್ವದ ಘಟಕವಾಗಿದ್ದಾನೆ'

ಎಂದಿದ್ದಾರೆ. ಕವಿಯ ಭಾವಜೀವನದ ವಿಕಾಸೋನ್ನತಿಯ ವಿವಿಧ ಮಗ್ಗಲುಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಕಣವಿಯವರ **'ಭಾವಜೀವಿ'** ಒಂದು ಅಪೂರ್ವವಾದ ನೀಳ್ಗವಿತೆಯಾಗಿದೆ. ಆತ್ಮದ ಅಂತರ್ಯಾನವನ್ನು ಕಾವ್ಯದ ಮೂಲಕ ಸೆರೆ ಹಿಡಿಯುವ ಸಾಹಸವೂ ಇಲ್ಲಿ ಪ್ರಕಟವಾಗಿದೆ. ಆದ್ದರಿಂದಲೇ ಕನ್ನಡದ ಶ್ರೇಷ್ಠ ಆತ್ಮಕಥನ ಕಾವ್ಯಪರಂಪರೆಯಲ್ಲಿ ಅದಕ್ಕೆ ಮಹತ್ವದ ಸ್ಥಾನವಿದೆ.

'ಆಕಾಶಬುಟ್ಟಿ' (೧೯೫೩) ಕಣವಿಯವರ ಕಾವ್ಯದ ಬೆಳವಣಿಗೆಯ ಹಾದಿಯಲ್ಲಿ ಮುಖ್ಯವಾದ ಹೆಜ್ಜೆಯಾಗಿದೆ. ಸ್ವತಂತ್ರವಾಗಿ ಬೆಳೆಯುತ್ತ ಹೋಗುವ ಕಣವಿಯವರ ಕವಿತೆಗಳನ್ನು ನಾವಿಲ್ಲಿ ಕಾಣುತ್ತೇವೆ. 'ಆಕಾಶಬುಟ್ಟಿ' ಕವಿತೆಯ ಕೊನೆಯಲ್ಲಿ ಬರುವ ಈ ಸಾಲುಗಳು ಗಮನಾರ್ಹವಾಗಿವೆ.

'ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ದಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು !
ನೋಡಿದೆಯ ಕವಿಯೆ ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ ?
ಆತ್ಮಬಲದೆದುರು ಮೇಣುಳಿದ ಬಲವೆ ?

ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳದ್ವೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು !'

(ಆಕಾಶಬುಟ್ಟಿ – ಆಕಾಶಬುಟ್ಟಿ)

'ಹೊಸ ಬಾಳು ನಮ್ಮದಿದೆ' ಎಂಬ ಕವಿತೆಯಲ್ಲೂ 'ಯುವ ಜನಾಂಗವೆ ಬನ್ನಿ ನವರಂಗಕೆ' ಎಂದು ಕರೆ ನೀಡಿದ ಕಣವಿಯವರು ನವೀನ ಬಾಳಿಗೆ ಬೇಕಾದ ಆದರ್ಶವಾದದ ಭಾವನೆಯನ್ನು ಪ್ರಕಟಪಡಿಸಿದ್ದಾರೆ. 'ಪ್ರಜಾಪ್ರಭುತ್ವ' ಕವಿತೆಯಲ್ಲಿ

'ವ್ಯಕ್ತಿ–ಶಕ್ತಿಯ ಗುಣವಿಕಾಸ ಪ್ರಕಾಶದಲಿ
ಜಗವ ಬೆಳಗುವದದರ ಮೂಲತತ್ವ'

(ಪ್ರಜಾಪ್ರಭುತ್ವ – ಆಕಾಶಬುಟ್ಟಿ)

ಎಂದು ಹೇಳಿದ ಕವಿ ವ್ಯಕ್ತಿಶಕ್ತಿಯ ವಿಕಾಸವನ್ನೂ, ಜಾತಿಗೀತಿಯ ವಿಷಗಾಳಿಯಿಂದ ಮುಕ್ತವಾದ, ಬಡವ–ಬಲ್ಲಿದ ಭೇದ–ಭಾವವಿಲ್ಲದ, ಸರ್ವರಿಗೂ ಸಮಪಾಲು ಬೆಳದಿಂಗಳು ಬಯಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕಣವಿಯವರು ಸ್ನೇಹಕ್ಕೆ ಕೊಡುವ ಮಹತ್ವವು ಅವರ ಹಲವು ಕವಿತೆಗಳಲ್ಲಿದೆ. 'ಗೆಳೆತನ' 'ವಿಶ್ವದಂತಃಕರಣ ಮಂದಾಕಿನಿ' ಎಂಬುದು ಅವರ ಪರಿಭಾವನೆ. ಮುಂಜಾನೆಯ ಹಸಿರು ಹುಲ್ಲಿನ ಮೇಲೆ ಪಾರಿಜಾತವು ಹೂವ ಸುರಿಸಿದಂತೆ ಮಾತು ಮೃದುವಾಗಿರಬೇಕೆಂಬುದನ್ನು ಕಣವಿ ವ್ಯಕ್ತಪಡಿಸಿದ್ದಾರೆ.

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದು ವಚನ ಮೂಲೋಕ ಗೆಲ್ಲುವದು ತಿಳಿಯ;
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗ ಮಗಿಸುತಿರಲಿ

(ಮಾತು–ಆಕಾಶಬುಟ್ಟಿ)

ಕಣವಿಯವರ ಕಾವ್ಯಾಭಿವ್ಯಕ್ತಿಯಲ್ಲೂ ಈ ಮೃದುವಚನ ಮಧುರ ಭಾವಗಳು ಕಂಗೊಳಿಸುತ್ತವೆ. ಸಿಟ್ಟು, ರೋಷ, ಆಕ್ರೋಶದಿಂದ ಮುಕ್ತವಾದ ಪ್ರಶಾಂತ ಮನಸ್ಥಿತಿ ಅವರದು. 'ಒಂದು ಮುಂಜಾವು' ಕವಿತೆಯ ಭಾವನಾಲಹರಿ ಅಪರೂಪವಾದದ್ದು.

ಒಂದು ಮುಂಜಾವಿನಲಿ ತುಂತುರಿನ ಸೋನೆಮಳೆ
'ಸೋ' ಎಂದು ಶ್ರುತಿ ಹಿಡಿದು ಸುರಿಯುತ್ತಿತ್ತು;
ಅದಕೆ ಹಿಮ್ಮೇಳವೆನೆ ಸೋಸಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು

(ಒಂದು ಮುಂಜಾವು – ಆಕಾಶಬುಟ್ಟಿ)

'ಇಳೆವೆಣ್ಣು ಮೈದೊಳೆದು ಮಕರಂದದರಿಶಿಣದಿ ಹೂಮುಡಿದು ಮದುಮಗಳ ಹೋಲುವ' ಸುಂದರ ಭಾವನೆಗಳನ್ನು ಕಣವಿ ವರ್ಣಿಸಿರುವ ರೀತಿ ತುಂಬ ಮೋಹಕವಾದದ್ದು.

ಪ್ರಕೃತಿಯಲ್ಲಿ ನಡೆಯುವ ಋತುಮಾನದ ಲೀಲೆಗಳು ಕವಿ ಕಣವಿಯವರಲ್ಲಿ ಕೌತುಕಭಾವವನ್ನು ನಿರ್ಮಿಸಿವೆ. 'ಸೃಷ್ಟಿನೋಂತು ನಿಂತಿದೆ' ಕವಿತೆಯಲ್ಲಿ ಚೈತ್ರೋದಯದ ಸೊಬಗನ್ನು ವರ್ಣಿಸಿದ ಕವಿ 'ಶ್ರಾವಣದ ಲಾವಣ್ಯ'ವನ್ನು ಕಂಡು ಬೆರಗಾಗಿದ್ದಾರೆ.

ಬಾನ ಸಾಣೆಗೆ ಹಿಟ್ಟು ಸಣ್ಣಿಸಿ–
ದಂತೆ ಜಿನುಗಿದೆ ಸೋನೆಯು,
ಬಿಳಿಯ ತೆಳು ಜವನಿಕೆಯನೆಳೆದಿಹ
ಇಳೆಯು ಸುಂದರ ಮೇಣೆಯು,
ಹುಲ್ಲು ಹಾಸಿದೆ ಹೂವು ಸೂಸಿದೆ
ಗಾಳಿ ಮೂಸಿದೆ ಕಂಪನು;
ಶ್ರಾವಣದ ಲಾವಣ್ಯ ಕುಣಿದಿದೆ
ಮಳೆಯು ಹಣಿಸಿದೆ ತಂಪನು.

(ಶ್ರಾವಣದ ಲಾವಣ್ಯ – ಆಕಾಶಬುಟ್ಟಿ)

ಧಾರವಾಡ ಶ್ರಾವಣದ ಸೊಬಗು ಬೇಂದ್ರೆಯವರಂತೆ ಕಣವಿಯವರಲ್ಲೂ ಹರ್ಷೋಲ್ಲಾಸ ತಂದಿರುವದನ್ನು ನಾವಿಲ್ಲಿ ಕಾಣುತ್ತೇವೆ. ಕಣವಿಯವರು ಬರೆದ 'ಚಿರಂತನ ದಾಹ' ಕವಿ ಹೃದಯದ ದೊಡ್ಡ ಆಶಯದ ಪ್ರತೀಕವಾಗಿದೆ.

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ !
ಬಂದಷ್ಟು ಇಂಗುತಿದೆ, ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ !

(ಚಿರಂತನ ದಾಹ – ಆಕಾಶಬುಟ್ಟಿ)

ಬೆಳಕಿನ ಪ್ರತಿಮೆಯನ್ನು ಕಣವಿಯವರು ತಮ್ಮ ಹಲವಾರು ಕವಿತೆಗಳಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಚೆಂಬೆಳಕನ್ನು ಸದಾ ಸವಿಯುವ ಕಣವಿ ಅವರು ಚಿರಂತನ ದಾಹದ ಕವಿಯಾಗಿದ್ದಾರೆ.

ಕಣವಿಯವರ 'ಬಸವನಾಳರಿಗೆ ಭಾಷ್ಪಾಂಜಲಿ' ಕನ್ನಡ ಶೋಕಗೀತಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಬಸವನಾಳರ ವ್ಯಕ್ತಿತ್ವವನ್ನು ವರ್ಣಿಸುತ್ತ ಹೋಗುವ ಕಣವಿಯವರ ಪಂಕ್ತಿಗಳಿವು.

ಕನ್ನಡದ ಹೊಂದೇರನೆಳೆದಿರಿ, ಸಂಸ್ಕೃತಿಯ ಚೈತನ್ಯದಿ
ನಾಲ್ಕು ಗಾಲಿಯು ಭದ್ರವಾಗಿವೆ ಸಾಗಿರೆಂದಿರಿ ಮೌನದಿ
'ಮೂಲೆಯಲ್ಲಿಯೆ ಕುಳಿತು ಮುದುಡುವ ಮೂಳನಿಗೆ ಜಗವಿಲ್ಲವು
ಮುಂದೆ ಬನ್ನಿರಿ' ಎಂದು ಕರೆದಿರಿ ನೂರು ಕೈ ತೇರೆಳೆದವು !

(ಬಸವನಾಳರಿಗೆ ಭಾಷ್ಪಾಂಜಲಿ – ಆಕಾಶಬುಟ್ಟಿ)

ಹೀಗೆ ಮನದ ಭಾವಗಳನ್ನು ಹೃದಯಪೂರ್ವಕವಾಗಿ ಪ್ರಕಟಿಸುತ್ತ ಬಂದ ಕಣವಿ ಅವರು ಸಾಮರಸ್ಯದ ಪ್ರತಿಪಾದಕರೂ, ಸಮದರ್ಶನದ ಚಿಂತಕರೂ ಆಗಿದ್ದಾರೆ. 'ಗಾಂಧೀಯುಗ'ದ ಆದರ್ಶದ ಬಗೆಗೂ ಕಣವಿಯವರು ತಮ್ಮ ಭಾವಧಾರೆ ಹರಿಸಿದ್ದಾರೆ.

ಕಣವಿಯವರ **'ಮಧುಚಂದ್ರ'** (೧೯೫೪) ಪ್ರೇಮದ ಭಾವನೆಗಳನ್ನು ನವಿರಾಗಿ ಪ್ರತಿಮಿಸುತ್ತದೆ.

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ವಾಸಿಗೆ
ಇಳೆಗಿಳಿದಿದೆ
ಬೆಳದಿಂಗಳು
ನಮ್ಮೊಲುಮೆಯ ಕರೆಗೆ.

(ಮಧುಚಂದ್ರ – ಮಧುಚಂದ್ರ)

ಪ್ರಿಯತಮ ಪ್ರೇಯಸಿಯರ ಭಾವನೆಗಳನ್ನು ಕವಿತೆಗಳಲ್ಲಿ ಸೆರೆಹಿಡಿದ ಕವಿ ಸಾಂಸಾರಿಕ ಸುಖ–ದುಃಖಗಳನ್ನೂ ಸರಿಯಾಗಿಯೇ ಹಿಡಿದಿಟ್ಟಿದ್ದಾರೆ. 'ಮಿಲನ' ಕವಿತೆಯ ಸಾಲುಗಳಿವು :

ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ
ಆ ಗಂಗಾ ಯಮುನೆಯರೊಲು ಚಿರಸಂಗಮ ಬಯಸಿ,
ನಡುದಾರಿಗೆ ಅಡ್ಡೈಸಿವೆ ಗುಡುಗಾಡಿವೆ ಮುಗಿಲು
ಹೆಡೆಯೆತ್ತುತ ಘೂತ್ಕರಿಸಿದೆ ಬಿರುಗಾಳಿಯ ಹುಯಿಲು

(ಮಿಲನ – ಮಧುಚಂದ್ರ)

ಪ್ರೇಮಕ್ಕಾಗಿ ತುಡಿಯುವ ಜೀವಿಗಳು ತಮ್ಮ ಜೀವನ ಹೂವಿನ ಹಾಸಿಗೆಯಲ್ಲ ಎಂಬುದನ್ನು ಅರಿತಿರುತ್ತಾರೆ. ಹೊಸಬಾಳಿನ ಹೊಸಹಾಡಿಗೆ ರಸಮಯ ಸಂಸ್ಕರಣಕ್ಕೆ ಸಿದ್ಧರಾಗಿರುತ್ತಾರೆ.

ಕಣವಿಯವರು ಪ್ರೇಮಿಗಳ ಕನಸು, ಆಸೆ, ಪ್ರೇಮದ ವಿಲಾಸವನ್ನು 'ಗೆ' ಎಂಬ ಇನ್ನೊಂದು ಕವಿತೆಯಲ್ಲಿ ಬಣ್ಣಿಸಿದ್ದಾರೆ.

ನಾದಲಹರಿಯೊಡನೆ ಬಂದ
ನೀನು ಹಾಡಿನೊಡತಿಯು,
ಒಲಿದು ಒಲಿಸಿಕೊಂಬ ನಗೆಯೆ
ನಿನ್ನ ನಯದ ನಡತೆಯು.
ಮಾತು ಪಾರಿಜಾತ ಪುಷ್ಪ-
ದಂತೆ ಮೃದುಲ ಕೋಮಲ,
ಹದುಳದಿಂದ ಒಡಪಿನಂದ
ಪಡೆದ ಭಾವನೋಜ್ವಲ !

(-ಗೆ- ಮಧುಚಂದ್ರ)

ಹೀಗೆ ಒಲವು ಬಳ್ಳಿಯಾಗಿ ಬೆಳೆದು ಚೆಂಗುಲಾಬಿಯಂತೆ ಅರಳುವದನ್ನು ಸೂಚಿಸುತ್ತ ಮುಂದೆ ಬಹುದ ಕಂಡರಾರು, ಇಂದು ಜೀವ ಕುಣಿಯಲಿ, ಎಂದೂ 'ಪ್ರೀತಿಯೊಂದೆ ನಮ್ಮ ನೀತಿ' ಎಂದು ಕವಿ ಹಾಡಿದ್ದಾರೆ. ಹೆಣ್ಣು ಗಂಡಿನ ಪ್ರೀತಿ ಕ್ಷಣಿಕವಾದದ್ದಲ್ಲ. ಅದು ಜನ್ಮಾಂತರದ ಸಂಬಂಧವೆಂಬುದನ್ನು ಕಣವಿಯವರು ವ್ಯಕ್ತಪಡಿಸಿದ್ದು 'ಜೀವ ಜೀವಾಳದಲಿ ಕೂಡಿದವಳು' ಕವಿತೆಯಲ್ಲಿ.

ಸಣ್ಣ ಮನೆಯ ತುಂಬಿ ಚೆಂಗುಲಾಬಿಯ ಚೆಲುವೆ ನಾಯಕನ ದಾಂಪತ್ಯ ಜೀವನದಲ್ಲಿ ಉಲ್ಲಾಸ ತಂದವಳು.

ಹಾಲುಗಲ್ಲಿನ ಮೇಲೆ
ಬೆಳುದಿಂಗಳಿಳಿದಂತೆ
ನಗೆಯ ಹೊಂಗೇದಗೆಯ ಮುಗುದೆಯಿವಳು ;
ಮುಂಜಾವು ಉಷೆಯಂತೆ
ಸಂಜೆ ಅಪ್ಸರೆಯಂತೆ
ಕಣ್ಣು ಕಣ್ಣಿಗೆ ದೀಪ ಮಿನುಗಿಸುವಳು !

(ಜೀವ ಜೀವಾಳದಲಿ ಕೂಡಿದವಳು – ಮಧುಚಂದ್ರ)

ಪ್ರೇಮದ ಉತ್ಕಟತೆಯನ್ನು ಕವಿ ಈ ಪ್ರೇಮಗೀತೆಯಲ್ಲಿ ವರ್ಣಿಸಿದ್ದಾರೆ. 'ಉಷೆಯ ಗೆಳತಿ'ಯುನ್ನು ಸೌಂದರ್ಯ ದರ್ಶನಕ್ಕೆ ಕರೆಯುುವ ಪಂಕ್ತಿಗಳು ಅಷ್ಟೇ ಅಪ್ಯಾಯಮಾನವಾಗಿವೆ.

ಏಳೆನ್ನ ಮನದನ್ನೆ, ಏಳು ಮುದ್ದಿನ ಕನ್ನೆ
ಏಳು ಮಂಗಳದಾಯಿ ಉಷೆಯ ಗೆಳತಿ;
ಏಳು ಮುತ್ತಿನ ಚೆಂಡೆ, ಏಳು ಮಲ್ಲಿಗೆ ದಂಡೆ
ಏಳು ಬಣ್ಣದ ಬಿಲ್ಲೆ ಮಾಟಗಾತಿ.

ಏಳೆನ್ನ ಕಲ್ಯಾಣಿ, ಏಳು ಭಾವದ ರಾಣಿ
ನೋಡು, ಮೂಡಲದಲ್ಲಿ ರಾಗಮಿಲನ !

ಮರದುದಿಯ ತೋರಣದಿ ಹೊಂಬಿಸಿಲ ಬಾವುಟವು
ಗಾಳಿವಟ್ಟೆಯಲದರ ಚಲನವಲನ

(ಉಷೆಯ ಗೆಳತಿ – ಮಧುಚಂದ್ರ)

ಪ್ರಿಯಕರನ ಭಾವನೆಗಳನ್ನು ಬಗೆಬಗೆಯ ಪದ್ಯಗಳಲ್ಲಿ ಸೆರೆಹಿಡಿದ ಕವಿ ಪ್ರಿಯತಮೆಯ 'ನಿರೀಕ್ಷೆ'ಯನ್ನೂ ಮತ್ತೊಂದು ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಮನೆಯ ಮಂಗಳಮೂರ್ತಿ ಮೌನದಾಳದಿ ಮುಳುಗಿ
ಕಣ್ಣ ರತ್ನದ ಖಣಿಯ ದೀಪಿಸಿಹಳು
'ಸಂಜೆಯಾಯಿತು ಈಗ ಬಂದೆ ಬರುವರು' ಎಂದು
ಒಂದೆ ಚಿಕ್ಕೆಯ ತೆರದಿ ಜಾನಿಸಿಹಳು

(ನಿರೀಕ್ಷೆ – ಮಧುಚಂದ್ರ)

ಹೀಗೆ 'ಪಡುವಣದ ಸಂಜೆವೆಣ್ ನಡುಮನೆಗೆ ಬಂದಂತೆ, ರಾಗ ಪುಲಕಿತೆ ಎದೆಯನಾಳುವ' ಬಗೆಯನ್ನು ಕಣವಿಯವರು ಎದೆದುಂಬಿ ಬಣ್ಣಿಸಿದ್ದಾರೆ. ಕಣವಿಯವರ ಕವಿತೆಗಳಲ್ಲಿಯ ಪ್ರೇಮ ಮುಖ್ಯವಾಗಿ ದಾಂಪತ್ಯ ಪ್ರೇಮದ ಆದರ್ಶವನ್ನು ಹೇಳುತ್ತದೆ. ಜೀವನದ ಅನುರಾಗದ ಕ್ಷಣಗಳನ್ನು ಸುಕುಮಾರವಾದ ರೀತಿಯಲ್ಲಿ ಅವರು ಚಿತ್ರಿಸುತ್ತಾರೆ. ಸುಸಂಸ್ಕೃತವಾದ ಆವರಣದಲ್ಲಿ ಜೀವನದ ಮುಖ್ಯ ವಾಹಕವಾದ ಪ್ರೇಮವನ್ನು ಕಂಡರಿಸಿರುವದು ಕಣವಿಯವರ ಪ್ರೇಮಗೀತೆಗಳ ವಿಶಿಷ್ಟತೆ ಎನ್ನಬಹುದು. 'ಮಧುಚಂದ್ರ'ದಲ್ಲಿ ಬರುವ 'ಗಿರಿ ಗಿರಿ ಗಿಂಡಿ'ಯಲ್ಲಿಯ ಲಾಲಿತ್ಯ ಗಮನಾರ್ಹವಾದುದು.

ಗೆಳತಿಯರೆಲ್ಲಾ
ಬಂದಾರೇನ
ಮಲ್ಲಿಗೆ ಹೂವ
ಮುಡಿದಾರೇನ
ಗುಲಾಬಿ ಲಂಗ
ಉಟ್ಟಾರೇನ ?
ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತತ್ತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ

(ಗಿರಿಗಿರಿ ಗಿಂಡಿ – ಮಧುಚಂದ್ರ)

ಬೇಂದ್ರೆಯವರ 'ಪಾತರಗಿತ್ತಿ ಪಕ್ಕ' ಕವಿತೆಯನ್ನು ನೆನಪಿಗೆ ತರುವ ಈ 'ಗಿರಿಗಿರಿ ಗಿಂಡಿ' ಸಹಜ ಪ್ರಾಸದಿಂದ ಜೀವನದ ಉತ್ಸಾಹವನ್ನು ಎಳೆಯರ ಮನೋಲ್ಲಾಸವನ್ನು ತನ್ನದೇ ಆದ ರೀತಿಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.

'ಕಾವ್ಯಾಕ್ಷಿ'ಯಿಂದ 'ಮಧುಚಂದ್ರ'ದವರೆಗಿನ ಕಣವಿಯವರ ಕಾವ್ಯ ನವೋದಯ ಕಾವ್ಯದ ಆದರ್ಶಗಳಿಂದ ಸ್ಫೂರ್ತವಾದದ್ದು. ಮುಖ್ಯವಾಗಿ ಅದು ಸಂಸ್ಕೃತಿನಿಷ್ಠವಾದದ್ದು ಎನ್ನಬಹುದು. ವ್ಯಕ್ತಿನಿಷ್ಠ ಅನುಭವ, ನಿಸರ್ಗ ಪ್ರೀತಿ, ಧ್ಯೇಯವಾದಿತ್ವ, ಆದರ್ಶದ ಹಂಬಲ, ಕನಸುಗಾರಿಕೆ, ಸೌಂದರ್ಯನಿಷ್ಠತೆ, ಇವೇ ಮೊದಲಾದ ಗುಣಗಳಿಂದ ಕೂಡಿರುವಂಥದು. ೧೯೫೦ ರ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ಗೋಕಾಕರು ಕನ್ನಡ ಕಾವ್ಯ ನವ್ಯತೆಯತ್ತ ಸಾಗುವ ದಿಶೆಯನ್ನು ಸೂಚಿಸಿದರು. ಅದೇ ಸುಮಾರಿಗೆ ಅಡಿಗರು ನವ್ಯ ಕವಿತೆ ರಚಿಸಿ ಅದರ ಸ್ವರೂಪವನ್ನು ತಮ್ಮ ರೀತಿಯಲ್ಲಿ ವಿವರಿಸಿದರು. ಸಮಕಾಲೀನ ಸಂದರ್ಭ ಸನ್ನಿವೇಶಕ್ಕೆ ಅನುಗುಣವಾಗಿ ಚೆನ್ನವೀರ ಕಣವಿಯವರೂ ೧೯೫೦ ರ ದಶಕದಲ್ಲಿ ನವೋದಯದಿಂದ ನವ್ಯತೆಯತ್ತ ಸಾಗಿದ್ದನ್ನು ನಾವು ಕಾಣುತ್ತೇವೆ. ಸಾಂಸ್ಕೃತಿಕ ಆಯಾಮದಲ್ಲಿ, ಪರಂಪರೆಯಲ್ಲಿ ನಿಷ್ಠೆಯನ್ನು ಕಳೆದುಕೊಳ್ಳದ ಅಭಿರುಚಿ ಮತ್ತು ಸಂಯಮಶೀಲವಾದ ಪರಿಭಾವನೆಯಿಂದ ಅವರು ನವ್ಯತೆಯನ್ನು ಸ್ವೀಕರಿಸಿರುವರು. ಕವಿಯಾದವನಿಗೆ ಇರಬೇಕಾದ ಸಮಕಾಲೀನ ಪ್ರಜ್ಞೆ ಮತ್ತು ಕಾಳಜಿ, ವೈಯಕ್ತಿಕ ಅನುಭವದ ಶೋಧನೆ, ಭಾಷೆಯೊಂದಿಗಿನ ಹೋರಾಟ, ಪ್ರಾಮಾಣಿಕವಾದ ಅಭಿವ್ಯಕ್ತಿ, ಸ್ವತಂತ್ರ ಅನುಭವದ ಪ್ರಯೋಗಶೀಲತೆ, ಪರಂಪರಾಗತ ಶೈಲಿಯಿಂದ ಮುಕ್ತವಾಗಿ ಬರೆಯುವ ಪ್ರಯತ್ನ, ಹೊಸ ಮೌಲ್ಯಗಳ ಹುಡುಕಾಟ ಇವೇ ಮೊದಲಾದ ಅಂಶಗಳನ್ನು ಕಣವಿಯವರು ಸವಾಲಾಗಿ ಸ್ವೀಕರಿಸಿದರು. ಕಣವಿಯವರನ್ನು ಸಮನ್ವಯ ಕವಿಗಳೆಂದು ಕೆಲವರು ಹೇಳುತ್ತ ಬಂದುದು ಸಂಪೂರ್ಣ ಸರಿಯಲ್ಲ. ಯಾಕೆಂದರೆ ಕಣವಿಯವರು ಸಮಕಾಲೀನ ಕಾವ್ಯಧೋರಣೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುತ್ತ, ಸ್ಪಂದಿಸುತ್ತ ತಮ್ಮ ಸಾಂಸ್ಕೃತಿಕ ಎತ್ತರವನ್ನು ಉಳಿಸಿಕೊಂಡು ಬಂದವರು. ಮಾನವತಾವಾದಿಯಾಗಿ ಎಲ್ಲ ತಿರುವುಗಳಲ್ಲಿ ಸಮರ್ಥವಾಗಿಯೇ ಕಾವ್ಯವನ್ನು ಸೃಷ್ಟಿಸುತ್ತ ಬಂದವರು.

ಕಣವಿಯವರ ನವ್ಯ ಕವಿತೆಗಳ ವಿಶಿಷ್ಟತೆಯನ್ನು ಈಗ ವಿವೇಚಿಸಬಹುದಾಗಿದೆ. **'ದೀಪಧಾರಿ'** (೧೯೫೬) ಬದಲಾದ ಕಾವ್ಯ ಸಂದರ್ಭವನ್ನು ಸೂಚಿಸುತ್ತದೆ. ಈ ಸಂಕಲನದಲ್ಲಿ ನವೋದಯದ ಭಾವಗೀತಗಳಿರುವಂತೆ ನವ್ಯದ ಪ್ರಯೋಗಗಳೂ ಇವೆ. ಒಂದು ಧೋರಣೆಯಿಂದ ಇನ್ನೊಂದು ಧೋರಣೆಗೆ ಹೊರಳುವಾಗ ಕಾವ್ಯ ಸಂಕ್ರಮಣಾವಸ್ಥೆಯನ್ನೂ ಅನುಭವಿಸುತ್ತದೆ. ಯಾವುದೇ ಬದಲಾವಣೆ ದಿಢೀರನೇ ಸಂಭವಿಸುವುದಿಲ್ಲ. ಸಂಕ್ರಮಣಾವಸ್ಥೆ ದಾಟಿದ ಮೇಲೆ ಹೊಸತನ ಗಟ್ಟಿಯಾಗಿ ನಿಲ್ಲುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಸತ್ಪರಂಪರೆಯ ಕೊಂಡಿಯನ್ನು ಕಳಚಿಕೊಂಡರೆ ಬದುಕು ಮುಂದುವರಿಯುವುದಿಲ್ಲ. ಪರಂಪರೆಯ ನೆಲೆಗಟ್ಟಿನ ಮೇಲೆ ಹೊಸ ಪ್ರಯೋಗದ ಕಟ್ಟಡಗಳು ನಿಲ್ಲಬೇಕಾಗುತ್ತದೆ. ಕಣವಿಯವರು ಹಾಗೆಯೇ ಪರಿವರ್ತನಗೊಂಡದ್ದು ಅವರ ನವ್ಯಕವಿತೆಗಳಲ್ಲಿ ಒಂದಾದ ಸಂಜೆಯ ಚಿತ್ರಣದಲ್ಲಿಯ ಹೊಸತನ್ನು ಇಲ್ಲಿ ಕಾಣಬಹುದು.

ಉರಿದುರಿದು ಹಗಲು
ಆರಿಹೋಗಿಹ ಕೆಂಡವಾಯ್ತು ಮುಗಿಲು.

ನೇಸರನಿಗೂ ಬೇಸರಾಗುವದು ಸಹಜ
ನಿಜ....................
ರಜೆಯೆ ಸಿಗದಿರಲು ಅವನಿಗೆಲ್ಲಿಯದು ಮಜ ?
ಅಂತೆಯೇ
ಅವನೆಂದಿನಂತೆಯೇ
ಕರಿಯ ಮೋಡದ ಬರಿಯ ಕಂಬಳಿಯ ಮುಖಕೆಳೆದು
ಹೊತ್ತೂಂಟ್ಲೆ ಮಲಗಿದನು ಗಪ್ಪುಗಡದು.

(ವಿರಹಿ : ಸಂಜೆ – ದೀಪಧಾರಿ)

ಇದೇ ಕವಿತೆಯ ಕೊನೆಯಲ್ಲಿ 'ಸೇದಿ ಬೀಸಾಡಿರುವ ಸಿಗರೇಟು ತುಂಡಿನೊಲು ದೂರದಲಿ ಕಾಣಿಸಿತು ಮಂಕು ಚಿಕ್ಕೆ' ಎನ್ನುವಲ್ಲಿ ನವ್ಯಕಾವ್ಯದ ಭಾಷಿಕ ಹಾಗೂ ಪ್ರತೀಕಾತ್ಮಕ ಬದಲಾವಣೆಯನ್ನು ಗುರುತಿಸಬಹುದು. 'ಮಧ್ಯಾಹ್ನದ ಮಜಲು', 'ಸೊಳ್ಳೆ' ಮೊದಲಾದವುಗಳಲ್ಲಿಯೂ ಈ ರೀತಿಯ ಹೊಸತನವಿದೆ. ಕಣವಿಯವರ 'ಕಾಲಾತೀತ' ಬಹುಚರ್ಚಿತವಾದ ಕವಿತೆಯಾಗಿದ್ದು ಅದು ಅವಲೋಕನಾರ್ಹವಾಗಿದೆ.

ಬಿಡುವಿಲ್ಲ; ಅರ್ಜಂಟು ! ಟಾರುಬೀದಿಯ ತುಡಿತ,
ಕಾರು ಮೋಟಾರು ಸೈಕಲ್ಲು ಟಾಂಗಾ ಟ್ರಕ್ಕು
ಉಸಿರು ಕಟ್ಟುವ ತೆರದಿ ಬಟ್ಟೆಯಲಿ ಹಾಸು–ಹೊಕ್ಕು
ಗಡಿಯಾರದೆಡೆಬಿಡದ ಟಿಕ್ಕು ಟಿಕ್ಕಿನ ಬಡಿತ !
ಆಫೀಸು ಶಾಲೆ ಕಾಲೇಜು ಅಂಗಡಿ ಬ್ಯಾಂಕು
ಎಳೆಯುತಿಹವಯಸ್ಕಾಂತದೊಲು ಜೀವಾಣುಗಳ
ಮೂಗುದಾರವ ಜಗ್ಗಿ ; ನೂರುಗಾಲಿಯ ಕೀಲ
ಸವೆದು ಕಿರುಗುಟ್ಟುತಿವೆ : ನರನಿಗೆ ಜಯಪರಾಕು !
ಬೀದಿಯಂಚಿನ ಕಾಲುದಾರಿಯಲಿ ದನಗಾಹಿ
ಮಹಿಷವಾಹನನಾಗಿ ಕೊಳಲೂದಿ ಸಾಗಿಹನು
ನೋಡಿದಿರ ? ನೋಡದಿದ್ದರು ಸರಿಯೆ, ಅವನೇನು
ಮಂತ್ರಿಯೆ ? ಯಾವುದಾದರು ಸಭೆಯ ಮನಮೋಹಿ
ಗಾರುಡಿಯೆ ? ಅವನಲ್ಲ ಬಿಡಿ ; ಆದರೆನ್ನಾಣೆ
ಅಂಥ ಮನಸಿನ ಶಾಂತಿ ಯಾರಿಗಿಹುದೋ ಕಾಣೆ.

(ಕಾಲಾತೀತ – ದೀಪಧಾರಿ)

ನಗರ ಜೀವನದ ಯಾಂತ್ರಿಕತೆಯನ್ನು ಅರ್ಥಪೂರ್ಣವಾಗಿ ಧ್ವನಿಸುವ ಈ ಕವಿತೆಯಲ್ಲಿ ದನಗಾಹಿಯೊಬ್ಬ ಬೀದಿಯಂಚಿನ ಕಾಲುದಾರಿಯಲ್ಲಿ ಮಹಿಷವಾಹನವಾಗಿ ಕೊಳಲೂದಿ ಸಾಗಿರುವ ದೃಶ್ಯ ಯಾವ ಅಚ್ಚರಿಯನ್ನುಂಟು ಮಾಡದಿದ್ದರೂ ಗ್ರಾಮೀಣ ಬದುಕಿನ ನಿರಾಳತೆ, ಶಾಂತಿ ಕವಿಗೆ ಪ್ರಿಯವಾದದ್ದನ್ನು ನಾವು ಕಾಣುತ್ತೇವೆ. ಕವಿ ನಗರದ ಅಶಾಂತ ಬದುಕಿನಿಂದ ಪ್ರಶಾಂತ ಗ್ರಾಮೀಣ ಪರಿಸರದತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ಹಾಗೆ ನೋಡಿದರೆ ಕಣವಿಯವರೂ ಗ್ರಾಮೀಣ ಜೀವನದಿಂದಲೇ ನಗರದತ್ತ ಪಯಣಿಸಿ ಬಂದವರು ಎಂಬುದೂ ಇಲ್ಲಿ ಗಮನಾರ್ಹ. ಆದ್ದರಿಂದಲೇ ಈ ಗಡಿಬಿಡಿ ಗಲಾಟೆಯಿಂದ ದೂರವಾಗಿ ನಿಲ್ಲುವ ತವಕ ಆಧುನಿಕ ಮನಸ್ಸಿನ ಸ್ಥಿತಿಯೂ ಆಗಿದೆ.

ಆಧುನಿಕ ಜೀವನದಲ್ಲಿ ಕಾಣುವ ದ್ವಂದ್ವ ವ್ಯಕ್ತಿತ್ವವನ್ನು ಕಣವಿಯವರು 'ದ್ವಂದ್ವ' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. 'ಪಡುಗಡಲು' ಕವಿತೆಯಲ್ಲಿ ಕಡಲು ಮತ್ತು ಮುಗಿಲುಗಳು ಅನಂತತೆಯ ಪ್ರತೀಕಗಳಾಗಿದ್ದು, ಅನಂತತೆಯನ್ನು ಹೀರಲು ನಿಂತ ಅವುಗಳ ರಹಸ್ಯವನ್ನು ಭೇದಿಸಲು ಕವಿ ಪ್ರಯತ್ನಿಸಿದ್ದಾರೆ. ಇದರಲ್ಲಿ ಬರುವ 'ಮೊನ್ನೆ ಮೊನ್ನೆ ಯುದ್ಧವಾಯ್ತು ಮನುಕುಲದುದ್ಧಾರಕೆ' ಎಂಬ ಸಾಲಿನ ವ್ಯಂಗ್ಯ ತೀವ್ರವಾದದ್ದು. 'ದೀಪಧಾರಿ'ಯಂಥ ವಾತ್ಸಲ್ಯಭಾವದ ಕವಿತೆಗಳನ್ನು ಈ ಸಂದರ್ಭದಲ್ಲಿ ಉಳಿಸಿಕೊಂಡದ್ದು ವಿಶಿಷ್ಟವಾಗಿದೆ.

ಹಗಲು ಸತತೋದ್ಯೋಗಿ, ಇರುಳು ಕಿಂದರಿ ಜೋಗಿ
ನಿದ್ದೆ ಎಲ್ಲೋ ಯಕ್ಷಲೋಕ ಸಂಚಾರಿ,
ಇವನೆಳೆಯ ಕಂಗಳಲಿ ಹೊಳೆವ ತಿಂಗಳ ಬೆಳಕು
ದಿನದ ದಾರಿಯೊಳೆಮಗೆ ದೀಪಧಾರಿ

(ದೀಪಧಾರಿ – ದೀಪಧಾರಿ)

ಕಾವ್ಯದಲ್ಲಿ ಮಣ್ಣಿನ ವಾಸನೆ ಹೊಡೆಯಬೇಕೆಂಬ ನವ್ಯಕಾವ್ಯದ ಉದ್ದೇಶದಂತೆ ಕಣವಿಯವರ ಕಾವ್ಯದಲ್ಲೂ ಇಂಥ ಅಭಿವ್ಯಕ್ತಿಯನ್ನು ನಾವು ಗುರುತಿಸಬಹುದು.

ಕಣವಿಯವರ **'ಮಣ್ಣಿನ ಮೆರವಣಿಗೆ'** (೧೯೬೦) ಅವರ ಕಾವ್ಯದ ದಾರಿ ಬದಲಾದ ಬಗೆಯನ್ನು ಸ್ಪಷ್ಟವಾಗಿ ಹೇಳುತ್ತದೆ. ಕಾವ್ಯದಲ್ಲಿ ನವ್ಯತೆಯ ಆವಿಷ್ಕಾರ ಕಣವಿಯವರು ಅಭಿವ್ಯಕ್ತಿಯಲ್ಲಿ ಸಾಧಿಸಿದ ಹೊಸತನ ಎನ್ನಬಹುದು.

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ,
ಆರಿದೆಯೆಂದವರಾರೊ, ಇನ್ನೂ ನಿಗಿನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ !
ಹರಿಯುತ್ತಿವೆ ಬೆಂಕಿಯ ಹೊಳೆ
ತಣ್ಣನೆ ಕಡಲೊಳಗೆ ;
ಹೊಗೆಯಾಡುತ್ತಿದೆ ಸುಮ್ಮನೆ ನುಣ್ಣನೆ ಬಾನೊಳಗೆ.
ಬಿದ್ದಿವೆ
ಒಡಮುರಿದೆದ್ದಿವೆ ಗಿರಿ ಗಹ್ವರ
ಯುಗ ಯುಗಗಳ ನೋವೆ !

(ಮಣ್ಣಿನ ಮೆರವಣಿಗೆ – ಮಣ್ಣಿನ ಮೆರವಣಿಗೆ)

ಎರಡು ಮಹಾಯುದ್ಧದ ನಂತರ ಆವರಿಸಿದ ಬದುಕಿನ ಬಗೆಗಿನ ನೋವು, ನಿರಾಶೆ, ಮಾನವಕುಲದ ಸಂಕಟ, ಯಾತನೆಗಳು ದೂರವಾಗದ ಸ್ಥಿತಿಯಲ್ಲಿ ಕವಿ ಎಚ್ಚರದಿಂದ ಅದನ್ನು ಕಾವ್ಯಾಭಿವ್ಯಕ್ತಿಗೊಳಿಸಿದ್ದು ಮುಖ್ಯವಾದ ಅಂಶ. ವಾಸ್ತವ ಬದುಕಿಗೆ ಸ್ಪಂದಿಸುವ ಕಣವಿಯವರ 'ಯುಗಾದಿ' ಕವಿತೆಯ ಸಾಲುಗಳಿವು :

ಕರೆಯದಿದ್ದರು ನಾವು ನೀನು ಬಂದೇ ಬರುವಿ
ಅಲ್ಲವೇ ? ಬಾ ಮತ್ತೆ ಬಾ ಯುಗಾದಿ ;
ಎಂಥ ಬಿಸಿಲೊಳು ಬಂದೆ !

ಬೇಕೆ ಬಾಯಾರಿಕೆಗೆ ಬೇವುಬೆಲ್ಲ ?
ಚಹಕೆ ಸಕ್ಕರೆಯಿಲ್ಲ; ನಡೆದೀತೆ ಬರಿಯ ತಣ್ಣೀರ ಗುಟುಕು ?

ಇದು ಹೋದ ವರುಷವೆ ಕೊಂಡ ಬಾಳದ ಬೇರ ಬೀಸಣಿಕೆ
ನೀರು ಚಿಮುಕಿಸಿದೆ; ತಣ್ಣಗೆ ಬೀಸಿಕೊ
ಇಲ್ಲೆ ಪಾಟಿಯ ಕಲ್ಲ ಮೇಲೆ ಹಾಸಿದೆ, ಸ್ವಲ್ಪ ಅಡ್ಡಾಗಿ ಏಳು.
ಆಮೇಲೆ ಮಾತಾಡೋಣ, ಕುಳಿತು ಹಾಯಾಗಿ
ಒಂದು ಯುಗವಾಗಿ ಹೋಯಿತಲ್ಲವೆ ನಾವು ಭೆಟ್ಟಿಯಾಗಿ !

(ಯುಗಾದಿ - ಮಣ್ಣಿನ ಮೆರವಣಿಗೆ)

ಯುಗಾದಿಯ ವೈಭವೀಕರಣಕ್ಕಿಂತ ವಾಸ್ತವ ಜೀವನದ ದಾರುಣತೆಯನ್ನು ಎತ್ತಿ ಹೇಳುವ ಕವಿ ಸಮಕಾಲೀನತೆಗೆ ಸ್ಪಂದಿಸುತ್ತಿದ್ದಾರೆ. ಬದುಕಿನ ನೈರಾಶ್ಯದಲ್ಲೂ 'ನಾಳಿನ ನವೋದಯ' ಕಾಣುವ ಕವಿಯ ಆಶಾವಾದವೂ ಇಲ್ಲಿದೆ.

ಆತ್ಮಾಭಿಮಾನವನ್ನು ಕಳೆದುಕೊಂಡು ಅಧಿಕಾರಶಾಹಿಗೆ ತಮ್ಮನ್ನು ಮಾರಿಕೊಳ್ಳುವ ಜನರು ಏನು ಬೇಕಾದರೂ ಮಾಡುವುದನ್ನೂ ಕಣವಿಯವರು 'ಲಾಗ' ಕವಿತೆಯಲ್ಲಿ ವಸ್ತು ಪ್ರತಿರೂಪದ ಮೂಲಕ ಪ್ರಕಟಿಸಿದ್ದಾರೆ.

ಲಾಗ ಹೊಡೆಯೆಲೊ ಮಂಗ, ಲಾಗ ಹೊಡೆಯೆಲೊ ಮಂಗ
ಬಗ್ಗಿ ದಣಿಯರ ಮುಂದೆ ಲಾಗ ಹೊಡೆಯೊ;
ಹಾಕು ಅಂತರ್ಲಾಂಗ, ಹಾಕು ಜಂತರ್ಲಾಗ-
ನೆರೆದ ಮಹನೀಯರಿಗೆ ಶರಣು ಹೊಡೆಯೊ

(ಲಾಗ - ಮಣ್ಣಿನ ಮೆರವಣಿಗೆ)

ಸ್ವಾರ್ಥ ಸಾಧನೆಗಾಗಿ ರಾಜಕಾರಣಿಗಳ ಕಾಲಿಗೆ ಬೀಳುವ ಜನರನ್ನು ಬಯಲಿಗೆಳೆದು ವಿಡಂಬಿಸುವ ರೀತಿ ಪ್ರಸ್ತುತ ಸಂದರ್ಭವನ್ನು ವಿದಿತಪಡಿಸುತ್ತದೆ. ಅಪ್ಪಟ ನವ್ಯಕಾವ್ಯವಾದ ಕಣವಿಯವರ 'ಮಣ್ಣಿನ ಮೆರವಣಿಗೆ'ಗೆ ಗೌರೀಶ ಕಾಯ್ಕಿಣಿಯವರು ಮುನ್ನುಡಿಯ ಮಶಾಲು ಹಿಡಿದಿದ್ದಾರೆ.

ಕಣವಿಯವರ **'ನೆಲಮುಗಿಲು'** (೧೯೬೫) ಹೊಸ ಕಾವ್ಯದಲ್ಲಿ ಕವಿಯ ಪ್ರಯೋಗಶೀಲತೆಯ ಯಶಸ್ಸನ್ನು ಪ್ರಕಟಿಸಿದೆ. ಮುನ್ನುಡಿಯಲ್ಲಿ ಬೇಂದ್ರೆಯವರು ಗುರುತಿಸಿದ ಹಾಗೆ 'ನೆಲಮುಗಿಲು' ಸಂಗ್ರಹವು ಕವಿಯ ಹಳೆಯ ಗುಣಗಳ ಜತೆಗೆ ಹೊಸ ಬೆಡಗನ್ನೂ ಮೈಗೂಡಿಸಿಕೊಂಡಿದೆ. ಸದ್ಭಾವದ ಶ್ರದ್ಧೆಯು ಇಲ್ಲಿ ಗಟ್ಟಿ ಕಾಳಾಗಿದೆ. ಕಣವಿಯವರ ಕವನ ಹತ್ತು ಕಡೆ ಹರಿದುಕೊಳ್ಳದೆ, ಸರ್ವಸಮಯಗಳ ಸಮನ್ವಯ ಒಳಗೊಳ್ಳಲು ತವಕಪಡುತ್ತದೆ. ಅದು ಅದರ ಛಂದ. 'ಮೃತ್ಯುಂಜಯ'ರಿಗೆ ಪುಷ್ಪಾಂಜಲಿ ಅರ್ಪಿಸಿದ ಕೈಗಳು ಪಾಂಡಿಚೇರಿಯ ಸಮಾಧಿಗೂ ಮುಗಿದುಕೊಳ್ಳುತ್ತವೆ.' 'ರಂಜನಾ' ಕವಿ ಬದುಕಿನಲ್ಲಿ ತಂದ ಹರ್ಷೋಲ್ಲಾಸದ ಹಾಡಾಗಿ ಹರಿದಿದೆ. ಕಣವಿ ಕುಟುಂಬ ವತ್ಸಲರು ಎಂಬುದು ಗಮನಿಸುವ ಅಂಶ.

ರಂಜನಾ
ಕುಹೂ ಕುಹೂ ಕೂಜನ

ವಾತ್ಸಲ್ಯದ ಕೇತನ
ಇಲ್ಲಿ ಬಾ, ಹೆಜ್ಜೆಗಳ ಕುಣಿಸಿ ತೋರಿಸು ಜಾಣೆ
ನೋಡೋಣ, ಕಾರಂಜಿ ಬೃಂದಾವನ ।

(ರಂಜನಾ – ನೆಲಮುಗಿಲು)

ಕಣವಿಯವರ ಕಾವ್ಯದ ಮುಖ್ಯವಾದ ಅಂಶ ಹೃದ್ಯವಾದ ವರ್ಣನಾಗುಣ. ಪ್ರಕೃತಿಯ ವ್ಯಾಪಾರವನ್ನು, ತಾನು ಕಂಡ ವ್ಯಕ್ತಿ. ವಸ್ತು ವಿಷಯಗಳನ್ನು ಬಗೆಬಗೆಯಾಗಿ ವರ್ಣಿಸುವ ಕೌಶಲ್ಯ ಇಲ್ಲಿ ಎದ್ದು ಕಾಣುತ್ತದೆ. 'ಧಾರವಾಡದಲ್ಲಿ ಮಳೆಗಾಲ', 'ಮೊದಲ ಮಳೆ', 'ಚಿಗುರಿತು ಈ ಹುಲುಗಲ' ಮುಂತಾದ ಕವಿತೆಗಳು ಇದಕ್ಕೆ ನಿದರ್ಶನಗಳಾಗಿವೆ. ಕಣವಿಯವರು ತೆರೆದ ಮನಸ್ಸಿನ ಕವಿಯಾದುದರಿಂದ ಸಾಹಿತ್ಯದಲ್ಲಿ ಬರುವ ಎಲ್ಲ ವಿಚಾರಧಾರೆಗಳನ್ನು ವಿವೇಚನೆಯಿಂದ ತನ್ನದಾಗಿಸಿಕೊಳ್ಳುತ್ತ ಸಾಗಿದವರು. 'ಭಾವಕೇಂದ್ರ'ದಲ್ಲಿ ಕವಿ ಹೇಳುತ್ತಾರೆ :

ನೂರು ಹೂಗಳ ಕಂಪು ತೇಲುತಿದೆ ಗಾಳಿಯಲಿ
ಹೀರಿಕೊ ; ಅಲ್ಲಿಳಿದ ಮಳೆಯ ನೀರು
ಇಲ್ಲಿ ಬಾವಿಗೆ ಸೋಸಿ ಬಂದಿಹುದು ಸೇದಿಕೊ ;
ಕಾಣುವದೆ ಈ ಗಿಡದ ಬುಡದ ಬೇರು ?

(ಭಾವಕೇಂದ್ರ – ನೆಲಮುಗಿಲು)

ಮನಸ್ಸಿನ ಸಂಕುಚಿತತೆಯನ್ನು ಹರಿದೊಗೆದು ಬದುಕಿನ ಚೆಲುವನ್ನು ಸವಿಯುವ, ಕವಿಮನಸ್ಸಿನ ವೈಶಾಲ್ಯವನ್ನು ನಾವು ಕಾಣುತ್ತೇವೆ. ಕಣವಿಯವರ 'ಕಾಲ ನಿಲ್ಲುವದಿಲ್ಲ' ಒಂದು ಮಹತ್ವದ ಕವಿತೆ. ಕಾಲದ ಚಲನಗುಣ ಮತ್ತು ಅದರ ವ್ಯಾಪ್ತಿಯ ವಿವಿಧ ಮುಖಗಳು ಮೊದಲ ಭಾಗದಲ್ಲಿ ವರ್ಣಿತವಾದರೆ ಎರಡನೆಯ ಭಾಗದಲ್ಲಿ ಕಾಲವನ್ನು ಏಕೆ ಹಿಡಿಯಲಾಗುವದಿಲ್ಲವೆಂಬುದನ್ನು ಮಾರ್ಮಿಕವಾಗಿ ಪ್ರಕಟಪಡಿಸಲಾಗಿದೆ.

ಕಾಲ ನಿಲ್ಲುವದಿಲ್ಲ ; ನಾವು ಕೂಡುವುದಿಲ್ಲ.
ಮಳೆಬಂದರೂ ಕಾಮನ ಬಿಲ್ಲು ಮೂಡುವದೆಂಬ ನಿಯಮವಿಲ್ಲ.
ಹಗಲಿರುಳ ಗಾಲಿಯಲಿ ಸೋಲು–ಗೆಲುವಿನ ಕೀಲು ಭದ್ರ.
ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು.
ನಿಂತವರಿಗೂ ಉಂಟು ನೋಡಿ ಸಂತಸಪಡುವ ಭಾಗ್ಯ.
ಗೆದ್ದವರಿಗಿದ್ದೆಯಿದೆ ಬೆಳ್ಳಿಯ ಥಾಲು,
ಸೋತವರ ಸೊತ್ತು
ಗೆದ್ದವರನಳೆವ ಜಗದೆಲ್ಲ ಅನುಭವದ ಪಾಲು

(ಕಾಲ ನಿಲ್ಲುವದಿಲ್ಲ – ನೆಲಮುಗಿಲು)

ಕಾಲದಂಥ ಅಮೂರ್ತ ವಿಷಯವನ್ನು ಅಭಿವ್ಯಕ್ತಗೊಳಿಸುವಾಗ ಕಣವಿಯವರು ವ್ಯಂಜಕ ಗುಣದಿಂದ ತಾತ್ವಿಕ ಚಿಂತನೆ ನಡೆಸುವುದರ ಜೊತೆಗೆ ಬದುಕಿನ ದ್ವಂದ್ವಗಳನ್ನು ವಿವಿಧ ರೀತಿಯಲ್ಲಿ ಒರೆಗೆ ಹಚ್ಚುತ್ತಾರೆ. ಕಾಲದೊಂದಿಗೆ ಮನುಷ್ಯ ಸೆಣಸಲು ಸಾಧ್ಯವಿಲ್ಲ ಎಂಬ ಸತ್ಯವನ್ನೂ ಹೇಳುವ ಕವಿ ಮಾನವ – ಅಮಾನವ ಲೋಕಗಳ ನಡುವಿನ

ಚಿಂತನೆಯನ್ನೂ ವ್ಯಕ್ತಪಡಿಸಿದ್ದಾರೆ. 'ನೆಹರೂ ಶ್ರದ್ಧಾಂಜಲಿ', 'ಭಾರತ ಸುಪುತ್ರನ ಕೊನೆಯ ಬಯಕೆ' ಕವಿತೆಗಳಲ್ಲಿ ಕಣವಿಯವರ ರಾಷ್ಟ್ರಪ್ರಜ್ಞೆಯ ಮಿಡಿತವನ್ನು ನಾವು ಕಾಣುತ್ತೇವೆ. 'ನೆಹರು ನಿವೃತ್ತರಾಗುವದಿಲ್ಲ' ಎಂದು ನವ್ಯ ಕವಿ ಅಡಿಗರು ಬರೆದ ಪದ್ಯದ ನಿಲುವಿಗಿಂತ ಕಣವಿಯವರ ಆಶಯ ಬೇರೆ ದಾರಿ ತುಳಿಯುವದನ್ನು ನಾವು ಕಾಣುತ್ತೇವೆ.

ಕಣವಿಯವರ 'ಎರಡು ದಡ' (೧೯೬೯) ಕವಿತಾ ಸಂಗ್ರಹದಲ್ಲಿ ಜೀವನದ ಸಂಕೀರ್ಣ ಅನುಭವದ ಚಿತ್ರಣವಿದೆ. ಕವಿಯ ಆಂತರಂಗಿಕ ಮತ್ತು ಬಾಹ್ಯ ವ್ಯಕ್ತಿತ್ವದ ಸ್ಪಂದನವೂ 'ಎರಡು ದಡ'ದ ಕವಿತೆಗಳಲ್ಲಿದೆ. 'ಹೊಸ ವರುಷದ ಸ್ವಾ(ಸ್ವ)ಗತ ಭಾಷಣ'ದಲ್ಲಿ ವಿಶ್ವಾವಸುವನ್ನು ಬರಮಾಡಿಕೊಂಡು ಮಾನವ ಬದುಕಿನ ಸುಖ-ದುಃಖಗಳನ್ನು ನಿವೇದಿಸುವಲ್ಲಿ ಒಂದು ಹೊಸತನವಿದೆ.

ದಿನವೂ ನಮಗೆ ಶಿವರಾತ್ರಿ
ಪ್ರತಿಯೊಂದು ಹಗಲಿರುಳ ಸಂಧಿಕಾಲವೂ ನಮಗೆ ಸಂಕ್ರಾಂತಿ.
ಎತ್ತರದ ಬಾನಿನಲಿ ಬಿಳಿಯ ಕುಸುರೆಳ್ಳುಗಳ ಹರವಿ
ಆಶೆ ತೋರಿಸಬೇಡ
ಕೊಡುವದಾದರೆ ನೆಲದ ಉಡಿತುಂಬ ಕೊಡು
ಹೊಡೆಯೆತ್ತಿ ನಿಲ್ಲಲಿ ಬದುಕು.
ಉಂಡು ಉಪವಾಸಿಗಳು ನಾವು
ಬಳಸಿದ ಬ್ರಹ್ಮಚಾರಿಗಳು;
ಸರ್ವಧರ್ಮ ಸಹಿಷ್ಣುತೆಯ ಜಗಜ್ಜಾಹೀರುಗೊಳಿಸಿ
ಜಾತಿ ಕೂಪಕೆ ಮತ್ತೆ ಜಾರಿಕೊಂಡವರು;
ಗಾಳಿ ಬೀಸಿದ ಹಾಗೆ ತೂರಿಕೊಂಡವರು.

(ಹೊಸ ವರುಷದ ಸ್ವಾ(ಸ್ವ)ಗತ ಭಾಷಣ - ಎರಡು ದಡ)

ಬದುಕಿನ ದ್ವಂದ್ವಗಳನ್ನೂ, ವಾಸ್ತವತೆಯ ನಿಜಸ್ವರೂಪವನ್ನೂ ಅನುಭವ ತೀವ್ರಗೊಳ್ಳುವಂತೆ ಕಣವಿಯವರು ಅಭಿವ್ಯಕ್ತಿಸಿದ್ದಾರೆ. 'ವಿನೂತನ ಕವಿಯ ಕೈಫಿಯತ್ತು'ದಲ್ಲಿ ಹೊಸ ಕಾವ್ಯದ ಅತಿರೇಕವನ್ನು ತೀವ್ರವಾಗಿ ವಿಡಂಬಿಸಿದ್ದಾರೆ,

ಭಾವಕೋಶದ ಮಾತೇಕೆ ?
ಅದಕೆ ಟಾಚಣಿ ಚುಚ್ಚಿ ಪಿನ್‌ಕುಶನ್ ಮಾಡಿ
ಎದೆಯ ಮೇಜಿನ ಮೂಲೆಯಲ್ಲಿ
ಇಟ್ಟಿದ್ದೇವೆ.
ನಿನ್ನ ಸುತ್ತಲೂ ಒಂದೇ ನಮೂನೆಯ, ಅದೇ
ಮಿಣು ಮಿಣುಕು ಚಿಕ್ಕೆಗಳ ಥಕ್ಕಥೈ
ವಿವಿಧ ಪ್ರತಿಮೆಗಳ ಬಾವುಟವನೆತ್ತಿ ಹಿಡಿದಿದೆ
ರಂಗುರಂಗಿನ ನಮ್ಮ ಬುಶ್‌ಕೋಟು ತೊಟ್ಟ ಮೈ
(ವಿನೂತನ ಕವಿಯ ಕೈಫಿಯತ್ತು - ಎರಡು ದಡ)

ಕಣವಿಯವರ 'ನಂಬಿಕೆ' ಕವಿತೆ ವಿಶಿಷ್ಟ ಸಂವೇದನೆಯನ್ನು ಪ್ರಕಟಿಸುತ್ತದೆ. ನಂಬಿಕೆ ಎನ್ನುವುದು ಅಮೂರ್ತವಾದದ್ದಾದರೂ ಅದು ಮಾನವ ಜೀವನವನ್ನು

ವ್ಯಾಪಿಸಿಕೊಂಡಿರುವಂತಹದು. ಅನಂತವೆಂದರೂ ಆಕಾಶಕೊಂದು ಆಕೃತಿಯಿರುವ ಹಾಗೆ ನಂಬಿಕೆ ಬದುಕಿನೊಡನೆ ಬೆರೆತಿರುವಂತಹದು. ಅದರ ಗಾಢವಾದ ಚಿಂತನೆ, ಸಂಕೀರ್ಣಾನುಭವ, ಸ್ವಾನುಭೂತಿಯನ್ನು ಕವಿ ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ನನ್ನ ನಂಬಿಕೆಯೊಂದು ಆಕಾಶ
ನಿಜ, ಅದಕೆ ತಲೆ ಬುಡವಿಲ್ಲ, ನಾನೆಷ್ಟು ಬೆಳೆದರೂ
ನನಗೆ ನಿಲುಕುವದಿಲ್ಲ. ದೂರದಿಂದಲ್ಲದೆ ನಾನದನು
ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
ನಡೆದರೂ ಅದು ಸದಾ ನನ್ನ ತಲೆಯ ಮೇಲೆ,
ಹಗಲು ಹೊತ್ತಿನಲಿ ಅದರೆಡೆಗೆ ಲಕ್ಷ್ಯವಿಲ್ಲ, ನಮ್ಮ ಬದುಕಿನಲಿ
ನಾವು ಮಗ್ನರಾದರೆ ಸಾಕು, ಅದಕೆ ಚಿಂತೆಯಿಲ್ಲ.
ರಾತ್ರಿ ವಿದ್ಯುದ್ದೀಪ ಕೈಕೊಟ್ಟು, ಮಿಣಿ ಮಿಣಿ ಮೇಣ
ಬತ್ತಿಯ ಹಚ್ಚಿ ಅಂಜಿ ಆಕಳಿಸುತ್ತ ಕುಳಿತಾಗಲೂ
ಆಕಾಶದಲ್ಲಿ ಹೊಳೆವ ನಕ್ಷತ್ರಕ್ಕೆ ಲೆಕ್ಕವಿಲ್ಲ.

(ನಂಬಿಕೆ – ಎರಡು ದಡ)

ಇಲ್ಲಿ ಬರುವ ಹೊಸ ಅರಿವು, ಮೇಣಬತ್ತಿ ಹಾಗು ಪ್ರತಿಮೆಗಳ ವೈವಿಧ್ಯ ಕಣವಿ ಕಾವ್ಯಸಿದ್ಧಿಯ ಅಪೂರ್ವ ನಿದರ್ಶನವಾಗಿದೆ. 'ಎರಡು ದಡ' ಕವಿತೆಯಲ್ಲಿ ಏಳು ಕೊಳ್ಳದಲಿ ಮಂಜಿನಾಚೆಗೆ ಜಡೆಗಟ್ಟಿ ಕುಳಿತ ಭೂತ' ಸಾಂಕೇತಿಕವಾಗಿ ಭೂತಕಾಲವನ್ನು ಪ್ರತಿಮಿಸುತ್ತದೆ. ಇಲ್ಲಿ ಬರುವ ಪಶ್ಚಿಮದಲ್ಲಿ ಇಳಿದ ಕೆಂಬೆಳಕು ಪೂರ್ವದಲಿ ಹೊಂಬೆಳಕ ತೂರುವದು, ನೆಲ–ಮುಗಿಲು, ಸೋಲು–ಗೆಲುವು ಮೊದಲಾದವು. 'ಎರಡು ದಡ' ತುಂಬಿಕೊಂಡು ಕವಿಯ ವಿಚಾರ ಪ್ರವಹಿಸುತ್ತದೆ.

'ಗಾಂಧಿ' ಮೂರ್ತಿಯ ಮುಂದೆ ನಮ್ಮ ಸತ್ವಹೀನತೆಯನ್ನು ಕವಿ ಗುರುತಿಸಿ ಚಿತ್ರಿಸಿರುವದೊಂದು ವಿಶೇಷ.

ಪಾರದರ್ಶಕದಂಥ ನಿನ್ನ ಅಂತಃಕರಣ
ಕಾಡಿಗೆ ಬಳಿದ ಕಾಜಿನಲಿ ಮಾತ್ರ ಕಾಣುವದು
ನಮಗೀಗ ಹಿಡಿದ ಗ್ರಹಣ.
ನೀನಿಂದು ಬದುಕಿದ್ದರೊಂದು ವೇಳೆ
ಗರತಿಯಾಗಬಹುದಿತ್ತೇನೊ ರಾಜಕಾರಣದ ಸೂಳೆ.

(ಗಾಂಧಿ – ಎರಡು ದಡ)

ಕಣವಿಯವರ ಕಾವ್ಯ ವಿಡಂಬನೆಯ ಸ್ಫೋಟ ಮಾಡಿಸುವ ಬಗೆಯನ್ನು ನಾವಿಲ್ಲಿ ಕಾಣುತ್ತೇವೆ. 'ಎರಡು ದಡ'ದ ಬಲದಂಡೆಯ ಕವಿತೆಗಳು ಕನ್ನಡ ಸಂಸ್ಕೃತಿ ಪರಂಪರೆಯ ದೃಢವಾದ ಶ್ರದ್ಧೆ, ನಂಬಿಕೆಗಳನ್ನು ಸಾಕಾರಗೊಳಿಸುತ್ತದೆ. 'ವಿಶ್ವಭಾರತಿಗೆ ಕನ್ನಡದಾರತಿ' ಕನ್ನಡ ಸಂಸ್ಕೃತಿ ಪ್ರಜ್ಞೆಯ ರೋಮಾಂಚನವನ್ನುಂಟು ಮಾಡುವ ಹಾಡಾಗಿದೆ. 'ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯ ಸಂಸ್ಕಾರಿ' ಎಂದು ಆರಂಭವಾಗುವ ಈ ಕವಿತೆ ಕನ್ನಡ ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುತ್ತದೆ. ಅದರ ಭಾವನೋಲ್ಲಾಸ, ಅರ್ಥಸಂಪತ್ತು, ಲಯದ ಸೊಬಗಿನಲ್ಲಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿವೆ. 'ನೀಲಾಂಬಿಕೆ',

'ಬಸವಣ್ಣನ ಬೆಳಗು', 'ಅಕ್ಕಮಹಾದೇವಿ', ಕವಿತೆಗಳು ಕಣವಿಯವರ ಸಾಂಸ್ಕೃತಿಕ ನಿಷ್ಠೆಯನ್ನು ಪ್ರಕಟಿಸುತ್ತವೆ. 'ಸಂಕ್ರಮಣ', 'ಗೀತ ಶ್ರವಣಿಕೆ' ಮತ್ತು 'ನೆಲದ ಮಕ್ಕಳಿಗೆ ನಲ್ವಾಡು' ರೂಪಕಗಳಲ್ಲಿ ಕಾವ್ಯದ ನಾದಲಹರಿಯನ್ನು ಜನಪದ ಸಂಸ್ಕೃತಿಯ ಮೂಲಕ ಕಾಣುತ್ತೇವೆ.

ಕಣವಿಯವರ 'ನಗರದಲ್ಲಿ ನೆರಳು' (೧೯೭೪) ಸಂಗ್ರಹ ಸಾಮಾಜಿಕ ಬದುಕಿನ ಚಿಂತನೆಯನ್ನು ನಮ್ಮ ಮುಂದಿಡುತ್ತದೆ. ಪರಿಸರ ಪ್ರಜ್ಞೆಯಿಲ್ಲದೆ ಬೆಳೆಯುತ್ತಿರುವ ನಗರಗಳ ದಾರುಣ ಸ್ಥಿತಿಯನ್ನು ಕವಿ 'ನಗರದಲ್ಲಿ ನೆರಳು' ಕವಿತೆಯಲ್ಲಿ ಸ್ಪಷ್ಟವಾಗಿ ವಿಡಂಬಿಸಿದ್ದಾರೆ. 'ಕುಟುಂಬ ಸೌಖ್ಯದ ಆಖ್ಯಾನ'ದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರ ಚಿಂತನೆಯಿದೆ.

ನಮ್ಮ ಯೋಜನೆಗಳೆಲ್ಲ ಸ್ವಲ್ಪ ನಿದಾನ
ಯೋಚನೆ ಮಾಡುವದಂತೂ ಅದಕ್ಕೂ ನಿದಾನ
ಗಡ್ಡಕ್ಕೆ ಬೆಂಕಿ ಹತ್ತಿದ ಮೇಲೆ
ಬಾವಿಯ ತೋಡುವ ಜನ. ಅದಕ್ಕೇ
ಇಂದು ಎಲ್ಲಿ ನೋಡಿದರೂ ಕಣ್ಣು ತಿವಿಯುತಿದೆ
ಕೆಂಪು ತ್ರಿಕೋನ

(ಕುಟುಂಬ ಸೌಖ್ಯದ ಆಖ್ಯಾನ – ನಗರದಲ್ಲಿ ನೆರಳು)

ಕಣವಿಯವರು ಸಮಕಾಲೀನ ಬದುಕಿಗೆ ಸ್ಪಂದಿಸುವ ಅನೇಕ ಕವಿತೆಗಳನ್ನು ರಚಿಸುತ್ತ ಬಂದಿದ್ದಾರೆ. ಭಾರತ ದೇಶದಲ್ಲಿ ಈಗ ಯಾರು ಯಾರಿಗೆ ಹೇಳಬೇಕು ? ಹಾಗೆಯೇ 'ಯಾರು ಕೇಳುತ್ತಾರೆ ಹೇಳಿರಣ್ಣ' ವೈಯಕ್ತಿಕ ಪ್ರತಿಷ್ಠೆ, ಆಡಂಬರದ ಸ್ವಾರ್ಥಗಳಿಂದ ಕೂಡಿದ ದೇಶದ ವ್ಯವಸ್ಥೆ ಹದಗೆಟ್ಟಿರುವದನ್ನು ಕವಿ ಸಮರ್ಥವಾಗಿ ಸೆರೆಹಿಡಿಯುವ ಸಾಲುಗಳಿವು.

ಮೇಜು ಗುದ್ದುತ್ತಾರೆ, ಮೈಕು ಮುರಿಯುತ್ತಾರೆ
ಮಾಲೆ ಬೇಡುತ್ತಾರೆ, ಮೋಜು ಮಾಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.
ಫಂಡು ಎತ್ತುತ್ತಾರೆ, ಎತ್ತಿ ಹಾಕುತ್ತಾರೆ
ಬಂಡು ಹೂಡುತ್ತಾರೆ, ಬೆಂಡು ಸುಲಿಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.
ಕೈಯ ಮುಗಿಯುತ್ತಾರೆ, ಕಾಲು ಕೆದರುತ್ತಾರೆ
ಬಾಲ ಹಿಡಿಯುತ್ತಾರೆ, ಮೇಲೆ ಏರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

(ಯಾರು ಕೇಳುತ್ತಾರೆ ಹೇಳಿರಣ್ಣ – ನಗರದಲ್ಲಿ ನೆರಳು)

ಹೇಳುವವರು ಕೇಳುವವರು ಇಲ್ಲದ ಈ ದೇಶದಲ್ಲಿ ಏನು ಬೇಕಾದರೂ ಆಗಬಹುದು. 'ಪ್ರಾಣಿ ಸಂಗ್ರಹಾಲಯದೊಳಗೆ ತಿರುಗಿ ಸ್ಥಾನವಿಲ್ಲದ್ದಕ್ಕೆ ಮರುಗಿ ಉಳಿದಿದ್ದಾನೆ ಮನುಷ್ಯಪ್ರಾಣಿ' ಎಂದು ಇನ್ನೊಂದು ಕವಿತೆಯಲ್ಲಿ ಭಾವೈಕ್ಯವನ್ನು ನಾಶ ಮಾಡುವ ವ್ಯಕ್ತಿಶಕ್ತಿಗಳ ದೊಂಬರಾಟವನ್ನು ಬಿಸಿತಟ್ಟುವಂತೆ ವಿಡಂಬಿಸಿದ್ದಾರೆ. ಹೀಗೆ 'ನಗರದಲ್ಲಿ ನೆರಳು' ಕವಿತೆಗಳಲ್ಲಿ ಕಣವಿಯವರ ಸಮಕಾಲೀನ ಪ್ರಜ್ಞೆಯ ಸ್ಪಂದನವನ್ನೂ, ವಿಡಂಬನೆಯ ವೈಖರಿಯನ್ನೂ ಕಾಣುತ್ತೇವೆ.

ಕಣವಿಯವರ 'ಜೀವ ಧ್ವನಿ' (೧೯೮೦) ಕವಿಯ ಕಾವ್ಯಧ್ವನಿಯೂ ಆಗಿ ಮನ್ನಣೆ ಗಳಿಸಿದೆ. ಕಣವಿಯವರು ಗ್ರಾಮೀಣ ಬದುಕಿನಿಂದ ಬಂದು ಅದರ ಅನುಭವಗಳನ್ನು ಶಿಷ್ಟ ಭಾಷೆಯಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಗ್ರಾಮ ಜೀವನದ ವಿಕಾಸದಲ್ಲಿ ಆಸ್ಥೆಯಿರುವ ಕವಿಯ ಸದಾಶಯದಲ್ಲಿ ಆ ಸಂಸ್ಕೃತಿಗೆ ವಿಶಿಷ್ಟ ಸ್ಥಾನವಿದೆ. 'ಜೋಳದ ಪಾಳಿ'ಯಲ್ಲಿ ಬಡತನದ ಬವಣೆಗೆ ಕಾರಣವನ್ನು ಸೂಚಿಸುವಲ್ಲಿ ಬಂಡಾಯದ ದನಿಯೂ ಇದೆ.

ಹಂತಿಯ ಹಾಡು ಸೂಸಿ, ಬೀಸುಗಾಳಿಗೆ ಸೋಸಿ
ಕಣ ಕಣದಲ್ಲಿ ರಾಶಿಯಾಗುತ್ತೇನೆ
ಅದೇ ಚಣವೆ ದನಕರುಗಳಿಗೆ ಹೊಟ್ಟು ಮೇವಿನ ಬಣಿವೆ
ಹಿಟ್ಟಾಗಿ, ಬಳೆಯ ತಾಳಕ್ಕೆ ಗುಟ್ಟಾಗಿ
ಬಡವರಂಗೈ ತುಂಬ ರೊಟ್ಟಿಯಾಗಿ,
ಖಾರ, ಉಳ್ಳಾಗಡ್ಡಿ, ಮೊಸರು, ಬದನೆಕಾಯಿ
ಪರಸ್ಪರ ಭೆಟ್ಟಿಯಾಗಿ,
ತುತ್ತು ತುತ್ತಿಗೆ ಶಿವ ಶಿವಾ ಎಂದು
ತುಂಬುತ್ತೇನೆ ಹಸಿದ ಹೊಟ್ಟೆ.

(ಜೋಳದ ಪಾಳಿ – ಜೀವಧ್ವನಿ)

'ಮನುವಿನ ಕೊನೆಯ ಗಳಿಗೆ' ಕವಿತೆಯಲ್ಲಿ ಕವಿ ಬದುಕಿನಲ್ಲಿರುವ ವಿಷಾದದ ಮಧ್ಯದಲ್ಲೂ ತಾಳುವ ಸಮಾಧಾನದ ನಿಲುವು ಅಚ್ಚರಿಯನ್ನುಂಟು ಮಾಡುತ್ತದೆ.

ನೆಲ–ಬಾನುಗಳನ್ನು ಸುತ್ತಿ ಬೀಸುವ
ಎಲ್ಲರ ಉಸಿರಾಗಿರುವ, ಇದ್ದೂ ಇಲ್ಲದ ಹಾಗಿರುವ
ಈ ಗಾಳಿಯಲ್ಲಿ
ಇಂಥ ಎಷ್ಟು ಜೀವಗಳ ಪರಿಮಳ ಬೆರೆತುಹೋಗಿದೆಯೋ–
ನೆಲದ ಮೇಲಿನ ಹೂವು, ಮುಗಿಲಲ್ಲಿಯ ಚಿಕ್ಕೆ
ಅವೇ ಬಾಯಿಬಿಟ್ಟು ಹೇಳಬೇಕು.

('ಮನು'ವಿನ ಕೊನೆಯ ಗಳಿಗೆ – ಜೀವಧ್ವನಿ)

ಕಣವಿ ಅವರು ಕನ್ನಡನಾಡು ಒಂದಾಗಬೇಕೆಂದು ಹಂಬಲಿಸಿ ಹಾಡಿದವರು. ಕರ್ನಾಟಕ ಏಕೀಕರಣವಾದ ನಂತರ ಕನ್ನಡಪ್ರಜ್ಞೆಯ ಕಳಕಳಿಯನ್ನು ಸದಾ ಪ್ರಕಟಿಸುತ್ತ ಬಂದವರು. ಕನ್ನಡದ ಜೀವ ಚೈತನ್ಯದಲ್ಲಿ ಶ್ರದ್ಧೆ ಹೊಂದಿದ ಕಣವಿಯವರು ಬರೆದ 'ಹೆಸರಾಯಿತು ಕರ್ನಾಟಕ' ಕವಿತೆ ಅಷ್ಟೇ ಪ್ರಸಿದ್ಧವಾದುದು.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ ;
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

ಹೊಸೆದ ಹಾಗೆ ಹುರಿಗೊಳ್ಳುವ
ಗುರಿ ತಾಗುವ ಕನ್ನಡ,

ಕುರಿತೋದದ ಪರಿಣತಮತಿ
ಅರಿತವರಿಗೆ ಹೊಂಗೊಡ.

(ಹೆಸರಾಯಿತು ಕರ್ನಾಟಕ – ಜೀವಧ್ವನಿ)

ಹೀಗೆ ಕಣವಿಯವರು ಕನ್ನಡತನದ ಜೀವಧ್ವನಿಯನ್ನು ಪ್ರಕಟಿಸುತ್ತ, ಕಾವ್ಯದ ಮೂಲಕ ಸಹೃದಯ ಸಂವಾದ ಮಾಡುವ ವಿಧಾನವು ಎದ್ದು ಕಾಣುತ್ತದೆ. ಸಾಮಾಜಿಕ ಬದುಕಿನ ಬಗೆಗೆ ಕವಿಗೆ ಕಾಳಜಿ ಇರುವದಾದರೂ ಅದು ಹೆಚ್ಚಾಗಿ ವೈಯಕ್ತಿಕ ವಿಕಾಸದ ನೆಲೆಯಲ್ಲೇ ಕವಿಯ ವಿಚಾರಧಾರೆ ಮುಂದುವರಿಯುವದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಕಣವಿಯವರ 'ಕಾರ್ತೀಕದ ಮೋಡ' (೧೯೮೬)ದಲ್ಲೂ ಕನ್ನಡ ಪ್ರಜ್ಞೆಯ ಕವಿಯ ವೀರಸಂಕಲ್ಪ ಪ್ರಕಟಗೊಂಡಿದೆ. ಗೋಕಾಕ ಚಳುವಳಿ ಕನ್ನಡ ನಾಡಿನಾದ್ಯಂತ ನಡೆಯುತ್ತಿದ್ದ ಸಂದರ್ಭದಲ್ಲಿ ಧಾರವಾಡದಲ್ಲಿ ಸತ್ಯಾಗ್ರಹ ನಡೆಸಿದ ಕಣವಿಯವರು ಕನ್ನಡಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಾಗಿದ್ದ ಅಂದಿನ ಜನಮನವನ್ನು 'ಸತ್ಯಾಗ್ರಹ' ಕವಿತೆಯಲ್ಲಿ ಪ್ರತಿಬಿಂಬಿಸಿದರು.

ಕನ್ನಡದ ಕನಸುಗಳ ಮೋಡಗಳು ಮೇಲೇರಿ
ಎಂಟು ದಿಕ್ಕಿಗು ಹಾಡು ಭೋರಿಡುತಿವೆ;
ಮುಂಗಾರು ಸಿಡಿಲಾಗಿ, ಮಿಂಚಾಗಿ ಹೊಳೆಯಾಗಿ
'ದುಂದುಭಿ'ಗೆ ವರ್ಷವೇ ಸುರಿಯಲಿಹುದು;
ಹೊಸ ಬದುಕಿನಧ್ಯಾಯ ತೆರೆಯಲಿಹುದು,
ತಾಯ್ನಾಡ ತಾಯ್ನುಡಿಯ ಕೊರಳ ಕೊಯ್ಯುವ ದುರುಳ
ದುಷ್ಟಕೂಟದ ಭ್ರಷ್ಟ ಭಂಡರೆದುರು
ಸತ್ಯಾಗ್ರಹ – ನಮ್ಮ ಸತ್ಯಾಗ್ರಹ
ಸತ್ಯಾಗ್ರಹ – ನಿತ್ಯ ಸತ್ಯಾಗ್ರಹ

(ಸತ್ಯಾಗ್ರಹ – ಕಾರ್ತೀಕದ ಮೋಡ)

ಕನ್ನಡ ನಾಡಿನ ಅನ್ನ, ನೀರು, ಗಾಳಿಯನ್ನುಂಡ ತಾಯ್ನುಡಿಗೆ ದ್ರೋಹ ಬಗೆಯುವ ಭ್ರಷ್ಟ ಜನರ ವಿರುದ್ಧ ಕವಿ ಸಮರ ಸಾರಿದ್ದಾರೆ. ಪರಿಪೂರ್ಣ ಚೆಲುವ ಕನ್ನಡನಾಡು ಆಗುವವರೆಗೆ ನಾವು ಉದಯವಾಗಲಿ ಎಂದೇ ಹಾಡೋಣ ಎಂದಿದ್ದಾರೆ.

ಕನ್ನಡಕ್ಕಾಗಿ ಬರಿಯ ಕೈ ಎತ್ತಿದರೆ ಸಾಕೆ ?
ತೆಗೆದುಕೊಡಬೇಕು ಚೆನ್ನಾಗಿ, ಬುದ್ಧಿ ಭೆಟ್ಟಿಯಾಗುವ ಹಾಗೆ
ದ್ರೋಹಿಗಳಿಗೆ, ಸದಾ ಸಂದೇಹಿಗಳಿಗೆ.
ಆ ಮೇಲೆ ಬರಲಿ ಘೋಷಣೆ : 'ಸಿರಿಗನ್ನಡಂ ಗೆಲ್ಗೆ ಬಾಳ್ಗೆ'
ತಾಯಿಗೆ ದೊರೆತ ಸ್ವಾತಂತ್ರ್ಯದೊಡನೆ
ಮಗುವಿಗೂ ಬೆಳೆಯಬೇಕೆಂಬ ಮನಸು
ಅವಳೆದೆಯ ಚಿನ್ನದ ಪದಕವಾಗಬೇಕೆಂಬ ಕನಸು

(ರಾಜ್ಯೋದಯದ ಬೆಳ್ಳಿ ಹಬ್ಬಕೆ – ಕಾರ್ತೀಕದ ಮೋಡ)

ಕಣವಿಯವರದು ಆರೋಗ್ಯಪೂರ್ಣ ಮನಸ್ಸಿನ ಕಾವ್ಯಾಭಿವ್ಯಕ್ತಿಯಾಗಿರುವದರಿಂದ ತೆರೆದ ಮನಸ್ಸಿನಿಂದ ಎಲ್ಲವನ್ನೂ ಸ್ವೀಕಾರ ಮಾಡಿ ತಮಗೆ ಬೇಕಾದ ಒಳ್ಳೆಯ ಅಂಶಗಳನ್ನು

ಗುರುತಿಸಿ, ಗೌರವಿಸುವ ವಿಶಿಷ್ಟ ಮನೋಧರ್ಮ ಕಂಡುಬರುತ್ತದೆ. ತಲೆಮಾರಿನ ಅಂತರವನ್ನು ಅವರು ಸ್ವೀಕರಿಸುವ ಬಗೆ ಇಲ್ಲಿದೆ :

ಈಗಿನ ಮಕ್ಕಳೇ ಹಾಗೆ–
(ಹೊಸಪೀಳಿಗೆ)
ಕರೆದೊಡನೆ ಅಡಬರಿಸಿ ಬರುವದಿಲ್ಲ,
ಬಂದರೂ ಹೆಗಲೇರಿ ಬಹಳ ಹೊತ್ತಿರುವದಿಲ್ಲ.
ಅವಸರದಲ್ಲಿ ಕೆಳಗಿಳಿದು, ಎದ್ದು ಬಿದ್ದು
ತಮ್ಮ ಕಾಲ ಮೇಲೆ ತಾವೇ ನಿಲ್ಲಬಯಸುತ್ತ
ಹೆಜ್ಜೆ ಹೆಜ್ಜೆಗೂ ಕುತೂಹಲ ಹುಟ್ಟಿಸುತ್ತವೆ
ಆತಂಕ ದಾಟುತ್ತ
ದೊಡ್ಡವರೆನಿಸಿಕೊಂಡ ನಮ್ಮನ್ನು ದಂಗುಬಡಿಸುತ್ತವೆ.

(ಇಂದಿನ ಮಕ್ಕಳು – ಕಾರ್ತೀಕದ ಮೋಡ)

ಹೊಸಪೀಳಿಗೆಯನ್ನು ಆದರ ಭಾವದಿಂದ ಕಾಣುವ ಮುಕ್ತಮನಸ್ಸು ಕಣವಿಯವರದು. ಬದುಕಿನ ಬದಲಾವಣೆಯ ಬಗೆಗೆ ಕವಿಯ ನೋವು, ನಿರಾಶೆಗಳಿಗಿಂತ ಸಹನೆ ಮತ್ತು ಗಾಢವಾದ ಜೀವನಪ್ರೀತಿ ಕಣವಿಯವರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ.

ಪ್ರತಿಭಟನೆಯ ಧ್ವನಿ ಕಣವಿಯವರ ಕಾವ್ಯದಲ್ಲಿ ಒಡೆದು ಕಾಣದಿದ್ದರೂ ವಾಸ್ತವವನ್ನು ಅರಿತು ನಡೆಯಲು ಅವರು ಸ್ಪಂದಿಸುವದನ್ನು ಕಾಣಬಹುದು : ಇದಕ್ಕೊಂದು ನಿದರ್ಶನ ಇಲ್ಲಿದೆ.

ಸಾವಿರದ ಸತ್ಯ ಸೌಂದರ್ಯದ ಮಹಾಮಸ್ತಕಕ್ಕೆ
ಸಾವಿರದೆಂಟು ಕಲಶಗಳ ತುಂಬಿ ತುಂಬಿ
ಹಾಲು ಸುರಿದಾಗ
ಒಂದು ಹನಿಯೂ ಚೆಲ್ಲದಂತೆ ಬಯಲ ಬೊಗಸೆಯಲಿ ಹಿಡಿದು
ದೂರದೂರದ ಕಪ್ಪು ಮಕ್ಕಳನೆಲ್ಲ ಕರೆದು
ಬೆಳ್ಳಗೆ ಕುಡಿಸಿದಂತೆ

(ಕನಸಿನ ಗೊಮ್ಮಟ – ಕಾರ್ತೀಕದ ಮೋಡ)

'ಜೀನಿಯಾ' (೧೯೮೯)ದಲ್ಲಿ ಕಣವಿಯವರ ಪರಿಸರ ಪ್ರಜ್ಞೆಯ ಜಾಗೃತಿಯ ಅಭಿವ್ಯಕ್ತಿಯಿದೆ. ಸುಂದರ ಪ್ರಕೃತಿಯ ವಿನಾಶವು ಮಾನವ ಕುಲ ತತ್ತರಿಸುವಂತೆ ಮಾಡುವದನ್ನು ಅವರು ಕಾವ್ಯಮುಖದಿಂದ ಪ್ರಕಟಪಡಿಸಿದ್ದಾರೆ :

ಕಾಯಲಾರದೆ ಮನುಷ್ಯ ಕೊಡಲಿಯೆತ್ತುತ್ತಾನೆ
ಮಾಯಲಾರದ ಗಾಯ ಭವಿಷ್ಯಕ್ಕೆ, ಭೂತಕ್ಕೆ ಬಲಿ ?
ಒಂದೊಂದು ಏಟಿಗೂ ಒಂದೆಡೆಗೆ ಭೂಕಂಪ
ಮತ್ತೊಂದೆಡೆಗೆ ಚಂಡಮಾರುತ, ನೂರು ಅಪಘಾತ.
ಕಡಿದ ಟೊಂಗೆಯ ಬದಿಗೆ ಚಿಗುರು ಪಿಳಿಪಿಳಿಕಣ್ಣು,
ಅನುಮಾನಿಸುವ ಮೊಗ್ಗೆ : ಈ ಮನುಷ್ಯನ ಬಗ್ಗೆ

ಎಲ್ಲೆಡೆಗೂ ಸಂಶಯವೆ. ಇದರ ತಣ್ಣೆಲಲ್ಲಿ ಕುಳಿತು
ನಲ್ಲೆಯ ಗಲ್ಲ ಮುಟ್ಟಿ, ಮಗುವ ಮುದ್ದಿಸಿದವನು
ಹೂಹಣ್ಣುಕಾಯಿಗಳ ಪಡೆದು ಗುಡಿಗೆ ಹೋದವನು
ಯಾರು ? ಹೌದು ಇವನೆ, ಈ ಮನುಷ್ಯನೆ.

(ಮನುಷ್ಯ–ಪ್ರಕೃತಿ – ಜೀನಿಯಾ)

ಕವಿ ಭವಿಷ್ಯದ ಚಿಂತಕನಾಗಿ, ಮಾನವ ಕಲ್ಯಾಣದ ಸದಾಶಯವನ್ನು ಬಯಸುತ್ತ ನಿಸರ್ಗದ ವಿನಾಶದ ವಿರುದ್ಧ ದನಿ ಎತ್ತುತ್ತಲಿರುವದು ಮಹತ್ವದ ಅಂಶವಾಗಿದೆ.

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ

(ಹೂವು ಹೊರಳುವವು – ಜೀನಿಯಾ)

ಎಂದು ನಮ್ಮ ಮನಸ್ಸನ್ನು ಹೊಸ ಸಂವೇದನೆಯತ್ತ ಕೊಂಡೊಯ್ಯುವ ಕವಿಯ ಕಾವ್ಯಪ್ರಜ್ಞೆ ಅಪರೂಪವಾದದ್ದು.

'ಶಿಶಿರದಲ್ಲಿ ಬಂದ ಸ್ನೇಹಿತ' (೧೯೯೪) ಕವಿಯ ಜೀವನೋಲ್ಲಾಸದ ಪ್ರತೀಕವಾಗಿದೆ. ಸ್ವಾನುಭೂತಿಯನ್ನು ಕಣವಿಯವರು ಮೊದಲಿನಿಂದಲೂ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸುತ್ತ ಬಂದಿದ್ದು ಅದು ಪ್ರಸ್ತುತ ಕವಿತಾಸಂಗ್ರಹದಲ್ಲೂ ಕಾಣುತ್ತದೆ. ಜೀವನದ ಶಿಶಿರದಲ್ಲೂ ಬದುಕಿನ ಇತಿಮಿತಿಯನರಿತ ಸಂತೃಪ್ತಿ, ನಿಶ್ಚಿತ ನಿಲುವು, ಚೆಲುವಿನಾವಿಷ್ಕಾರ ಸುಕುಮಾರಲೀಲೆ ಕಾಣುವ ಕವಿಯ ದೃಷ್ಟಿ ಇಲ್ಲಿದೆ :

ಬೆಳಗಿನ ವಿಹಾರದಲಿ ಮೈಕೊರೆವ ಚಳಿ, ಮೂಡಗಾಳಿಯ ಮೊರೆತ
ನಗುನಗುತ ಹಣ್ಣೆಲೆಗಳುದುರಿ ಚದುರುವಾಟ.
ಜೀವನ ಲಯದ ಸ್ವೀಕಾರದಲ್ಲಿದೆ ಸೊಗಸು :

(ಶಿಶಿರದಲ್ಲಿ ಬಂದ ಸ್ನೇಹಿತ – ಶಿಶಿರದಲ್ಲಿ ಬಂದ ಸ್ನೇಹಿತ)

ಜೀವನದ ಲಯದ ಸ್ವೀಕಾರದಲ್ಲೇ ಸೊಗಸನ್ನು ಕಾಣುವ ಕಣವಿ ದೃಷ್ಟಿ ಅವರ ವಿಶಾಲ ಮನಸ್ಸಿನ ಪ್ರತೀಕವೂ ಆಗಿದೆ. ಕಣವಿಯವರು ಯಾವಾಗಲೂ ಮಾನವೀಯ ಅಂತಃಕರಣಗಳನ್ನು ಧ್ವನಿಸುತ್ತ ಬಂದಿದ್ದಾರೆ. ಸಾಮಾಜಿಕ ಪ್ರಜ್ಞೆ, ಕಾಳಜಿಗಳು ಅವರ ಕಾವ್ಯದಲ್ಲಿ ನೆಲೆ ಪಡೆದುಕೊಂಡಿವೆ. ಪ್ರಕೃತಿಯ ವರ್ಣನೆ ಅನೇಕ ಸಂದರ್ಭಗಳಲ್ಲಿ ಬದುಕಿನ ವಿವಿಧ ಮಗ್ಗಲುಗಳನ್ನು ಚಿತ್ರಿಸುವದನ್ನು ಕಾಣಬಹುದು. ಮೈಕೊರೆವ ಚಳಿ, ಮೂಡಗಾಳಿಯ ಮೊರೆತ, ಹಣ್ಣೆಲೆಗಳುದುರಿ ಚದುರುವಾಟ –ಇವು ಜೀವನದ ಸ್ಥಿತ್ಯಂತರಗಳನ್ನೇ ಸೂಚಿಸುತ್ತಿದ್ದು, ಈ ಬಗೆಯ ಪ್ರತೀಕ ಮತ್ತು ಪ್ರತಿಮೆಗಳಿಗೆ ಹೆಚ್ಚಿನ ಅರ್ಥವಂತಿಕೆ ಮತ್ತು ಧ್ವನಿಶಕ್ತಿ ಇರುವುದನ್ನು ಗಮನಿಸಬೇಕಾಗುತ್ತದೆ.

ಈ ಗುಲ್‌ಮೊಹರ್ ಕಂಡ ಸಲಕೊಮ್ಮೆ ಎಲ್ಲೆಂದ–
ರಲ್ಲಿ ಚೆಲ್ಲಾಡಿರುವ ಮುಗ್ಧಜೀವಿಗಳ ನೆತ್ತರು
ಒಡಿದು ಕಣ್ಗೆ ಕತ್ತಲು. ದೇಶದುದ್ದಗಲಕ್ಕು

ಹರಿದು ತಿನ್ನುವ ಹದ್ದುಗಳ ಸದ್ದು ಮೇಲಿಂದ
ಕೆಳತನಕ. ಉಗಮದಲ್ಲಿಯೇ ನದಿಯು ಬತ್ತಿದರೆ
ಹರಿವ ಮಾತೆಲ್ಲಿ ? ಸಂಗಮಕಾವ ಪುರುಷಾರ್ಥ ?
ನಡುವೆ ತೋಡಿದಂತಃಕರಣದೊರತೆ ವ್ಯರ್ಥ–
ವಾಗದ ಹಾಗೆ ಮಾನವೀಯತೆಗಿಲ್ಲ ಮೇರೆ.
ಕೊರಡು ಕೊನರುವದು ಆಳದ ಬೇರಿನೊಲವಿಂದ.
ಮೋಡಗಳ ಮನಸು ಹೇಗೋ : ಓಡುವವು ಬೇಕು
ಬೇಡಗಳ ಗಮನಿಸದೆ ; ಮಿಂಚಿ ಬಂದರೆ ಸಾಕು
ಸಾಕೆನಿಸಿ ಕರುಣಾವೃಷ್ಟಿ : ಪ್ರಕೃತಿ ಸ್ವಚ್ಛಂದ.
ಲಯ ತಪ್ಪಿದರೆ ಹಿಂಸೆ, ಆಘಾತ. ಸಮತೋಲ–
ಕ್ಕೆ ಬೇಕು, ತಾಳ್ಮೆ ನಿಗ್ರಹ ಬದುಕಿನಾದ್ಯಂತ.

(ಗುಲ್‌ಮೊಹರ್– 'ಶಿಶಿರದಲ್ಲಿ ಬಂದ ಸ್ನೇಹಿತ')

ಹೀಗೆ ಕವಿ ಕಣವಿಯವರು ತಾಳ್ಮೆ, ನಿಗ್ರಹಕ್ಕೆ ಒತ್ತುಕೊಟ್ಟು ತಮ್ಮ ಕಾವ್ಯವನ್ನು ಮಾನವೀಯ ಪ್ರೀತಿ, ಅಂತಃಕರಣದ ಜೀವಲಹರಿಯಾಗಿಸುತ್ತ ನಡೆದದ್ದು ಮುಖ್ಯವಾದ ಅಂಶವಾಗಿದೆ. ಆದ್ದರಿಂದಲೇ ಅದು ಸಮಕಾಲೀನವೂ ಸಾರ್ವಕಾಲಿಕ ಚಿಂತನ ಮೌಲ್ಯಗಳ ಅಭಿವ್ಯಕ್ತಿಯೂ ಆಗಿ ಮಹತ್ವ ಪಡೆಯುತ್ತದೆ.

ಕಣವಿಯವರ ಕಾವ್ಯಾಸಕ್ತಿ ವಿಶಾಲವಾದದ್ದು. ಇಂಗ್ಲೀಷ್, ಬಂಗಾಲಿ, ಉರ್ದು, ಪಂಜಾಬಿ, ಆಫ್ರಿಕನ್, ಝೆಕ್, ಅರೇಬಿಕ್ ಹೀಗೆ ಜಗತ್ತಿನ ಬೇರೆ ಬೇರೆ ಭಾಷೆಯ ಕವಿಗಳ ಕವಿತೆಗಳನ್ನು ಅವರು ಕನ್ನಡಕ್ಕೆ ವಿಶೇಷ ಆಸಕ್ತಿಯಿಂದ ಅನುವಾದಿಸಿದ್ದಾರೆ. 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ'ದ ವರೆಗಿನ ಸಂಕಲನಗಳಲ್ಲಿಯ ಕಣವಿ ಕಾವ್ಯಾನುವಾದ ಸ್ವತಂತ್ರ ಕವಿತೆಯಂತೆ ಪ್ರಕಟವಾಗಿವೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದು ಅತ್ಯಂತ ಕಠಿಣವಾದ ಕಾರ್ಯ. ಕವಿತೆಯನ್ನು ಅನುವಾದಿಸುವಾಗ ಬೇರೆ ಭಾಷೆಯ ಸೂಕ್ಷ್ಮಗಳನ್ನು ಲಯದ ವೈಶಿಷ್ಟ್ಯವನ್ನು ಗಮನಿಸಿ ನಮ್ಮ ಭಾಷೆ ಮತ್ತು ಲಯಗಳಿಗೆ ಸಾಂಗತ್ಯಗೊಳಿಸಬೇಕಾಗುತ್ತದೆ. ಪರಕಾಯ ಪ್ರವೇಶ ಮಾಡುವ ಶಕ್ತಿ ಕವಿಗಿಲ್ಲದಿದ್ದರೆ ಅನುವಾದ ಶುಷ್ಕವಾಗುತ್ತದೆ. ಕಣವಿಯವರು ಕನ್ನಡದ ಸತ್ವಕ್ಕೆ ಬೇರೆ ಕವಿತೆಗಳನ್ನು ಬಗ್ಗಿಸುವ ರೀತಿ ಅಸಾಧಾರಣವಾದದ್ದು ಎನಿಸುತ್ತದೆ. ಕಣವಿಯವರು ಮೊದಲು ಅನುವಾದಿಸಿದ್ದು ಶೇಕ್ಸಪಿಯರ್, ರಾಬರ್ಟ ಬರ್ನ್ಸ ಹಾಗೂ ರವೀಂದ್ರನಾಥ ಟ್ಯಾಗೋರ ಅವರ ಕವಿತೆಗಳನ್ನು. ನವ್ಯಕಾವ್ಯದ ಸಂದರ್ಭದಲ್ಲಿ ಎಲಿಯಟ್, ಆಡೆನ್ ಮೊದಲಾದ ಪಾಶ್ಚಾತ್ಯ ಕವಿಗಳತ್ತ ನಮ್ಮ ನವ್ಯಕವಿಗಳು ಹೊರಳಿದಾಗ ಕಣವಿ ಅವರು ತಮಗೆ ಪ್ರಿಯವಾದ ಬೇರೆ ಕವಿಗಳ ಕಾವ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನ ಮಾಡಿದರು. ಇತಿಕಾ ಅಂತೂಲಿ, ಜೊಸೆಫ್ ಮಿಶಾಲಿ, ಡಾನ್ ಮಟೌರಾ ಮೊದಲಾದ ಆಫ್ರಿಕನ್ ಕವಿಗಳ ಕವಿತೆಗಳನ್ನು ಕನ್ನಡಕ್ಕೆ ತಂದರು. ಅರೇಬಿಕ್, ಕಾಶ್ಮೀರಿ, ತಮಿಳು, ಗುಜರಾತಿ, ಪಂಜಾಬಿ, ಬಂಗಾಲಿ ಹೀಗೆ ಭಾರತೀಯ ಭಾಷೆಯ ಕೆಲವು ಉತ್ಕೃಷ್ಟ ಕವಿಗಳ ಕವಿತೆಗಳೂ ಕಣವಿಯವರ ಮೂಲಕ ಕನ್ನಡ ನೆಲದಲ್ಲಿ ಅರಳುವಂತಾಯಿತು.

ಅನುವಾದದ ಸಹಜತೆಗೆ ಒಂದು ಉದಾಹರಣೆಯಾಗಿ ಆಫ್ರಿಕನ್ ಕವಿ ಇತಿಕಾ ಅಂತೂಲಿ ಕವಿತೆಯನ್ನು ನೋಡಬಹುದು.

ದುಃಖದಲ್ಲಿಯೂ ನಾವು ನಗುವುದೇಕೆ ?
ಎಂದು ಅವರು ಸದಾ ಕೇಳುತ್ತಾರೆ.
ಅವರ ಕಪಿಮುಷ್ಟಿಗಳಿಂದ ನಾವು
ಪಾರಾಗುತ್ತೇವೆಂಬ ತುಂಬು ನಂಬಿಕೆ
ನಮಗಿರುವಾಗ
ನಗದಿರುವುದು ಹೇಗೆ ?

(ಅವರು ಸದಾ ಕೇಳುತ್ತಾರೆ – 'ಶಿಶಿರದಲ್ಲಿ ಬಂದ ಸ್ನೇಹಿತ')

ದಕ್ಷಿಣ ಆಫ್ರಿಕಾದ ಕಪ್ಪು ಜನರ ನೋವು, ದುಃಖ, ದುಮ್ಮಾನಗಳನ್ನು, ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಹೋರಾಟವನ್ನು ಪ್ರತಿಮಿಸುವ ಈ ಕವಿತೆಗಳು ಕಣವಿಯವರ ಮೂಲಕ ಕನ್ನಡದ ನೆಲವನ್ನು ಸ್ಪರ್ಶಿಸಿವೆ. ನೆತ್ತರಗೆಂಪು ಬಣ್ಣದ ಕವಿತೆ ಬರೆಯಲು ಹೊರಟ ಜನರನ್ನು ಮುಟ್ಟಿ ಬಡಿದೆಬ್ಬಿಸಲು ನಿಂತ ಆಫ್ರಿಕಾದ ಕವಿಗಳ ಕವಿತೆಗಳ ರೀತಿ ಒಂದು ವಿಧವಾದರೆ ಜೆಕ್ ಕವಿತೆಗಳ ಸೊಗಸು ಇನ್ನೊಂದು ವಿಧವಾಗಿದೆ. ಹೀಗೆಯೇ ಕಣವಿಯವರು ಮಾಡಿದ ಭಾರತೀಯ ಭಾಷೆಗಳ ಕಾವ್ಯಾನುವಾದದಲ್ಲಿ ಸಾಮಾಜಿಕ ಸ್ಪಂದನಕ್ಕೆ ಹೆಚ್ಚು ಒತ್ತು ಇರುವುದನ್ನು ಕಾಣುತ್ತೇವೆ. ನಿಸರ್ಗದ ವಸ್ತುವೂ ಇದೆ. ಈ ಎಲ್ಲ ಕವಿಗಳ ದೇಶ, ಭಾಷೆ, ಸಂಸ್ಕೃತಿ ಬೇರೆ ಬೇರೆಯಾಗಿದ್ದರೂ ಅವರ ಭಾವ ಚಿಂತನೆಗಳು ಕನ್ನಡದ ನೆಲದಲ್ಲಿ ಮೂಡಿಬರುವಂತೆ ಮಾಡುವಲ್ಲಿ ಕಣವಿಯವರ ಕಾವ್ಯಾನುವಾದ ಯಶಸ್ವಿಯಾಗಿದೆ ಎನ್ನಬಹುದು.

ಕಣವಿಯವರು ಮಕ್ಕಳಿಗಾಗಿಯೂ ಕವಿತೆಗಳನ್ನು ಬರೆದಿದ್ದಾರೆ. ಅವರ **'ಹಕ್ಕಿಪುಚ್ಚ'** (೧೯೮೫) (**'ಚಿಣ್ಣರ ಲೋಕವ ತೆರೆಯೋಣ'** ಸಂಗ್ರಹ ಇದರ ವಿಸ್ತೃತ ರೂಪ.) ಕನ್ನಡದ ಮಕ್ಕಳ ಮನಸ್ಸನ್ನು ಸೂರೆಗೊಂಡಿದೆ. ನವೋದಯ ಹಾಗೂ ನವ್ಯ ಮಾರ್ಗದಲ್ಲಿ ಉತ್ಕೃಷ್ಟ ಕವಿತೆಗಳನ್ನು ರಚಿಸಿದ ಕಣವಿಯವರು ಮಕ್ಕಳ ಮನಸ್ಸಿನ ಹಂತಕ್ಕಿಳಿದು ಅವರಿಗೆ ಪ್ರಿಯವಾದ ಕವಿತೆ ರಚಿಸುವುದು ಗಮನಾರ್ಹ ಸಂಗತಿಯಾಗಿದೆ. ಮಕ್ಕಳಲ್ಲಿ ಬೆರಗನ್ನು ಮೂಡಿಸುವ 'ಮಿಂಚು ಹುಳು', 'ಬಿದಿಗೆಯ ಚಂದಿರ', 'ಮಿಯಾಂವ್ ಮಿಯಾಂವ್ ಬೆಕ್ಕಣ್ಣ', 'ಆಮೆ', 'ಕಪ್ಪೆ' ಮೊದಲಾದವುಗಳ ಆಕರ್ಷಣೆ ಅಪರೂಪವಾದದ್ದು. 'ದುಡಿಮೆ' ಕವಿತೆ ಮೊದಲು ಕೆಲವು ದೃಷ್ಟಾಂತಗಳನ್ನು ಮಕ್ಕಳ ಕಣ್ಣ ಮುಂದಿಡುವುದರಿಂದ ಕೊನೆಯ ಸಾಲುಗಳಲ್ಲಿಯ ನೀತಿ ಸಹಜವಾಗಿ ಒಡಮೂಡುತ್ತದೆ.

ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವದು;
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವದು.

(ದುಡಿಮೆ – ಹಕ್ಕೀಪುಚ್ಚ)

ಸ್ವಾವಲಂಬಿಗಳಾಗಬೇಕೆಂಬ ಸಂದೇಶವನ್ನು ಮಕ್ಕಳಲ್ಲಿ ಮೂಡಿಸುವ ಆಶಯ ಇಲ್ಲಿದೆ. ಮಕ್ಕಳಿಗೆ ರಚಿಸುವ ಕವಿತೆಗಳಲ್ಲಿ ಕಣವಿಯವರ ಭಾವ ಭಾಷೆಗಳೂ ರೋಚಕವಾಗಿವೆ. ಹಕ್ಕೀಪುಚ್ಚದಲ್ಲಿ ಬರುವ ಪ್ರಾಸ ವೈವಿಧ್ಯ ಕುತೂಹಲಕಾರಿ ಹಾಗೂ ಅಷ್ಟೇ ಮೋಹಕವಾದದ್ದು.

ಮಿರಿಮಿರಿ ಮಿಂಚುವ ಹಕ್ಕೀಪುಚ್ಚ
ಗಿರಿಗಿರಿ ತಿರುಗಿದೆ ನೋಡಣ್ಣ,
ಹಣ್ಣಿನ ತೋಟದ ಬೇಲಿಯ ಹೊರಗೆ
ಸಿಕ್ಕಿತು ನನಗೀ ಗರಿಯಣ್ಣ

(ಹಕ್ಕೀಪುಚ್ಚ – ಹಕ್ಕೀಪುಚ್ಚ)

ಹದಿನೈದನೆಯ ಕವಿತಾ ಸಂಕಲನ **'ಬರೆದು ತೀರದ ಬದುಕು'** (೨೦೦೦) ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆಯ ಚಿನ್ನದ ಹಬ್ಬದ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿದೆ. ಅರ್ಥಪೂರ್ಣ ಶೀರ್ಷಿಕೆಯ **'ಬರೆದು ತೀರದ ಬದುಕು'** ವಿಶಿಷ್ಟವಾದ ಸಂಕಲನವಾಗಿದೆ. ನವೋದಯ, ನವ್ಯ, ನವ್ಯೋತ್ತರ ಕಾವ್ಯಮಾರ್ಗದಲ್ಲಿ ಹರಿದು ಬಂದ ಕಣವಿ ಕಾವ್ಯದಲ್ಲಿ ಜೀವಂತ ಗತಿಯಿದೆ. ಬದುಕಿನ ಬಗೆಗೆ ಗಾಢವಾದ ಪ್ರೀತಿ ಅಂತಸ್ಥವಾಗಿದೆ. ಮಾನವ ಜೀವನ ಇಷ್ಟೊಂದು ಸದ್ದುಗದ್ದಲ, ಯಾತನೆಯಲ್ಲಿ ಒದ್ದಾಡುತ್ತಿರುವಾಗ ಕವಿಯ ಭಾವಕೋಶದಿಂದ ನೋವು ನಲಿವಿನ ಗಾಳಿ ಬೀಸಿ ಪರಿಶುದ್ಧಗೊಳಿಸಿ ಪರಿಮಳ ನೀಡುವ ಕಾವ್ಯ ಮಾರ್ಗ ನಮ್ಮನ್ನು ಹೃದಯ ಸಂವಾದಕ್ಕೆ ತೆರೆದುಕೊಳ್ಳುತ್ತದೆ. ಸ್ನೇಹ, ಪ್ರೀತಿ, ಸಜ್ಜನಿಕೆಗೆ ಇನ್ನೊಂದು ಹೆಸರಾಗಿರುವ ಚೆನ್ನವೀರ ಕಣವಿ ಸುನೀತಗಳ ಕವಿಯಾಗಿದ್ದಾರೆ. 'ಬರೆದು ತೀರದ ಬದುಕು' ಸಂಕಲನದಲ್ಲೂ ಸುನೀತಗಳ ಶಿಲ್ಪ ಸೌಂದರ್ಯ ಎದ್ದು ಕಾಣುತ್ತದೆ. ಎನ್ಕೆಯವರನ್ನು ಕುರಿತ 'ಬೆಳಗಿನ ಭೆಟ್ಟಿ', ಸಾಲುಮರದ 'ನಮ್ಮ ತಿಮ್ಮಕ್ಕನಿಗೆ', ಎಚ್.ಟಿ. ಸಾಸನೂರ ಅವರನ್ನು ನೆನೆದು, ಶಂಕರ ಮೊಕಾಶಿ ಪುಣೇಕರ ಅವರನ್ನು ಕುರಿತ 'ಅಚ್ಚ ಪ್ರತಿಭೆಯ ಹುಚ್ಚು', 'ಅಂಬೇಡ್ಕರ ಕುರಿತು', ಕಲಬುರ್ಗಿ ಅವರ ಬಗ್ಗೆ 'ಮಹಾಮಾರ್ಗದ ಪಥಿಕ', ತೋಂಟದ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ 'ಶ್ರೀಸಾಮಾನ್ಯರ ಸಿದ್ಧಲಿಂಗ', 'ಶ್ರೀಗುರು ತೋಂಟದಾರ್ಯ', 'ಸಿದ್ಧರಾಂ ಜಂಬಲದಿನ್ನಿ', 'ಲಂಕೇಶ', 'ಶಂಗು ಬಿರಾದಾರ' ಬಗೆಗೆ ಬರೆದ ಕಣವಿ ಸುನೀತಗಳು ಅನನ್ಯವಾಗಿವೆ. ಕಣವಿ ಅವರ ಸುನೀತಗಳಲ್ಲಿ ಕನ್ನಡ ಪ್ರಪಂಚದ ಮಹನೀಯರ, ಸಾಹಿತಿಗಳ ವ್ಯಕ್ತಿತ್ವ ಅರಳಿ ನಿಂತಿದೆ. ಶಾಂತಿನಾಥ ದೇಸಾಯಿಯವರು ಕಣವಿಯವರನ್ನು 'ಕನ್ನಡ ನಾಡಿನ ರಾಜಕವಿ' ಎಂದು ಕರೆದಿದ್ದರು. ಕನ್ನಡನಾಡಿನ ಸಾಂಸ್ಕೃತಿಕ ಜೀವನದ ವಿಶಿಷ್ಟ ಸಂದರ್ಭಗಳಲ್ಲಿ ವ್ಯಕ್ತಿ ಚೇತನಗಳ ಮಹತ್ವದ ಜೀವನ ಸನ್ನಿವೇಶದಲ್ಲಿ ಕಣವಿಯವರು ತೋರುವ ಸೃಜನಶೀಲ ಪ್ರತಿಕ್ರಿಯೆ ಅವರ ಕವಿತೆಗಳಲ್ಲಿ ಆಕೃತಿ ಪಡೆಯುವುದನ್ನು ನಾವು ಕಾಣುತ್ತೇವೆ. ಇಂಥ ಸಂದರ್ಭದಲ್ಲಿ ಕಣವಿಯವರ ಮಾನವೀಯ ಅಂತಃಕರಣ, ಪ್ರೀತಿ ಸಂಬಂಧಗಳು ಮುಖ್ಯವಾಗುತ್ತವೆ. ದ್ವೇಷ, ಅಸೂಯೆಯಿಂದ ದೂರವಿದ್ದು ಎಲ್ಲ ಮನೋಧರ್ಮ ವಸ್ತು, ವ್ಯಕ್ತಿಗಳ ಅಂತರಂಗ ಪ್ರವೇಶಿಸುವ ಕಣವಿ ಮಾನವಾನುಭವದ ಕವಿಯಾಗಿದ್ದಾರೆ. 'ಬದುಕು ಕೊಡುವದಕ್ಕೆ ಕೊನೆಯಿಲ್ಲ. ಕೊಟ್ಟಷ್ಟು ಪಡೆದು ಅಟ್ಟುಣ್ಣುವ

ಬಗೆ ಬೇರೆ' ಎಂದು ಹೇಳಿದ ಕಣವಿ ಅವರು ಜೀವನದ ಅನುಭವ ಸಮೃದ್ಧಿಗೆ ತಮ್ಮನ್ನು ತೆರೆದುಕೊಂಡವರು. ನಿಸರ್ಗದ ಬಗೆಗೆ ಅದಮ್ಯ ಪ್ರೀತಿ, ಬಾಳಿನ ನಿರಂತರತೆಯ ಬಗೆಗೆ ತೀವ್ರವಾದ ಕುತೂಹಲ, ಜೀವಪ್ರಪಂಚದ ಬೆರಗು ಕಣವಿಯವರ ಈ ದೃಷ್ಟಿಕೋನ ಈ ಸಂಕಲನದಲ್ಲೂ ಮುಂದುವರಿದಿದೆ.

'ಮೋಡ ಮಳೆಗರೆಯಲಿ, ಆಮೇಲೆ ಬರಲಿ ಸೂರ್ಯ, ಈಗ ಪದ ಪಂಕ್ತಿಯಲಿ ಬೀಜ ಬಿತ್ತುವ ಕಾರ್ಯ', ಎಂದು ಮತ್ತೆ ಕಾವ್ಯದ ತೀವ್ರವಾದ ಸಂವೇದನೆಯನ್ನು ವ್ಯಕ್ತಪಡಿಸಿದ್ದಾರೆ. 'ಬರೆದು ತೀರದ ಬದುಕು' ಸಂಕಲನದ ಸುನೀತಗಳು, ಹನಿಗವನಗಳು, ರವೀಂದ್ರರ ಹಾಗೂ ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ ಕವಿತೆಗಳು ಅವರ ಪ್ರತಿಭಾವಿಲಾಸದ ಪ್ರತೀಕವಾಗಿವೆ.

ಕಣವಿ ಅವರ ಹದಿನಾರನೆಯ ಕವಿತಾಸಂಕಲನ **'ನೀವೇ ಪ್ರಮಾಣು'** (೨೦೦೭) ಬೆಂಗಳೂರಿನ ನಾರಾಯಣ ಮೊಳ್ಳೋಡ ಸುಮುಖ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ. ಚೆನ್ನವೀರ ಕಣವಿ ಅವರು ಬತ್ತಲಾರದ ಗಂಗೆಯಂತೆ ನಿರಂತರವಾಗಿ ಕಾವ್ಯದ ಹೂಮಳೆಯನ್ನು ಕನ್ನಡಿಗರಿಗೆ ನೀಡುತ್ತಿದ್ದಾರೆ. ಇಪ್ಪತ್ತನೆಯ ಶತಮಾನದ ಎಲ್ಲ ಚಳುವಳಿಗಳಲ್ಲಿ ಸ್ಪಂದಿಸುತ್ತ ಯಾವುದೇ ಪಂಥಕ್ಕೆ ತಮ್ಮನ್ನು ಅರ್ಪಿಸಿಕೊಳ್ಳದೆ ತಮ್ಮ ಸಮಕಾಲೀನ ಕವಿತೆಗಳ ಮೂಲಕ ಓದುಗರನ್ನು ಹರ್ಷ ಪಡಿಸುತ್ತ ಬಂದ ಕಣವಿ ಅವರು ಪರಂಪರೆ ಮತ್ತು ಪ್ರಗತಿಯಲ್ಲಿ ಆಸ್ಥೆ ಹೊಂದಿದವರಾಗಿದ್ದಾರೆ. ಕಣವಿಯವರ ಒಂಬತ್ತು ಗೇಯ ಕವನಗಳು, ಇಪ್ಪತ್ನಾಲ್ಕು ಬಿಡಿಗವನಗಳು, ಹದಿನೈದು ಅನುವಾದಿತ ಕವನಗಳು ಇನ್ನಷ್ಟು ಹೊಸ ಕವಿತೆಗಳನ್ನು ಅನುವಾದಗಳನ್ನು ಈ ಸಂಕಲನ ಒಳಗೊಂಡಿದೆ. ಎಂಬತ್ತು ಕವಿತೆಗಳ **'ನೀವೇ ಪ್ರಮಾಣು'** ಸಂಕಲನದಲ್ಲಿ ಅರ್ಧದಷ್ಟು ಸುನೀತಗಳಿವೆ. 'ಅಂತರಂಗದ ರತ್ನ' ಗುರುಲಿಂಗ ಕಾಪಸೆ, ದೇಜಗೌ, 'ಸ್ವಯಂಪ್ರಭೆ, ಶಿಂತ್ರಿ, ಕನಕದಾಸರಿಗೆ, ಸಹಕಾರಿ ಧುರೀಣ ಅಪ್ಪಣ್ಣಗೌಡ, ನಿಟ್ಟೂರ ನಮನ, ಹೊಸಮನಿ ಸಂಗಮೇಶರ 'ಶಿವನ ಸೊಮ್ಮು', ಕವಿಮಿತ್ರ ನಿಸಾರ್ ಅಹಮದ್, ಸುಮತೀಂದ್ರ ನಾಡಿಗರ 'ದಾಂಪತ್ಯಗೀತ', ನಮ್ಮ ಇಬ್ರಾಹಿಂ ಸಾಹೇಬರು', ಡಾ. ನಾ. ಮೊಗಸಾಲೆ, ಸುಬ್ರಾಯ ಚೊಕ್ಕಾಡಿಯ 'ಹಕ್ಕಿಗಳು' ಪಾಪು ಪ್ರಸ್ಥಾನ, ಚಂಪಾ ದೂರವಾಣಿ, ಜೀವನ ಕಲಾದರ್ಶಿ, ಉಸ್ತಾದ್ ಬಾಲೇಖಾನ್, ಕೆ.ಎಸ್.ಎನ್. 'ಕಣ್ಮುಚ್ಚಿ ಕಂಡ ಕವಿತೆ', ಸಿರಿಗೆರೆಯ ಹಿರಿಯ ಗುರು, ಹಳ್ಳಿಕೇರಿ ಗುದ್ಲೆಪ್ಪ ಮೊದಲಾದ ಸುನೀತಗಳಲ್ಲಿ ಸಾಹಿತಿ, ಸಂಗೀತ, ಕಾವ್ಯ, ಕಲಾವಿದರನ್ನು ಮೆಚ್ಚಿ ಬರೆದ ವ್ಯಕ್ತಿಗೀತಗಳು ತೀವ್ರವಾಗಿ ಮನಸೆಳೆಯುತ್ತವೆ.

ಅನುಭಾವದ ನೆಲೆಗಳು :

ಚೆನ್ನವೀರ ಕಣವಿ ಅವರ 'ಮಾನಸಪೂಜೆ' (೨೦೦೬) ಅವರ ಅನುಭಾವಿಕ ಆಯ್ದ ಕವಿತೆಗಳ ಸಂಗ್ರಹವಾಗಿದ್ದು ಇದನ್ನು ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠವು ತನ್ನ 'ಸಾಹಿತ್ಯಸಿರಿ' ಪ್ರಕಾಶನ ಮಾಲೆಯಲ್ಲಿ ಪ್ರಕಟಿಸಿದೆ. ಆಧುನಿಕ ಕನ್ನಡ ಕಾವ್ಯದ ಮುಖ್ಯ ವಸ್ತುಗಳಲ್ಲಿ ಅನುಭಾವಿಕ ನೆಲೆಯೂ ಒಂದಾಗಿದೆ. ಕುವೆಂಪು, ರಾಮಕೃಷ್ಣ ಪರಮಹಂಸರ ಭಕ್ತರಾಗಿದ್ದರು. ಬೇಂದ್ರೆ ಮತ್ತು ಗೆಳೆಯರ ಗುಂಪಿನ ಕವಿಗಳು ಅರವಿಂದರ ಭಕ್ತಿಪರಂಪರೆಯನ್ನು ತಮ್ಮದಾಗಿಸಿಕೊಂಡವರು. ಡಿ.ವಿ.ಜಿ.

ಭಗವದ್ಗೀತೆಯಲ್ಲಿ ಜೀವನ ಧರ್ಮಯೋಗ ಕಂಡವರು. ಪುತಿನ ಶ್ರೀಹರಿ ಚರಿತೆಯ ಭಕ್ತ ಕವಿಗಳೇ ಆಗಿದ್ದವರು. ಅವರ ನಂತರದ ತಲೆಮಾರಿನ ಜಿ.ಎಸ್. ಶಿವರುದ್ರಪ್ಪನವರ 'ತೀರ್ಥವಾಣಿ' ಕವಿತಾ ಸಂಗ್ರಹವು ರಾಮಕೃಷ್ಣ ಪರಮಹಂಸರ ವಾಣಿಯನ್ನು ಅನುರಣಿಸಿದೆ. ಚೆನ್ನವೀರ ಕಣವಿ ಅವರ ಸಮಗ್ರ ಕಾವ್ಯದಲ್ಲಿ ಅವರ ಅನುಭಾವಿಕ ದೃಷ್ಟಿಯ ಅನೇಕ ಕವಿತೆಗಳಿವೆ. ಇವುಗಳ ವಿಶಿಷ್ಟ ಸಂಕಲನವೆ 'ಮಾನಸಪೂಜೆ'. ಇದರಲ್ಲಿ ಕವಿ ಕಣವಿಯವರ ಅಂತರಂಗದಲ್ಲಿ ಗುಪ್ತಗಾಮಿಯಾಗಿ ಹರಿಯುವ ಶಿವಶರಣ ಪರಂಪರೆಯ ಅನುಭಾವಿಕ ನೆಲೆ ಗೋಚರಿಸುತ್ತದೆ. ಕಣವಿಯವರ ಶ್ರದ್ಧೆಯ ವಿವಿಧ ಮುಖಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಅವರು 'ಮಾನಸಪೂಜೆ'ಯ ವೈಚಾರಿಕತೆಯನ್ನು ಆರಂಭದ ಕವಿತೆಯಲ್ಲಿಯೇ ವ್ಯಕ್ತಪಡಿಸಿದ್ದಾರೆ. ಬುದ್ಧ, ಬಸವ, ಏಸು, ಜಿನ, ದಾಸ, ಅರವಿಂದರಲ್ಲಿ. ವೀರಶೈವ ಅನುಭಾವ ಪರಂಪರೆಯ ಸಜ್ಜಲಗುಡ್ಡದ ಶರಣಮ್ಮ, ಸಿದ್ಧಾರೂಢರು, ತೋಂಟದಾರ್ಯರು, ಜಚನಿ, ಸಿದ್ಧಗಂಗಾಶ್ರೀಗಳು, ಮುರಗೋಡದ ಮಹಾಂತರು, ಸಿರಿಗೆರೆಯ ಹಿರಿಯ ಶ್ರೀಗಳು, ಶ್ರೀಸಾಮಾನ್ಯರ ಸಿದ್ಧಲಿಂಗರು, ಅನುಭಾವಿಗಳಾದ ಮಧುರಚೆನ್ನರು ಹೀಗೆ ಹಲವು ಚೇತನಗಳ ಮೂಲಕ ಕಣವಿ ಕಟ್ಟಿಕೊಡುವ ಕಾವ್ಯ ಕುಸುಮಾಂಜಲಿ ಅತ್ಯಂತ ಮನೋಜ್ಞವಾದುದು. ಕಣವಿಯವರು ನೀಲಾಂಬಿಕೆ, ಅಕ್ಕಮಹಾದೇವಿಯ ಬಗ್ಗೆ ಬರೆದ ಕವಿತೆಗಳಂತೂ ಕನ್ನಡದಲ್ಲಿ ಜನಪ್ರಿಯವಾಗಿವೆ. ಕಣವಿಯವರ ಅನುಭಾವಿಕ ನೆಲೆ ಅತ್ಯಂತ ವ್ಯಾಪಕವಾಗಿ ಅವರ ಕವಿತೆಗಳಲ್ಲಿ ಪ್ರಕಟವಾಗಿರುವದು 'ಮಾನಸಪೂಜೆ' ಸಂಕಲನದಲ್ಲಿ ಗೋಚರಿಸುತ್ತದೆ. ವಿಶ್ವಾತ್ಮನಲ್ಲಿ ತನ್ನ ಅನುಭಾವಿಕ ಚಿಂತನ, ತತ್ವವಿಚಾರಗಳನ್ನು ಪ್ರಕಟಿಸುವ ಕಣವಿಯವರ ಮನಸ್ಸಿನ ಪರಿಪಾಕವನ್ನು ನಾವು ಸ್ಪರ್ಶಿಸುತ್ತೇವೆ. 'ಬಿನ್ನಹ', 'ಪ್ರಾರ್ಥನೆ', 'ಶರಣಭಾವಕ್ಕೆ ಹೊಸ ರೆಕ್ಕೆ', 'ನಂಬಿಕೆ' ಮೊದಲಾದವುಗಳಲ್ಲಿ ಕಣವಿಯವರ ತೀವ್ರವಾದ ಅನುಭಾವಿಕ ನೆಲೆಯನ್ನು ನಾವು ಕಾಣುತ್ತೇವೆ. ಜಗತ್ತಿನ ತತ್ವವೇತ್ತರಂತೆ ವೀರಶೈವ ಅನುಭಾವಿಗಳಂತೆ ಕವಿ ಕಣವಿಯವರ ಅನುಭಾವಿಕ ನೆಲೆ ಆಧುನಿಕ ಕನ್ನಡ ಕವಿಗಳಲ್ಲೇ ವಿಶಿಷ್ಟವಾದುದು. ದೇಶ, ಕಾಲಗಳಾಚೆ ವಿಶ್ವದ ಸರ್ವಧರ್ಮಗಳ ಬಗೆಗೆ ಕಣವಿ ಆದರಾಭಿಮಾನವನ್ನು ಪ್ರಕಟಿಸಿದ್ದಾರೆ. ಕಣವಿಯವರ ವೈಚಾರಿಕ ನಿಲುವು ಹೊಸ ಕಾಲಕ್ಕೆ ಬೇಕಾದ ನೂತನ ಚಿಂತನಭೂಮಿಕೆಯಾಗಿದ್ದು 'ಮಾನಸಪೂಜೆ'ಯ ಕವಿತೆಗಳು ಅದಕ್ಕೆ ಸಾಕ್ಷಿಯಾಗುತ್ತವೆ.

ಬೆಳಕಿನ ಪ್ರತಿಮೆ :

ಚೆನ್ನವೀರ ಕಣವಿಯವರಿಗೆ ಬೆಳಕಿನ ಪ್ರತಿಮೆ ಅತ್ಯಂತ ಪ್ರಿಯವಾದದ್ದು. ಅವರ ಮೊದಲ ಕವಿತಾ ಸಂಕಲನದಲ್ಲೇ ಬರುವ 'ಚೆನ್‌ಬೆಳಕು' ಕವಿತೆ ಅವರ ಕವಿ ವ್ಯಕ್ತಿತ್ವದ ಆದರ್ಶವನ್ನು ಪ್ರತಿಮಿಸುತ್ತದೆ. ಕಣವಿ ಅವರ ಮನೆಯ ಹೆಸರು 'ಚೆಂಬೆಳಕು'. ಅವರಿಗೆ ಐವತ್ತು ತುಂಬಿದಾಗ ಅರ್ಪಿಸಿದ ಅಭಿನಂದನ ಗ್ರಂಥ 'ಚೆಂಬೆಳಕು'. ಅವರ ಸಮಗ್ರಕಾವ್ಯ 'ಹೊಂಬೆಳಕು'. ಕವಿ ಕಣವಿ ಅವರು ಒಂದೆಡೆ ಹೀಗೆ ಹೇಳಿದ್ದಾರೆ– 'ಬೆಳಕಿನ ಪ್ರತಿಮೆ ವಿವಿಧ ರೀತಿಯಲ್ಲಿ ನನ್ನ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ವಿದ್ಯುದ್ದೀಪಕ್ಕಿಂತ ಹಣತೆಯ ಬೆಳಕು ನನ್ನ ಅಂತರಂಗದ ಅನುಭವಕ್ಕೆ ಹೆಚ್ಚು ಸಮೀಪವೆನಿಸುತ್ತದೆ. 'ಚೆಂಬೆಳಕು', 'ಹೊಂಬೆಳಕು' ಎಂಬ ಪದಗಳ ಬಳಕೆಯಲ್ಲೂ ಅನುಭಾವವನ್ನು ಪ್ರತೀಕಗೊಳಿಸುವ ಪ್ರಯತ್ನವಿದೆ. ನೆಲ–ಮುಗಿಲುಗಳ ಸಂಬಂಧವನ್ನು ಶೋಧಿಸುವ ಅಭಿವ್ಯಕ್ತಿಸುವ ನನ್ನ ಹಲವಾರು ಕವಿತೆಗಳಲ್ಲಿ ಅನುಭಾವದ ಎಳೆಗಳು ಚಿಂತನಶೀಲತೆಯ ರೂಪಕವಾಗಿ

ಬಂದಿವೆ.‌ 'ಯುಗಯುಗಾಂತ್ಯದ ವರೆಗೆ ಜಗವ ಬೆಳಗಿಸಬಲ್ಲ ಎಲೆ ಚಿರಂತನ ಬೆಳಕೆ ನೀನೆ ಬೇಕು' ಎಂಬುದು ಕವಿಯ ಸದಾಶಯವಾಗಿದೆ.

ಕಣವಿಯವರಿಗೆ ಇಹದ ಬದುಕಿನಲ್ಲಿ ಅಪಾರವಾದ ಆಸ್ಥೆ. ಆದ್ದರಿಂದಲೇ ಅವರಿಗೆ ಮರ್ತ್ಯದಲ್ಲಿ ಮಹಾಮನೆ ಕಟ್ಟಿದ ಬಸವಣ್ಣನವರು ಪ್ರಿಯರಾಗಿದ್ದಾರೆ. ಮಾನವ ಜೀವನದ ಉತ್ಕರ್ಷದಲ್ಲಿ ಆಸ್ಥೆ ಹೊಂದಿದ ಕಣವಿಯವರು ಇಹನಿಷ್ಠ ಬದುಕಿನ ಬಗ್ಗೆ ನಿರಂತರವಾಗಿ ಕವಿತೆ ರಚಿಸುತ್ತ ಬಂದಿದ್ದಾರೆ. ಕಾವ್ಯೋದ್ಯೋಗದಲ್ಲಿ ತೊಡಗಿದ ನನ್ನಂಥವನು ಈ ಕಾವ್ಯದ ಎಲ್ಲ ಆಗು-ಹೋಗುಗಳಿಗೆ 'ನೀವೇ ಪ್ರಮಾಣು' ಎಂದು ಸಹೃದಯವಾಚಕರಿಗೆ ಅರಿಕೆ ಮಾಡಿದ ಕಣವಿಯವರು ಸಹೃದಯಸ್ಪಂದಿ ಕವಿತೆಗಳನ್ನು ನೀಡಿದ್ದಾರೆ. ಕಣವಿಯವರ ಕವಿತೆಗಳಲ್ಲಿ ಅಪೂರ್ವವಾದ ನಾದಲಯಗಳಿವೆ. ಈ ಸಂಕಲನದ ಗೇಯ ಕವಿತೆಗಳೂ ಅತ್ಯಂತ ಭಾವಪೂರ್ಣವಾಗಿವೆ. ಕಣವಿ ಅವರು ವಿಶ್ವಪ್ರಜ್ಞೆಯ ಕವಿ. ಅವರು ಪ್ರಪಂಚದ ಕವಿಗಳ ಕಾವ್ಯವನ್ನು ಪ್ರೀತಿಸಿದವರು. ಕಝುಕ್ ಕವಿತೆ, ಮಲೆಯಾಳ, ಮೈಥಿಲಿ, ಮರಾಠಿ, ತೆಲುಗು ಹೀಗೆ ದೇಶ, ಕಾಲ, ಸೀಮೆಯನ್ನು ದಾಟಿ ಕನ್ನಡ ಕವಿ ತನ್ನ ಭಾವಸಂವೇದನೆಯನ್ನು ವ್ಯಕ್ತಪಡಿಸುವದು ಸಮಕಾಲೀನ ಅಗತ್ಯವಾಗಿದ್ದು ಕಣವಿ ಅವರು ತಮ್ಮ ಅನುವಾದಿತ ಕವಿತೆಗಳ ಮೂಲಕ ಅದನ್ನು ತೋರಿಸಿಕೊಟ್ಟಿದ್ದಾರೆ.

ಕಣವಿಯವರದು ಅಪೂರ್ವವಾದ ಕಾವ್ಯದೃಷ್ಟಿ. ಅವರ 'ಕವಿತೆಗೆ'ದಲ್ಲಿ ಅದು ಹೀಗೆ ವ್ಯಕ್ತವಾಗಿದೆ.

ಕವಿತೆಗೆ

ಹೋಗಬೇಡ ಕವಿತೆ ನೀನು, ಬಾಗಬೇಡ ಯಾರಿಗೂ
ತೂಗಿ ನೋಡಿ ಬೆಲೆಯ ಕಟ್ಟು ಹೂವಿನಂತೆ ನಾರಿಗೂ.

ನಿನ್ನ ರೂಪ ಲಾವಣ್ಯಕೆ ಬೀಗಬೇಡ ಎಂದಿಗೂ
ಬತ್ತದಿಹುದು ಚೆಲುವಿನೂಟೆ ನೆಲದ ಒಡಲೊಳಿಂದಿಗೂ.

ಒಡೆದುಹೋದ ಮನಸುಗಳಲಿ ಹಗೆಯ ಕಿಡಿಯ ನಂದಿಸು
ಸಿಡಿದು ನಿಂತ ಹೃದಯಗಳನು ಪ್ರೀತಿಯಲ್ಲಿ ಬಂಧಿಸು.

ದುಡಿವ ಕೈಗೆ ಶಕ್ತಿ ಬರಲಿ; ಮಳೆಯ ಸುರಿಸು ಧರಣಿಗೆ
ಹಳೆಯ ಕೊಳೆಯ ಕೊಚ್ಚಿ ತೊಳೆಯೆ ಹಚ್ಚಹಸಿರು ಹಾಡಿಗೆ.

ಹಾಡಿಗೆದೆಯು ಮಿಡಿಯುವಾಗ ಬೇಡ ವಾದ್ಯದಬ್ಬರ
ಗಾಢ ಮೌನದಲ್ಲಿ ತಾನೆ ಮೂಡಿ ಬಹನು ಚಂದಿರ.

ಎಂದಾದರು ಕಂಡಿದ್ದೆವೆ ಇಂಥ ಹನಿಯ ತಂಪನು ?
ನೇಗಿಲ ಗೆರೆ ಹೊಮ್ಮಿಸಿಹುದು ಕಸ್ತೂರಿಯ ಕಂಪನು.

ಇಡಿಯ ಬದುಕ ಹಿಡಿಯಲೆಂದು ತಡವರಿಸುವ ಪ್ರೀತಿಯೆ
ಹೊಡೆ ಹಾಯಲಿ ಹೊಲವು, ತೆನೆಯ ಕಾಳೆಲ್ಲವು ಕವಿತೆಯೆ.

ಕಣವಿ ಅವರ ಸುನೀತಗಳು

ಚೆನ್ನವೀರ ಕಣವಿಯವರಿಗೆ ಅತ್ಯಂತ ಪ್ರಿಯವಾದ ಕಾವ್ಯ ಪ್ರಕಾರ ಸುನೀತಗಳನ್ನು ಅವರು ತಮ್ಮ ಕಾವ್ಯಜೀವನದ ಆರಂಭದಿಂದ ಇಂದಿನವರೆಗೆ ನಿರಂತರವಾಗಿ ರಚಿಸುತ್ತ ಬಂದಿದ್ದಾರೆ. ಕಣವಿಯವರ ಮೊದಲ ಕವಿತಾಸಂಗ್ರಹ **'ಕಾವ್ಯಾಕ್ಷಿ'**ಯಿಂದ ಇತ್ತೀಚಿನ **'ಭೂಮಿ ಬದುಕು'** ವರೆಗೆ (**ಭಾವಜೀವಿ** ಮತ್ತು **ಮಣ್ಣಿನ ಮೆರವಣಿಗೆ** ಹೊರತು ಪಡಿಸಿ) ಎಲ್ಲ ಕವಿತಾಸಂಗ್ರಹಗಳಲ್ಲೂ ಸುನೀತಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಸುನೀತಗಳ ಕೆತ್ತನೆಯ ಕೆಲಸದಲ್ಲಿ ಸಂತೋಷಪಟ್ಟಿರುವದಾಗಿ **'ಎರಡು ದಡ'**ದ ಮುನ್ನುಡಿಯಲ್ಲಿ ಕಣವಿಯವರೇ ಹೇಳಿದ್ದಾರೆ. ಮಿತವಾದ ಚೌಕಟ್ಟಿನಲ್ಲಿ ಹಿತವಾದ ಚಿತ್ರಕ ಶಕ್ತಿಯಿಂದ ಭಾವ–ವಿಚಾರಗಳು ಸಮ್ಮಿಲನಗೊಂಡು ತನ್ನ ಕಲೆಗಾರಿಕೆಯನ್ನು ಮೆರೆಯುವ ಸುನೀತಗಳು ಕಣವಿಯವರ ಮನಸ್ಸನ್ನು ಬಹುವಾಗಿ ಆಕರ್ಷಿಸಿವೆ.

ಕನ್ನಡ ನವೋದಯ ಕಾವ್ಯದ ಪ್ರಮುಖ ಪ್ರಕಾರವಾದ ಸುನೀತಗಳನ್ನು ಹಿರಿಯ ಕವಿಗಳಾದ ಮಾಸ್ತಿ, ಗೋವಿಂದಪೈ, ಬೇಂದ್ರೆ, ಕುವೆಂಪು, ಪು.ತಿ.ನ., ಗೋಕಾಕ ಮೊದಲಾದವರು ರಚಿಸಿದ್ದು ಕಣವಿಯವರು ಸುನೀತ ಪರಂಪರೆಗೆ ಅನನ್ಯ ಕೊಡುಗೆ ನೀಡಿದ್ದಾರೆ. ಸಾನೆಟ್ಟು ಅಥವಾ ಸುನೀತದ ರಚನೆ ಮತ್ತು ಕಣವಿಯವರ ಮೂಲ ಸಂವೇದನೆಯಲ್ಲಿ ನಿಕಟವಾದ ಸಂಬಂಧವಿದೆಯೆಂದು ಅದು ಭಾವನೆ ಮತ್ತು ಚಿಂತನಾಂಶಗಳ ಸಮತೋಲನವೆಂದು ಶಾಂತಿನಾಥ ದೇಸಾಯಿ ಹೇಳಿದ್ದಾರೆ. ಚೆನ್ನವೀರ ಕಣವಿಯವರಿಗೆ ಇರುವ ಕನ್ನಡ ಕವಿಕಾವ್ಯ ಪರಂಪರೆಯ ಬಗೆಗಿನ ಚಾರಿತ್ರಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಧೋರಣೆಗಳ ಫಲಸ್ವರೂಪವಾದ ಸುನೀತಗಳ ಪರಂಪರೆಯನ್ನು ಅವರು ಸಮೃದ್ಧವಾಗಿ ಬೆಳೆಸಿದ್ದಾರೆ.

ಕಣವಿಯವರ ಸಮಗ್ರ ಕಾವ್ಯದಿಂದ ಆಯ್ದ **'ಸುನೀತ ಸಂಪದ'** ಮೊದಲು ೨೦೦೪ ರಲ್ಲಿ ಲೋಹಿಯಾ ಪ್ರಕಾಶನದ ಮೂಲಕ ೧೮೨ ಸುನೀತಗಳೊಂದಿಗೆ ಪ್ರಕಟವಾಯಿತು. ಇದಕ್ಕೆ ಸಹೃದಯರು ತೋರಿಸಿದ ಉತ್ಸಾಹದ ಪ್ರತಿಕ್ರಿಯೆಯಿಂದಾಗಿ ೨೦೧೪ ರಲ್ಲಿ **'ಸುನೀತ ಸಂಪದ'** ಎರಡನೆಯ ಆವೃತ್ತಿಯಾಗಿ ೨೩೮ ಸುನೀತಗಳನ್ನೊಳಗೊಂಡು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಕನ್ನಡದಲ್ಲಿ ಅತಿ ಹೆಚ್ಚು ಸುನೀತಗಳನ್ನು ಬರೆದ ಕಣವಿಯವರ ಸುನೀತಗಳಲ್ಲಿ ವಸ್ತು ವೈವಿಧ್ಯವಿದೆ. ಸುನೀತಗಳ ವಸ್ತುವನ್ನಾಧರಿಸಿ ವ್ಯಕ್ತಿ ವ್ಯಕ್ತಿತ್ವ (೧೦೨), ನಿಸರ್ಗ ಸ್ಪಂದನ (೩೯), ೩. ಕೃತಿ–ಆಕೃತಿ (೧೪), ನಿವೇದನೆ (೧೩), ಜಿಜ್ಞಾಸೆ (೭೦) ಎಂದು ವರ್ಗೀಕರಿಸಿ ಹೇಳಬಹುದು. ಕಳೆದ ಮೂರು ವರ್ಷಗಳಲ್ಲಿ ಕಣವಿಯವರು ಮತ್ತಷ್ಟು ಸುನೀತಗಳನ್ನು ಬರೆದಿದ್ದಾರೆ.

ಕನ್ನಡದ ಕವಿ ಸಾಹಿತಿಗಳನ್ನು ಕುರಿತ ಕಣವಿಯವರ ನೂರಾರು ಸುನೀತಗಳು ಮಹತ್ವಪೂರ್ಣವಾಗಿವೆ. ಸುನೀತಗಳ ಮೂಲಕ ಕವಿಕುಲದ ವ್ಯಕ್ತಿತ್ವ, ಸಾಧನೆ, ಸಿದ್ಧಿಗಳನ್ನು ಕಟ್ಟಿಕೊಟ್ಟು, ಕಣವಿಯವರು ಅಗಾಧವಾದ ಸಾಹಿತ್ಯ, ಸಂಸ್ಕೃತಿ ಪ್ರೀತಿಯನ್ನು ಪ್ರಕಟಪಡಿಸಿದ್ದಾರೆ. ಸಾಮಯಿಕ ಮಹತ್ವ ಮತ್ತು ಪ್ರಯೋಗಶೀಲತೆಯಿಂದ ಕೂಡಿರುವ ಕಣವಿ ಸುನೀತಗಳು ಕನ್ನಡ ವ್ಯಕ್ತಿಗೀತ ಪರಂಪರೆಯಲ್ಲಿ ಗಣ್ಯಸ್ಥಾನ ಪಡೆದಿವೆ. ಕಳೆದ ಏಳು ದಶಕಗಳಿಂದ ಸುನೀತಗಳನ್ನು ರಚಿಸುತ್ತಲಿರುವ ಕಣವಿಯವರು ಕನ್ನಡ ಕಾವ್ಯದ ಎಲ್ಲ ಮುಖ್ಯ ತಿರುವುಗಳಲ್ಲಿ, ಚಳುವಳಿಗಳಲ್ಲಿ ಸುನೀತದ ಕಾವ್ಯಬಂಧ ಸಡಿಲಾಗದಂತೆ ನೋಡಿಕೊಂಡಿದ್ದಾರೆ. ಸ್ವೋಪಜ್ಞತೆ, ಸ್ವಾನುಭೂತಿ, ಭಾವನೆ, ಚಿಂತನಾಂಶಗಳ ಸಮತೋಲನವನ್ನು ಸದಾ ಸಾಧಿಸುತ್ತ ಬಂದ ಕಣವಿಯವರು ಆತ್ಮಾಭಿವ್ಯಕ್ತಿಯನ್ನು ಸುನೀತಗಳಲ್ಲಿ ಪ್ರಕಟಪಡಿಸಿದ್ದಾರೆ.

'ಸುನೀತ ಸಂಪದ'ದ ವ್ಯಕ್ತಿ ವ್ಯಕ್ತಿತ್ವ ಭಾಗದ ನೂರಕ್ಕೂ ಹೆಚ್ಚು ಸುನೀತಗಳಲ್ಲಿ ಕನ್ನಡ ಕವಿ ಲೇಖಕ ಲೋಕಕ್ಕೆ ಸಂಬಂಧಿಸಿದ ಸುನೀತಗಳೇ ಮುಖ್ಯವಾಗಿವೆ. ಸಾಹಿತಿಗಳ ಜೀವನದ ಮಹತ್ವದ ಸಂದರ್ಭಗಳಲ್ಲಿ (ಷಷ್ಟ್ಯಬ್ದಿ, ಅಮೃತೋತ್ಸವ, ಅಭಿನಂದನ ಗ್ರಂಥ, ಅಗಲಿದಾಗ) ಕಣವಿಯವರು ಈ ಸುನೀತಗಳನ್ನು ಬರೆದಿದ್ದು, ಅವುಗಳಲ್ಲಿ ಕವಿಯ ಹೃದಯದ ಹಾರ್ದಿಕಭಾವಗಳು ಪ್ರಕಟವಾಗಿವೆ. ಸಾಮಯಿಕ ಮತ್ತು ಸಮಕಾಲೀನ ಸಂದರ್ಭಕ್ಕನುಗುಣವಾಗಿ ಕಣವಿ ಮಾಡಿದ ಕಾವ್ಯಾತ್ಮಕ ಪ್ರತಿಸ್ಪಂದನ ಈ ಸುನೀತಗಳಲ್ಲಿದೆ. ಹದಿನಾಲ್ಕು ಸಾಲಿನ ಸುನೀತಬಂಧದಲ್ಲಿ ಇಟಾಲಿಯನ್ ಮತ್ತು ಶೇಕ್ಸಪಿಯರ್‌ನ ಮಾದರಿಗಳು ಇದ್ದು ಕಣವಿಯವರು ಇವೆರಡನ್ನೂ ಮತ್ತು ಹೊಸ ಪ್ರಯೋಗವನ್ನೂ ಮಾಡಿ ಸುನೀತಶಿಲ್ಪ ಸೌಂದರ್ಯವನ್ನು ಕಲಾತ್ಮಕಗೊಳಿಸಿದ್ದಾರೆ.

ಕಣವಿಯವರ ಸುನೀತಗಳೆಂದರೆ ಅನೇಕ ಕವಿ ಸಾಹಿತಿಗಳ ದೊಡ್ಡ ಕಲಾಶಾಲೆ. ಅವುಗಳನ್ನೆಲ್ಲ ಓದಿಯೇ ಸಂತೋಷಿಸಬೇಕು. ಇಲ್ಲಿ ಕೆಲವು ಸುನೀತಗಳನ್ನು ಕುರಿತು ಮಾತ್ರ ವಿವೇಚಿಸಬಹುದಾಗಿದೆ.

'ಶ್ರೀ ಕಾವ್ಯನಾಮದ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ನವೋದಯ ಸಾಹಿತ್ಯದ ಆಚಾರ್ಯಪುರುಷರು. ಅವರ 'ಇಂಗ್ಲೀಷ್ ಗೀತಗಳು ಭಾವಗೀತೆಯ ಯುಗಕ್ಕೆ ನಾಂದಿಯಾಯಿತು. ಶ್ರೀಯವರ ಸ್ಫೂರ್ತಿ, ಪ್ರೇರಣೆಗಳಿಂದ ಅವರ ಶಿಷ್ಯ ಮತ್ತು ಮಿತ್ರವರ್ಗದವರು ಕನ್ನಡದಲ್ಲಿ ಭಾವಗೀತೆಗಳನ್ನೂ, ಹೊಸ ಸಾಹಿತ್ಯವನ್ನು ನಿರ್ಮಿಸಿದರು. 'ಶ್ರೀಯವರನ್ನು ನೆನೆದು' ಸುನೀತದಲ್ಲಿ ಕಣವಿಯವರು ಅವರ ವ್ಯಕ್ತಿತ್ವವನ್ನು ಹೀಗೆ ಕಂಡರಿಸಿದ್ದಾರೆ.

> ಕಂನಾಡ ಬಾನಿನಲಿ ಶ್ರೀಕಾರ ಬರೆದಂತೆ
> 'ಶ್ರೀ' ಬೆಳ್ಳಿಚುಕ್ಕೆ ಲಕಲಕಿಸಿ ಬೆಳ್ಳಂಗೆಡೆಯೆ
> ನಾಡ ನಾಡಿಗಳಲ್ಲಿ ಚೈತನ್ಯ ಸೆಲೆಯೊಡೆಯೆ
> ಬಾವುಟವನೆತ್ತಿ ದಿಗ್ವಿಜಯಮಂ ಪಡೆದಂತೆ
> ದಂಡಯಾತ್ರೆಯಗೈದ ವಾಗ್ವಿಭವದುನ್ನತಿಯು !

ತುಂಬು-ವಿದ್ಯೆಯ ತುಂಬು ಗಾಂಭೀರ್ಯದಲಿ ಮೆರೆದು
ಕನ್ನಡದ ಸಾರಸರ್ವಸ್ವ ಕಡಲಂ ಕಡೆದು
ನವನೀತಮಂ ತೆಗೆದ ಹಿರಿಗೌರವದ ಪರಿಯು.
ಹೇಮ್ನನದಿ, ಕಾವೇರಿ ಸಂಗಮಿಸಿ ಹರಿಯುವೊಡೆ
ನಿಮ್ಮ ಗೀತಸ್ರೋತ, ಏನಿದಚ್ಚರಿಯೆಂದು
ಕಂದೆರೆದು ನೋಡುತಿರೆ ಆ ಪ್ರವಾಹದಿ ಮಿಂದು
'ಸಿರಿಗನ್ನಡಂ ಗೆಲ್ಗೆ' ! ಎಂದು ಮುನ್ನಡೆದ ಪಡೆ !
'ಬೀಳ್ಕೊಡಿಂ ಎನಲೇಕೆ ? ಕರುಣಾಳು ಬಾ ಬೆಳಕೆ !
ಸದ್ಗುರು ಪರಂಪರೆಯ ಪುಣ್ಯ ಶ್ರೀಕಂಠಿಕೆ !

– ('ಶ್ರೀಯವರನ್ನು ನೆನೆದು' – ಆಕಾಶಬುಟ್ಟಿ)

ಶ್ರೀಯವರ ವಾಗ್ವಿಭವದುನ್ನತಿ, ಗಾಂಭೀರ್ಯ, ಪ್ರತಿಭೆ ಪಾಂಡಿತ್ಯ ಪೂರ್ವ ಪಶ್ಚಿಮಗಳ ಭಾವ ಸಮನ್ವಯ ಅವರು ಕನ್ನಡಿಗರಿಗೆ ಕೊಟ್ಟ 'ಸಿರಿಗನ್ನಡಂ ಗೆಲ್ಗೆ' ಎಂಬ ಮಂತ್ರ, 'ಕರುಣಾಳು ಬಾ ಬೆಳಕೆ' ಎಂಬ ಪ್ರಾರ್ಥನೆ ಇವುಗಳನ್ನು ಸುನೀತದಲ್ಲಿ ನೆನೆಯುವ ಕವಿ ಕಣವಿಯವರು ಶ್ರೀಯವರು ಕನ್ನಡದ ಪೂರ್ಣ ಶ್ರೀಕಂಠಿಕೆಯಾಗಿದ್ದನ್ನು ಭಾವಪೂರ್ಣವಾಗಿ ವರ್ಣಿಸಿದ್ದಾರೆ.

ಬೇಂದ್ರೆಯವರು ಕನ್ನಡದ ಸಾವಿರದ ಮನೆಗಳಲಿ ಮನೆ ಮಾಡಿದ ವರಕವಿಗಳು. ಧಾರವಾಡದಲ್ಲಿ ಗೆಳೆಯವರ ಗುಂಪನ್ನು ಕಟ್ಟಿ ಕನ್ನಡದ ನವೋದಯದ ಸಂದರ್ಭದಲ್ಲಿ ಹೊಸ ಕವಿಗಳಿಗೆ ಪ್ರೇರಕಶಕ್ತಿಯಾದವರು. ಬೇಂದ್ರೆಯವರ ಇಡಿಯ ಕಾವ್ಯ ವ್ಯಕ್ತಿತ್ವವನ್ನು ಕಣವಿ ಅವರು 'ಎಪ್ಪತ್ತರ ಬೇಂದ್ರೆ' ಸುನೀತದಲ್ಲಿ ಚಿತ್ರಿಸಿದ್ದಾರೆ :

ಕಣ್ಣು ಮಿಂಚಿಸಿ, ನೂರು ಹಂಚಿಕೆಯ ಸಂಚಿಕೆಯ
ತುಂಬಿ – ತಲೆಯಾಡಿಸುತ, ಯಾವುದೋ ಒಳದನಿಗೆ
ನಾದ ಕೂಡಿಸಿ, ನೆಲಕೆ ನೀರು ಬರಿಸುವ ಹಾಗೆ
ಬೀಸುಗಾಳಿಯ ಜೊತೆಗೆ ಬಂದರದೊ ಬೇಂದ್ರೆ ! ಕೈಯ
ಮಾಟಕ್ಕೆ ಮಾತು ಮಾಂತ್ರಿಕನಾಟ, ಅರಗಳಿಗೆ
ಹೊರ-ಒಳಗೆ ತುಂಬಿತುಳುಕುವ ಬೆಡಗು, ಕಡಲ ಗುಟು-
ಕರಿಸಿ, ಚಿಕ್ಕಿಗಳ ಮುಕ್ಕಳಿಸುವರು ; ತಟ್ಟನೆ ಒಗಟು
ಒಡೆಯುವ ಒಡಪು – ನುಡಿ : ಕುಡಿಮಿಂಚು ಬಾನ ಗುಡಿಗೆ.
ಇಪ್ಪತ್ತೊ ಎಪ್ಪತ್ತೊ ಮುಪ್ಪತ್ತು ಮುಂದೆ ನಡೆ ;
ಅಂಬಿಕಾತನಯದತ್ತನಿಗೆ ದತ್ತುಕೊಟ್ಟಂದು ಇವ-
ರೊಪ್ಪತ್ತು. ಜಗದಂಬೆ-ಹಡಲಿಗೆ ಹೊತ್ತು ಕುಣಿವ-
ಗೆಲ್ಲಿ ಪುರಸೊತ್ತು ? ಹಣ್ಣಾದ ಕೇದಿಗೆಯ ಹೊಡೆ ;
ಚೂಪಾದ ಗರಿ : ಹುಷಾರಿ; ಕಂಪಿಗೆಲ್ಲಿಯ ಕೊರತೆ ?
ನಡೆದದ್ದೆ ಸಾಧನಕೇರಿ, ನುಡಿದದ್ದೆ ಕವಿತೆ.

(ಎಪ್ಪತ್ತರ ಬೇಂದ್ರೆ – ಎರಡು ದಡ)

ಬೇಂದ್ರೆಯವರ ಕವಿತ್ವ ಶಕ್ತಿಯನ್ನು ಅಪೂರ್ವವಾದ ಮಳೆಗಾಲದ ಮೋಡದ ಪ್ರತಿಮೆಯ ಮೂಲಕ ಧ್ವನಿರಮ್ಯತೆಯಿಂದ ಕಣವಿ ಚಿತ್ರಿಸಿದ್ದಾರೆ. ಆಕಾಶದಲ್ಲಿ ಮಳೆ ಬರುವ ಪೂರ್ವದಲ್ಲಿ

ಮೋಡಗಳ ಸಂಚಾರ, ಮಿಂಚು ಹಾಗೂ ತಂಪಾದ ಗಾಳಿಗೆ ನೆಲಕೆ ನೀರು ಬರಿಸುವ ಮಳೆ ಹೇಗೆ ಉಂಟಾಗುತ್ತದೋ ಅದೇ ರೀತಿಯಲ್ಲಿ ಕವಿಯಲ್ಲೂ ಕಾವ್ಯ ಹುಟ್ಟುವಾಗ ಒಂದು ಕವಿಕಾರ್ಯ ನಡೆದಿರುತ್ತದೆ ಎಂಬುದನ್ನು ಬೇಂದ್ರೆಯವರ ಕಾವ್ಯ ಪ್ರಕ್ರಿಯೆಯಲ್ಲಿ ಕಂಡ ಕಣವಿಯವರು ಕನ್ನಡ ಭಾವಗೀತೆಯ ಸಕಲ ಮಾಧುರ್ಯವೆಲ್ಲ ಬೇಂದ್ರೆಯವರಲ್ಲಿ ಅಂತಸ್ಥವಾಗಿರುವುದನ್ನು ನಿರೂಪಿಸಿದ್ದಾರೆ. ಗಾರುಡಿಗತನ, ಮಾಂತ್ರಿಕ ಪ್ರತಿಭೆಗಳಿಂದ ಕೂಡಿದ ಬೇಂದ್ರೆ ವ್ಯಕ್ತಿತ್ವದಲ್ಲಿ ಬೆಳದಿಂಗಳಿನ ಮಾಧುರ್ಯವಿದೆ. ಪಾರಿಜಾತದ ಕೋಮಲತೆಯಿದೆ. ಬೇಂದ್ರೆಯವರು ಎಪ್ಪತ್ತರಲ್ಲೂ ಇಪ್ಪತ್ತರ ತಾರುಣ್ಯದ ನವೋಲ್ಲಾಸ ಹೊಂದಿದವರು. ಇಲ್ಲಿ 'ಜಗದಂಬೆ ಹಡಲಿಗೆ ಹೊತ್ತು ಕುಣಿವಗೆಲ್ಲಿ ಪುರುಸೊತ್ತು ?' ಎಂಬ ರೂಪಕವನ್ನು ಬಳಸಿದುದು ಅರ್ಥಪೂರ್ಣವಾಗಿವೆ. ಬೇಂದ್ರೆಯವರು 'ನಡೆದದ್ದೆ ಸಾಧನಕೇರಿ ನುಡಿದದ್ದೆ ಕವಿತೆ' ಎಂಬ ಒಂದೇ ಸಾಲಿನಲ್ಲಿ ಅವರ ಸಾಧನೆ ಸಿದ್ಧಿಗಳ ಎರಕವಿದೆ. 'ಕೇದಿಗೆಯ ಹೊಡೆ'ಯಂತೆ ಬೇಂದ್ರೆ ಮಾತು ಅರ್ಥದ ಪರಿಮಳವನ್ನು ಬಹುಕಾಲ ಬೀರುತ್ತದೆ. ಹಾಗೆಯೇ 'ಚೂಪಾದ ಗರಿ ಹುಷಾರಿ' ಎಂಬ ಎಚ್ಚರಿಕೆಯಲ್ಲಿ ಬೇಂದ್ರೆ ಸ್ವಭಾವವನ್ನು ಸೂಚಿಸಲಾಗಿದೆ. ಹೀಗೆ ಬೇಂದ್ರೆಯವರ ವ್ಯಕ್ತಿತ್ವವನ್ನು ಸಾಕಾರಗೊಳಿಸಿದ ಕಣವಿಯವರ 'ಎಪ್ಪತ್ತರ ಬೇಂದ್ರೆ' ಕನ್ನಡ ಸುನೀತ ಪರಂಪರೆಯಲ್ಲೇ ಇನ್ನಿಲ್ಲದ ಮಹತ್ವ ಪಡೆಯುತ್ತದೆ.

ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಪ್ರತಿಮ ಸಾಹಿತ್ಯ ಸಾಧನೆ ಮಾಡಿದ ಪ್ರತಿಭೆ ಗೋಕಾಕರದು. 'ವಿನಾಯಕ' ಕಾವ್ಯನಾಮದ ಗೋಕಾಕರ ಪ್ರತಿಭಾ ಪ್ರಪಂಚ ಮತ್ತು ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಅಪೂರ್ವವಾದ ರೀತಿಯಲ್ಲಿ ಕಣವಿ ಅವರು ತಮ್ಮ ಸುನೀತದಲ್ಲಿ ಕೆತ್ತಿದ್ದಾರೆ.

ತುಂಬಿದ ತಲೆಯ ಬೆಳ್ಳಿಗೂದಲಿಗೆ ಬೆರಳಾಡಿ
ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
ಅಂತಃಕರಣದಂಗೈಯಲ್ಲಿ ತೂಗಿ, ಬದುಕ
ಬೆಲೆಗೈವ 'ಅದೇನದಲ್ಲ' ಅದೆಲ್ಲವ ಕೂಡಿ.
ಕನ್ನಡಕ ದಾಟ ನುಣ್ಣಗೆ ಎದೆಯ ಮೀಟ, ಹದ
ಬರುವವರೆಗು ಮಿಡಿಯುವ ದೃಷ್ಟಿ. ಸೂಟು ಬೂಟನು
ಕಳಚಿ, ಲಂಡಂಗಿ ಧೋತರದಿ ಮುಗುಳ್ನಗೆ ಹದನು.
'ಹಲೊ ಬರ್ರಿ' ತೆರೆಯುವದು ನಡುಮನೆಯ ಕಿಡಕಿ, ಕದ.
ಎಂಟು ದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು
ಮೂಡ-ಪಡುವಣ ನೆಳಲು-ಬೆಳಕಿನಲಿ ತೇಲುವರ-
ಸಂಚೆ, ಬಾಳ ದೇಗುಲದಿ ಸಮನ್ವಯ ತೇರ
ಸಿಂಗಾರ, ಅರವತ್ತರಲು ಭಾರಿ ಕಸರತ್ತು.
ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ
ಸಂಕ್ರಾಂತಿ; ಕೈ ಕುಲುಕಿದಂತೆ ದ್ಯಾವಾ – ಪೃಥಿವಿ.

(ವಿನಾಯಕರಿಗೆ ವಂದನೆ – ನಗರದಲ್ಲಿ ನೆರಳು)

ವಿನಾಯಕರ ಸಂವೇದನಾಶೀಲ, ಚಿಂತನಪರ ವ್ಯಕ್ತಿತ್ವದಲ್ಲಿ ನಿರಾಡಂಬರತೆ, ಋಜುತ್ವ, ಆತ್ಮೀಯತೆಯಿದೆ. ಸದಾ ಪಯಣಿಗರಾದ ಗೋಕಾಕರು ಬಾಳ ದೇಗುಲದ ಸಮನ್ವಯದ ತೇರ ಸಿಂಗರಿಸಿದವರು. ಆಧ್ಯಾತ್ಮ ಚಿಂತನೆಯೊಂದಿಗೆ ಕಾವ್ಯದಲ್ಲಿ ನವ್ಯತೆಯನ್ನು ಸ್ವಾಗತಿಸಿದ ಗೋಕಾಕರು 'ಕೈ ಕುಲುಕಿದಂತೆ ದ್ಯಾವಾಪೃಥಿವಿ' ಎನ್ನುವಲ್ಲಿ ಧ್ವನಿಪೂರ್ಣವಾಗಿ ಅವರ ವ್ಯಕ್ತಿತ್ವ ಸಿದ್ಧಿಯನ್ನು ಕಂಡರಿಸಲಾಗಿದೆ.

ಶಿವರುದ್ರಪ್ಪನವರ ಐವತ್ತರ ಅಭಿನಂದನ ಸಂದರ್ಭದಲ್ಲಿ ಕಣವಿ ಬರೆದ ಸುನೀತ 'ಸ್ನೇಹ ಕಾರ್ತೀಕ'.

ಮುಖವಾಡಗಳ ಅಟಮಟದ ನಟನೆಯ ನಡುವೆ
ದಿಟವ ದಿಟ್ಟಿಸಿ, ಧೈರ್ಯದಲಿ ಮುಂದಿಟ್ಟು ಹೆಜ್ಜೆ
ಬುಟ್ಟಿಗಟ್ಟಲೆ ಮಾತು ಹೊರಿಸಿದವರಿಗೆ ಒಜ್ಜೆ.
ಶ್ರುತಿಗೆ ಸರಿಯಾದ ಕೃತಿ ; ಏಕೆ ಉಪಕೃತಿಗೊಡವೆ ?
ಕತ್ತಲೆಯ ಜೀರುಂಡೆ ಮೇಳಕುತ್ತರವಾಗಿ
ನಕ್ಷತ್ರಗಳ ಮುಗುಳು ನಗೆ, ಬಾನ ಗಂಭೀರ
ಬಗೆ, ಧ್ಯಾನ. ನಸುಕಿನಲಿ ನಿದ್ದೆ ತಿಳಿದೆದ್ದವರ
ಕಂಡರಳುವದು ಕೈಮುಗಿದ ಮೊಗ್ಗೆ ತಾನಾಗಿ
ನೋವು ತುಂಬಿದ ನಾವೆ ನಡೆಸಿ ಕವಿತೆಯ ಹುಟ್ಟು
ಅಟ್ಟಹಾಸದ ದೂರ ತೆರೆಯಾಚೆ ಸೌಂದರ್ಯ-
ಶೋಧ ಚಿಂತನ ಕ್ಷಿತಿಜ: ಗುರಿ ನಿರಿಗೊಳಿಪ ಕಾರ್ಯ
ತತ್ಪರತೆ. ಸತ್ವವೆಲ್ಲಿದೆ ರಜ-ತಮವ ಬಿಟ್ಟು ?
ನೂರು ಶರದೈಸಿರಿಗೆ ಏರಬೇಕಿದೆ ಜೀಕ-
ತೂಕ; ಅದಕೆ ಹಾರೈಕೆ : ಸ್ನೇಹಕಾರ್ತೀಕ.

(ಸ್ನೇಹ ಕಾರ್ತೀಕ – ಜೀವಧ್ವನಿ)

ಶಿವರುದ್ರಪ್ಪನವರ ಬಾಹ್ಯ ವ್ಯಕ್ತಿತ್ವದಲ್ಲಿ ಕಾಣುವ 'ನಕ್ಷತ್ರಗಳ ಮುಗುಳು ನಗೆ, ಬಾನ ಗಂಭೀರ ಬಗೆ' ಧ್ಯಾನ ಹಾಗೂ ಆಂತರಿಕ ವ್ಯಕ್ತಿತ್ವದಲ್ಲಿ ಮೊಗ್ಗೆ ಅರಳಿದ ಹಾಗೆ ಕವಿತೆಯನ್ನು ರಚಿಸಿ, ಉಲ್ಲಾಸಗೊಳಿಸುವ, ಸೌಂದರ್ಯಶಾಸ್ತ್ರ ಶೋಧಕರಾದ ಚಿತ್ರವನ್ನೂ, ಅವರ ಕಾರ್ಯತತ್ಪರತೆಯ ಗುಣವನ್ನೂ ಹೇಳುತ್ತ ಸ್ನೇಹದ ದೀಪೋತ್ಸವವಾಗಲಿ ಎಂಬ ಕಣವಿಯವರ ಹಾರ್ದಿಕ ಭಾವ ಈ ಸುನೀತದ ಮೂಲಕ ಸಾರವತ್ತಾಗಿ ಪ್ರಕಟವಾಗಿದೆ.

ಕಣವಿಯವರ ಸುನೀತಗಳಲ್ಲಿ ಎಲ್ಲ ತಲೆಮಾರಿಗೆ ಸೇರಿದ ಕವಿ ಲೇಖಕರಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಲೇಖಕ ಲೋಕವನ್ನು ಕಣವಿ ಸುನೀತಗಳಲ್ಲಿ ಚಿತ್ರಿಸಿದ್ದಾರೆ. ನವೋದಯದ ಹಿರಿಯ ಕವಿಗಳಾದ ಪು.ತಿ.ನ. ಗೋವಿಂದಪೈ, ತೀ.ನಂ.ಶ್ರೀ., ಡಿ.ಎಸ್.ಕರ್ಕಿ, ರಂ.ಶ್ರೀ. ಮುಗಳಿ ಮೊದಲಾದವರ ವ್ಯಕ್ತಿತ್ವವನ್ನು ಕಣವಿಯವರು ತುಂಬ ಆದರ, ಗೌರವಗಳಿಂದ ಚಿತ್ರಿಸಿದ್ದಾರೆ. ಪ್ರಗತಿಶೀಲ ಲೇಖಕರಾದ ಕಟ್ಟೀಮನಿಯವರು ನವ್ಯ ಲೇಖಕರಾದ ಶಾಂತರಸ, ಲಂಕೇಶ, ಚಂಪಾ, ನಿಸಾರ ಅಹಮ್ಮದ ಸುಬ್ರಾಯ ಚೊಕ್ಕಾಡಿ ಕುರಿತು ಅದೇ ಪ್ರೀತಿ, ಆಸ್ಥೆಯಿಂದ ಸುನೀತಗಳನ್ನು ಬರೆದಿದ್ದಾರೆ. ಅಖಂಡ

ಕರ್ನಾಟಕದ ಸಾಕ್ಷಿಪ್ರಜ್ಞೆಯಂತೆ ಎಲ್ಲ ಭಾಗದ ಸಾಹಿತ್ಯಲೋಕ ಕಣವಿಯವರ ಸುನೀತಗಳಲ್ಲಿ ಚಿತ್ರಿತವಾಗಿದೆ.ಕಣವಿಯವರು ಸಂತ ಸಂಶೋಧಕರಾದ ಉತ್ತಂಗಿ, 'ವ್ಯಾಸಂಗ ಸಂಗಮ'ದ ಸ.ಸ. ಮಾಳವಾಡ, 'ಮಹಾಮಾರ್ಗದ ಪಥಿಕ' ಎಂ.ಎಂ. ಕಲಬುರ್ಗಿ, 'ಅಂತರಂಗದ ರತ್ನ' ಗುರುಲಿಂಗ ಕಾಪಸೆ, 'ಅಚ್ಚಪ್ರತಿಭೆಯ ಹುಚ್ಚು' ಶಂಕರ ಮೊಕಾಶಿ ಪುಣೇಕರ, ಗಡಿನಾಡ ಕನ್ನಡ ಸಂಶೋಧಕ ಕುಂದಣಗಾರ, ವಚನಪಿತಾಮಹ ಫ.ಗು. ಹಳಕಟ್ಟಿ ಮೊದಲಾದವರ ಬಗ್ಗೆ ಬರೆದ ಸುನೀತಗಳಲ್ಲಿ ಕನ್ನಡ ಪ್ರಪಂಚಕ್ಕೆ ಅವರು ಕೊಟ್ಟ ಕೊಡುಗೆಯನ್ನು ಸಾಕಾರಗೊಳಿಸುತ್ತಲೇ ವ್ಯಕ್ತಿತ್ವದ ಗುಣ-ವೈಶಿಷ್ಟ್ಯಗಳನ್ನು ಹೇಳಿದ್ದಾರೆ. ಕನ್ನಡ ಕಟ್ಟಿದ ಹಿರಿಯರಲ್ಲಿ ಗೌರವ, ಸಮಕಾಲೀನರಲ್ಲಿ ಸ್ನೇಹ, ಪ್ರೀತಿ, ಕಿರಿಯರಲ್ಲಿ ವಿಶ್ವಾಸ ಕಣವಿಯವರ ದೃಷ್ಟಿಕೋನವಾಗಿದೆ. ಆದ್ದರಿಂದಲೇ ಅವರು ಕನ್ನಡದ 'ಜಯ ಕರ್ನಾಟಕ ಕುಲತಿಲಕ' ಆಲೂರರಂತೆ 'ಸಮಗ್ರ ಓದಿನ ಹರಿಕಾರ' ನರಹಳ್ಳಿಯವರ ಬಗೆಗೂ ಸುನೀತ ಬರೆದು ತಮ್ಮ ಆದರಭಾವವನ್ನು ವ್ಯಕ್ತಪಡಿಸಿದ್ದಾರೆ.

ನಾಡಿನ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದ ಮಹನೀಯರನ್ನು ಕುರಿತು ಕಣವಿಯವರು ಸುನೀತಗಳನ್ನು ಬರೆದಿದ್ದಾರೆ. ಧಾರವಾಡದ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳು, ಸಿದ್ಧಗಂಗಾಶ್ರೀಗಳು, ಶ್ರೀಗುರು ತೋಂಟದಾರ್ಯರು, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು, ಸಿರಿಗೆರೆಯ ಹಿರಿಯ ಗುರುಗಳು, ಜ.ಚ.ನಿ. ಅವರು, ಹುಬ್ಬಳ್ಳಿಯ ಸಿದ್ಧಾರೂಢರು ಹೀಗೆ ಬೇರೆ ಬೇರೆ ವಿಭೂತಿ ಪುರುಷರ ಬಗೆಗಿನ ಅವರ ಸುನೀತಗಳು ಗಮನಾರ್ಹವಾಗಿವೆ.

ಕನ್ನಡದ ಜಗದ್ಗುರು ಎಂದು ನಾಡಿನಾದ್ಯಂತ ಖ್ಯಾತರಾದ ಗದುಗಿನ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧಲಿಂಗ ಸ್ವಾಮಿಗಳು ಮಾಡಿದ ಸಮಾಜೋಧಾರ್ಮಿಕ ಕಾರ್ಯಗಳನ್ನು, ಅವರ ಘನ ವ್ಯಕ್ತಿತ್ವವನ್ನು ಕಣವಿಯವರು 'ಸಾಮಾನ್ಯರ ಸಿದ್ಧಲಿಂಗ' ಸುನೀತದಲ್ಲಿ ಹೀಗೆ ಆಕೃತಿಗೊಳಿಸಿದ್ದಾರೆ.

> **ಸೂರ್ಯನಿಗೂ ಕಿರಣಕ್ಕೂ ಭೇದವಿಲ್ಲದ ಹಾಗೆ**
> **ಶತಮಾನಗಳ ಮೀಟಿದಂತರಂಗ ಸ್ಫೂರ್ತಿ :**
> **ಬಸವ ಕಾಯಕ ದೀಕ್ಷೆ ಪಡೆದ ಸಾತ್ವಿಕ ಮೂರ್ತಿ-**
> **ಮಠ-ಪೀಠದಂಗಳವ ಗುಡಿಸಿ, ತನ್ನೊಳ ಹೊರಗೆ**
> **ಸರಳ ಸೌಜನ್ಯದಾಕೃತಿ ಕಡೆವ ಸಂಕಲ್ಪ**
> **ನೂರು ಬಗೆ ಭೇದಗಳ ಭೇದಿಸಿ ಬಂದ ತರುಣ-**
> **ಜನಮಾನಸದ ಶುದ್ಧಿ, ನಿರ್ಮಲಾಂತಃಕರಣ**
> **ಹಿಡಿದು ಮಿಡಿಯುವ ಧೀರವಾಣಿ, ವೀಣಾಲಾಪ**
> **ನೂತನ-ಪುರಾತನರು ವರ್ತಮಾನಕೆ ತವರು :**
> **ಗಣಿಯ ಅಗಣಿತರತ್ನ ಶೋಧನೆಗೆ ಪ್ರಸ್ಥಾನ,**
> **ಚಿರಂತನ ಪುಣ್ಯಪುರುಷರಿಗೆ ಪ್ರತ್ಯುತ್ಥಾನ**
> **ಸಂಸ್ಥಾನದಲಿ ಸಿದ್ಧ ಸಿರಿಗನ್ನಡದ ತೇರು**
> **ವಾಸ್ತವಾದರ್ಶಗಳ ಬೆಸೆದಿರುವ ಬೀಸು ನಡಿಗೆ**
> **ನೆಲಕಿಳಿಸಿ ತರಬಹುದೆ ಇವರಾಕಾಶ ಗಂಗೆ ?**

ತೋಂಟದ ಸಿದ್ಧಲಿಂಗ ಸ್ವಾಮಿಗಳು ಸೂರ್ಯನಿಗೂ ಕಿರಣಕ್ಕೂ ಭೇದವಿಲ್ಲದಂತೆ ಇರುವ ಬಸವ ಕಾಯಕ ದೀಕ್ಷೆ ಪಡೆದ ಸಾತ್ವಿಕಮೂರ್ತಿ. ಅವರು ಮಠದ ಅನೇಕ ಸಂಪ್ರದಾಯಗಳನ್ನು ಮುರಿದು, ಅಡ್ಡಪಲ್ಲಕ್ಕಿ ತ್ಯಾಗ ಮಾಡಿ, ಸರಳತೆ ಸೌಜನ್ಯದಿಂದ ಶ್ರೀ ಸಾಮಾನ್ಯರ ಸಿದ್ಧಲಿಂಗ ಆಗಿದ್ದಾರೆ. ಎಲ್ಲ ಭೇದ-ಭಾವಗಳನ್ನು ಕಿತ್ತುಹಾಕಿ, ತರುಣರ ಪಡೆ ಕಟ್ಟಿ, ಮಠ ಬೆಳೆಸದೆ ಜನರ ಮನಸ್ಸನ್ನು ಬೆಳೆಸಿದರು. ತಮ್ಮ ವೀರವಾಣಿಯಿಂದ ಶರಣಧರ್ಮದ ನೂತನ ಪುರಾತನರನ್ನೂ ವೀರಶೈವ ಪುಣ್ಯಪುರುಷರನ್ನು ಬೆಳಕಿಗೆ ತಂದು ಸಿರಿಗನ್ನಡದ ತೇರು ಎಳೆಯುವಂತೆ ಮಾಡಿದರು. ಅವರು ವಾಸ್ತವ ಮತ್ತು ಆದರ್ಶಗಳ ಸಂಗಮವಾಗಿದ್ದಾರೆ. ಕೊನೆಯಲ್ಲಿ 'ನೆಲಕಿಳಿಸಿ ತರಬಹುದೇ ಇವರಾಕಾಶ ಗಂಗೆ ?' ಎಂದು ಧ್ವನಿಪೂರ್ಣವಾಗಿ ಕಣವಿ ಉದ್ಗರಿಸಿದ್ದಾರೆ.

ಕನ್ನಡದ ಅನೇಕ ಲೇಖಕಿಯರ ಬಗೆಗೆ ಕಣವಿಯವರು ಸುನೀತಗಳನ್ನು ರಚಿಸಿದ್ದಾರೆ. ಹಿರಿಯ ಕವಯಿತ್ರಿ ಜಯದೇವಿ ತಾಯಿ ಲಿಗಾಡೆ ಅವರ ಬಗೆಗೆ ಬರೆದ ಸುನೀತ ಆಧುನಿಕ ಶಿವಶರಣೆಯ ಘನ ವ್ಯಕ್ತಿತ್ವವನ್ನು ಸಾಕಾರಗೊಳಿಸಿದೆ.

ತ್ರಿಪದಿಯಲ್ಲವೆ ನಮ್ಮ ವೃತ್ತ-ವೃತ್ತಿಗೆ ತಾಯಿ ?
ಸರಳ-ಶ್ರೀಮಂತಿಕೆಯ ಮೂರು ಬೆರಳ ವಿಭೂತಿ
ನುಡಿ-ಗಡಿಯ ಮೀರಿದಂತಃಕರಣದನುಭೂತಿ
ಬಾಳಿ-ಬದುಕಿಸಿದುಭಯ ಭಾಷೆಗಳಿಗೂ ಬಾಯಿ

ಕಂಟಕವ ದಾಟದುತ್ಕಂಠೆಯಲಿ ಆಡಿದರೆ
ಎದೆತುಂಬಿ ಹಾಡಿದರೆ, ಹಾಲು ಹಳ್ಳವೆ ಹರಿದು
ಮುಳ್ಳುಕಂಟಿಗಳೆದೆಯ ಕೊಳ್ಳವೂ ತುಂಬುವುದು
ತುಳುಕುವುದು ಸೊನ್ನಲಾಪುರ ಸಿದ್ಧರಾಮನ ಕೆರೆ.

ಗಡಿಯಲ್ಲಿ ಕಟ್ಟ ಕನ್ನಡ ಕೋಟೆ, ಉಡಿಯಲ್ಲಿ
ಇಡಿಯ ನಾಡಕ್ಕರೆ ಮಕ್ಕಳಾಡುಂಬೊಲವೆ ;
ಒಡವೆಗಳನುಳಿದ ರುದ್ರಾಕ್ಷಿ ಕಂಕಣ ಬಲವೆ
ಕಲ್ಯಾಣ ಮುಟ್ಟ ಮರಳಿದಿರಿ ಕೊನೆಗಳಿಗೆಯಲಿ

ಕನ್ನಡದ ಕರ್ಮೋದ್ಯೋಗ ಭೂಮಿಯಲಿ ಯೋಗ
ಯೋಗ್ಯರ ಕೊರತೆ : ಯೋಚಿಸಬೇಕು ಮತ್ತೆ ಈಗ

ಸೊಲ್ಲಾಪುರದ ಸೊನ್ನಲಿಗೆಯಲ್ಲಿ ಕಾವ್ಯಕಾಯಕ ನಡೆಸಿದ ಮಹಾನುಭಾವೆ ಜಯದೇವಿತಾಯಿ ಲಿಗಾಡೆ ಅವರು ತ್ರಿಪದಿಯಲ್ಲಿ ಸಿದ್ಧರಾಮನ ಮೇಲೆ ಮಹಾಕಾವ್ಯ ರಚಿಸಿದ್ದರು. ಅವರ ಭವ್ಯ ವ್ಯಕ್ತಿತ್ವವನ್ನು ಕಣವಿಯವರ ಸುನೀತ ಅನೇಕ ಅರ್ಥವನ್ನು ಬಿಚ್ಚುತ್ತ ಸಾಗುತ್ತದೆ. ಅವರು ಸರಳತೆಯ ಸಾಕಾರಮೂರ್ತಿ. ಮೂರು ಬೆರಳ ವಿಭೂತಿ, ತ್ರಿಪದಿ ವೃತ್ತ ವೃತ್ತಿಗೆ ತಾಯಿಯಾಗಿ ಅವರಿದ್ದಾರೆಂಬುದನ್ನು ಕಣವಿ ಅತ್ಯಂತ ಧ್ವನಿಪೂರ್ಣವಾಗಿ ಹೇಳಿದ್ದಾರೆ ಕನ್ನಡ-ಮರಾಠಿ ಸ್ನೇಹಸೇತುವಾಗಿ 'ಬಾಯಿ' ಎಂದೆನಿಸಿಕೊಂಡು ಎದೆತುಂಬಿ ಸಿದ್ಧರಾಮನ ಹಾಡು ಹಾಡಿದವರು. ಗಡಿನಾಡಿನಲ್ಲಿ ಕನ್ನಡದ ಕೋಟೆ ಕಟ್ಟಿ ಕೈಗೆ ರುದ್ರಾಕ್ಷಿಯನ್ನೆ ಆಭರಣವಾಗಿ ಮಾಡಿ, ಕಲ್ಯಾಣದ ಹಾದಿಯತ್ತ

ಪಯಣಿಸಿದವರು. ಸುನೀತದ ಕೊನೆಯ ಭಾಗದಲ್ಲಿ ಕನ್ನಡದ ಕರ್ಮೋದ್ಯೋಗ (ಸಿದ್ಧರಾಮನಂತೆ) ಭೂಮಿಯಲ್ಲಿ ಯೋಗ ಸಾಧನೆ ಮಾಡಿದವರು. ಯೋಗ್ಯರ ಕೊರತೆ ಈಗ ಕಾಡುತ್ತಿದೆ ಯೋಚಿಸಬೇಕು ಎಂದು ಕಣವಿಯವರು ಅತ್ಯಂತ ಮನೋಜ್ಞವಾಗಿ ಇಲ್ಲಿ ವ್ಯಕ್ತಪಡಿಸಿದ್ದಾರೆ.

ಭಾರತದ ಮಹಾ ವ್ಯಕ್ತಿಗಳ ಬಗೆಗೂ ಕಣವಿಯವರು ಸುನೀತಗಳನ್ನು ಬರೆದಿದ್ದಾರೆ. ೧೯೪೮ ರಲ್ಲಿ ಗಾಂಧಿ ಹುತಾತ್ಮರಾದಾಗ ಕಣವಿ ಅವರು ಬರೆದ 'ಅಮರ ತೇಜಃ ಪುಂಜ' ಸುನೀತ ಕನ್ನಡದ ಗಾಂಧಿ ಗೀತಗಳಲ್ಲಿ ಮುಖ್ಯವಾದದ್ದು. ಭಾರತದ ಪ್ರಧಾನಮಂತ್ರಿಯಾಗಿದ್ದ ಲಾಲಬಹದ್ದೂರ ಶಾಸ್ತ್ರಿಯವರನ್ನು ಕುರಿತು ಬರೆದ ಸುನೀತದಲ್ಲಿ ಅವರ ಸರಳತೆ, ಬಡತನ, ಪ್ರಾಮಾಣಿಕತೆ, ಕಾಯಕನಿಷ್ಠೆಯ ಅಪೂರ್ವ ವ್ಯಕ್ತಿತ್ವ ಅಷ್ಟೇ ಸರಳವಾಗಿ ಆಡುನುಡಿಯಲ್ಲಿ ಪರಿಣಾಮಕಾರಿಯಾಗಿ ಬಂದಿದೆ.

ನಮ್ಮ ಮಧ್ಯೆ ಇವನಿದ್ದನೆಂದರೆ ನಂಬುವೆಯ
ಇಷ್ಟು ಸಾದಾ ಸೀದಾ ಮನುಷ್ಯ ? ಬಡತನದ
ಪಲ್ಲಕ್ಕಿ ಹೊತ್ತು ಮೆರೆಸಿದ ಪ್ರಾಮಾಣಿಕತೆಯ

ಹೆಂಡತಿ-ಮಕ್ಕಳಿಗೆ ಆಸ್ತಿ ಸಂಪಾದಿಸದ
ಮನೆಯಿರದ ಪ್ರಧಾನಿ; ಇವನೆಂಥ ಭಾರತೀಯ ?
ಬಂದದ್ದು ಹಂಜಿಯ ಮಾಡಿ ರಾಟಿ ತಿರುಗಿಸಿದ
ಗದ್ದುಗೆಯನೇರಿದರು ಕಾಣಿಸಿಕೊಳದ ಕಿರಿಯ
ಬಾಜಾ ಬಜಂತ್ರಿಯ ನಿಲಿಸಿ ಸಹಜ ತಂತಿಯ ಮಿಡಿದ
ಎಲ್ಲರಿಗೂ ಕಿವಿಗೊಟ್ಟು ತನ್ನ ಒಳದನಿ ಮರೆಯ

ಮಹಾಪೂರವ ಧೀರ ತೆಪ್ಪದಲಿ ದಾಟಿಸಿದ ;
ಮಾಯಿಸಿದ ಮೈಮೇಲೆ ಬಂದು ಬಿದ್ದವರ ಗಾಯ
ಯಾರಿಗೂ ಸಿಗದ ಬಿಳಿ ಪಾರಿವಾಳವ ಹಿಡಿದ,
ಮಧ್ಯರಾತ್ರಿಯಲಿಂತು ಕೊರೆದು ಮಿಂಚಿನ ಗೆರೆಯ
ಮರೆಯಾದ, ದಡಕ್ಕೆ ಮುಟ್ಟಿಸಿದ ಹೊತ್ತ ಹೊರೆಯ

– (ಲಾಲಬಹಾದ್ದೂರ ಶಾಸ್ತ್ರೀ – ಸುನೀತ ಸಂಪದ)

ರಾಜಕೀಯ ಕ್ಷೇತ್ರದಲ್ಲಿ ಮಂತ್ರಿ ಮಹೋದಯರು ನಡೆಸುವ ಭ್ರಷ್ಟಾಚಾರಗಳು ಭಾರತದ ಭವಿಷ್ಯವನ್ನು ಮಸಕಾಗಿಸುತ್ತಿರುವ ಸಂದರ್ಭದಲ್ಲಿ ಲಾಲಬಹಾದ್ದೂರ ಶಾಸ್ತ್ರಿಯವರಂಥ ಪ್ರಾಮಾಣಿಕ ವ್ಯಕ್ತಿಗಳು ಈ ದೇಶದಲ್ಲಿ ಪ್ರಧಾನಿಯಾದದ್ದು ನಂಬುವದೂ ಕಷ್ಟ ಎಂದು ಕವಿ ಪ್ರತಿಕ್ರಿಯಿಸಿದ್ದಾರೆ. ಲಾಲಬಹಾದ್ದೂರ 'ಯಾರಿಗೂ ಸಿಗದ ಪಾರಿವಾಳವ ಹಿಡಿದ', 'ಮಧ್ಯರಾತ್ರಿಯಲಿಂತು ಕೊರೆದು ಮಿಂಚಿನ ಗೆರೆಯ ಮರೆಯಾದ' ಈ ನುಡಿಗಳು ಧ್ವನಿಪೂರ್ಣವಾಗಿವೆ. ಇದೇ ರೀತಿ 'ಶತಾಯುಷಿ ವಿಶ್ವೇಶ್ವರಯ್ಯ'ನವರ ಬಗೆಗೆ ಬರೆದ ಸುನೀತದಲ್ಲಿ ಕನ್ನಡದ ಗುಡಿಗೆ ಚಂದನದ ತೇರು, ಚಿನ್ನದ ಕಳಸದಂತಿದ್ದ ವಿಶ್ವೇಶ್ವರಯ್ಯನವರು ನವಭಾರತದ ಕನಸುಗಾರರಾಗಿ ಹಲವು ಯೋಜನೆಗಳ ಯೋಜಕರಾಗಿ ಮೇಧಾ ಕಿರೀಟವಾಗಿದ್ದರು. 'ಉಜ್ಜು ಜಂಗು ತಿಂದವರು ಭಾರತದ ವಜ್ರ ! " ಎಂದು ವಿಷಾದದಿಂದ ಉದ್ಗರಿಸಿದ್ದಾರೆ.

ಹೀಗೆ ಕಣವಿಯವರ ಸುನೀತಗಳಲ್ಲಿ ಕನ್ನಡ ಸಾಹಿತ್ಯ ಪ್ರಪಂಚದ ದಿಗ್ಗಜರ ವ್ಯಕ್ತಿತ್ವ, ಸಾಧನೆ ಸಿದ್ಧಿಗಳು ಅಪೂರ್ವವಾದ ರೀತಿಯಲ್ಲಿ ಮೂಡಿ ಬಂದಿವೆ. ಕಣವಿಯವರಿಗೆ ಕನ್ನಡದ ಸಾಹಿತ್ಯ ಪರಂಪರೆಯ ಬಗೆಗೆ ಅಪಾರ ಗೌರವಭಾವವಿದೆ. ಹೊಸಗನ್ನಡದ ಹಿರಿಯ ಚೇತನಗಳನ್ನು ಕುರಿತು ಅವರು ಸುನೀತ ರಚಿಸಿದಂತೆಯೇ ಹಳೆಯ ಸಾಹಿತ್ಯದ 'ಶ್ರೀಕವಿರತ್ನಂ', 'ಸರ್ವಜ್ಞ', 'ಮಾಯಾ ಕೋಲಾಹಲ', 'ಗೆಲುವೆನೆಂಬುವ ಭಾಷೆ', 'ಮುದ್ದಣ್ಣ ಮನೋರಮೆ' ಮೊದಲಾದವರ ಬಗೆಗೂ ತಮ್ಮ ಕವಿಕಾವ್ಯ ಶ್ರದ್ಧೆಯನ್ನು ಸುನೀತದ ಮೂಲಕ ಪ್ರಕಟಿಸಿದ್ದಾರೆ. ನವ್ಯ ಸಾಹಿತ್ಯದ ಅನೇಕ ಲೇಖಕರು ಪರಂಪರೆಯ ಸಾಹಿತ್ಯವನ್ನು ತಿರಸ್ಕಾರ ಮಾಡುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಸಾವಿರಾರು ವರ್ಷಗಳಿಂದ ಸಂಪನ್ನವಾದ ಕನ್ನಡ ಸಾಹಿತ್ಯ ಪರಂಪರೆಯ ಬಗೆಗೆ ದೃಢವಾದ ಆದರಾಭಿಮಾನ ಪ್ರಕಟಿಸುವದನ್ನು ಅವರ ಸುನೀತಗಳಲ್ಲಿ ನಾವು ಕಾಣುತ್ತೇವೆ. ನಿಜವಾದ ಶ್ರೇಷ್ಠ ಕವಿ ತನ್ನ ಕಾಲದ ಕವಿಕೃತಿಗಳನ್ನೂ ಎಲ್ಲ ಕಾಲ, ದೇಶ, ಭಾಷೆಯ ಸಾಹಿತ್ಯವನ್ನೂ ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಅವರಿಂದ ಸ್ಫೂರ್ತಿ ಪ್ರೇರಣೆ ಪ್ರಭಾವಕ್ಕೆ ಪಾತ್ರನಾಗುತ್ತಾನೆ. ಕಣವಿಯವರು ಷೆಲ್ಲಿ ಕವಿಯ ಕುರಿತು ಆರಂಭದಲ್ಲಿಯೇ ಸುನೀತ ಬರೆದಿದ್ದಾರೆ. ಇದರಿಂದ ಅವರ ಮನಸ್ಸು ಎಲ್ಲೆಲ್ಲಿ ಒಳ್ಳೆಯ ಅಂಶಗಳಿವೆಯೋ; ತಾವು ಕಂಡ ಕವಿಪರಂಪರೆಯ ವ್ಯಕ್ತಿ-ಶಕ್ತಿಗಳನ್ನು ಯಾವುದೇ ಸಾಹಿತ್ಯ ಪರಂಪರೆಗೆ ಸೇರಿದ ಸಂದರ್ಭದಲ್ಲೂ ಅವರನ್ನು ಕನ್ನಡದ ಸಮಗ್ರ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಗ್ರಹಿಸಿ ಮೌಲ್ಯ ನಿರ್ಧಾರ ಮಾಡುವ ದೃಷ್ಟಿಯಿಂದ ಸುನೀತದಲ್ಲಿ ಸೆರೆಹಿಡಿದಿರುವದು ಮುಖ್ಯವಾದ ಸಂಗತಿಯಾಗಿದೆ. ಕಣವಿಯವರು ಕೇವಲ ಕವಿಗಳ ಬಗೆಗೆ ಮಾತ್ರ ಸುನೀತ ರಚಿಸದೆ ಕಾದಂಬರಿಕಾರ, ಲೇಖಕಿ, ಸಂಶೋಧಕ, ಅನುಭಾವಿ ಮಹಾತ್ಮರ ಬಗೆಗೂ ಸುನೀತ ರಚಿಸಿದ್ದಾರೆ. ಕಣವಿಯವರು ಬರೆದ ಸುನೀತಗಳಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ದರ್ಶನ ನಮಗಾಗುತ್ತದೆ. ಕನ್ನಡದ ಸಾಂಸ್ಕೃತಿಕ ಸಂದರ್ಭವನ್ನು ದಾಖಲಿಸುವ ಈ ಸುನೀತಗಳು ಕಣವಿಯವರ ಸಹೃದಯತೆಯನ್ನು ಮೌಲ್ಯ ನಿರ್ಧಾರಕ ನಿಲುವುಗಳನ್ನೂ ಪ್ರಕಟಪಡಿಸುತ್ತವೆ.

ಕಣವಿಯವರು ಬರೆದ ನಿಸರ್ಗ ಸುನೀತಗಳು ವಿಪುಲವಾಗಿದ್ದು, ಅವು ಕವಿಯ ಪ್ರಕೃತಿ ಪ್ರೀತಿಯ ದ್ಯೋತಕಗಳಾಗಿವೆ. 'ಕಾವ್ಯಾಕ್ಷಿ'ಯಿಂದ 'ನೀವೇ ಪ್ರಮಾಣು' ಕವಿತಾಸಂಕಲನದವರೆಗೆ ನಿಸರ್ಗ- ಸುನೀತಗಳನ್ನು ನಿರಂತರವಾಗಿ ರಚಿಸಿರುವ ಕಣವಿಯವರಲ್ಲಿ ಪ್ರಕೃತಿಯ ಜೀವಚೈತನ್ಯದ ಬಗೆಗೆ ಲವಲವಿಕೆ ತುಂಬಿದೆ. 'ಕಾವ್ಯಾಕ್ಷಿ'ಯ ರಮ್ಯ ಸಂಪ್ರದಾಯದ ಸುನೀತಗಳಲ್ಲಿ ಇದನ್ನು ಕಾಣಬಹುದು. 'ಉಷಾ' ಸುನೀತದಲ್ಲಿ ಬರುವ ಬೆಳಗಿನ ವೈಭವದ ನುಡಿಚಿತ್ರ ಇದು :

ಚಿಗುರು ಚೆಂಗುಡಿಗಳಿಗೆ ಪನ್ನೀರ ಚಿಮುಕಿಸುತ
ಮೂಡಣದ ಹೊಸತಿಲಿಗೆ ಹೊಂಬಣ್ಣ ನೀರಿನಲಿ
ಸಾರಣೆಯ-ಕಾರಣೆಯಗೈದು, ಕುಂಕುಮದಿಂದ
ಬೊಟ್ಟಿಟ್ಟು ತಳತಳಿಸಿ ಸಂತಸ ಶುಭೋದಯದ
ಝಣಝಣೆರು ಚಕಮಕಿತ ಭೂನಭೋರಂಗದಲಿ
ಉನ್ನತ್ತರಾಗಿಣಿಯು, ಜಗದುದಯಕಾರಿಣಿಯು
ಚೆಲುವೆ, ಶುಭದರ್ಶಿನಿಯು – ಹೋ ! ನರ್ತಿಸಿದಳುಷೆಯು.

(ಉಷಾ – ಕಾವ್ಯಾಕ್ಷಿ)

ಜಗದುದಯಕಾರಿಣಿ ಚೆಲುವೆ ಶುಭದರ್ಶಿನಿ ಉಷೆಯು ನರ್ತಿಸುವ ಬಗೆಯನ್ನು ವರ್ಣಿಸುವಾಗ ಕಣವಿಯವರ ಕಾವ್ಯಭಾಷೆ ನಾಟ್ಯಗುಣವನ್ನು ಪಡೆಯುತ್ತದೆ. 'ನೆಲಮುಗಿಲು' ಸುನೀತದಲ್ಲಿ ಕಣವಿ ಅವರ ತತ್ವಜ್ಞಾನ ಹರಳುಗಟ್ಟಿದೆ. ಪ್ರಕೃತಿಯ ಸಂತಾನವಾದ ಮನುಷ್ಯನ ಸೀಮೆಗಳನ್ನು ಗುರುತಿಸುವ ದೃಷ್ಟಿ ಇಲ್ಲಿದೆ. ಈ ಸುನೀತದ ಕೊನೆಯ ಸಾಲುಗಳು ಮಹತ್ವಪೂರ್ಣವಾಗಿವೆ.

ತಾಯಮೊಗ ಸೂರ್ಯಪಾನವು ಹೊರಳೆ ಹೊಂಬೆಳಗು !
ಎಲ್ಲೆಡೆಗು ಏಕಕಾಲಕ್ಕೆ ಬಹುದೆ ಮಳೆ ? ಹರಗು
ಒಳಹೊರಗು ಸಿದ್ಧವಿರು, ಹೊಸನೀರು ನಿಬ್ಬೆರಗು
ಗುರುತ್ವಾಕರ್ಷಣ ಕುರುಹೆ-ಕೇಂದ್ರ ನೆಲದೊಡಲು
ಬಾನತೀಂದ್ರಿಯಸ್ಪರ್ಶ, -ತುಂಬಿ ತೇಲಿವೆ ಮುಗಿಲು.

(ನೆಲಮುಗಿಲು-ನೆಲಮುಗಿಲು)

ನಿಸರ್ಗದಲ್ಲಿ ನಡೆವ ಋತುಮಾನದ ಲೀಲೆಯ ಸೊಗಸು ಸೌಂದರ್ಯಗಳು ಸುನೀತಗಳಲ್ಲಿ ವಿಶಿಷ್ಟವಾಗಿ ಮೂಡಿವೆ. ಚೈತ್ರ, ವೈಶಾಖಗಳನ್ನು ಹೊರತುಪಡಿಸಿ ವರ್ಷದ ಎಲ್ಲ ಮಾಸಗಳಲ್ಲಿ ಪ್ರಕೃತಿಯ ವಿವಿಧ ಮುಖಗಳನ್ನು ಕಣವಿಯವರು ಸುನೀತದಲ್ಲಿ ಪ್ರಕಟಿಸಿರುವದು ಕನ್ನಡ ಕಾವ್ಯ ಪರಂಪರೆಯ ಸಂದರ್ಭದಲ್ಲೂ ಮಹತ್ವದ ಅಂಶ ಎನ್ನಬಹುದು. ಕಾಳಿದಾಸನ 'ಋತುಸಂಹಾರ'ದಂತೆ ಕವಿ ಕಣವಿ ನಿಸರ್ಗ ದರ್ಶನದಲ್ಲಿ ಜೀವನ ಪ್ರೀತಿಯನ್ನು ತುಂಬುವದು ನಿಜಕ್ಕೂ ಆಶ್ಚರ್ಯಕರವಾದುದು. ಕಾಳಿದಾಸನ ಮೇಘ ಸಂದೇಶದಲ್ಲೂ ಆಷಾಢ ಮಾಸದಲ್ಲಿಯೇ (ಆಷಾಢಸ್ಯ ಪ್ರಥಮ ದಿವಸೆ ಮೇಘ ಮಾಶ್ಲಿಷ್ಟ ಸಾನುಃ) ಯಕ್ಷನ ಮೂಲಕ ಮೋಡವನ್ನು ಯಾಚಿಸುವದು ನಡೆಯುತ್ತದೆ. ಹಾಗೆಯೇ ಕಣವಿಯವರ ಮನಸಿನಾಗಸಕ್ಕೆ ಆಷಾಢ ಆಕ್ರಮಿಸಿ ಬೆಳಕನು ಬದಿಗೆ ಸರಿಸಿ ಈಸತೊಡಗುತ್ತಾನೆ. ಕಣ್ಣುಮುಚ್ಚಾಲೆ ಆಡುವ ಬೆಳಕು ಕತ್ತಲು, ಆಗಲೆ ಹೊಲಗದ್ದೆಗಳಲ್ಲಿ ಬಿತ್ತಿಗೆ ಬೆಳೆಸಲು, ಸುಯ್ಯುವ ಗಾಳಿ ಇತ್ಯಾದಿ ಚಿತ್ರಿಸುತ್ತ ಸುನೀತ ಮುಕ್ತಾಯವಾಗುವದು ಹೀಗೆ :

ನೆಲದ ಮಣ್ಣೆದ್ದು ಗುಳ್ಳವ್ವನಾಗಿ ಗೋಪುರ
ಕಟ್ಟೆ : ಗುಲಗಂಜಿ; ಹಳ್ಳಿ ಹೆಂಗಳ ಭಾವದಲೆ
ಬಾಲ್ಯವನು ತುಂಬಿ ಪಲ್ಲವಿ 'ಸುವ್ವಿಸುವ್ವಾಲೆ',
ಒಳಗಿವಿಗೆ ತಾಗಿ, ಏರಿ ಕನಸಿನಂತಃಪುರ.
'ಆಷಾಢ ಓ ಆಷಾಢ ನೀ ಆಡಿಸ್ಯಾಡಬ್ಯಾಡ
ಬೀಸಿ ಬೀಸಿ ಬಡಿ, ಬರೇ ತಿದ್ದಿ ತೀಡಬೇಡ'

(ಆಷಾಢ – ಕಾರ್ತೀಕದ ಮೋಡ)

ಇಂಥಲ್ಲಿ ಗ್ರಾಮೀಣ ಸಂಸ್ಕೃತಿಯ ವಿವರಗಳು ಸಜೀವವಾಗಿ ಕಣ್ಣ ಮುಂದೆ ನಿಲ್ಲುತ್ತವೆ. ಹಸಿರು ತುಂಬಿ ನೆಲದ ಕೊರತೆಯನೆಲ್ಲಾ ನೀಗಿಸಿ ಬರುವ 'ಶ್ರಾವಣ'ದ ವೈಭವ ಅಪರೂಪವಾದದ್ದು.

ಶ್ರಾವಣವು ಸೂರೆಗೊಳಿಸಿದ ಹೂವು ನಸುಕಿನಲಿ
ಕಣ್ಣು ತೆರೆದು, ಸಂಜೆಯವರೆಗು ಮಾಸದಬಣ್ಣ.
ದಿನದಿನವು ಪರ್ವ, ಆಡಿ ಬಿಟ್ಟಿರುವ ಜೋಕಾಲಿ.
ಮುರುಕು ಜೋಪಡಿ ಹರಕು ಚಿಂದಿ ಮಂದಿಯ ಬದುಕು
ಕಂಡಕಂಡಲ್ಲಿ ಕೈಯೊಡ್ಡಿ ಕೇಳುವ ಪ್ರಶ್ನೆ-
ಪುಸ್ತಕವ ಬಿಟ್ಟು ವಾಸ್ತವದಿ ಉತ್ತರ ಹುಡುಕು.
ವ್ರತ ನಿಯಮ, ಇಷ್ಟ-ಕುಲ-ಗ್ರಾಮದೈವತ ಪೂಜೆ -
ಮುಗಿಯಿತೆ? ಈ ಸಮಷ್ಟಿಗೆ ಸೃಷ್ಟಿ ನೀಡಿರುವ ಕೊಡುಗೆ?

(ಶ್ರಾವಣ - ಕಾರ್ತೀಕದ ಮೋಡ)

ಕವಿ ವಾಸ್ತವದ ಬದುಕಿಗೆ ಸ್ಪಂದಿಸುವ ರೀತಿ ನಿಜಕ್ಕೂ ಇದರ ಸಾಮಾಜಿಕ ಮುಖವನ್ನು ಪ್ರಕಟಿಸುತ್ತದೆ. ಪ್ರಕೃತಿಯ ವರ್ಣನೆಯಲ್ಲೂ ಮುರುಕು ಜೋಪಡಿಯಲ್ಲಿ ಹರಕು ಚಿಂದಿ ಉಟ್ಟು ಬದುಕು ನಡೆಸುವ ಸ್ಥಿತಿಯನ್ನು ಕವಿ ಮರೆತಿಲ್ಲ.

ಸುತ್ತಲೂ ಜಾರಿಕೆ; ಗಟ್ಟಿ ಹೆಜ್ಜೆಯನಿಟ್ಟು ತೂಕಹಿಡಿದು
ನಡೆದವರೆಷ್ಟು ? ಆಗೀಗ ಮುಖತೋರಿ ಸೂರ್ಯ-
ಭಾದ್ರಪದ ಬಾನೆಲ್ಲ ಸ್ವಚ್ಛಗೊಳಿಸುವ ಕಾರ್ಯ

(ಭಾದ್ರಪದ - ಕಾರ್ತೀಕದ ಮೋಡ)

ಸೇವಂತಿಗೆ, ಗೊರಟಗೆ, ಕೇದಗೆ ಹಲವು ಬಣ್ಣದ ಹೂಗಳು ನಳನಳಿಸುವ ಭಾದ್ರಪದ ಮಾಸದಲ್ಲಿ ಹುಲ್ಲಿಗೂ ಉಲ್ಲಾಸ ತುಂಬಿರುತ್ತದೆ. ನೂರು ದುರಂತಗಳ ನೋವಿನ ನಡುವೆ ಮಂಗಲ ಮೂರ್ತಿ (ಗಣಪತಿ) ಕಂಗೊಳಿಸಿ ಜನಮನದ ಆವಿಷ್ಕಾರ ಆಗುವದನ್ನು ಕವಿ ಕಾಣಿಸಿದ್ದಾರೆ.

ಆಶ್ವಿನಕೆ ಆಸನವೆ? ತೊಳೆದ ನೀಲಿಯ ಬಾನು
ಲಕಲಕ ಹೊಳೆವ ಬಿಸಿಲು, ಸಂಜೆ ಹೊತ್ತಿಗೆ ಸುರಿದು
ಸರಿವ ಮಳೆ : ಗದ್ದೆಯಲಿ ಮುದ್ದುಗರೆಯುವ ನೆಲ್ಲು
ಹೊಲದುದ್ದ ಜೋಳದ ನಿಲುವು, ಹಕ್ಕಿ-ತೆನೆ-ತೂಗು
ಕಾಡು-ನಾಡು-ಹೂವು ದಂಡು ದಿಗ್ವಿಜಯ ಪಯಣ.

(ಆಶ್ವಿನ - ಕಾರ್ತೀಕದ ಮೋಡ)

ಆಶ್ವಿನ ಮಾಸದಲ್ಲಿ ಒಂಬತ್ತು ಇರುಳು ಉತ್ಸವ, ದೇವತೆಗೆ ನಂದಾದೀಪ, ಆಯುಧಪೂಜೆ ಜರುಗುವದು, ಅಣ್ವಸ್ತ್ರ ಪೈಪೋಟಿ, ಸದ್ಯದ ವರ್ತಮಾನ ಎಂದು ಕವಿ ಜಾಗತಿಕ ಬದುಕಿನ ಬಗೆಗೂ ಬೆಳಕು ಚೆಲ್ಲುತ್ತಾರೆ. ಎಲ್ಲೆಡೆಗೂ ಸೋಲನೊಪ್ಪದ ನರಕಾಸುರರು ತುಂಬಿರುವಾಗ ಯಾರಿಗಾರತಿ ಬೆಳಗುವವರು ? ಎಂಬ ಪ್ರಶ್ನೆ ಮಾರ್ಮಿಕವಾಗಿದೆ.

ಅರ್ಥದಾರಿಯ ಸಮೆದ ಶರದೃತು ಹೇಮಂತ-
ನೊಡ ಸಲ್ಲಾಪ, ಸ್ವಾತೀ ಹನಿಯ ಜಾತಿ ಮುತ್ತು
ತೆನೆ-ಧಾನ್ಯ, ಎಲೆದೋಟ ಫಲಭಾರ ಸಂಪತ್ತು.
ಜೇನ್ನೊಣದ 'ಗುಂ'. ಜೀರುಂಡೆ ನಾಡಿನಾದ್ಯಂತ,

ಬಲಿಚಕ್ರವರ್ತಿ ಕೀರ್ತಿ : ದೊರೆಯದೆ ಪ್ರತಿಯೊಬ್ಬ
ನಿಗೂ ಮೂರು ಪಾದದ ಭೂಮಿ, ಮೇಲೊಂದು ಸೂರು ?

(ಕಾರ್ತೀಕ – ಕಾರ್ತೀಕದ ಮೋಡ)

ನೆಲದ ಮಕ್ಕಳಿಗೆ ಮೂರು ಪಾದದ ಭೂಮಿ ಮೇಲೊಂದು ಸೂರು ಇಲ್ಲದಿದ್ದರೂ ಹಬ್ಬದ ವೈಭವ, ದೀಪಗಳ ಸಾಲು, ಗಾಳಿಯಲಿ ಕನಸು ತೇಲುವದು, ಕಾರ್ತೀಕ ಮಾಸದ ಪೌರಾಣಿಕ ಪ್ರತಿಮೆಗಳು ಈ ಸಂದರ್ಭದಲ್ಲಿ ಅರ್ಥವಂತಿಕೆಯನ್ನು ಪಡೆಯುತ್ತವೆ. ಮಾರ್ಗಶಿರ ಮಾಸದ ಸುನೀತದಲ್ಲಿ ಕವಿ 'ಮನುಷ್ಯನ ಜೊತೆಗೆ ಋತುಗಳೂ ಗತಿ ಬದಲಿಸಿವೆ' ಎಂದು ಹೇಳಿರುವದು ತುಂಬ ಧ್ವನಿಪೂರ್ಣವಾಗಿವೆ.

ಹೊಲದೂಟ, ಬಯಲಾಟ, ನಾಗರಿಕನಿಗೆ ಶುಂಠಿ.
ಮೈಲಾರ ಗೊಗ್ಗಯ್ಯ ಉಗ್ಗಡಿಸು 'ವೇಳ್ಕೋಟಿ'
ದೇವರ ಗುಡ್ಡ ಸುತ್ತಿ ಬೆಳೆದರವತ್ತು ಕೋಟಿ!
'ಮಾರ್ಗಶಿರ ಮಾಸವೆ ತಾನು' ಶ್ರೀಕೃಷ್ಣನೆಂದ.
ಪಥಿಕನಿಗೆ ಮಾರ್ಗಾಯಾಸ ನೀರಡಿಸಿ ನಿಂದ.

(ಮಾರ್ಗಶಿರ – ಕಾರ್ತೀಕದ ಮೋಡ)

ಪುಷ್ಯ ಮಾಸದಲ್ಲಿ ಚಳಿ ತುಂಬಿದಾಗ ಬೆಳೆಗಳನ್ನು ಮನೆ ತುಂಬಿಸುವ ಕಾರ್ಯದಲ್ಲಿ ರೈತರು ತೊಡಗಿದಾಗ ಬನದ ಹುಣ್ಣಿವೆಗೆ ಹಣ್ಣೆಲೆ ಉದುರುವದು ಇತ್ಯಾದಿ ಸಂಗತಿಗಳು 'ಬಯಕೆ–ಬದಲಾವಣೆ' ತರುವದನ್ನು 'ಪುಷ್ಯ' ಚಿತ್ರಿಸುತ್ತದೆ.

ಉತ್ತರಾಯಣ ಮಹಾಪರ್ವ, ಉತ್ತರವೆಲ್ಲ
ಹಿಮ ಕೊಡವಿ ಏಳುವದೇ ? ರಣ ಹಲಗೆ ಮೆರವಣಿಗೆ
ಭ್ರಷ್ಟರ ಬೇಟೆ, ನೈವೇದ್ಯ ಬನಶಂಕರಿಗೆ.
ಮುಡಿಪು ಹರಕೆ ಸಲ್ಲಿಸಿದಷ್ಟೆ ಮುಗಿದಂತಲ್ಲ
ಅವರಾತ್ರಿ ಅಮಾವಾಸ್ಯೆಯಲೀಸಬೇಕಿದ್ದು
ಜಯಿಸಬೇಕು : ತಂಬೂರಿ ಶ್ರುತಿಯ ಹಿಡಿದು.

(ಪುಷ್ಯ – ಕಾರ್ತೀಕದ ಮೋಡ)

ಚಳಿಗಾಲದ ವಾತಾವರಣದಲ್ಲಿ ಬದುಕನ್ನು ಕಂಡರಿಸಿದ ಪುಷ್ಯ ಮಾಸದ ನಂತರ ಕಣವಿಯವರು ಮಾಘದಲ್ಲಿ ಮಾಘಸ್ನಾನ; ರಥಸಪ್ತಮಿಯ ಸೂರ್ಯ, ಮಾಮರದ ಹೂಗೊನೆಗಳ ವೈಭವಕ್ಕೆ ಹೊರಳಿ,

ಎಲ್ಲಮ್ಮ ನಿನ್ನೋಲಗಕುಘೋ ಅದೋ ಪ್ರತಿಧ್ವನಿ
ಉಪವಾಸ ಜಾಗರಣೆ, ಸ್ಮರಣೆ ಶಿವರಾತ್ರಿಯಲಿ
ಮಾತ್ರವೇ ? ಸೂತ್ರವಾಗಿದೆ ಕೋಟಿ ಸಂಖ್ಯೆಯಲಿ
ದಾಟಿ ಬಂದಾಗ ದಡಕೆ ಜನಕೆ ನಿಜ ಪಾರಣೆ.

(ಮಾಘ – ಕಾರ್ತೀಕದ ಮೋಡ)

ಪ್ರತಿಯೊಂದು ಮಾಸದ ಚಿತ್ರಣದಲ್ಲಿ ಕಣವಿಯವರು ಕನ್ನಡ ನಾಡಿನ ಸಾಂಸ್ಕೃತಿಕ ಹಬ್ಬ ಉತ್ಸವಗಳನ್ನು ದಾಖಲಿಸಿ ಅವುಗಳ ಮಹತ್ವ ಮತ್ತು ಆಚರಣೆಯನ್ನು ಸಮಕಾಲೀನ

ಸಂದರ್ಭದ ಸ್ಮರಣೆಗೆ ತಂದುಕೊಡುತ್ತಾರೆ. ವರ್ಷದ ಕೊನೆಯ ಮಾಸ 'ಫಾಲ್ಗುಣ' ಸುನೀತದ ಸಾಲುಗಳಿವು :

ದಿನಕ್ಕೊಂದು ಚಂದ ಬೆಳೆದ ಫಾಲ್ಗುಣ ಚಂದ್ರ,
ಪಡುವಣದ ಸುಳಿಗಾಳಿ, ಮುಗಿದ ಸುಗ್ಗಿಯ ಹಿಗ್ಗು,
ಕೋಗಿಲೆ ಕಹಳೆ; ಬೇವಿನ ಹೂವ ಕುಸುರು ಸೊಪಡು
ದುಂಡು ಮಲ್ಲಿಗೆ ಮದವೆ ? ಎದೆ ಚಿಗುರಿದ ಹಂದರ.
ಕಾಮನ ಹಬ್ಬಕ್ಕೆ ಆಧಾರ ಬೇಕೆ, ಹೇಳಿ

(ಫಾಲ್ಗುಣ – ಕಾರ್ತೀಕದ ಮೋಡ)

ದುಂದುಮೆ ಪದಗಳನ್ನು ಹಾಡುವ, ಹೋಳಿ ಹಬ್ಬದ ಬಣ್ಣದೋಕುಳಿ, ಹಲಗೆ ಬಡಿತ, ಹೆಜ್ಜೆ ಮೇಳ ಮೊದಲಾದ ಜಾನಪದ ಜೀವನದ ರಸಚಿತ್ರಗಳು ಈ ಸುನೀತದಲ್ಲಿ ತಕ್ಕ ವಾತಾವರಣವನ್ನು ನಿರ್ಮಿಸುತ್ತವೆ. ಹೀಗೆ ವರ್ಷದ ವಿವಿಧ ಮಾಸಗಳಲ್ಲಿ ಕಾಣುವ ಪ್ರಕೃತಿಯ ವರ್ಣನೆ ಜೊತೆಗೆ ಕನ್ನಡ ಜನಪದದ ಜೀವನ ವೈವಿಧ್ಯ, ಸಾಮಾಜಿಕ ಸ್ಪಂದನವನ್ನೂ ಕಣವಿಯವರು ಈ ಸುನೀತಗಳಲ್ಲಿ ಅನಾವರಣಗೊಳಿಸಿದ್ದಾರೆ.

ನಿಸರ್ಗದ ದೃಶ್ಯ ಪ್ರಪಂಚದಲ್ಲಿ ಕಣವಿ ಅವರನ್ನು ಸದಾ ಪುಲಕಗೊಳಿಸಿದ್ದು ಹೂವುಗಳ ಸೌಂದರ್ಯ ರಾಶಿ.

ಹಳದಿ ಹೂ – ಚೆಂಡು ಲೋಕಕ್ಕೆ ತಾನೇ ಗಂಡು
ಎನುವಂತೆ ಬಡವರಂಗಳದಲ್ಲು ಸಿಂಗಾರ.
ಹೊಟ್ಟೆಗೆ ಹಿಟ್ಟಿಲ್ಲವಾದರೂ ಜುಟ್ಟಿಗೆ ಹೂವು–
ಕೊಟ್ಟು ಮರೆತಿದೆ ಸೃಷ್ಟಿ : ಪ್ರೀತಿಗೆ ನೋವು ಕಾವು

(ಹಳದಿ ಹೂ – ಕಾರ್ತೀಕದ ಮೋಡ)

ಸಾಲಾಗಿ ನವಿಲು ಗರಿಗೆದರಿ ನರ್ತಿಸಿದಂತೆ
ಮುಂಜಾವದಲಿ ಬೇಲಿತುಂಬ ನೀಲಿಯ ಹೂವು
ಜೀವನೋತ್ಸಾಹದಲಿ ಎದೆದುಂಬಿಸುವ ರೂಹು !
ವಿಮಲ ಕೋಮಲ ಕಾಂತಿಯೊಗುಮಿಗುವ ಚೈತ್ಯಾಕ್ಷಿ
ಅದೋ ಅಲ್ಲಿ, ಇದೋ ಇಲ್ಲಿ ಪ್ರತ್ಯಕ್ಷ ಸುಮಸಾಕ್ಷಿ !

(ಬೇಲಿಯ ಮೇಲಿನ ನೀಲಿಯ – ದೀಪಧಾರಿ)

ಸುತ್ತು ಬೇಲಿಯ ಮೇಲೆ ಮತ್ತೆ ನೀಲಿಯ ಹೂವು !
ಇಡಿಯ ಮುಂಜಾವನ್ನೆ ಹಿಡಿದು, ಮಿದುವಾಗಿ ಹೂ–
ಗೆನ್ನೆಗೊತ್ತಿದ ಮುತ್ತು. ಆಕಾಶ ನೆಲದಲ್ಲಿ
ಕಂಡ ನೀಲಿಯ ಕನಸು ನನಸಾಗಿ, ಉತ್ತರೆಯ
ಮಳೆಗೆ ಹೂವಿನ ಹುತ್ತ : ವಿದ್ಯುತ್ ಕಂಬ ಸುತ್ತಿ
ತಂತಿಗೆ ಹಬ್ಬಿ, ಹಚ್ಚಿ ನೀಲಿ ಬಣ್ಣದ ಬಲ್ಬು !
ಸೂರ್ಯ ಮೇಲೇರಿದರೆ ಮುದುಡಿ ಅಡಗುವ ನೀಲ
ಬೆಡಗಿಯರು, ಅಂಗೈಯಗಲ ಎಲೆ ಎಲೆಯಮರೆಗೆ.

(ಮತ್ತೆ ನೀಲಿಯ ಹೂವು ! – ಶಿಶಿರದಲ್ಲಿ ಬಂದ ಸ್ನೇಹಿತ)

ಕಣವಿ ಅವರ ನಿಸರ್ಗ ಕುರಿತ ಸುನೀತಗಳಲ್ಲಿ ವಸ್ತು ವೈವಿಧ್ಯವಿದೆ. ಕತ್ತಲೆ – ಬೆಳಕು,

ರಾತ್ರಿ, ಕಾರ್ತೀಕದ ಮೋಡ, ಹಕ್ಕಿಗಳು, ಮೊದಲಾದ ಸುನೀತಗಳಲ್ಲಿ ಅವರ ತೆರೆದ ಮನದ ಅವಲೋಕನವಿದೆ. ಪಕ್ಷಿಲೋಕದ ಬಗೆಗೆ ಪ್ರೀತಿ ತುಂಬಿದ್ದು ಪರಿಸರ ಪ್ರೀತಿಯ ಮಿಡಿತ ಕಾಣಿಸುವ ರೋಮ್ಯಾಂಟಿಕ್ ಮನೋಧರ್ಮ ಕವಿ ಕಣವಿ ಅವರ ವ್ಯಕ್ತಿತ್ವದಲ್ಲಿ ಕಾಣುವದಾದರೂ ಅಲ್ಲಿ ನೆಲದ ಬದುಕನ್ನು ಬಿಟ್ಟು ಓಡುವ ಪಲಾಯನವಿಲ್ಲ. ವಾಸ್ತವ ಬದುಕನ್ನು ಅವಲೋಕಿಸುತ್ತ ನಿಸರ್ಗದ ಚೆಲುವು ನೀಡುವ ಅಮಿತಾನಂದಗಳನ್ನು ಅನುಭವಿಸುವ ಲವಲವಿಕೆ ಕಣವಿಯವರಲ್ಲಿರುವದನ್ನು ನಾವು ಕಾಣುತ್ತೇವೆ. ಜೀವಪರ ದೃಷ್ಟಿ ಅವರದಾಗಿದೆ.

ಕಣವಿಯವರು ಕೃತಿ–ಆಕೃತಿಗಳನ್ನು ಕುರಿತು ಅನೇಕ ಸುನೀತಗಳನ್ನು ರಚಿಸಿದ್ದಾರೆ. ಕರ್ನಾಟಕದ ಮುಸ್ಲಿಂ ಶಿಲ್ಪದ ಅದ್ಭುತಗಳಲ್ಲೊಂದಾದ ವಿಜಯಪುರದ 'ಗೋಳಗುಮ್ಮಟ'ದ ಸ್ಮಾರಕವನ್ನು ನೋಡಿ ಸುನೀತದ ಮೂಲಕ ವಿಸ್ಮಯವನ್ನು ವ್ಯಕ್ತಪಡಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾಸೌಧದ ಭವ್ಯ ಕಟ್ಟಡ ನೋಡಿ 'ಸರ್ವಭಾಷಾ ಸರಸ್ವತಿಯೆ ಆವಿರ್ಭವಿಸು' ಎಂದು ಪ್ರಾರ್ಥಿಸಿದ್ದಾರೆ. 'ವಿದ್ಯಾಸೌಧದ ಗೋಪುರದಿಂದ ಮತ್ತೊಂದು ಸುನೀತದಲ್ಲಿ **'ಗೋಪುರದ ತುತ್ತತುದಿ ಗಡಿಯಾರ ನುಡಿಯುತ್ತಿದೆ ; ಕಾಲೋಹಿ ನಿರವಧಿಃ'** ಎಂಬ ಜಿಜ್ಞಾಸೆಯನ್ನು ಪ್ರಕಟಿಸಿದ್ದಾರೆ. ತ್ಯಾಗಭೋಗದ ಸಮನ್ವಯದ ಸಾಕಾರಮೂರ್ತಿ 'ಗೊಮ್ಮಟೇಶ'ನ ಭಗ್ನ ಮೂರ್ತಿ ಕಂಡೆ ಎಂದು ಸುನೀತದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಕಣವಿಯವರು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಓದಿ ತಮಗಾದ ಸಂತಸಾನುಭೂತಿಯನ್ನು ಸುನೀತಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಆಧುನಿಕ ಕನ್ನಡದ ಮೊದಲ ಮಹಾಕಾವ್ಯ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನವನೋದಿ' ಬರೆದ ಸುನೀತ ಸಾಲುಗಳು ಹೀಗಿವೆ :

ಮಲೆನಾಡ ನಿರ್ಝರಿಣಿ ತಳಿರ್ದೊಂಗಲಲಿ
ನಲಿವ ಮಂಗಲ ಪಕ್ಷಿ ನಿಚ್ಚ ಹಸುರಿನ ಒಸಗೆ
ಹಾಡೆ ಈ ನೆಲದ ಮಣ್ಣಿಂದೊಗೆದ ಹಾಲ್ದೆನೆಗೆ

ಸೂರ್ಯ ಚಂದಿರ ತಾರೆ ಮೂಡಿ ಮುಳುಗುವ ನೀಲಿ
ತೇಲಿಸಿತು ನಿನ್ನೆದೆಗೆ ತನ್ನಮೃತ ಲೀಲೆಯಂ !

ಭವ್ಯತೆಯ ಕನಸು ಗರಿಗೆದರಿ ಮರದುದಿಯಿಂದ
ಬಾನ ಮುಡಿಗೇರಿ ಬೆಳಕಿನ ಗರ್ಭಗುಡಿಯಿಂದ

ಮಿಡಿಯಿತೊಂದದ್ಭುತೋಂಕಾರ ವೀಣಾರವಂ !
ಗುಣಕೆ ಮತ್ಸರಮುಂಟೆ ? ದೇಗುಲದ ಗಂಟೆಯುಲಿ

ಕಂಬ ಕಂಬವ ತುಂಬಿ ಮೈದುಂಬಿ ನಿಂತ ಬಗೆ
ನಿಂತೆ ; ನಿಂತೆನೆ ? ನಾದ ತಂತುವಾದೆನು ಕೊನೆಗೆ
ರಸಋಷಿಯ ಪದ್ಮಶಾಂತಿಯ ಪರ್ಣಶಾಲೆಯಲಿ

ಯುಗಯುಗಕು ಸಾಗಿರುವ ಜಗದ ರಾಮಾಯಣಂ
ನೂರು ಸೂರ್ಯೋದಯದ ಬಿಂಬ ಕವಿದರ್ಶನಂ !

– (ಶ್ರೀ ರಾಮಾಯಣ ದರ್ಶನವನೋದಿ – ಸುನೀತ ಸಂಪದ)

ಮಹಾಕವಿ ಕುವೆಂಪು ಜಗದ್ಭವ್ಯ ರಾಮಾಯಣ ದರ್ಶನ ಮಹಾಕಾವ್ಯವನ್ನು ರಚಿಸಿದ್ದು, ಅದರ ನಾದಕ್ಕೆ ತಂತುವಾಗಿ ರಸಋಷಿಯ ಪದ್ಮಶಾಂತಿಯ ಪರ್ಣಶಾಲೆಯಲ್ಲಿ ಕವಿ ಬೆರಗಾಗಿದ್ದಾರೆ. ಯುಗದ ಕವಿ ಬರೆದ 'ಯುಗಯುಗಕು ಸಾಗಿರುವ ಜಗದ ರಾಮಾಯಣಂ ನೂರು ಸೂರ್ಯೋದಯದ ಬಿಂಬ ಕವಿ ದರ್ಶನಂ' ಕಣವಿ ಉದ್ಗರಿಸಿದ್ದು ಇಲ್ಲಿ ಸಾರ್ಥಕವಾಗಿದೆ.

ಬಿಸ್ಮಿಲ್ಲಾರ ಶಹನಾಯಿ ವಾದನ ಕೇಳಿ : ಇದು ಕಣವಿಯವರ ಅದ್ಭುತವಾದ ಸುನೀತ

ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ ; ನೂರು ಬಗೆ
ಭಾವ ಕುಸುಮವನೆತ್ತಿ ಗಾಳಿ ಸುಳಿಯಲಿ ಹೀಗೆ
ನರುಗಂಪ ತೇಲಿಸುವ : ಹಂಬಲದ ಸವಿದನಿಗೆ
ತುಂಬಿ ಆಲಿಸುವ, ಮನಸಿನ ಮಧ್ಯಬಿಂದುವಿಗೆ
ಕನಸು ಕಾಮನಬಿಲ್ಲ ವರ್ತುಳವ ರಚಿಸಿ, ನೆಲ–
ಮುಗಿಲಿನೊಂದು ಸಲ ಬಂಧಿಸಿ ಜೀವ ಸ್ಪಂದಿಸುವ,
ಮೋಡದೊಡಲಿಗೆ ಮಿಂಚು ಸಂಚರಿಸಿ ಹನಿಗರೆವ,

ರಾಗ ಲಹರಿಯ ತೊರೆಗಳೋಡಿ ತಬ್ಬಿವೆ ಕಡಲ,
ಕೋಟಿ ಮೈಲಂತರದ ನೀಹಾರಿಕೆಯ ನಾಡಿ

ಮಿಡಿತ ತಟ್ಟಿತು ಕಿವಿಗೆ : ನಾದದ ಕೂದಲೆಳೆಯಲಿ
ಪೃಥ್ವಿ ತೂಗಿರೆ, ಸೂರ್ಯಚಂದ್ರರಿಗು ಜೋಕಾಲಿ,
ಪಾತಾಳಗವಿಗೆ ತೆರೆದವು ಬೆಳಕಿಂಡಿ !

ಹೊಕ್ಕಳ ಹುರಿಯ ಕತ್ತರಿಸಿ ಮುಗಿಯೆ ಶಹನಾಯಿ
ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ

ಕಣವಿಯವರ ಪ್ರಸಿದ್ಧವಾದ ಈ ಸುನೀತ ಶಹನಾಯಿ ವಾದನ ಕೇಳಿದ್ದನ್ನೂ, ಶಹನಾಯಿವಾದನ ಕೇಳಿ ನಂತರ ಆಗುವ ಪರಿಣಾಮಗಳನ್ನು ಹೇಳುತ್ತದೆ. ಈ ಸುನೀತ ಶಿಲ್ಪದಲ್ಲಿ ಕಣವಿಯವರ ಅನನ್ಯ ಪ್ರತಿಭೆ ಕಾರ್ಯ ಮಾಡಿದೆ. ಶಹನಾಯಿ ಮೂಲಕ ನಾವು ನಾದಲೋಕಕ್ಕೆ ಪಯಣಿಸುತ್ತೇವೆ. ಇದರಲ್ಲಿ ಬರುವ ಹಸಿರು–ಕುಸುಮ–ಮೋಡ, ಮಿಂಚು, ಮಳೆ ಆಕಾಶಕ್ಕೆ ಸಂಬಂಧಿಸಿದ ಪ್ರತಿಮೆಗಳಾಗಿವೆ. ರಾಗಲಹರಿ ತೊರೆಗಳಾಗಿ ಹರಿದು ಕಡಲು ಸೇರುವಂತೆ ನೂರು 'ಬೆಳಕಿಂಡಿ'ಯನ್ನು ತೆರೆಸುತ್ತಾರೆ. ಶಹನಾಯಿಯ ನಾದ ಶ್ರೋತೃವನ್ನು ಆನಂದಗೊಳಿಸುವ ಪರಿಯನ್ನು ಹೇಳುವ ಸುನೀತದ ಕೊನೆಯ ಎರಡು ಸಾಲುಗಳು ಅತ್ಯಂತ ಧ್ವನಿಪೂರ್ಣವಾಗಿವೆ. 'ಹೊಕ್ಕಳ ಹುರಿಯ ಕತ್ತರಿಸಿ ಮುಗಿಯೆ ಶಹನಾಯಿ' ಎನ್ನುತ್ತ ಅದರ ಅಂತಿಮ ಪರಿಣಾಮ 'ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ' ಒಂದು ಸೃಷ್ಟಿಯಿಂದ ಮತ್ತೊಂದು ಸೃಷ್ಟಿಲೋಕವನ್ನು ತೆರೆಯುತ್ತದೆ. ಕವಿ ಸಹೃದಯರ ಕಾರಯಿತ್ರೀ–ಭಾವಯಿತ್ರೀ ಪ್ರತಿಭೆಯ ಸ್ವರೂಪವನ್ನು ಈ ಸುನೀತ ಪ್ರಕಟಿಸುತ್ತದೆ.

ಕಣವಿಯವರ ಸುನೀತಗಳಲ್ಲಿ 'ನಿವೇದನೆ'ಯ ಸುನೀತಗಳೂ ಸೇರಿವೆ. ಭಾರತ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ೧೯೪೬ ರಲ್ಲಿ, 'ಹೋರು ಬೀಳ್ವನ್ನೆಗಂ' ಎಂಬ

ಸ್ಫೂರ್ತಿದಾಯಕ ಸುನೀತವನ್ನು ಕಣವಿಯವರು ಬರೆದಿದ್ದಾರೆ. ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಕಣವಿಯವರು 'ಅಖಂಡ ಕರ್ನಾಟಕ' ಸುನೀತ ಬರೆದು 'ಎಂದು ಸಿರಿಗನ್ನಡದ ನಾಡಿನೇಕೀಕರಣ' ಆಗುವದೋ 'ಅಂದು ನವಭಾರತದ ಬಾಗಿಲಿಗೆ ತೋರಣ' ಎಂದು ಭಾವಪೂರ್ಣವಾಗಿ ಹಾಡಿದ್ದಾರೆ. ಕನ್ನಡ ನಾಡಿನ ಏಕೀಕರಣವನ್ನು ಸಮರ್ಥಿಸಿ ಜನರನ್ನು ಜಾಗೃತಗೊಳಿಸಿದರು.

ಕವಿ ಬೇಂದ್ರೆಯವರು 'ಮೂವತ್ತುಮೂರು ಕೋಟಿ' ಕವಿತೆಯನ್ನು ಬರೆದಂತೆ ಕವಿ ಕಣವಿಯವರು ಭಾರತ ಸ್ವತಂತ್ರವಾದಾಗ 'ನಾವು ನಾಲ್ವತ್ತು ಕೋಟಿ' ಎಂಬ ಸುನೀತ ಬರೆದಿದು ಭಾರತದಲ್ಲಿರುವ ಜೀವಿಗಳ ಕುಲವೊಂದೆ, 'ದ್ವೇಷದುರಿ ಸಾಕು' ಎಂಬ ಭಾವವನ್ನು ಕವಿ ವ್ಯಕ್ತಪಡಿಸಿದ್ದಾರೆ.

ಕಣವಿಯವರು ಆಧುನಿಕ ಬದುಕಿನ ಜೊತೆ ನಡೆಸಿದ ನಿರಂತರ 'ಜಿಜ್ಞಾಸೆ' ಹಲವು ಸುನೀತಗಳಲ್ಲಿ ಅಭಿವ್ಯಕ್ತವಾಗಿದೆ. ಭೂತ ವರ್ತಮಾನದ ಜಿಜ್ಞಾಸೆಯನ್ನು ಕವಿ ನಡೆಸುತ್ತಲೇ ಬಂದಿದ್ದಾರೆ. ಕಿತ್ತೂರ ಕೋಟೆಯನ್ನು ಕಂಡಾಗ ವಸಾಹತುಶಾಹಿಯ ವಿರುದ್ಧ ನಡೆದ ಘೋರ ಕದನದ ದೃಶ್ಯ ಕವಿಯ ಮನಸ್ಸಿನಲ್ಲಿ ತಳಮಳವನ್ನುಂಟು ಮಾಡಿರುವದನ್ನು ಸುನೀತ ಪ್ರಕಟಿಸಿದೆ. ಗೋಕಾಕರು ಏಡಿನಬರೋ ಕೋಟೆಯನ್ನು ಕಂಡಾಗ ಬರೆದ ಕವಿತೆಯಂತೆ ಕಣವಿಯವರ ಸುನೀತ ನಮ್ಮನ್ನು ಎಚ್ಚರಿಸುತ್ತದೆ.

'ಕಾಲಾತೀತ' ಕಣವಿಯವರ ಪ್ರಸಿದ್ಧವಾದ ಕಾಲ ಜಿಜ್ಞಾಸೆಯ ಸುನೀತವಾಗಿದೆ. 'ಹಿರಿಯರ ಸಾವು', 'ನಿತ್ಯ ಪಯಣ' ಸುನೀತಗಳು ಜೀವನದ ತಾತ್ವಿಕತೆಯನ್ನು ನಿವೇದಿಸುತ್ತವೆ. ಮನುಷ್ಯನ ಬದುಕು ಸುಖ-ದುಃಖಗಳ ಸಂಗಮ ತತ್ವದಿಂದ ಕೂಡಿರುವಂಥದು. ಆನೆಗೆ ಆನೆಯ ಭಾರ ಇರುವೆಗೆ ಇರುವೆಯ ಸಂಸಾರ ಇರುವಂತೆ ಪ್ರತಿಯೊಬ್ಬರಿಗೂ ಅವರದೇ ಆದ ಜೀವನವಿದೆ. 'ಸ್ನೇಹದ ಕುಡಿ ಚಾಚುತ ಕಂಗೊಳಿಸಿತು ಹಸಿರು' ಎಂಬ ಸ್ನೇಹಸೂಕ್ತವನ್ನು ಕವಿ ವಿದಿತಪಡಿಸುತ್ತಾರೆ.

ಕಣವಿಯವರ ಸಾಮಾಜಿಕ ಸ್ಪಂದನದ ಸುನೀತಗಳಲ್ಲಿ 'ಹಂಗರಹಳ್ಳಿ' ಪ್ರಮುಖವಾದುದು.

> ಹಂಗರಹಳ್ಳಿ ಹ್ಯಾಂಗ ತಡಕೊಂಡೆ ಕರುಳಿನಲಿ
> ಉರಿಸಿದಕೊಳ್ಳಿ ! ಕಲ್ಲೆದೆಗಳೇ ಜಲ್ಲಿ ತುಂಬಿ
> ಉರುಳಿಸಿದ ಕುರುಡು ಚಕ್ರದ ಲಾರಿ ಮೈದುಂಬಿ
>
> ಹಸಿರು ಬೆಟ್ಟದ ನಡುವೆ ಕೋರೆಹಲ್ಲಿನ ಕ್ವಾರಿ
> ಸುತ್ತ ಸುತ್ತಿಗೆ ಪೆಟ್ಟು, ಕುತ್ತುಸಿರು ಕಬ್ಬಿಣದ
> ಸರಪಳಿ ಬಿಗಿದ ಕಾಲು, ಹುರುಪಳಿಸಿ ಹೋದ ಕೈ
> ತೆರಪಿರದೆ ಬೆವರಿಳಿದು ಹಿಪ್ಪಿಯಾಗಿರುವ ಮೈ
>
> ನೆನಪಿದೆಯಷ್ಟೆ ಸ್ವಾತಂತ್ರ್ಯದ ಸುವರ್ಣ ಬಿನದ ?
> ನೃತ್ಯ, ಸಂಗೀತ, ಬಾಣ-ಬಿರುಸು ಮೆರವಣಿಗೆ-

ಇಲ್ಲಿ ಕತ್ತಲೆ ಕೂಪ ಸದ್ದಿರದ ಸಿಡಿಮದ್ದು
ಬತ್ತಲೆಯಾಗಿ ಬಾಳು ಒಳಗೊಳಗೆ ಬಿಕ್ಕಿದ್ದು
ಕೇಳಿಯೂ ಕೇಳಿಸದೆ, ಕಂಡರೂ ಕಾಣಿಸದೆ

ದಾಟಿ ಹೋಗಿದೆ ನೂರು ಕೋಟಿಯಲಿ ಜನಸಂಖ್ಯೆ
ಉಳಿದದ್ದು : ಮನುಷ್ಯರೆಲ್ಲಿದ್ದಾರೆನ್ನುವ ಶಂಕೆ.

– (ಹಂಗರ ಹಳ್ಳಿ – ಸುನೀತ ಸಂಪದ)

ಮಂಡ್ಯ ಜಿಲ್ಲೆಯ ಹಂಗರಹಳ್ಳಿಯಲ್ಲಿ ನಡೆದ ದೌರ್ಜನ್ಯವನ್ನು ಕೇಳಿ ಕವಿಹೃದಯದ ಮಿಡಿತ ಈ ಸುನೀತದ ವಸ್ತುವಾಗಿದೆ. ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದಲ್ಲೆ ಹಂಗರವಳ್ಳಿಯ ಭೂಮಾಲೀಕರು ತಮ್ಮ ಜೀತದಾಳುಗಳಿಗೆ ಕಾಲಿಗೆ ಸರಪಳಿ ಹಾಕಿ, ಅಮಾನವೀಯ ಹಿಂಸೆ ನೀಡಿದ ಸುದ್ದಿ ತೀವ್ರವಾದ ಆಘಾತವನ್ನುಂಟು ಮಾಡಿದೆ. ಹಂಗರಹಳ್ಳಿ ಹ್ಯಾಂಗ ತಡಕೊಂಡೆ ಕರುಳಿನಲಿ ಉರಿಸಿದ ಕೊಳ್ಳಿ ! ಎಂದು ಕವಿ ಮಾತಿಗಿಳಿಯುತ್ತಾರೆ. ಒಂದೆಡೆ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನೃತ್ಯ, ಸಂಗೀತ, ಬಾಣ ಬಿರುಸು ಮೆರವಣಿಗೆಯಾದರೆ ಹಂಗರಹಳ್ಳಿಯಲ್ಲಿ ಕತ್ತಲೆಯ ಕೂಪ, ಸದ್ದಿರದ ಸಿಡಿಮದ್ದು, ಜೀತದಾಳುಗಳು ಬತ್ತಲೆಯ ಬಾಳು, ಅವರ ಅಂತರಂಗದ ನೋವು-ಯಾತನೆ ಕೇಳಿಯೂ ಕೇಳಿಸದೆ, ಕಂಡರೂ ಕಾಣಿಸದೆ ಭೂಮಾಲೀಕರಿದ್ದಾರೆ. ಸುನೀತದ ಕೊನೆಯ ಸಾಲು ಅತ್ಯಂತ ಧ್ವನಿಪೂರ್ಣವಾಗಿದೆ. ಭಾರತದ ಜನಸಂಖ್ಯೆ ನೂರು ಕೋಟಿ ದಾಟಿದೆ. ಆದರೆ ಮನುಷ್ಯರೆಲ್ಲಿದ್ದಾರೆನ್ನುವ ಶಂಕೆ ಸದಾ ಕಾಡಿದೆ. ಕಣವಿಯವರು ಶೋಷಣೆ, ಅನ್ಯಾಯ, ದೌರ್ಜನ್ಯಗಳನ್ನು ಸುನೀತದ ಮೂಲಕ ಖಂಡಿಸುತ್ತ ಮಾನವೀಯ ಹೃದಯದ ಮಿಡಿತವನ್ನು ಇಲ್ಲಿ ಪ್ರಕಟಿಸಿದ್ದಾರೆ.

ಸಕಲ ಮಾನವಕುಲದ ಶುಭಾಕಾಂಕ್ಷೆಯನ್ನು ಬಯಸುವ ಕಣವಿಯವರು ಸಮಕಾಲೀನ ವಾಸ್ತವಕ್ಕೆ ನಿರಂತರವಾಗಿ ಪ್ರತಿಕ್ರಿಯಿಸುತ್ತ ಬಂದಿದ್ದಾರೆ. ಸೌಮ್ಯ ಸ್ವಭಾವದ ಕಣವಿಯವರು ಎಂಥ ಕಠಿಣ ಪ್ರಸಂಗಗಳಲ್ಲೂ ರೊಚ್ಚು, ಆಕ್ರೋಶದ ಹಾದಿಯನ್ನು ಹಿಡಿಯದೆ ಸಮತೋಲನವನ್ನು ಬಿಟ್ಟುಕೊಡದೆ ಸದಾ ಎಚ್ಚರಿಕೆಯಿಂದ ಕಾವ್ಯದ ನಿತ್ಯ ಪಯಣವನ್ನು ಮುಂದುವರಿಸಿದ್ದಾರೆ.

ಕಣವಿಯವರ ಸುನೀತಗಳು ಶಿಲ್ಪಸೌಷ್ಠವ, ಛಂದೋಪ್ರಯೋಗ, ಭಾಷೆಯ ಸಂವಹನ ಗುಣದಿಂದ ಮಹತ್ವಪೂರ್ಣವಾಗಿವೆ. ಅವರು ಇಟಾಲಿಯನ್ ಮಾದರಿಯ ಸುನೀತ (೮+೬ ಪಂಕ್ತಿಗಳು) ಮತ್ತು ಶೇಕ್ಸಪಿಯರ್‌ನ ಮಾದರಿಯ ಸುನೀತ (೪×೩+೨ ಪಂಕ್ತಿಗಳು) ಗಳೆರಡನ್ನೂ ಬಳಸಿದ್ದಾರೆ. 'ರಸಿಕರಂಗ', 'ಎಪ್ಪತ್ತರ ಬೇಂದ್ರೆ' ಮೊದಲಾದವು ಇಟಾಲಿಯನ್ ಮಾದರಿಯ ಸುನೀತವಾದರೆ, ಪ್ರಸಿದ್ಧವಾದ 'ವಿನಾಯಕರಿಗೆ ವಂದನೆ', ಶೇಕ್ಸಪಿಯರನ್ ಮಾದರಿಯ ಸುನೀತವಾಗಿದೆ. ಇದೂ ಅಲ್ಲದೆ ಸ್ವತಂತ್ರವಾದ ವಿವಿಧ ಪ್ರಯೋಗಶೀಲತೆಯನ್ನೂ ಕಣವಿಯವರು ಸಾಧಿಸಿದ್ದಾರೆ. ರಸಿಕ ರಂಗರ ಬಗ್ಗೆ ಹೇಳುವಾಗ

'ಮುಳ್ಳಿನಲು ಮುಗುಳೊಡೆದೆ' (ಜೀವನದ ಕಷ್ಟದಲಿ ಹೂವಾಗಿ ಅರಳಿದರು) ಪು.ತಿ.ನ. ಅವರ ಕುರಿತು 'ಜಗದಚ್ಚರಿ ತೆರಂಬೊಳೆವ ಮನದ ಪೂರ್ವಕಳೆ' (ಪಂಪನಲ್ಲಿ ಬರುವ 'ತೆರಂಬೊಳೆ' ಪದವನ್ನು ಬಳಸಿಕೊಂಡು) ಎಂದಿರುವರು. ವಿನಾಯಕರ ಮನೋಧರ್ಮದಲ್ಲಿ ಕಾಣುವ 'ಅಂತಃಕರಣದಂಗೈಯಲ್ಲಿ ಬೆಲೆಗೈವ' ಸಾಧನೆಯನ್ನು ಗುರುತಿಸಿದ್ದಾರೆ. ಬೇಂದ್ರೆಯವರ ಕಾವ್ಯ ಪ್ರತಿಭೆಯ ಬಗೆಗೆ 'ಹಣ್ಣಾದ ಕೇದಿಗೆಯ ಹೊಡೆ', 'ನಾದ' 'ಒಳದನಿ' 'ಮಾಂತ್ರಿಕನಾಟ' ಮುಂತಾದ ಪದಪ್ರಯೋಗಗಳು ಅರ್ಥಕ್ಕೆ ಧ್ವನಿಶಕ್ತಿ ಹೆಚ್ಚಿಸುವದು ಕಂಡುಬರುತ್ತದೆ. 'ತುಂಬುದಿಂಗಳು' ಸುನೀತ (ಮಧುಚಂದ್ರ ಸಂಕಲನ)ದಲ್ಲಿ ವಾತ್ಸಲ್ಯ-ಖುಷಿ-ವಿನೋದಗಳ ಸುಂದರ ಸಾಮರಸ್ಯವಿದೆ. ಕಣವಿಯವರ ನವೋದಯ ಮತ್ತು ನವ್ಯ ಮನೋಧರ್ಮಗಳೆರಡೂ ಅವರ ಸುನೀತಗಳ ಅಭಿವ್ಯಕ್ತಿ ವಿನ್ಯಾಸದಲ್ಲಿ ಪ್ರಕಟಗೊಂಡಿವೆ.

ಕಣವಿಯವರ ನವ್ಯ ಮನೋಧರ್ಮ ಅವರ ಸುನೀತಗಳಲ್ಲೂ ಪ್ರಕಟವಾಗಿದೆ. ನವೋದಯದ ಹಿರಿಯ ಕವಿ ಪಂಜೆ ಮಂಗೇಶರಾಯರ ಬಗೆಗೆ ಬರೆಯುವ ಸುನೀತವು ನವ್ಯಕಾವ್ಯದ ಪ್ರತಿಮಾ ವಿಧಾನದ ಮಾತುಗಳಿಂದ ಆರಂಭವಾಗುವದು ಇದಕ್ಕೆ ನಿದರ್ಶನವಾಗಿದೆ.

ತಿಟಿ ತಿಟಿ ಟೈಟ್ ಪ್ಯಾಂಟು, ಒತ್ತು – ಬೂಟಿಗೆ ಗುಡ್
ನೈಟ್ ಎಂದು, ತೆಳು ಪಂಜೆಯುಟ್ಟು, ಚಪ್ಪಲಿ ಮೆಟ್ಟಿ
ತೆಂಕಣಗಾಳಿಗೊಡ್ಡಿ ಮೈಯ, ಸಹಜ ಭೆಟ್ಟಿ-
ಯಾದ ಗೆಳೆಯರ ಜೊತೆಗೆ ಮಾತಾಡುತ್ತ ಗುಡ್ಡ-
ವೇರಿ ಕುಳಿತಂತೆ ಹಾಯೆನಿಸುವದು : ಪಂಜೆ ನಿಮ್ಮ
ನೆನೆದಾಗ

(ಪಂಜೆಯವರನ್ನು ನೆನೆದು – ನಗರದಲ್ಲಿ ನೆರಳು)

ತಾತ್ವಿಕ ವಿಷಯಗಳ ಜಿಜ್ಞಾಸೆಯೂ ಸುನೀತದಲ್ಲಿ ಬಂದು ಚಿಂತನೆಗೆ ನಮ್ಮನ್ನು ತೊಡಗಿಸುತ್ತದೆ. ಕಣವಿ ಅವರು ಬರೆದ ಸುನೀತಗಳಲ್ಲಿ ಭಾವ ಸೌಂದರ್ಯವಿದೆ, ಅರ್ಥದ ವಿಭಿನ್ನ ಪದರುಗಳು ತುಂಬಿವೆ. ಬುದ್ಧಿ-ಭಾವಗಳ ಸಮತೋಲನವೂ ಸಮನ್ವಯ ಚಿಂತನೆಗಳೂ ಅಂತಸ್ಥವಾಗಿವೆ.

ಕಣವಿ ಅವರ ಸುನೀತಗಳ ಮೋಹಕತೆ ಅವು ಬೀರಿದ ಪ್ರಭಾವ ಮತ್ತು ಸಾಂಸ್ಕೃತಿಕ ಮೌಲ್ಯಗಳು ಕವಿ ಸಾಹಿತಿಗಳ ವ್ಯಕ್ತಿತ್ವದ ಗುಣಮೌಲ್ಯಗಳು ಅವುಗಳದೇ ಆದ ವಿಶಿಷ್ಟತೆಯಿಂದ ರಾರಾಜಿಸುತ್ತವೆ.

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು ?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವದು ?
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವದು
ಒಂದು ಕವಿತೆಗೆ ಕೂಡ ಮನ ಕರಗಬಹುದು.

(ಒಂದು ಹಲವು – ಜೀನಿಯಾ)

ಕಣವಿಯವರೇ ಒಡನುಡಿದ ಈ ಸುನೀತದ ಸಾಲುಗಳು ಅವುಗಳ ಮೌಲ್ಯವನ್ನು ಬೆಳಗುತ್ತವೆ. ಕಾವ್ಯ ಮಾಡುವ ಕೆಲಸ ಮನಕರಗಿಸುವದು, ಹೃದಯಕ್ಕೆ ಸಂತೋಷ ತರುವದು. ಅದನ್ನು ಕಣವಿಯವರ ಸುನೀತಗಳು ಯಥೇಚ್ಛವಾಗಿ ನೀಡಿವೆ ಎಂಬುದರಲ್ಲಿ ಎರಡು ಮಾತಿಲ್ಲ.

'ಕಣವಿಯವರ 'ಸುನೀತ ಸಂಪದ'ವನ್ನು ಓದುವದೆಂದರೆ ಶ್ರೇಷ್ಠ ಕಲಾವಿದನ ಕಲಾಶಾಲೆಯೊಂದನ್ನು ಪ್ರವೇಶಿಸಿದಂತೆ ! ಭಾಷೆಯನ್ನು ಬಣ್ಣದಂತೆ ಬಳಸಿ ಕಣವಿಯವರ ಪ್ರತಿಭೆ ರೇಖಿಸಿರುವ ಒಂದೊಂದು ಸುನೀತ ಚಿತ್ರವೂ, ನಿಸರ್ಗಪರವಾದ ಅವರ ಮುಗಿಯದ ಬೆರಗನ್ನೂ, ಲೋಕ ವಾಸ್ತವಗಳ ಬಗೆಗೆ ಅವರು ಸ್ಪಂದಿಸುವ ಪರಿಗಳನ್ನೂ, ಗಂಭೀರವಾದ ಚಿಂತನಶೀಲತೆಯನ್ನೂ, ಬಹುಸಂಖ್ಯೆಯ ವ್ಯಕ್ತಿಚಿತ್ರಗಳ ಮೂಲಮಾನದಲ್ಲಿ ಸಾಧಿಸುವ ಮಾನವೀಯ ಬಾಂಧವ್ಯಗಳ ವಿಸ್ತರಣೆಯನ್ನೂ ಮತ್ತು ಕನ್ನಡ ಸಂಸ್ಕೃತಿ ಹಾಗೂ ಪರಂಪರೆಯೊಂದಿಗೆ ಅವರು ನಡೆಯಿಸುವ ಅನುಸಂಧಾನವನ್ನೂ ಪ್ರಕಟಿಸುತ್ತದೆ' ಎಂದು ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳಿರುವದು ತುಂಬ ಅರ್ಥಪೂರ್ಣವಾಗಿದೆ.

ಕಣವಿಯವರು ಕನ್ನಡ ಸಾಹಿತ್ಯ ಲೋಕದ ಜೊತೆಗೆ ನಡೆಸಿದ ಒಲವಿನ ಅನುಸಂಧಾನವೇ ಅವರ ಸುನೀತಗಳಾಗಿವೆ. ಕನ್ನಡ ಕಾವ್ಯದಲ್ಲಿ ಈ ಬಗೆಯ ಕಾವ್ಯಾನುಸಂಧಾನವನ್ನು ನಾವು ಮತ್ತೊಬ್ಬರಲ್ಲಿ ಕಾಣುವದು ಕಷ್ಟ. 'ಕಣವಿಯವರ ಸುನೀತಗಳನ್ನು ಓದುತ್ತ ಹೋದಂತೆ ಸಾತ್ವಿಕ ತೇಜಸ್ಸಿನ ಅನುಭೂತಿ ನಮಗಾಗುತ್ತದೆ. ಕಣವಿಯವರಿಗೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಜಟಿಲತೆಯನ್ನು ಚಿತ್ರಿಸುವದಕ್ಕಿಂತ, ಆತನ ಆತ್ಮಕೇಂದ್ರದಲ್ಲಿ ಅನುರಣನ ಮಾಡುವ ಮಹತ್ವದ ಮಾನವೀಯ ತುಡಿತವನ್ನು ದುಪ್ಪಟ್ಟುಗೊಳಿಸಿ, ಸಮಾಜದ ಗಮನವನ್ನು ಆ ಕಡೆ ಸೆಳೆಯುವ ಉದ್ದೇಶ ಮುಖ್ಯವಾದದ್ದಾಗಿರುತ್ತದೆ. ಅದರಲ್ಲಿ ಕಣವಿಯವರ ಸುನೀತಗಳು ಸಾಫಲ್ಯ ಪಡೆದಿವೆ' ಎಂದು ಎಚ್.ಎಸ್. ವೆಂಕಟೇಶ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಕಣವಿಯವರ ಕಾವ್ಯಮೀಮಾಂಸೆ

ಹೊಸಗನ್ನಡದ ಹಿರಿಯ ಕವಿಗಳಾದ ಚೆನ್ನವೀರ ಕಣವಿ ಅವರು ಕನ್ನಡ ಕಾವ್ಯ ಪರಂಪರೆಗೆ ಶ್ರೇಷ್ಠವಾದ ಕವಿತೆಗಳನ್ನು ನೀಡಿದಂತೆ ಕಾವ್ಯ ಮೀಮಾಂಸೆಯ ಚಿಂತನಧಾರೆಯನ್ನು ಪ್ರಕಟಿಸುತ್ತ ಬಂದಿದ್ದಾರೆ. ಬೇಂದ್ರೆ, ಕುವೆಂಪು, ಪುತಿನ ಮೊದಲಾದವರ ಕವಿತೆ ಮತ್ತು ಗದ್ಯದಲ್ಲಿ ಕಾವ್ಯಮೀಮಾಂಸೆಯ ವಿಚಾರಪಥವನ್ನು ನಿರ್ಮಿಸಿದಂತೆ ಕಣವಿಯವರೂ ನಿರಂತರವಾಗಿ ಕಾವ್ಯಾರ್ಥ ಚಿಂತನ ನಡೆಸಿರುವದು ಅವರ ಕವಿತೆ ಮತ್ತು ಗದ್ಯ ಬರಹಗಳಲ್ಲಿ ಕಂಡು ಬರುತ್ತದೆ. ಕಾವ್ಯಾನುಸಂಧಾನವನ್ನು ಕಳೆದ ಅರ್ಧ ಶತಮಾನದಿಂದಲೂ ಮಾಡುತ್ತ ಬಂದ ಕಣವಿಯವರು 'ಕಾವ್ಯ ಸೃಷ್ಟಿ' (ಕಾವ್ಯಾನುಸಂಧಾನ) ವಿಧಾನದ ಕುರಿತು ವ್ಯಕ್ತಪಡಿಸಿದ ವಿಚಾರಗಳು ಅತ್ಯಂತ ಮೌಲಿಕವಾಗಿವೆ.

'ಪ್ರಾಚೀನ ಕಾಲದಿಂದಲೂ ಮಾನವನ ಮನೋಭೂಮಿಕೆಯಲ್ಲಿ ನಡೆಯುತ್ತ ಬಂದಿರುವ ಸೌಂದರ್ಯಾನುಭೂತಿಯ ಚಟುವಟಿಕೆಗಳಲ್ಲಿ ಕಾವ್ಯವೂ ಒಂದು. ಯಾವ ದೇಶದ ಪ್ರಾಚೀನ ಸಾಹಿತ್ಯವನ್ನು ನೋಡಿದರೂ ಅದು ಕಾವ್ಯರೂಪದಲ್ಲಿ ಅಂದರೆ ಲಯಾತ್ಮಕವಾಗಿ ಛಂದೋರೂಪದಲ್ಲಿ ಇರುವದು ಕಂಡುಬರುತ್ತದೆ. ಅದೆಲ್ಲವೂ ಆಧುನಿಕಾರ್ಥದ 'ಶುದ್ಧ' ಕಾವ್ಯವೆಂದೇನೂ ಅಲ್ಲ. ಮಾತು ಪಡೆದ ಒಂದು ಪ್ರಭಾವೀರೂಪ ಎನ್ನಬಹುದು.' ಕಾವ್ಯ ಎಂದರೇನು ಎಂಬುದರ ಜಿಜ್ಞಾಸೆಯನ್ನು ಹಿರಿಯ ಕಾವ್ಯಮೀಮಾಂಸಕರು ಅದರ ಲಕ್ಷಣ ಮೀಮಾಂಸೆಯನ್ನು ಕೊಟ್ಟು ಚರ್ಚಿಸುತ್ತ ಬಂದಿದ್ದಾರೆ. ಕಣವಿಯವರು ಕಾವ್ಯದ ಲಕ್ಷಣವನ್ನು ಆಧುನಿಕ ಸಂದರ್ಭದಲ್ಲಿ ವಿವೇಚಿಸುತ್ತಾರೆ. 'ಆಯಾ ಕಾಲದ ಜನತೆಯ ಜೀವನದ ಮೌಲ್ಯಗಳು, ವಾತಾವರಣದ ಪ್ರಭಾವ, ಭಾವನೆಯ ಒತ್ತಡಗಳ ಮೂಲಕ ಪ್ರಕಟವಾಗುತ್ತದೆ. ಕಾವ್ಯವು ಮುಖ್ಯವಾಗಿ ಭಾಷೆಯಲ್ಲಿ ರೂಪುಗೊಂಡ ಕವಿಯ ಭಾವ ನಿರೂಪಣೆ ; ಸಮಾಜದ ಪರಿಸರದಲ್ಲಿ ನಡೆಯುವ ನಿತ್ಯದ ಹೋರಾಟಗಳನ್ನು, ಆಲೋಚನೆ – ಅನುಭವಗಳನ್ನು ಅಳವಡಿಸಿಕೊಂಡು ಭಾಷೆ ಬೆಳೆಯುತ್ತದೆ. ಸಮಾಜ ಜೀವಿಯಾದ ಕವಿಯು ತನ್ನ ಕಾವ್ಯಕ್ಕೆ ಅದನ್ನು ಒಗ್ಗಿಸಿಕೊಂಡು, ಅನುಭವವನ್ನು ಹಿಗ್ಗಿಸಿಕೊಂಡು ನುಡಿಗೊಡುತ್ತ ಬಂದುದೇ ಕಾವ್ಯವಾಗಿದೆ.'

ಭಾರತೀಯ ಕಾವ್ಯಮೀಮಾಂಸೆ 'ನಾನೃಷಿಃ ಕುರುತೇ ಕಾವ್ಯಂ' ಅಂದರೆ ಋಷಿಯಲ್ಲದವ ಕಾವ್ಯ ಸೃಷ್ಟಿಸಲಾರ ಎಂದು ಹೇಳಿದೆ. 'ಅಪಾರೆ ಕಾವ್ಯ ಸಂಸಾರೆ ಕವಿರೇವ ಪ್ರಜಾಪತಿ' ಎಂದು ಪ್ರತಿಪಾದಿಸಿದೆ. ಕವಿಯ ಬಗೆಗೆ ನಾನಾ ವಿಧವಾದ ಕಲ್ಪನೆಗಳಿವೆ. ಆದರೆ ಕಣವಿಯವರು 'ಕವಿಯೂ ಎಲ್ಲರಂತೆ ಒಬ್ಬ ಮನುಷ್ಯ. ಆದರೆ

ಉಳಿದವರಲ್ಲಿ ಅಷ್ಟಾಗಿ ಕಂಡುಬರದ ಕೆಲವು ವಿಶಿಷ್ಟ ಗುಣಗಳು ಅವನನ್ನು ಆಶ್ರಯಿಸಿರುತ್ತವೆ. ಅವನ ಮನಸ್ಸು ಹುಟ್ಟಿನಿಂದಲೇ ಹೆಚ್ಚು ಸಂವೇದನಾಶೀಲವಾದದ್ದು. ಅಂತಃಕರಣ ಹೆಚ್ಚು ಸ್ನಿಗ್ಧವಾದದ್ದು. ಕಣ್ಣು ಸೂಕ್ಷ್ಮ ನಿರೀಕ್ಷಣೆಯಲ್ಲಿ, ಕಿವಿ ಸೂಕ್ಷ್ಮ ನಾದಗ್ರಹಣದಲ್ಲಿ ತತ್ಪರತೆಯನ್ನು ಪಡೆದಂತಹವು. ವಾಸ್ತವ ಲೋಕದಲ್ಲಿ ಪ್ರತ್ಯಕ್ಷವಾಗಿ ಪಡೆದ ಅನುಭವಗಳು ಅವನ ಭಾವಸ್ತರಗಳಲ್ಲಿ ಹಾಯ್ದು ಶಬ್ದಗಳಲ್ಲಿ ಪುನರ್ನಿರ್ಮಾಣಗೊಂಡು ಛಂದೋಲಹರಿಯಲ್ಲಿ ರೂಪುಗೊಳ್ಳುವದೇ ಕವಿತೆ' ಎಂದು ಹೇಳಿದ್ದಾರೆ.

ಕವಿಯಾಗುವವನಿಗೆ ಪ್ರತಿಭೆ ಇರಲೇಬೇಕು. ಇದನ್ನೇ ಪಾಶ್ಚಾತ್ಯರು Genius ಎಂದು ಹೇಳಿದ್ದಾರೆ. 'ಪ್ರಜ್ಞಾ ನವನವೋನ್ಮೇಷ ಶಾಲಿನಿ ಪ್ರತಿಭಾ ಮತಾಂ' ಎಂದು ಕಾವ್ಯಮೀಮಾಂಸಕರು ಹೇಳಿದ್ದಾರೆ. ಕಣವಿಯವರು ಕಾವ್ಯ ನಿರ್ಮಿತಿಯಲ್ಲಿ ಪ್ರತಿಭೆ ಹೇಗೆ ಕಾರ್ಯ ಮಾಡುತ್ತದೆ ಎಂಬುದನ್ನು ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾರೆ. 'ಕವಿಯ ಪ್ರತಿಭೆ ಆ ವಸ್ತುವಿನ ವಿಶೇಷತೆಯನ್ನು ಅವನಿಗೆ ಹೊಳೆಯಿಸುತ್ತದೆ. ಆ ಕ್ಷಣದಲ್ಲಿ ಅವನಿಗೆ ಸ್ಫೂರ್ತಿ ಒದಗಿತು ಎನ್ನುತ್ತೇವೆ. ಮಳೆಗಾಲದಲ್ಲಿ ಮೋಡ ಮುಸುಕಿ ಮಬ್ಬು ಆವರಿಸಿದಾಗ ಮೋಡದ ಒಂದು ಅಂಚಿನಿಂದ ಸೂರ್ಯನ ಬೆಳಕು ಚಿಮ್ಮಿದರೆ ನೆಲದ ಮೇಲಿನ ಅಷ್ಟು ಹಸಿರು ಜಗ್ಗನೆ ಕಂಗೊಳಿಸುತ್ತದೆ. ಹಾಗೆ ಪ್ರತಿಭೆಯು ಕಾವ್ಯ ವಸ್ತುವಿನ ಮೇಲೆ ಬೆಳಕು ಹರಿಸಿ ಅಂತರಂಗವನ್ನು ಅರಿಯುವಂತೆ ಮಾಡುತ್ತದೆ. ಈ ಅರಿವಿನಲ್ಲಿ ಒಂದು ಬಗೆಯ ಆನಂದವಿದೆ. ಅದನ್ನು ಕಾವ್ಯ ಪ್ರತಿಮೆಯಾಗಿ ರೂಪಿಸುವ ಆ ಕ್ಷಣದ ಏಕಾಗ್ರತೆ ಸುಖ-ದುಃಖಾತೀತವಾದ ಮೈಮರೆವನ್ನು ಕವಿಗೆ ಉಂಟು ಮಾಡುತ್ತದೆ. ಆ ಮುಂದಿನ ಕೆಲಸವೆಲ್ಲ ಕಲೆಯ ಭಾಗಕ್ಕೆ ಸೇರಿದ್ದು' ಎಂದು ಕವಿಯ ಪ್ರತಿಭೆಯ ಸ್ವರೂಪವನ್ನು ವಿವೇಚಿಸಿದ್ದಾರೆ.

ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸಕರು ಆನಂದ (pleasure theory) ವೇ ಕಾವ್ಯದ ಪರಮ ಪ್ರಯೋಜನ ಎಂದು ಹೇಳಿದ್ದಾರೆ. ಕಣವಿಯವರೂ ಆನಂದವೇ ಕಾವ್ಯದ ಗುರಿಯಾಗಿರುವದನ್ನು ಸಮರ್ಥಿಸಿದ್ದಾರೆ. 'ವೀಣೆಯನ್ನು ನುಡಿಸಿದಾಗ ಸಂಗೀತದ ಸವಿ ಹತ್ತುವಂತೆ ಕವಿತೆಯನ್ನು ಮನಸ್ಸುಗೊಟ್ಟು ಓದಿದಾಗ ಸಹೃದಯರಲ್ಲಿ ಅದಕ್ಕೆ ಪ್ರತಿಕ್ರಿಯೆ ದೊರೆಯುತ್ತದೆ. ಕಾವ್ಯ ಮನಸ್ಸಿಗೆ ಹಿಡಿಯುವದೇ ಆದರೆ ಅದು ಆನಂದದ ಮೂಲಕವೇ ಎಂಬುದು ನಿಜ. ಆದರೆ ಅದು ಸುಮ್ಮನೆ ಎಂಥದೋ ಒಂದು ಆನಂದವಲ್ಲ. ಬರಿ ಭಾವನೆಯ ಬೆರಗಿನಿಂದ ಇಲ್ಲವೆ ಕಲ್ಪನೆಯ ಚಮತ್ಕಾರದಿಂದ ಉಂಟಾಗುವಂಥದಲ್ಲ. ಸಂವೇದನಶಕ್ತಿಯಿಂದ ಶ್ರೀಮಂತವಾದ, ನೈಜವಾಗಿ ಅನುಭವಿಸುವಂಥ ಮನಸ್ಸಿಗೆ ಉಚಿತವಾದ ಆನಂದ. ಅದಕ್ಕೆ ಕವಿಯ ಅನುಭವ ತೀವ್ರತೆಯನ್ನೂ, ಗಾಢತೆಯನ್ನೂ ಪಡೆದು ಕಲಾಭಿಜ್ಞತೆಯಲ್ಲಿ ಪುಟಗೊಂಡಿರಬೇಕಾಗುತ್ತದೆ.' ಕಾವ್ಯ ಬ್ರಹ್ಮಾನಂದದ ಸಹೋದರ ಎಂದು ಕಾವ್ಯಮೀಮಾಂಸಕರು ಹೇಳಿದಂತೆ ಅದರ ಅನುಭೂತಿಯ ವಿಶ್ಲೇಷಣೆಯನ್ನು ಕಣವಿಯವರು ಇಲ್ಲಿ ಮಾಡಿದ್ದಾರೆ. ಕವಿಯಾಗುವವನಿಗೆ ಪ್ರತಿಭೆ, ಅಭ್ಯಾಸ, ವ್ಯುತ್ಪತ್ತಿ, ಜ್ಞಾನ ಅವಶ್ಯಕವಾದುದು. ಅದನ್ನು ಕಣವಿಯವರು ಸಮರ್ಥಿಸಿ ಹೀಗೆ ಹೇಳಿದ್ದಾರೆ. 'ಅಭ್ಯಾಸ ವಶದಿಂದ ಅನೇಕ ವಿಚಾರಗಳು, ವಿದ್ಯಮಾನಗಳು, ಕಾವ್ಯದ ತಂತ್ರ ನೈಪುಣ್ಯ, ಭಾಷೆಯ ಹದ ಅವನ ಕೈವಶವಾಗಿರುತ್ತದೆ. ಇದೆಲ್ಲವೂ ಸಮರಸಗೊಂಡು ಅಂತಃಸ್ಫುರಣೆಯಿಂದ ಕವಿತೆ ರೂಪುಗೊಳ್ಳುತ್ತದೆ.'

ಕವಿತೆ ಹೇಗೆ ಆವಿಷ್ಕಾರ ಪಡೆಯುತ್ತದೆ ಎಂಬುದರ ಜಿಜ್ಞಾಸೆಯನ್ನೂ ಕಣವಿಯವರು ಆಲೋಚಿಸಿದ್ದಾರೆ. 'ಕವಿಯ ಹೃದಯದಿಂದ ಭಾವಗೀತ ಯಾವುದೇ ಉದ್ದೇಶವನ್ನಿಟ್ಟುಕೊಂಡು ಹೊರಡುವದಿಲ್ಲ. ವಿಶಾಲವಾದ ಬಯಲಿನಲ್ಲಿ ಎಲ್ಲಿಯೋ ಒಂದು ಕಡೆ ಗಾಳಿ ಸುಳಿಸುಳಿಯಾಗಿ ಸುತ್ತಿಕೊಂಡು ಮೇಲೆದ್ದಂತೆ ಕವಿಯ ಮನಸ್ಸಿನಲ್ಲಿ ಒಂದು ಭಾವ ಮೂಡುತ್ತದೆ. ಹುಟ್ಟಿದ ಕೂಸು ತಾನು ಕಣ್ಬಿಟ್ಟು ನೋಡುವಂತೆ ಜೀವ ಸ್ಪಂದನಗೊಳ್ಳುತ್ತದೆ. ಎದೆಯ ಬಾಗಿಲನ್ನು ಮೆಲ್ಲನೆ ತೆರೆದು ಆಕಾಶವನ್ನು ಮುಟ್ಟಿ ನಿಲ್ಲುತ್ತದೆ. ಅದರ ದೃಷ್ಟಿಯಿಂದ ವಸ್ತುವಿಗೆ ಬಣ್ಣ ಬಂದು ಪುಷ್ಟಿಗೊಳ್ಳುತ್ತದೆ. ಉಸಿರು ಅದನ್ನು ತನಗೆ ತಕ್ಕಂತೆ ಆಡಿಸಿ ಮಾತಿಗೆ ಲಯವನ್ನೂ, ಗತಿಯನ್ನೂ ಒದಗಿಸುತ್ತದೆ.' ಹೀಗೆ ಭಾವಗೀತೆಯ ಸೃಷ್ಟಿ ವಿಧಾನವನ್ನು ಹೇಳುತ್ತ ಕಣವಿಯವರು ಬೇಂದ್ರೆ, ಕುವೆಂಪು ಭಾವಗೀತೆಗಳನ್ನು ವಿಶ್ಲೇಷಿಸಿ ಸಮಕಾಲೀನತೆ ಮತ್ತು ಸಾರ್ವಕಾಲಿಕತೆಯನ್ನು ಕವಿತೆ ಸಾಧಿಸುವದನ್ನು ವಿದಿತಪಡಿಸಿದ್ದಾರೆ.

ಕಾವ್ಯಸೃಷ್ಟಿಯಲ್ಲಿ ಛಂದಸ್ಸಿನ ಸ್ಥಾನದ ಕುರಿತೂ ಚಿಂತನೆಯನ್ನು ಕಣವಿ ನಡೆಸಿರುವದು ಕಂಡುಬರುತ್ತದೆ. ಪು.ತಿ.ನ ತಮ್ಮ 'ಕಾವ್ಯ ಕುತೂಹಲ'ದಲ್ಲಿ ಹೇಳಿದಂತೆ 'ಕಾವ್ಯದಲ್ಲಿ ವಾಗರ್ಥಗಳು ಅದರ ಲೌಕಿಕಾಂಶ, ಛಂದಸ್ಸು ಅಲೌಕಿಕಾಂಶ' ಎಂಬುದನ್ನು ಸಮರ್ಥಿಸುತ್ತ ಹಿಂದಿನ ಕಾವ್ಯದಲ್ಲಿ ವೃತ್ತ, ರಗಳೆ, ಷಟ್ಪದಿಗಳು ಕವಿಗಳ ಕೈಯಲ್ಲಿ ಸಾರ್ಥಕತೆ ಪಡೆದಿದ್ದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಸೌಂದರ್ಯಾನುಭೂತಿಯ ಜತೆಗೆ ಸಹಜತೆಗೆ ಒಲಿದಾಗ ಅರ್ಥ ವ್ಯಕ್ತಿಯ ಗುಣದೊಂದಿಗೆ ಛಂದದಲ್ಲಿ ಸ್ವಾಚ್ಛಂದ್ಯದ ಸೊಗಸು ನಿರ್ಮಿತವಾಗುವದಕ್ಕೆ ಪಂಪನ ಶರತ್ಕಾಲದ ಆಗಮನದ ಚಿತ್ರದ ವೃತ್ತವನ್ನು ಕೊಟ್ಟು ಸಮರ್ಥಿಸಿದ್ದಾರೆ.

ಕನ್ನಡ ನವೋದಯ ಕವಿಗಳು ನಡೆಸಿದ ಪ್ರಯೋಗ ವೈವಿಧ್ಯ ಮತ್ತು ಕುಸುರಿ ಕೆಲಸ ಬಂಧವಿರದ ಬಂಧುರ ಸ್ವಚ್ಛಂದ ಸುಂದರದ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. 'ಸಮಕಾಲೀನ ಜೀವನದ ಗೊಂದಲ, ಗಡಿಬಿಡಿ, ವಿಷಾದ, ಜಿಗುಪ್ಸೆ, ಜಟಿಲತೆಗಳು ನವ್ಯಕವಿತೆಯ ಛಂದೋರೂಪವನ್ನು ಪಲ್ಲಟಗೊಳಿಸಿವೆ. ಆಡುಮಾತಿನ ಲಯ, ನಾಗರಿಕ ಪ್ರಜ್ಞೆಯ ನವ್ಯ ಸಂವೇದನೆಗಳಿಗೆ ಪ್ರತಿಮೆ, ಸಂಕೇತಗಳಲ್ಲಿ ಮೂರ್ತ ಸ್ವರೂಪ' ಹೊಂದುತ್ತಿರುವದಕ್ಕೆ ಅಡಿಗರ 'ಭೂತ' ಕವಿತೆಯನ್ನು ನಿದರ್ಶನವಾಗಿ ನೀಡಿದ್ದಾರೆ. ಕಾವ್ಯ ಲಕ್ಷಣ, ಉದ್ದೇಶಗಳು ಕಾಲಕಾಲಕ್ಕೆ ತಕ್ಕಂತೆ ಪರಿವರ್ತನ ಶೀಲವಾಗುತ್ತವೆ ಎಂಬ ವಿಚಾರವನ್ನು ಕಣವಿಯವರು ವ್ಯಕ್ತಪಡಿಸಿದ್ದಾರೆ.

ಕಾವ್ಯದ ವಸ್ತು ಮತ್ತು ರೂಪ (ಸಮಾಹಿತ) ಜಿಜ್ಞಾಸೆ ಅರಿಸ್ಟಾಟಲ್ ಆನಂದವರ್ಧನರ ಕಾಲದಿಂದಲೂ ನಡೆಯುತ್ತ ಬಂದಿದೆ. ಕಣವಿಯವರು ಈ ವಿಚಾರವನ್ನೆತ್ತಿಕೊಂಡು ಸಾಹಿತ್ಯ ಕೃತಿಗಳಿಗೆ ವಸ್ತುವಿನ ಕೊರತೆ ಇಲ್ಲ ಮತ್ತು ಕಾವ್ಯದಲ್ಲಿ ರೂಪದ ಅನ್ವೇಷಣೆ ಗೌಣವಾದ ಪ್ರಶ್ನೆಯೇ ಆಗಿದೆ. ಕಾವ್ಯದ ಅರ್ಥ ಸಂವಹನದ ಸಮಸ್ಯೆಯನ್ನು ಕೆಲವರು ಎತ್ತಿದ್ದಾರೆ. ಇವುಗಳೆಲ್ಲ ಪಾಶ್ಚಾತ್ಯ ಸಾಹಿತ್ಯದ ಸುತ್ತ ನಡೆಯುತ್ತಿರುವ ಚರ್ಚೆಗಳು, ಭಾರತೀಯ ಲೇಖಕರು ದೇಶೀಯ ಹಾಗೂ ಪರಂಪರಾಗತ ಸಾಹಿತ್ಯ ರೂಪಗಳ ಬೇರೆ ಬೇರೆ ಎಳೆಗಳನ್ನು ಅಣಿಗೊಳಿಸಬೇಕಾದ ಅಗತ್ಯವಿದೆ. ಪಾಶ್ಚಾತ್ಯರ ಅಂಧಾನುಕರಣೆ ಸಲ್ಲದು ಎಂಬ ಖಚಿತವಾದ ನಿಲುವನ್ನು ಪ್ರಕಟಿಸಿದ್ದಾರೆ. ಈಗ

ಐವತ್ತು ವರ್ಷದ ನಂತರ ಮತ್ತೆ ದೇಸೀವಾದ ಚರ್ಚೆಯಾಗುತ್ತಿದ್ದು ಬಹಳ ಹಿಂದೆಯೇ ಕಣವಿಯವರು ಈ ಬಗ್ಗೆ ಚಿಂತಿಸಿದ್ದು ಗಮನಿಸುವ ಅಂಶವಾಗಿದೆ.

'ಕನ್ನಡ ಕಾವ್ಯದಲ್ಲಿ ನೂತನ ಪ್ರತಿಮೆ ಸಂಕೇತಗಳು' (ಕಾವ್ಯಾನುಸಂಧಾನ) ಲೇಖನದಲ್ಲಿ ಕಣವಿಯವರು ಹೊಸ ಕಾವ್ಯದ ಅಭಿವ್ಯಕ್ತಿ ವಿಧಾನದ ಚರ್ಚೆಯನ್ನು ಮುಂದುವರಿಸಿದ್ದಾರೆ. 'ಲೋಕಾನುಭವಕ್ಕೆ ವ್ಯತಿರಿಕ್ತವಾದ, ಶಾಸ್ತ್ರಗಳಲ್ಲಿ ಗೋಚರಿಸದ, ಆದರೆ ಕವಿಯ ಪ್ರತಿಭಾಶಕ್ತಿಯಿಂದ ನಿರ್ಮಿತವಾದ ಅನೇಕ ಕಾಲ್ಪನಿಕ ಸಂಗತಿಗಳು 'ಕವಿ ಸಮಯ'ಗಳೆಂದು ಕರೆಯಲ್ಪಡುತ್ತಿದ್ದು ಅವುಗಳನ್ನು ಪ್ರಾಚೀನ ಕಾವ್ಯಗಳಲ್ಲಿ ಕೇವಲ ಸಂಗತಿಗಳಾಗಿ, ಕೆಲವೆಡೆ ಸಂಕೇತಗಳಾಗಿ, ಕೆಲವೆಡೆ ಅಲಂಕಾರ ನಿರ್ಮಾಣದ ಉಪಮಾನ ಸಾಮಗ್ರಿಯಾಗಿ, ಇನ್ನು ಕೆಲವೆಡೆ ಧ್ವನಿ ವ್ಯಂಜಕವಾದ ಪ್ರತಿಮೆಗಳಾಗಿ ಬಳಸಲ್ಪಟ್ಟಿವೆ.' ಕಣವಿಯವರು ಕಪಿ ಸಮಯವನ್ನು ಪ್ರತಿಮಾ ವಿಧಾನಕ್ಕೆ ಹಿನ್ನೆಲೆಯಾಗಿ ಅವಲೋಕಿಸುತ್ತ ವಚನಕಾರರು ವಚನಗಳಲ್ಲಿ, ಜನಪದರು ತ್ರಿಪದಿಗಳಲ್ಲಿ ಬಳಸಿದ್ದನ್ನು ವಿವೇಚಿಸುತ್ತ ಹೊಸ ಕಾವ್ಯದಲ್ಲಿ ಕವಿಯ ಜೀವನದೃಷ್ಟಿ, ಅನುಭವದ ಅಭಿವ್ಯಕ್ತಿಯಲ್ಲಿ ಮಾರ್ಪಾಟಾಗಿದ್ದು, ವಿಜ್ಞಾನ, ಮನಶ್ಶಾಸ್ತ್ರಗಳ ಬೆಳವಣಿಗೆಯೊಡನೆ, ಜೀವನದ ಜಟಿಲತೆಯೂ ಸೇರಿ ಈ ಕಾಲದ ಅನುಭವ ಪ್ರಪಂಚ ಅಚ್ಚರಿಗೊಳಿಸುವಷ್ಟು ಬದಲಾವಣೆ ಪಡೆದಿರುವದನ್ನು ವಿದಿತಪಡಿಸುತ್ತಾರೆ.

ಕಣವಿಯವರು ಕಾವ್ಯ ಪ್ರತಿಮೆಯ ವ್ಯಾಖ್ಯಾನವನ್ನು ಅತ್ಯಂತ ಮಾರ್ಮಿಕವಾಗಿ ನಮ್ಮ ಮುಂದಿಡುತ್ತಾರೆ. 'ಒಂದು ಕವಿತೆಯನ್ನು ಓದಿದ ಮೇಲೆ ಅಲ್ಲಿಯ ಶಬ್ದಗಳ ಮೂಲಕ ಆದರೂ ಅದಕ್ಕತೀತವಾಗಿ ನಮ್ಮ ಮನಸ್ಸಿನಲ್ಲಿ ಮೂಡಿ ನಿಲ್ಲುವ ಚಿತ್ರವೆ ಕಾವ್ಯ ಪ್ರತಿಮೆ. ತೋರಿಕೆಗೆ ಉಪಮೆ, ರೂಪಕಗಳಾಗಿ, ಕಂಡರೂ ಕವಿಯ ಭಾವಾಭಿವ್ಯಕ್ತಿ ನಿರ್ದಿಷ್ಟವಾದ ನುಡಿಚಿತ್ರಗಳನ್ನು ಪಡೆದಾಗ ಅವು ಪ್ರತಿಮೆಗಳನ್ನೇ ಕಂಡರಿಸುತ್ತವೆ. ಅವು ಸರಳವಾಗಿರಬಹುದು, ಸಂಕೀರ್ಣವಾಗಿರಬಹುದು. ಪ್ರತೀಕ ವ್ಯಾಪಕವಾದ, ಸಂಕೀರ್ಣವಾದ ಅನೇಕ ಪದರುಗಳ ಅರ್ಥಕೋಶವನ್ನು ಪಡೆದಿರುತ್ತವೆ. ಭಾಷೆಯ ಈ ಪ್ರತೀಕಾತ್ಮಕವಾದ ಆದಷ್ಟು ಸಮಗ್ರವಾಗಿ ಉಪಯೋಗಿಸಿಕೊಂಡು ತನ್ನ ಸಂವೇದನೆಯನ್ನು ಅಭಿವ್ಯಕ್ತಿಗೊಳಿಸಲು ಇಂದಿನ ಕವಿ ಹವಣಿಸುತ್ತಾನೆ. ಈ ಬಗೆಯ ರೂಪಕ ಶಕ್ತಿಯಿಂದ ಭಾಷೆಯೂ ಬೆಳೆಯುತ್ತದೆ. ಹೀಗೆ ಭಾಷೆಯ ಬೆಳವಣಿಗೆಯಲ್ಲಿಯೇ ಕಾವ್ಯಾಂಶವೂ ಸೇರಿಕೊಳ್ಳುತ್ತದೆ. ಬದಲಾದ ರೂಪಕ - ಪ್ರತಿಮೆಗಳು ಬದಲಾದ ಜೀವನವನ್ನೂ ಅದರ ಪರಿಸರವನ್ನೂ ಸೂಚಿಸುತ್ತವೆ.' ಹೀಗೆ ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮೆ ಮತ್ತು ಸಂಕೇತಗಳ ಪ್ರಯೋಗದ ಬಗೆಗೆ ಸೂಕ್ಷ್ಮವಾದ ಚಿಂತನೆಯನ್ನು ನಡೆಸಿದ ಕಣವಿಯವರು ಕೆಲವು ಕವಿಗಳ ಕವಿತೆಗಳ ಪ್ರತಿಮಾಸೃಷ್ಟಿಯನ್ನೂ ಕುರಿತು ಚರ್ಚಿಸಿದ್ದಾರೆ.

ಉತ್ತಮವಾದ ಕವಿತೆಯನ್ನು ರಚಿಸುವದು ಹೇಗೆ ಎಂಬ ಜಿಜ್ಞಾಸೆಯನ್ನು ಕಣವಿಯವರು ನಡೆಸುತ್ತಲೇ ಬಂದಿದ್ದು ಅದರ ಬಗೆಗೆ ಅವರು ಹೇಳಿದ್ದು ಹೀಗೆ : 'ಕವಿತೆಯನ್ನು ಬರೆಯುವದು ಬಹು ಸುಲಭ ಎಂದು ನಮ್ಮಲ್ಲಿ ಅನೇಕರ ಭಾವನೆಯಾಗಿದೆ. ನಿಜವಾದ ಒಳ್ಳೆಯ ಕವಿತೆಯನ್ನು ಬರೆಯುವದು ಅಷ್ಟು ಸುಲಭವಲ್ಲ. (poetry is an art, not a dumping ground for emotion) ಕವಿಯ ಅಖಂಡ ಜೀವನಾನುಭವದ

ಪ್ರತೀಕವಾಗಿ ಬರುವ ಕವಿತೆ ಅದೊಂದು ಸರ್ವೋತ್ಕೃಷ್ಟವಾದ ಕಲೆಯೂ ಅಹುದು. ಆದುದರಿಂದ ಅದನ್ನು ಸರ್ವಾಂಗ, ಪರಿಪೂರ್ಣವಾಗಿ, ಸಂಪುಷ್ಟವಾಗಿ ರೂಪಿಸುವಲ್ಲಿ ಕವಿಯು ಮರಹು, ಆಲಸ್ಯಗಳಿಗೆ ಎಡೆಗೊಡದೆ, ಸತತವಾದ ಪರಿಶ್ರಮದಿಂದಲೂ, ಚಿತ್ತೈಕಾಗ್ರತೆಯಿಂದಲೂ ಕಲಾ ಸಂಯಮದಿಂದಲೂ ಸಾಧಿಸಬೇಕಾಗುತ್ತದೆ. 'ಘನತರ ಚಿತ್ರದ ರೂಹ ಬರೆಯಬಹುದಲ್ಲದೆ ಪ್ರಾಣವ ಬರೆಯಬಹುದೇ' ಎಂದು ಅಲ್ಲಮಪ್ರಭು ಕೇಳಿದ್ದಾರೆ. ಒಂದೆಡೆ ಪ್ರಾಣವನ್ನು ಬರೆಯಬಲ್ಲಶಕ್ತಿ ಕಾವ್ಯಕ್ಕಿದೆ. ಅಂಥ ಕಾವ್ಯವನ್ನು ಕನ್ನಡ ಮರೆಯಲಿಕ್ಕಿಲ್ಲವಷ್ಟೇ ?' – (ಸಾಹಿತ್ಯ ಚಿಂತನ ಸಮಗ್ರ ಗದ್ಯ ಒಂದು ಪು. ೪೨೩) ಎಚ್ಚೆಸ್ವಿಯವರೊಡನೆ ಸಂವಾದ ಮಾಡುತ್ತ ಕಣವಿಯವರು ಹೇಳಿದ ವಿಚಾರಗಳು ಅರ್ಥಪೂರ್ಣವಾಗಿವೆ. 'ಅನುಭವದ ಪರಿಣಾಮವಾಗಿ, ಮಾಧ್ಯಮವಾದ ಭಾಷೆಯ ಮೂಲಕ ಅಮೂರ್ತತೆಗೆ ಕವಿ ಆಕಾರ ಕೊಡುತ್ತಾನೆ. ಅಂದರೆ ಪ್ರತಿಯೊಂದು ಸಾಲು ಕೂಡ ಮೊದಲು ಹೊಳಹಾಗಿ ಕಾಣಿಸಿಕೊಂಡು ನಂತರ ದೇಹಧಾರಣೆ ಮಾಡುತ್ತದೆ. ಎಷ್ಟು ಒಳ್ಳೆಯ ಕವಿತೆ ಆಗುತ್ತದೊ ಬಿಡುತ್ತದೊ ಇದನ್ನು ಮೀರಿದ ವಿಷಯ. ಹೊಟ್ಟೆಯೊಳಗಿನ ಕೂಸು ಹ್ಯಾಗಿದೆ ಎಂಬುದು ತಾಯಿಗೇ ಗೊತ್ತಿರುವದಿಲ್ಲ ವೈದ್ಯರಿಗೂ ಕೂಡ (ಅವಿನಾಭಾವ ಪು. ೨೧೫).

ಕವಿಯಾದವನು ತಾನು ಯಾರಿಗಾಗಿ ಬರೆಯುತ್ತಿದ್ದೇನೆ ಎಂಬುದನ್ನು ಆಲೋಚಿಸಬೇಕು. ಕವಿತೆ ಇರುವದು ಸಹೃದಯರಿಗಾಗಿ. ಕವಿತೆ ಕವಿಯಲ್ಲೇ ಹುಟ್ಟಿ ಕೊನೆಯಾಗಬಾರದು. ಆದ್ದರಿಂದ ಓದುಗ ಲೋಕದ ಬಗೆಗೂ ಅವನು ಯೋಚಿಸಬೇಕು. ಅದಕ್ಕೆ ಸಂಬಂಧಿಸಿದಂತೆ ಕಣವಿಯವರು ಹೇಳುತ್ತಾರೆ : 'ಕಾವ್ಯ ರಚನೆ, ಮನಸ್ಸಿನ ಏಕಾಂತದಲ್ಲಿ, ಏಕಾಗ್ರತೆಯಲ್ಲಿ ನಡೆಯುವ ಕ್ರಿಯೆಯಾಗಿದ್ದರೂ ಕವಿಯ ಸುಪ್ತ ಪ್ರಜ್ಞೆಯಲ್ಲಿ ಓದುಗ ಲೋಕವೊಂದು ಇದ್ದೇ ಇರುವದು. ಕವಿ ಬರೆಯುತ್ತ ಹೋದಂತೆ ತನಗೆ ತಾನೇ ಸಂಬೋಧಿಸಿಕೊಳ್ಳುತ್ತಾನೆ. ಆಗ ಅವನು ಓದುಗರ ಪ್ರತಿನಿಧಿಯೂ ಆಗಿರಬೇಕಾಗುತ್ತದೆ. 'ಕಾವ್ಯಮಾನಂದಾಯ' ಎನ್ನುವದು ನಿತ್ಯ ಸತ್ಯವಾಗಿದ್ದರೂ ಆನಂದವನ್ನು ಹಂಚಿಕೊಳ್ಳಲಿಕ್ಕೆ ಸಹೃದಯರು ಇಲ್ಲದಿದ್ದರೆ ಕವಿಗೆ ಸಮಾಧಾನ ಆಗದು. ತಕ್ಕ ಮನಸ್ಸನ್ನು ಹೋಗಿ ಮುಟ್ಟುವದರಲ್ಲಿ, ಹೃದಯವನ್ನು ತಟ್ಟುವದರಲ್ಲಿ ಕಾವ್ಯದ ಸಾರ್ಥಕತೆ ಇದೆ. ತನ್ನ ಕಾವ್ಯದ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಲೇ ಅದು ತನ್ನ ಸಂವಹನವನ್ನು ಸಾಧಿಸುವಂತಿರಬೇಕು. ಓದುಗರ ಅಥವಾ ಕೇಳುಗರ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರೆ ಸಂವಹನದ ಏರುಪೇರುಗಳು ಕವಿಗೇ ಹೊಳೆಯಬಲ್ಲವು.' (ಕವಿ ಕಣವಿ ಸಂದರ್ಶ ಚೆನ್ನವೀರ ಕಣವಿ ಬದುಕು – ಬರೆಹನ ಪುಟ ೭೦)

ಕನ್ನಡದಲ್ಲಿ ಬೇಂದ್ರೆ, ಕುವೆಂಪು, ಪು.ತಿ.ನ. ಶಿವರುದ್ರಪ್ಪನವರಂತೆ ಕಣವಿಯವರೂ ಕವಿತೆಗಳಲ್ಲಿ ಕಾವ್ಯಮೀಮಾಂಸೆಯನ್ನು ಪ್ರಕಟಿಸಿದ್ದಾರೆ.

ಕಣವಿಯವರು ಕಾವ್ಯಾಕ್ಷಿಯಿಂದ ಇತ್ತೀಚಿನವರೆಗೂ ಕಾವ್ಯಮಿಮಾಂಸೆಯನ್ನು ತಮ್ಮ ಕವಿತೆಗಳ ಮೂಲಕವೂ ಪ್ರಕಟಿಸಿರುವದು ಪ್ರತ್ಯೇಕ ಅಧ್ಯಯನ ವಿಷಯವಾಗಿದೆ. ಕವಿತೆ ಹೇಗೆ ಹೊರಹೊಮ್ಮುತ್ತದೆ ಎಂಬ ಕುತೂಹಲ ಸಹೃದಯಲೋಕಕ್ಕೆ ಇದ್ದೇ ಇದೆ. ಕಣವಿಯವರು 'ತನಗೆ ತಾನೆ ತಿಳಿಯದಂತೆ ತುಳುಕಿತಹಹ ಭಾವನಾ, ಕಮ್ಮಲರಿಗೆ ಕಪಿ–ಗಾಳಿಗೆ ಕಾವ್ಯಾಕ್ಷಿಗೆ ವಂದನಾ' ಎಂದು ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಇದನ್ನೇ ವರ್ಡ್ಸ್‌ವರ್ತ್ ಕೂಡ ಕವಿಯಾದವನಲ್ಲಿ ಭಾವನೆಗಳು ಓತಪ್ರೋತವಾಗಿ ಹರಿದು ಬಂದು

ಪ್ರಶಾಂತವಾದ ಜಾಗೃತ ಸ್ಥಿತಿಯಲ್ಲಿ ಒಡಮೂಡುತ್ತದೆ ಎಂದಿದ್ದಾನೆ. ಕಣವಿಯವರ 'ಕಾವ್ಯಾಕ್ಷಿ'ಯಲ್ಲಿ ಬರುವ 'ಸ್ಫೂರ್ತಿ' ಸುದೀರ್ಘವಾದ ಕಾವ್ಯಮೀಮಾಂಸೆಯ ಕವಿತೆ.

ಅರಿವಿನಾಳದ ಕಲ್ಪನೆಯುದಾತ್ತತೆಗೆ
ಜೀವದುಸಿರಾಡಿಸುವ ಸ್ಫೂರ್ತಿಕನ್ಯೆ
ನಿನ್ನ ದರ್ಶನ ಫಲಕೆ ಸ್ಪರ್ಶನದ ಚೇತನಗೆ
ದೇಹ ರೋಮಾಂಚಿತವು ಎದೆಯ ರನ್ನೆ

ಕವಿತೆ ರಚಿಸಲು 'ಸ್ಫೂರ್ತಿ' ಅತ್ಯವಶ್ಯಕ. ಕವಿಯ ಕಲ್ಪನೆಯನ್ನು ಉದಾತ್ತಗೊಳಿಸಿ ಅರಿವಿನ ಭಾವವನ್ನು ಕವಿತೆ ಮೂಲಕ ಆಕೃತಿಗೊಳಿಸಲು 'ಸ್ಫೂರ್ತಿ' ಕಾರಣವಾಗುತ್ತದೆ. ಕವಿ ಕಾವ್ಯಸ್ಫೂರ್ತಿಯಿಂದ ಕವಿತೆ ಕಟ್ಟುವ ಬಗೆಯನ್ನು ಕಣವಿಯವರು ವರ್ಣಿಸುತ್ತ ಹೋಗುತ್ತಾರೆ. 'ಎಂದಾದರೊಮ್ಮೆ ನೀ ಬಂದು ಮರೆಯಾಗುತಿಹೆ ಸಂಜೆ ಮುಗಿಲಿನ ಸ್ವರ್ಣವರ್ಣದಂತೆ' ಎಂದು ಅದರ ಸ್ವರೂಪವನ್ನು ವಿವರಿಸುತ್ತಾರೆ. 'ರಾಗರಸ ಪಾಕದಲಿ ಛಂದೋವಿಲಾಸದಲಿ ಕಮನೀಯ ಕವಿತೆ ತಾ ಕಣ್ದೆರೆವಳು'. ನವೋದಯ ಕವಿಗಳೆಲ್ಲ ಹೇಳುವಂತೆ ಸ್ಫೂರ್ತಿ ತತ್ವವನ್ನು ಕಣವಿಯವರೂ ಹೇಳಿದ್ದಾರೆ.

ಸ್ಫೂರ್ತಿ ಸುಂದರಿ ರಸೋನ್ಮಾದಿನಿಯು, ಚಂಚಲೆಯು
ಕಟ್ಟುಕಟ್ಟಳೆಗೆಲ್ಲ ಸಿಲುಕದವಳು;
ಜೀವನದ ವಿವಿಧಾಂಗ ರಂಗದಲಿ ಮೈಮರೆತು
ನಿಂತಿರಲು ಅರಿಯದೆಯೆ ಮಿಂಚಿ ಬಹಳು.

ಕಣವಿಯವರು 'ಭಾವಜೀವಿಯು ನಾನು, ನನ್ನೆದೆಯ ನಂಬಿರುವ ತುಂಬಿರುವ ಕನಸುಗಳೆ ಕಲ್ಪವೃಕ್ಷ !' ಎಂದು ತಮ್ಮ ಕವಿ ವ್ಯಕ್ತಿತ್ವದ ಸ್ವರೂಪವನ್ನು 'ಭಾವಜೀವಿ'ಯಲ್ಲಿ ಹೇಳಿದ್ದಾರೆ. ಅವರು 'ಕವಿತೆಗೆ' ಬರೆದ ಸುನೀತ ಒಂದು ಭಾವಸಂವಾದವಾಗಿದೆ.

ಕವಿತೆ ! ಸುಲಲಿತ ಭಾವಸಂಪ್ರೀತೆ, ನನ್ನೆದೆಯ
ಸುಪ್ತ ಸುಖದುಃಖ ವೀಣಾಕ್ವಣಿತ ಸಂಗೀತೆ
ಚೈತ್ರಮುಖಿ ಕಣ್ಣನರಳಿಸು ವಿಮಲ ವಿಖ್ಯಾತೆ !

ಏನಿದ್ದರೇನು ವಿಶ್ವಂಭರಿತೆ ನಿನ್ನುದಯ
ಚಿರನೂತನೋತ್ಸಾಹ ಚೇತನಂ ಪಡೆವನಕ

ಕವಿಮನವು ಬರಿಯುದಾಸೀನ ರಸಹೀನತೆಯ
ದೀನತೆಯ ತವರು; ಅದೊ ವಿಶ್ವಮೋಹಿನಿ ಉಷೆಯ

ಚುಂಬನೋತ್ಕರ್ಷತೆಗೆ ಭೂಮಿಗಿಳಿದಿದೆ ನಾಕ !
ಆವುದೋ ಮೂಲೆಯಲಿ ಕುಳಿತು ಭೂರಂಗದಲಿ

ನಡೆವ ಅಕಟೋವಿಕಟ ನಾಟಕದ ಹಿನ್ನೆಲೆಯ
ಬಗಿದು ನೋಡುವ ಬಯಕೆ ಬಗೆಯೊಳಿದೆ; ಮನ್ನಣೆಯ
ಅಳಿಯಾಸೆ ಮಣ್ಣುಗೂಡಲಿ, ಮಹಾಪೂರದಲಿ

ಜಾಲಿಸಲಿ ಬಾಳಕೊಳೆ, ಬದುಕು ಮಡಿಯಾಗಿರಲಿ
ಮೂಡು ಮುದ್ದಿನ ಕವಿತೆ ಋತ ಶಿವಾನಂದದಲಿ

(ಕವಿತೆಗೆ – ಸುನೀತ ಸಂಪದ)

ಕಣವಿಯವರು ಶಬ್ದಗಳ ದೀಪಮಾಲೆಯನ್ನು ಹಚ್ಚುತ್ತ ಬಂದವರು. ಕವಿಯಾದವನು ತನ್ನ ಪ್ರತಿಭೆಯ ಮಿಂಚು ಆರದಂತೆ ಕವಿತೆಯ ಸೃಷ್ಟಿ ಕಾರ್ಯದಲ್ಲಿ ತೊಡಗಿರಬೇಕಾದ ಅಗತ್ಯವನ್ನು ಅವರು ಪ್ರತಿಪಾದಿಸಿದ್ದಾರೆ. ಅವರ ಪ್ರಸಿದ್ಧವಾದ ಕವಿತೆಯ ಸಾಲುಗಳಿವು :

ಏನಾದರೂ ಇರಲಿ, ಹಾಡು ನಿಲ್ಲಿಸಬೇಡ
ದೀಪ ಪಟ್ಟನೆ ಆರಿ ಹೋಗಬಹುದು !
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು !

ಬದುಕು ಸೋಲಾದರೂ ಕಾಡು ಪಾಲಾದರೂ
ಹಾಡ ಬಿಟ್ಟುಳಿದವನ ಪಾಡು ಬೇಡ;
ನೀನೆನ್ನ ದೈವತವು ಹಾಡೆನ್ನ ಜೀವಿತವು
ಮತ್ತೆ ಮುತ್ತುಳಿದವರ ಮಾತು ಬೇಡ

– (ಮತ್ತೊಂದು ಪುಟ್ಟ ಹಕ್ಕಿಗೆ – ಮಧುಚಂದ್ರ)

ಕಣವಿಯವರು ಏಳು ದಶಕಗಳ ಕಾಲ ಕವಿತೆ ರಚಿಸುತ್ತ 'ಜೀವನವೆ ಕವಿತೆ'ಯಾಗಿ ಬಾಳಿದವರು. ಅವರ ಸಮಗ್ರ ಕಾವ್ಯದ ತುಂಬ ಕಾವ್ಯಮಿಮಾಂಸೆಯ ವಿಚಾರಗಳು ಹರಳುಗಟ್ಟಿವೆ. ಕಾವ್ಯ ಪ್ರಯೋಜನದ ಚಿಂತನಗಳಿವೆ. 'ಒಂದು ಕವಿತೆಗೆ ಕೂಡ ಮನ ಕರಗಬಹುದು' ಎಂಬ ಕಾವ್ಯ ಜಿಜ್ಞಾಸೆಯನ್ನು ಅವರು ಪ್ರಕಟಪಡಿಸಿದ್ದಾರೆ.

ಕಣವಿಯವರ ಆಯ್ದಕವಿತೆಯ ಸಂಗ್ರಹಗಳು ಮತ್ತು ಸಮಗ್ರಕಾವ್ಯ

ಕಣವಿಯವರು ಮೊದಲ ಸಂಕಲನ **'ಕಾವ್ಯಾಕ್ಷಿ'**ಯಲ್ಲಿ ಬರೆದ ಭಾವಗೀತೆಗಳು ಸುಶ್ರಾವ್ಯವಾಗಿ ಹಾಡುವಂಥವುಗಳಾಗಿವೆ. **'ಕಾವ್ಯಾಕ್ಷಿ'**ಯ ನಂತರ ಉಳಿದ ಕವಿತಾ ಸಂಕಲನಗಳಲ್ಲೂ ಅನೇಕ ಗೇಯ ಕವಿತೆಗಳಿವೆ. ನಾಡಿನ ಸುಗಮ ಸಂಗೀತ ಕಲಾವಿದರು ಕಣವಿ ಕವಿತೆಗಳ ರಾಗ ಸಂಯೋಜನೆ ಮಾಡಿ ರಸಿಕರನ್ನು ಆನಂದಪಡಿಸುತ್ತ ಬಂದಿದ್ದಾರೆ. ಕಣವಿಯವರ ಕವಿತಾಸಂಕಲನಗಳಿಂದ ಆಯ್ದ ಗೇಯಕವಿತೆಗಳ ಸಂಕಲನ **'ಹೂವು ಹೊರಳುವವು ಸೂರ್ಯನ ಕಡೆಗೆ'**. ಬೆಂಗಳೂರು ದೂರದರ್ಶನದಲ್ಲಿ ಗೀತಚಿತ್ರವಾಗಿ ಹೊರಹೊಮ್ಮಿರುವದನ್ನು ಇಲ್ಲಿ ಸ್ಮರಿಸಬಹುದು. ಕಣವಿಯವರ ಭಾವಗೀತೆಗಳ **'ಮಲ್ಲಿಗೆ ದಂಡೆ'** ಮೊದಲ ಧ್ವನಿಸುರುಳಿಯನ್ನು **'ಸಂಗೀತ ಗಂಗಾ'** ನಿರ್ದೇಶಕ ಜಿ.ವಿ. ಅತ್ರಿ ಅವರು ಹೊರತಂದರು. ಎರಡನೆಯ ಧ್ವನಿ ಸುರುಳಿ **'ಒಂದು ಮುಂಜಾವಿನಲಿ'** ಲಹರಿ ಕಂಪನಿ ತಂದಿದೆ. ಜಯಶ್ರೀ ಅರವಿಂದ ಸಂಗೀತ ನಿರ್ದೇಶನದ **'ಮಧು ಕೋಗಿಲೆ'** ಮೂರನೆಯ ಧ್ವನಿ ಸುರುಳಿಯಾಗಿದೆ. ಮೃತ್ಯುಂಜಯ ದೊಡ್ಡವಾಡ ನಿರ್ದೇಶನದ **'ಬರುವದೆಲ್ಲ ಬರಲಿ ಬಿಡು'** ಧ್ವನಿ ಸುರುಳಿ ನಾಲ್ಕನೆಯದಾಗಿದೆ. ಇವುಗಳನ್ನೆಲ್ಲ ಆಲಿಸುವ ರಸಿಕರ ದಂಡೇ ಇದೆ.

'ಹೂವು ಹೊರಳುವವು ಸೂರ್ಯನ ಕಡೆಗೆ' ಕಣವಿಯವರ ಅತ್ಯಂತ ಜನಪ್ರಿಯ ೪೧ ಹಾಡುಗಳ ಸಂಗ್ರಹವಾಗಿದ್ದು, ಇದು ವಿವಿಧ ಪ್ರಕಾಶಕರಿಂದ ಐದು ಬಾರಿ ಮುದ್ರಣಗೊಂಡಿದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಕಣವಿ ಕವಿತೆಯ ಸುಗಮ ಸಂಗೀತ ಮತ್ತೆ ಮತ್ತೆ ಬಿತ್ತರಗೊಳ್ಳುತ್ತಿದೆ. ನವೋದಯ ಕಾಲದ ಗೀತ ಸಂಸ್ಕಾರ ಕನ್ನಡ ಜನರಲ್ಲಿ ಜೀವಂತವಾಗಿ ಉಳಿದುಕೊಂಡಿರುವದಕ್ಕೆ ಇದು ಸಾಕ್ಷಿಯಾಗಿದೆ. ಕಣವಿಯವರ ಕವಿತೆಗಳ ಓದು ಮತ್ತು ಹಾಡುಗಾರಿಕೆ ಎರಡರ ಮೂಲಕ ಹೃದಯ ಸಂವಾದ ಸಾಧಿಸುವ ಸಂಗ್ರಹ. **'ಹೂವು ಹೊರಳುವವು ಸೂರ್ಯನ ಕಡೆಗೆ'** ಕಾವ್ಯ ಗಾಯನ ಪ್ರತಿಸೃಷ್ಟಿಯ ಪ್ರಕ್ರಿಯೆ. ಸುಗಮ ಸಂಗೀತ ಆಧುನಿಕ ಕಾವ್ಯ ಹುಟ್ಟು ಹಾಕಿದ ಅಪರೂಪದ ಸಾಹಿತ್ಯನಿಷ್ಠವಾದ ಸಂಗೀತ ಮಾದರಿ' ಎಂದು ಕಣವಿಯವರು ಹೇಳಿದ್ದಾರೆ.

ಮೈಸೂರಿನಲ್ಲಿ ೧೯೮೫ ರಲ್ಲಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ಆ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಮೂಲ್ಯ ಕನ್ನಡ ಪುಸ್ತಕಗಳನ್ನು ಪ್ರಕಟಿಸಿತು. ಚೆನ್ನವೀರ ಕಣವಿ ಅವರ ಆಯ್ದ ಕವನಗಳ

ಸಂಗ್ರಹ **'ಚಿರಂತನದಾಹ'** ಕೃತಿ ವಿಶ್ವ ಕನ್ನಡ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿದೆ. **'ಕಾವ್ಯಾಕ್ಷಿ'**ಯಿಂದ **'ನಗರದಲ್ಲಿ ನೆರಳು'** ವರೆಗಿನ ಒಂಬತ್ತು ಕವಿತಾಸಂಕಲನಗಳ ಆಯ್ದ ಕವಿತೆಗಳು ಇದರಲ್ಲಿವೆ. ನವೋದಯ ಮತ್ತು ನವ್ಯಕಾವ್ಯ ಮಾರ್ಗಕ್ಕೆ ಸೇರಿದ ಕವಿತೆಗಳು ಇದರಲ್ಲಿದ್ದು ಕಣವಿ ಕಾವ್ಯದ ಕೆನೆಯಂತೆ ಕಾಣುತ್ತವೆ.

ಕಣವಿಯವರ ಸಮಗ್ರಕಾವ್ಯದ ಮೊದಲ ಆವೃತ್ತಿ **ಹೊಂಬೆಳಕು** ೧೯೮೪ ರಲ್ಲಿ ಬೆಂಗಳೂರಿನ ಐಬಿಎಚ್ ಸಂಸ್ಥೆಯಿಂದ ಪ್ರಕಟವಾಯಿತು. **ಕಾವ್ಯಾಕ್ಷಿ**ಯಿಂದ **ಕಾರ್ತೀಕದ ಮೋಡ**ದವರೆಗಿನ ಹನ್ನೆರಡು ಕವಿತಾಸಂಕಲನದ ಕವಿತೆಗಳು ಇದರಲ್ಲಿ ಅಂತಸ್ಥವಾಗಿವೆ. ಕನ್ನಡದ ಹಿರಿಯ ವಿಮರ್ಶಕರಾದ ಡಾ. ಜಿ. ಎಸ್. ಆಮೂರ ಅವರು 'ಹೊಂಬೆಳಕು' ಸಮಗ್ರಕಾವ್ಯಕ್ಕೆ ಬರೆದ ಪ್ರಸ್ತಾವನೆ ಕಣವಿಯವರ ಸಮಗ್ರಕಾವ್ಯ ವಿಮರ್ಶೆಯ ಅತ್ಯುತ್ತಮ ವಿಮರ್ಶೆಯಾಗಿದೆ. **'ಹೊಂಬೆಳಕು'** ಪ್ರಕಟಣೆ ನಾಡಿನಾದ್ಯಂತ ಇರುವ ಸಹೃದಯರನ್ನು ಆಕರ್ಷಿಸಿತು. ಕಣವಿಯವರ ಅದುವರೆಗಿನ ಎಲ್ಲ ಕವಿತೆಗಳೂ ಮೊದಲ ಬಾರಿಗೆ **'ಹೊಂಬೆಳಕು'**ದಲ್ಲಿ ಪ್ರಕಟವಾಗಿ ಅವರ ಕಾವ್ಯದ ಅನುಸಂಧಾನಕ್ಕೆ ಹೊಸಮಾರ್ಗ ಸಿಕ್ಕಂತಾಯಿತು.

ಕಣವಿಯವರು ೧೯೯೬ ರಲ್ಲಿ ಹಾಸನದಲ್ಲಿ ಜರುಗಿದ ಅರವತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ಬೆಳಗಾವಿಯ ವೀರಶೈವ ಅಧ್ಯಯನ ಅಕಾಡಮಿ **'ಕಣವಿ ಸಮಗ್ರ ಕಾವ್ಯ'**ದ ಎರಡನೆಯ ಆವೃತ್ತಿಯನ್ನು ಪ್ರಕಟಿಸಿತು. ಇದರಲ್ಲಿ 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ'ದವರೆಗೆ, ಕವಿತಾಸಂಕಲನಗಳು ಸೇರಿವೆ. **'ಹೊಂಬೆಳಕು'** ಪ್ರಕಟಣೆಗೆ ಡಾ. ಹಾ. ಮಾ. ನಾಯಕರು ಕಾರಣರಾದರೆ **ಕಣವಿ ಸಮಗ್ರಕಾವ್ಯ** ಪ್ರಕಟಣೆಗೆ ಡಾ. ಎಂ. ಎಂ. ಕಲಬುರ್ಗಿಯವರ ಸಲಹೆ ಕಾರಣವಾಗಿದೆ.

ಕಣವಿಯವರ ಸುನೀತಗಳನ್ನು ಸಮಗ್ರವಾಗಿ ಸಂಪಾದಿಸಿದ **ಸುನೀತ ಸಂಪದ**ವನ್ನು ಬಳ್ಳಾರಿಯ ಲೋಹಿಯಾ ಪ್ರಕಾಶನ ೨೦೦೨ ರಲ್ಲಿ ಪ್ರಕಟಿಸಿದೆ. ವ್ಯಕ್ತಿ ವ್ಯಕ್ತಿತ್ವ, ನಿಸರ್ಗ ಸ್ಪಂದನ, ಕೃತಿ ಆಕೃತಿ, ನಿವೇದನೆ, ಜಿಜ್ಞಾಸೆಗಳೆಂಬ ಐದು ಭಾಗಗಳಲ್ಲಿ ೧೮೨ ಸುನೀತಗಳು **ಸುನೀತ ಸಂಪದ**ದಲ್ಲಿವೆ.

ಕಣವಿಯವರ ಸಮಗ್ರ ಕಾವ್ಯದ ಮೂರನೆಯ ಆವೃತ್ತಿ ಅವರಿಗೆ ಎಪ್ಪತ್ತೈದು ವರ್ಷ ತುಂಬಿದಾಗ ೨೦೦೩ ರಲ್ಲಿ ಮೈಸೂರಿನ ಸಂವಹನ ಪ್ರಕಾಶನದ ಲೋಕಪ್ಪನವರು ಮರುಮುದ್ರಣಗೊಳಿಸಿದರು. ಇದರಲ್ಲಿ **ಕಾವ್ಯಾಕ್ಷಿ**ಯಿಂದ **ಬರೆದು ತೀರದ ಬದುಕು** ವರೆಗೆ ಮತ್ತು ಆನಂತರ ೨೦೦೨ ರ ವರೆಗೆ ಬರೆದ ಮೂವತ್ತು ಕವನಗಳು ಸೇರಿ ಒಟ್ಟೂ ೫೧೩ ಕವಿತೆಗಳು ಸೇರಿವೆ.

ಚೆಂಬೆಳಕು ಕಣವಿಯವರ ಮೂವತ್ತು ಆಯ್ದ ಕವಿತೆಗಳ ಸಂಕಲನವಾಗಿದ್ದು ಇದನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ೨೦೦೫ ರಲ್ಲಿ ಪ್ರಕಟಿಸಿದೆ. ಬಿ.ಎ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಇದು ಪಠ್ಯಪುಸ್ತಕವಾಗಿದ್ದು ಇದಕ್ಕೆ ಡಾ. ಜಿ. ಎಂ. ಹೆಗಡೆ ಸಹೃದಯ ಸ್ಪಂದನದ ಪ್ರಸ್ತಾವನೆ ಬರೆದಿದ್ದಾರೆ.

ಚಿಣ್ಣರ ಲೋಕವ ತೆರೆಯೋಣ ಮಕ್ಕಳ ಪದ್ಯಗಳ ಸಂಗ್ರಹವನ್ನು ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ ಪ್ರಕಟಿಸಿದ್ದು ಅದು ೨೦೦೬, ೨೦೦೮, ೨೦೧೪ ಹೀಗೆ ಮೂರು ಬಾರಿ ಮುದ್ರಣಗೊಂಡಿದೆ.

ಚೆನ್ನವೀರ ಕಣವಿಯವರ **ಮಾನಸ ಪೂಜೆ** ಅವರ ಅನುಭಾವಿಕ ಆಯ್ದ ಕವಿತೆಗಳ ಸಂಗ್ರಹವಾಗಿದ್ದು ಇದನ್ನು ಸಿರಿಗೆರೆಯ ತರಳಬಾಳು ಜಗದ್ಗುರು ಬ್ರಹನ್ಮಠವು ತನ್ನ 'ಸಾಹಿತ್ಯ ಸಿರಿ' ಪ್ರಕಾಶನ ಮಾಲೆಯಲ್ಲಿ ೨೦೦೬ ರಲ್ಲಿ ಪ್ರಕಟಿಸಿದೆ. ಕಣವಿ ಸಮಗ್ರಕಾವ್ಯದಲ್ಲಿ ಬಂದ ಅವರ ಅನುಭಾವಿಕ ಕವಿತೆಗಳು ಇಲ್ಲಿ ಅಂತಸ್ಥವಾಗಿವೆ.

ಕಣವಿಯವರು ಚುಟುಕು ಅಥವಾ ಹನಿಗವನ ಪ್ರಕಾರದಲ್ಲಿ ಗಮನಾರ್ಹ ಕೃಷಿ ಮಾಡದಿದ್ದರೂ ಅರವತ್ತರ ದಶಕದಲ್ಲಿ ಆಗಾಗ ಹನಿಗವನಗಳನ್ನು ಬರೆದದ್ದು 'ಎರಡು ದಡ' ಕವನ ಸಂಗ್ರಹದಲ್ಲಿ 'ಆಗೀಗ ನಾಲ್ಕು ಸಾಲು' ಎಂಬ ಶೀರ್ಷಿಕೆಯಲ್ಲಿ ಮೂವತ್ತು ಮುಕ್ತಗಳು ಮೊದಲು ಪ್ರಕಟವಾದವು. ಇವುಗಳನ್ನು ಮೈಸೂರಿನ ರಾಜ್ಯ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಂ.ಜಿ.ಆರ್. ಅರಸು ಅವರು ತಮ್ಮ ವೈದ್ಯ ವಾರ್ತಾ ಪ್ರಕಾಶನದ ಮೂಲಕ **ಕಣವಿ ಚುಟುಕುಗಳು** ಶೀರ್ಷಿಕೆಯಲ್ಲಿ ೨೦೦೯ ರಲ್ಲಿ ಪ್ರಕಟಿಸಿದರು. ಇದಕ್ಕೆ ದೇಜಗೌ ಅವರು ಮುನ್ನುಡಿಯನ್ನೂ, ಡಾ. ಎಂ. ಅಕಬರ ಅಲಿ ಅವರು ಹಿನ್ನುಡಿಯನ್ನೂ ಬರೆದಿದ್ದಾರೆ. ಇದರಲ್ಲಿ ಬರುವ ಕಣವಿಯವರ ಹನಿಗವನ –

ನಾಡಿನ ತುಂಬಾ ನೂರು ಜಗದ್ಗುರು
ಇರುವುದು ಜಗವೊಂದೆ
ಕಾಡಿನ ತುಂಬಾ ಬಣ್ಣದ ಹೂಗಳು
ವಾಸನೆ ಕೆಲವೊಂದೇ

....

ಬತ್ತಿಹೋದ ಕೆರೆಯಲ್ಲಿ
ಬಂಗಲೆಗಳು ಎದ್ದುಬಿಟ್ಟಿವೆ
ಜಲದೇವತೆಗೆ
ಎಷ್ಟೊಂದು ಗೋರಿಗಳು !

ಮೊದಲಾದವು ಓದುಗರ ಗಮನ ಸೆಳೆಯುತ್ತವೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮನು ಬಳಿಗಾರ ನಿರ್ದೇಶಕರಾಗಿದ್ದಾಗ ೨೦೦೯ ರಲ್ಲಿ 'ಕಣವಿ ಕಾವ್ಯ ಭಂಡಾರ'ದ ಎರಡು ಬೃಹತ್ ಸಂಪುಟಗಳನ್ನು ಪ್ರಕಟಿಸಿತು. ಇವು ಕಣವಿಯವರ ಸಮಗ್ರ ಕಾವ್ಯದ ನಾಲ್ಕನೆಯ ಆವೃತ್ತಿಯಾಗಿವೆ. **'ಕಣವಿ ಕಾವ್ಯ ಭಂಡಾರ'**ದ ಮೊದಲ ಸಂಪುಟದಲ್ಲಿ **'ಕಾವ್ಯಾಕ್ಷಿ', ಭಾವಜೀವಿ** (ನೀಳ್ಗವಿತೆ), **ಆಕಾಶಬುಟ್ಟಿ, ಮಧುಚಂದ್ರ, ದೀಪಧಾರಿ, ಎರಡು ದಡ** ಸೇರಿವೆ. **ಕಣವಿ ಕಾವ್ಯ ಭಂಡಾರ**ದ ಎರಡನೆಯ ಸಂಪುಟದಲ್ಲಿ **ನಗರದಲ್ಲಿ ನೆರಳು, ಜೀವ ಧ್ವನಿ, ಕಾರ್ತೀಕದ ಮೋಡ, ಜೀನಿಯಾ, 'ಶಿಶಿರದಲ್ಲಿ ಬಂದ ಸ್ನೇಹಿತ, ಹಕ್ಕಿಪುಚ್ಚ, ಬರೆದು ತೀರದ ಬದುಕು, ನೀವೇ ಪ್ರಮಾಣು,** ಕೆಲವು ಅನುವಾದಿತ ಕವಿತೆಗಳೂ ಸೇರಿವೆ.

ಮೈಸೂರಿನ ಛಾಯಾಪತಿ ಅವರು ತಮ್ಮ ತ.ವೆಂ. ಸ್ಮಾರಕ ಗ್ರಂಥಮಾಲೆಯಲ್ಲಿ ಕಣವಿ ಅವರ ಎಲ್ಲ ಹದಿನಾರು ಸಂಕಲನಗಳನ್ನು ಪ್ರತ್ಯೇಕವಾಗಿ ೨೦೦೯ರಲ್ಲಿ ಮರುಮುದ್ರಣಗೊಳಿಸಿ ಕಣವಿಯವರ ಕವಿತೆ ಎಲ್ಲರಿಗೂ ಸಿಗುವಂತೆ ಮಾಡಿದ್ದಾರೆ.

ಬೆಂಗಳೂರಿನ ಸಪ್ನ ಬುಕ್ ಹೌಸ್‌ದವರು ೨೦೧೧ ರಲ್ಲಿ ಕಣವಿಯವರ **ಜೀವ ಜೀವಾಳ** ಆಯ್ದ ಕವಿತೆಗಳ ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಕವಿತೆಗಳನ್ನು ಆಯ್ಕೆ ಮಾಡಿ ಪ್ರಸ್ತಾವನೆ ಬರೆದವರು ಡಾ. ನರಹಳ್ಳಿ ಬಾಲ ಸುಬ್ರಹ್ಮಣ್ಯ ಅವರು. ಕಣವಿಯವರ ಎಪ್ಪತ್ತು ಕವಿತೆಗಳು **ಜೀವ ಜೀವಾಳ**ದಲ್ಲಿದ್ದು ಕಣವಿಯವರ ಕಾವ್ಯ ಜಗತ್ತಿನ ಅನುಸಂಧಾನ ಮಾಡುವವರಿಗೆ ಸಹಾಯಕವಾಗಿದೆ. ಅದೇ ಪ್ರಕಾಶಕರು 'ಭೂಮಿ ಬದುಕು' ಕವನ ಸಂಕಲನವನ್ನು ೨೦೧೨ ರಲ್ಲಿ ಪ್ರಕಟಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಪುಸ್ತಕ ಮಾಲಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ೨೦೧೪ ರಲ್ಲಿ ಕಣವಿಯವರ **'ಸುನೀತ ಸಂಪದ'** ಬೃಹತ್ ಸಂಪುಟವನ್ನು ಪ್ರಕಟಿಸಿದೆ. ಇದು ಕಣವಿಯವರ **'ಸುನೀತ ಸಂಪದ'**ದ ಎರಡನೆಯ ವಿಸ್ತೃತ ಆವೃತ್ತಿಯಾಗಿದೆ. ಸುನೀತ ಸಂಪದದ ಮೊದಲ ಆವೃತ್ತಿಯಲ್ಲಿ ೧೮೨ ಸುನೀತಗಳಿದ್ದರೆ ಈ ಆವೃತ್ತಿಯಲ್ಲಿ ೨೩೮ ಸುನೀತಗಳಿವೆ. ಕಣವಿಯವರು ಎಪ್ಪತ್ತು ವರ್ಷಗಳಿಂದ ಬರೆಯುತ್ತ ಬಂದ ಸುನೀತ ಸಂಪದ ಚೇತೋಹಾರಿಯಾಗಿದೆ.

ಬೆಂಗಳೂರಿನ ಸುಂದರ ಪ್ರಕಾಶನದ ಗೌರಿ ಸುಂದರ ಅವರು ೨೦೧೬ ರಲ್ಲಿ **ಕನ್ನಡ ಕವಿ ಕಾವ್ಯ ಕುಸುಮ** ಮಾಲೆಯಲ್ಲಿ ಚೆನ್ನವೀರ ಕಣವಿಯವರ ಆಯ್ದ ಮೂವತ್ತೊಂದು ಕವನಗಳನ್ನು ೮ನೆಯ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಸಾಹಿತ್ಯಾಸಕ್ತ ಓದುಗರಿಗೆ ಕಣವಿ ಕವಿತೆಗಳ ಸವಿಯನ್ನು ಒದಗಿಸುವ ಉದ್ದೇಶ ಈ ಸಂಗ್ರಹದ್ದಾಗಿದೆ.

ಕಣವಿ ಸಮಗ್ರ ಗದ್ಯ

ಕವಿ ಚೆನ್ನವೀರ ಕಣವಿ ಅವರ ಗದ್ಯದ ಹರಹು ಅತ್ಯಂತ ವಿಸ್ತಾರವಾದದ್ದು. ಅವರ ಕಾವ್ಯ ಬಹುಮುಖವಾಗಿ ವಿಮರ್ಶೆಗೆ ಒಳಪಟ್ಟಂತೆ ಗದ್ಯ ಬರಹಗಳು ವಿಮರ್ಶೆಯ ಸಂವಾದಕ್ಕೆ ಒಳಗಾಗಲಿಲ್ಲ. ಕಣವಿಯವರು ಹಿರಿಯ ಕವಿಗಳಂತೆ ಕವಿತೆ ಮತ್ತು ವಿಮರ್ಶಾ ವ್ಯವಸಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕಣವಿಯವರು ನವೋದಯ ಕಾಲಘಟ್ಟದಲ್ಲಿ ಕವಿತೆ ಬರೆಯಲು ಆರಂಭಿಸಿ ಮುಂದೆ ಎಲ್ಲ ಕಾಲಘಟ್ಟಗಳಲ್ಲಿ ತಮ್ಮ ಕಾವ್ಯ ರಚನೆಯನ್ನು ಮುಂದುವರಿಸಿಕೊಂಡು ಬಂದಂತೆ ವಿಮರ್ಶೆ ಹಾಗೂ ಲೇಖನಗಳನ್ನು ಬರೆಯುತ್ತಲೇ ಬಂದಿದ್ದಾರೆ. ಕಾವ್ಯ ರಚನೆಯಲ್ಲಿ ಯಾವ ಶ್ರದ್ಧೆ, ಸೃಜನಶೀಲತೆಯನ್ನು ಅವರು ತೋರುತ್ತ ಬಂದರೋ ಅದೇ ರೀತಿಯಲ್ಲಿ ವಿಮರ್ಶೆಯ ಬರವಣಿಗೆಯನ್ನೂ ನಡೆಸುತ್ತ ಬಂದರು.

ಕಣವಿಯವರ **ಸಾಹಿತ್ಯ ಚಿಂತನ** (೧೯೬೬), **ಕಾವ್ಯಾನುಸಂಧಾನ** (೧೯೭೧), **ಸಮಾಹಿತ** (೧೯೭೭), **ಮಧುರ ಚೆನ್ನ** (೧೯೮೪), **ಸಮತೋಲನ** (೧೯೮೯), **ವಚನಾಂತರಂಗ** (೧೯೯೯), **ಶುಭನುಡಿಯೆ ಹಕ್ಕಿ** (೨೦೦೦), **ಸಾಹಿತ್ಯ ಸಮಾಹಿತ** (೨೦೦೭), **ಸದ್ಭಾವ** (೨೦೦೮), ಈ ಗ್ರಂಥಗಳನೆಲ್ಲ ಸೇರಿಸಿ 'ಕಣವಿ ಸಮಗ್ರ ಗದ್ಯ' ಎರಡು ಬೃಹತ್ ಸಂಪುಟಗಳನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೨೦೧೦ ರಲ್ಲಿ ಪ್ರಕಟಿಸಿದೆ. ಅನಂತರ ಕಣವಿಯವರು ಬರೆದ ಗದ್ಯ ಬರಹಗಳು **ಅವಿನಾಭಾವ** (೨೦೧೪) ಮತ್ತು **ಸ್ಮೃತಿ ಸೌರಭ** (೨೦೧೬) ಎರಡು ಪ್ರತ್ಯೇಕ ಗ್ರಂಥಗಳಲ್ಲಿ ಪ್ರಕಟವಾಗಿವೆ. ಕಣವಿ ಸಮಗ್ರ ಗದ್ಯದ ಎರಡು ಸಂಪುಟಗಳು (೬೦೮+೮೧೪) ಹದಿನಾಲ್ಕು ನೂರಾ ಇಪ್ಪತ್ತೆರಡು ಪುಟಗಳು ಮತ್ತು **ಅವಿನಾಭಾವ** ೨೨೪ ಪುಟಗಳು, **ಸ್ಮೃತಿ ಸೌರಭ** ೧೩೮ ಪುಟಗಳ ವ್ಯಾಪ್ತಿಯನ್ನು ಪಡೆದುಕೊಂಡಿವೆ.

ಕಣವಿಯವರು ತಮ್ಮ ಸಾಹಿತ್ಯ ಚಿಂತನದಲ್ಲಿ ಗದ್ಯದಲ್ಲಿ 'ನನ್ನದು ಆಮೆಯ ಗತಿ, ಬರೆದದ್ದು ತೀರಾ ಕಡಿಮೆ' ಎಂದು ಹೇಳಿದ್ದರು. ಈಗ ಕಣವಿಯವರ ಗದ್ಯ ಬರವಣಿಗೆ ಹಯನಡಿಗೆಯಲ್ಲಿ ಸಾಗುತ್ತಲಿರುವದು ಅವರ ಬದಲಾದ ಮನೋಧರ್ಮದ ಪ್ರತೀಕವೇ ಆಗಿದೆ. ಕಣವಿಯವರ ಸಮಗ್ರ ಗದ್ಯದ ಎರಡು ಬೃಹತ್ ಸಂಪುಟಗಳು ನಮ್ಮ ಮುಂದಿವೆ. ಅವರ ಗದ್ಯ ಸಾಹಿತ್ಯವನ್ನು ನೋಡಿದಾಗ ಬೆರಗು ಮೂಡುತ್ತದೆ. ಇದರಲ್ಲಿ ಸಾಹಿತ್ಯ ವಿಮರ್ಶೆಯ ಲೇಖನಗಳಿವೆ. ವ್ಯಕ್ತಿಚಿತ್ರ ಸಾಹಿತ್ಯ ಸಂಬಂಧದ ಲೇಖನಗಳು, ಪ್ರಬಂಧ ಗುಣವುಳ್ಳ ಲೇಖನಗಳು, ಮುನ್ನುಡಿ– ಬೆನ್ನುಡಿಗಳು, ಭಾಷಣಗಳು ಹೀಗೆ ವೈವಿಧ್ಯಮಯವಾದ ಸಾಹಿತ್ಯವನ್ನು ಕಣವಿ ಸಾಹಿತ್ಯಲೋಕಕ್ಕೆ ನೀಡಿದ್ದಾರೆ.

ಕಣವಿಯವರ ವಿಮರ್ಶಾ ಲೇಖನಗಳು ಮುಖ್ಯವಾಗಿ ಕಾವ್ಯ ವಿಮರ್ಶೆಗೆ ಸಂಬಂಧಿಸಿರುವದು ಅವರ ಕಾವ್ಯಾಭಿರುಚಿಯ ಪ್ರತೀಕವಾಗಿದೆ. ಮಧ್ಯಕಾಲೀನ ಕನ್ನಡ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ, ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಕಣವಿಯವರ ವಿಮರ್ಶಾ ಲೇಖನಗಳು ಆಧುನಿಕ ಕನ್ನಡ ವಿಮರ್ಶಾ ಸಾಹಿತ್ಯದಲ್ಲಿ ವಿಶಿಷ್ಟವಾಗಿವೆ. ಕವಿ ಕಣವಿಯವರು ಕಾವ್ಯದ ಅಭಿವ್ಯಕ್ತಿ, ಕಾವ್ಯದ ಪರಂಪರೆ, ಉತ್ಕರ್ಷದ ಬಗೆಗೆ ನಿರಂತರವಾಗಿ ಆಸಕ್ತರಾದವರು. ಕನ್ನಡ ಕಾವ್ಯದ ಓದು, ಅದರ ಚಿಂತನ – ಮಂಥನದಲ್ಲಿ ತೊಡಗಿಕೊಂಡ ಕಣವಿಯವರು ತೋರಿಸಿದ ಕಾವ್ಯ ಪ್ರೀತಿ ಅವರ ವಿಮರ್ಶಾ ಲೇಖನಗಳ ವಿಶಿಷ್ಟತೆಯಾಗಿದೆ. ಸಾವಿರ ವರ್ಷದ ಕನ್ನಡ ಕಾವ್ಯಪರಂಪರೆಯಲ್ಲಿ ಅದರ ವಾರಸುದಾರನಾಗಿ ತಾವು ಆಧುನಿಕ ಕನ್ನಡ ಕಾವ್ಯಕ್ಕೆ ಯಾವ ಹೊಸ ನೆತ್ತರಿನ ಕೊಡುಗೆಯನ್ನು ಕೊಟ್ಟರೊ ಅವರ ಕಾವ್ಯದಲ್ಲಿ ಜೀವಂತ ಗತಿ ಹೇಗೆ ನಿರಂತರವಾಗಿ ಹರಿಯುತ್ತಿರುವಂತಾಯಿತೋ ಅದೇ ರೀತಿಯಲ್ಲಿ ಕಾವ್ಯ ವಿಮರ್ಶೆಯಲ್ಲೂ ಸಮಶ್ರುತಿ, ಸಮದರ್ಶನ, ಸಮತೋಲನ ಹರಿಯುತ್ತ ಬಂದುದನ್ನು ನಾವು ಕಾಣುತ್ತೇವೆ.

ಕಣವಿಯವರ ವಿಮರ್ಶಾ ಲೇಖನಗಳು ಪ್ರಕಟವಾದದ್ದು ನವ್ಯ ಸಾಹಿತ್ಯದ ಉತ್ಕರ್ಷದ ಸಂದರ್ಭದಲ್ಲಿ. ಕನ್ನಡದಲ್ಲಿ ಬಂದ ನವ್ಯ ವಿಮರ್ಶೆ ನವೋದಯ ಕಾವ್ಯ, ಸಾಹಿತ್ಯದ ಬಗೆಗೆ, ನಡೆದುಬಂದ ಹಾದಿಯ ಕಡೆ ಹೊರಳಿ ನೋಡಬಾರದು ಎಂಬ ಪಿತೃಹತ್ಯೆಯ ದೃಷ್ಟಿಯಿಂದಲೇ ನೋಡಿತು. ಆದರೆ ಚೆನ್ನವೀರ ಕಣವಿ ಅವರು ನವೋದಯ ಸಾಹಿತಿ ಹಾಗೂ ಸಾಹಿತ್ಯವನ್ನು ಆದರ ಭಾವದಿಂದಲೇ ಪರಿಶೀಲಿಸಿದರು. ಇದಕ್ಕೆ ಕಣವಿಯವರ ಮನೋಧರ್ಮವೂ ಕಾರಣವಾಗಿದೆ. ನವೋದಯ ಸಾಹಿತ್ಯದ ವಿಶಾಲದೃಷ್ಟಿ, ಸೌಂದರ್ಯಾತ್ಮಕ ನೆಲೆಗಳನ್ನು, ಕಣವಿಯವರು ಮೊದಲಿನಿಂದಲೂ ರೂಢಿಸಿಕೊಂಡು ಬಂದದ್ದರಿಂದ ಅವರ ವಿಮರ್ಶಾ ಲೇಖನಗಳು ಸಹೃದಯರನ್ನು ಬಹುವಾಗಿ ಆಕರ್ಷಿಸಿವೆ.

ಕಣವಿಯವರ ವ್ಯಕ್ತಿತ್ವದಲ್ಲಿ ಸ್ಥಾಯಿಭಾವವಾಗಿ ಕಾಣುವ ನಯ–ವಿನಯಗಳು ಅವರ ವಿಮರ್ಶಾ ಬರಹಗಳಲ್ಲೂ ಅಂತಸ್ಥವಾಗಿವೆ. ಅವರು ಯಾವುದೇ ಸಿದ್ಧಾಂತ, ವಾದ, ಪ್ರಣಾಲಿಗಳ ಹಿಂದೆ ಹೋಗದೆ ಕೃತಿಯನ್ನು ಸಹೃದಯತೆಯಿಂದ ಪರಿಶೀಲಿಸುತ್ತಾರೆ. ನಾವು ತಿಳಿಯಬೇಕಾದ ಅರ್ಥಲೋಕವನ್ನು ತೆರೆದು ತೋರಿಸುವ ಆಸ್ಥೆ ಅವರಲ್ಲಿರುವದನ್ನು ನಾವು ಕಾಣುತ್ತೇವೆ. ಕಣವಿಯವರು ಕೃತಿಯ ಲೇಖಕರ ಪರವಾಗಿಯಾಗಲಿ ವಿರೋಧವಾಗಿಯೇ ಆಗಲಿ ನಿಂತು ವಾದ ಮಂಡಿಸುವದಿಲ್ಲ. ಬೌದ್ಧಿಕ ಪ್ರದರ್ಶನಕ್ಕಾಗಿಯೇ ಅವರು ಹಾತೊರೆಯುವದಿಲ್ಲ. ಯಾವುದೇ ಒಂದು ಕಾವ್ಯ ಯಾವ ಯಾವ ಕಾರಣಗಳಿಂದ ಗುಣಾತ್ಮಕ ಮೌಲ್ಯಗಳನ್ನು ಪಡೆದುಕೊಂಡಿದೆಯೆಂಬುದನ್ನು ಅವರು ವಿಶ್ಲೇಷಿಸುತ್ತಾರೆ. ಕಣವಿಯವರು ಬರೆಯುವ ವಿಮರ್ಶಾ ಲೇಖನಗಳ ಹಿಂದೆ ಅವರ ವ್ಯಾಪಕ ಓದು, ವ್ಯಾಸಂಗಾಭಿರುಚಿಯಿದೆ. ಸಾಹಿತ್ಯ ಪರಂಪರೆಯ ಪರಿಪ್ರೇಕ್ಷೆಯನ್ನು ಇಟ್ಟುಕೊಂಡು ಕಾವ್ಯವನ್ನು ನೋಡುವ ಗುಣ ಮುಖ್ಯವಾಗಿರುವದನ್ನು ನಾವು ನೋಡುತ್ತೇವೆ. ತಮ್ಮ ಅಭಿಪ್ರಾಯಗಳಿಗೆ ಕಣವಿಯವರು ಕವಿ ಕೃತಿಗಳಿಂದಲೇ ಸಮರ್ಥನೆ ನೀಡುತ್ತಾರೆ.

ಯಾವುದೇ ವಿಮರ್ಶೆ ಬರೆಯುವಾಗ ಈವರೆಗೆ ಬಂದ ಕನ್ನಡ ವಿಮರ್ಶೆಯನ್ನೂ ಪರಿಶೀಲಿಸುತ್ತಾರೆ. ತಾವು ಓದಿದ ಕವಿಕೃತಿಗಳ ಸಂದರ್ಭೋಲ್ಲೇಖಗಳನ್ನು ಸರಿಯಾಗಿ ನಮೂದಿಸದೆ ಬಿಡುವದಿಲ್ಲ. ಹೀಗೆ ಎಚ್ಚರಿಕೆ ಮತ್ತು ಸಂಯಮ ಸಮತೂಕದಿಂದಲೇ ವಿಮರ್ಶಾ ಬರಹ ರೂಪಿಸುತ್ತಾರೆ.

ಕಣವಿಯವರ ಮಧ್ಯಕಾಲೀನ ಕನ್ನಡ ಸಾಹಿತ್ಯ ವಿಮರ್ಶೆಯ ಲೇಖನಗಳಲ್ಲಿ ವಚನ ಸಾಹಿತ್ಯ ವಿಮರ್ಶೆ ಪ್ರಮುಖ ಸ್ಥಾನ ಪಡೆದಿದೆ. ಕಣವಿಯವರು ವಚನ ಸಾಹಿತ್ಯವನ್ನು ತನ್ಮಯತೆಯಿಂದ ಅವಲೋಕಿಸುತ್ತಾರೆ. ವಚನಗಳ ವಿಮರ್ಶೆಗಿಂತ ವಿವೇಚನೆ ಮತ್ತು ವಿಶ್ಲೇಷಣೆ ಇಲ್ಲಿ ಪ್ರಮುಖವಾದದ್ದು. ಕಣವಿಯವರು 'ವಚನ ಸಾಹಿತ್ಯದಲ್ಲಿ ಉಪಮೆ' (ಸಾಹಿತ್ಯ ಚಿಂತನ) ಎಂಬ ಲೇಖನದಲ್ಲಿ ವಚನಕಾರರು ಮಾಮೂಲಿ ಉಪಮೆಗಳನ್ನು ತ್ಯಜಿಸಿ ತಮ್ಮ ಸುತ್ತಮುತ್ತಲಿನ ಜನಜೀವನದಿಂದ ನೇರವಾಗಿ ನುಡಿಚಿತ್ರಗಳನ್ನು ಎತ್ತಿಕೊಂಡಿರುವುದರಿಂದ ಓದುಗರ ಮನಸ್ಸನ್ನು ಬಹುಬೇಗ ಅವು ಸೂರೆಗೊಳ್ಳುತ್ತವೆ' ಎಂದು ಹೇಳಿದ್ದಾರೆ. ಲೇಖನದ ಶೀರ್ಷಿಕೆ 'ವಚನ ಸಾಹಿತ್ಯದಲ್ಲಿ ಉಪಮೆ' ಎಂದಿದ್ದರೂ ಬಸವಣ್ಣನವರ ವಚನಗಳಿಂದಲೇ ಅನೇಕ ಉಪಮೆಗಳನ್ನು ಎತ್ತಿಕೊಂಡು ವಿಶ್ಲೇಷಣೆ ಮಾಡಿದ್ದಾರೆ.

ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಬಸವಣ್ಣನವರ ವ್ಯಕ್ತಿತ್ವದ ಪ್ರಭಾವ ಕಣವಿಯವರ ಮೇಲೆ ಬಹುವಾಗಿ ಆದದ್ದು ಕಂಡು ಬರುತ್ತದೆ. 'ಬಸವಣ್ಣನವರ ಭಾವಚಿತ್ರ' (ಸಾಹಿತ್ಯ ಚಿಂತನ) ಲೇಖನದಲ್ಲಿ ಕೊಳದ ನಡುವೆ ಕಮಲ ಕಂಗೊಳಿಸುವಂತೆ ಬಸವಣ್ಣನವರ ಭಾವಶುದ್ಧಿ ನಮ್ಮ ಮನಸ್ಸನ್ನು ಆಕರ್ಷಿಸುತ್ತದೆ. ಅಂತರಂಗದ ಪ್ರಾಮಾಣಿಕತೆಯೇ ಬಸವಣ್ಣನವರ ವಚನಗಳ ಸ್ಥಾಯೀಭಾವ..... ವ್ಯಕ್ತಿ, ಸಮಾಜ, ವಿಶ್ವ ಹಾಗೂ ಅಧ್ಯಾತ್ಮ ಇವುಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸಿ ಸಮನ್ವಯಗೊಳಿಸಿದ ಅನುಭವ ಮಂಟಪದ ಅರಿವಿಗೆ ಅರವಟ್ಟಿಗೆ ಬಸವಣ್ಣನವರ ವಚನಗಳು ಎಂದು ಹೇಳಿದ್ದಾರೆ.

'ಅಚ್ಚ ಬದುಕಿನ ರತ್ನ ಮೌಕ್ತಿಕದಚ್ಚು' (ಸಮಾಹಿತ) ಲೇಖನದಲ್ಲಿ ಬಸವಣ್ಣನವರು ಎಲ್ಲರಂತೆಯೆ ಸಂಸಾರದ ಜಂಜಾಟಕ್ಕೆ ಒಳಗಾದವರು. ಜೀವದಯೆ ಬಸವಣ್ಣನವರ ವ್ಯಕ್ತಿತ್ವದ ಬಹುಮುಖ್ಯವಾದ ಮುಖ. ಅಂತೆಯೇ 'ದಯವಿಲ್ಲದ ಧರ್ಮಅದು ಏವುದಯ್ಯಾ?' ಎಂದು ಸವಾಲು ಹಾಕುತ್ತಾರೆ. ನಡೆ-ನುಡಿಯ ಸಮನ್ವಯವೇ ಬಸವಣ್ಣನವರ ವ್ಯಕ್ತಿತ್ವದ ವಜ್ರಪಿಂಡವಾಗಿದ್ದಿತು' ಎಂದು ಬಸವಣ್ಣನವರ ವ್ಯಕ್ತಿತ್ವವನ್ನು ವರ್ಣಿಸಿದ್ದಾರೆ.

ಕಣವಿಯವರು 'ಬಸವಣ್ಣನವರ ವಚನಗಳ ಆಶಯ' (ಸಮತೋಲನ) ಲೇಖನದಲ್ಲಿ ಬಸವಣ್ಣನವರ ಪ್ರಸಿದ್ಧವಾದ ವಚನಗಳ ಸಮಾಜೋ ಧಾರ್ಮಿಕ ಆಶಯಗಳನ್ನು ಚರ್ಚಿಸಿದ್ದಾರೆ. 'ಬಸವಣ್ಣನವರ ವಚನಗಳ ಸಾಹಿತ್ಯಿಕ ಮೌಲ್ಯ'

(ಕಾವ್ಯಾನುಸಂಧಾನ) ಅತ್ಯಂತ ವಿಸ್ತಾರವಾದ ಲೇಖನವಾಗಿದೆ. ಕಣವಿ ಅವರು ವಚನಾನುಸಂಧಾನ ಮಾಡುತ್ತ ವಚನಗಳು ಸ್ಫುರಿಸುವ ಅರ್ಥಲೋಕವನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತ ನಮ್ಮನ್ನು ಬಸವಣ್ಣನವರ ಭಾವಲೋಕಕ್ಕೆ ಕರೆದೊಯ್ಯುತ್ತಾರೆ. 'ವಚನಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಸಾಹಿತ್ಯಿಕ ಮೌಲ್ಯದೊಡನೆ ಅವು ಸ್ವಯಂಪೂರ್ಣ ಕಲಾಕೃತಿಗಳಾಗಿ ಕಂಗೊಳಿಸುವದಂತೂ ಸರಿಯೆ. ಆದರೆ ಬಸವಣ್ಣನವರ ಎಲ್ಲ ವಚನಗಳನ್ನು ಒಟ್ಟಾಗಿ ಓದಿಕೊಂಡು ಬಂದಂತೆ ಅವರ ಜೀವನದ ಮಹಾಕಾವ್ಯವನ್ನೋದಿದ ಅನುಭವ ನಮಗಾಗುತ್ತದೆ. ಈ ವಚನಶಿಲ್ಪದ ಮೂಲಕ ಅವರು ತಮ್ಮ ವ್ಯಕ್ತಿತ್ವವನ್ನೇ ಕಂಡರಿಸಿ ಕೃತಾರ್ಥರಾಗಿದ್ದಾರೆ ಎಂದು ಹೇಳುವಾಗ ಬಸವಣ್ಣನವರ ಪ್ರಭಾವದ ಪರಿಚಯವಾಗುತ್ತದೆ. ಹನ್ನೆರಡನೆಯ ಶತಮಾನದ ಬಸವಣ್ಣನವರು ಇಪ್ಪತ್ತನೆಯ ಶತಮಾನದ ಕುವೆಂಪು ಅವರಿಗೆ ವಿಭೂತಿ ಪುರುಷರಾಗಿ ಕಂಡಂತೆ ಕವಿ ಚೆನ್ನವೀರ ಕಣವಿ ಅವರಿಗೆ ಜೀವನ ಮಹಾಕಾವ್ಯವಾಗಿ ಬೆಳಗಿಂಗೆ ಮಹಾಬೆಳಗು ಆಗಿ ಭಾಸವಾಗಿರುವದನ್ನು ಇಲ್ಲಿ ಕಾಣುತ್ತೇವೆ. 'ವಚನಕಾರ ಆದಯ್ಯನ ವ್ಯಕ್ತಿತ್ವ' ('ಸಾಹಿತ್ಯ ಚಿಂತನ') ಎಂಬ ಮತ್ತೊಂದು ಲೇಖನದಲ್ಲಿ 'ಸೌರಾಷ್ಟ್ರ ಸೋಮೇಶ್ವರ' ಅಂಕಿತದಲ್ಲಿ ನಾಲ್ಕುನೂರು ವಚನ ಬರೆದ ಆದಯ್ಯನ ವ್ಯಕ್ತಿತ್ವದ ಅನುಭಾವದ ಸಿರಿಯನ್ನು ವಿವೇಚಿಸಿದ್ದಾರೆ.

ಕವಿ ಕಣವಿಯವರು ಆಕಾಶಗಾಮಿಯಾಗಿ ಎಂದೂ ಚಿಂತಿಸಿದವರಲ್ಲ. ಬಸವಣ್ಣನವರು ಮರ್ತ್ಯದಲ್ಲಿ ಮಹಾಮನೆ ಕಟ್ಟಿದ್ದು, ಅವರ ಮಹಾಮಾರ್ಗದಲ್ಲಿ ಶಿವಶರಣರು ನಡೆದಿದ್ದು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಚರಿತ್ರಾರ್ಹವಾದದ್ದು. ಲೋಕದ ಜನರ ಮಧ್ಯೆ ನಿಂತು ಬಸವಣ್ಣನವರು ಅವರ ಒಳಿತಿಗಾಗಿ ಸಾಮಾಜಿಕ ಆಂದೋಲನ ಆರಂಭಿಸಿದ್ದು ಎಷ್ಟು ಪ್ರಭಾವಶಾಲಿಯಾಯಿತು ಎಂದರೆ ಮುಂದೆ ಬಂದ ಹರಿದಾಸರೂ ಭಕ್ತಿಯ ಆಂದೋಲನದಲ್ಲಿ ತೊಡಗಿಕೊಂಡಿದ್ದರೂ ಸಾಮಾಜಿಕ ಬದಲಾವಣೆಗೆ ವಚನಕಾರರ ಮಾರ್ಗವನ್ನೇ ಅನುಸರಿಸಿದರು. ಆದ್ದರಿಂದಲೇ ಪುರಂದರದಾಸರ ಕೀರ್ತನೆಗಳು ಕಣವಿಯವರಿಗೆ ಪ್ರಿಯವಾಗಿವೆ. 'ಪುರಂದರ ದಾಸರ ಪದಗಳಲ್ಲಿ ಕಾವ್ಯಗುಣ' (ಸಾಹಿತ್ಯ ಚಿಂತನ) ಲೇಖನದಲ್ಲಿ ಪುರಂದರದಾಸರ ಕೀರ್ತನೆಗಳಲ್ಲಿ ಅವರ ಪ್ರಾಸಾದಿಕ ವಾಣಿಯನ್ನು ವಿಶ್ಲೇಷಿಸಿದ್ದಾರೆ. ಪುರಂದರರ ಕೀರ್ತನೆಗಳಲ್ಲಿ ಲೋಕ ನೀತಿ, ಸುಳಾದಿ, ಉಗಾಭೋಗಗಳಲ್ಲಿ ಕಾಣುವ ಕಾವ್ಯಗುಣವನ್ನು ಅನೇಕ ನಿದರ್ಶನಗಳ ಮೂಲಕ ವಿವೇಚಿಸಿದ್ದಾರೆ.

ಸರ್ವಜ್ಞ ಮಧ್ಯಕಾಲೀನ ಕನ್ನಡ ಸಾಹಿತ್ಯದ ಇನ್ನೊಬ್ಬ ಜನಪ್ರಿಯ ಕವಿ. 'ಸರ್ವಜ್ಞ : ಹೊಲಬರಿತು ಹೊತ್ತಿಗೊದಗುವ ಮಾತು' (ಸಾಹಿತ್ಯ ಚಿಂತನ) ಲೇಖನದಲ್ಲಿ ಸರ್ವಜ್ಞನ ಸಾಮಾಜಿಕ ಪ್ರಜ್ಞೆ, ಪ್ರಾಮಾಣಿಕತೆ, ಲೋಕ ಕಲ್ಯಾಣ ದೃಷ್ಟಿ, ಸತ್ಯಾನ್ವೇಷಣೆಯ ಗುಣಗಳನ್ನು ವಿವರಿಸಿದ್ದಾರೆ. 'ಸಮಕಾಲೀನ ಪ್ರಜ್ಞೆ, ಬಳಕೆಯ ಮಾತಿನ ಪ್ರಯೋಗ, ವಾಸ್ತವಿಕ ಉಪಮೆಗಳು, ತೇಜಸ್ವಿಯಾದ ಅನುಭಾವ ಮತ್ತು ವಿಡಂಬನ – ಇವುಗಳಿಂದ ಸರ್ವಜ್ಞ

ಇಂದಿನ ಕವಿಗಳಿಗೆ ಬಂಧುವಾಗಿದ್ದಾನೆ. ಅವನ ಭಾಷೆ ಜನಪದ ಭಾಷೆಯಂತೆ ತೋರಿದರೂ ಅದು ಭಾವಪ್ರಧಾನವಾಗಿದೆ. ಬೌದ್ಧಿಕ ಸಂಸ್ಕಾರವನ್ನು ಹೊಂದಿ ಚುರುಕಾಗಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡದಲ್ಲಿರುವ ಹಾಡುಗಬ್ಬಗಳ ಪರಂಪರೆಯ ಬಗೆಗೂ ಕಣವಿಯವರು ಚಿಂತಿಸಿದ್ದಾರೆ. 'ಮುಪ್ಪಿನ ಷಡಕ್ಷರಿಯ ಮುಪ್ಪರಿಯದ ಹಾಡುಗಳು' (ಸಾಹಿತ್ಯ ಚಿಂತನ) ಲೇಖನದಲ್ಲಿ ನಿಜಗುಣ ಶಿವಯೋಗಿಗಳು ನಿಜಾನಂದದಲ್ಲಿ ನುಡಿಸಿದ ರಾಗರಸದ ತರಂಗಿಣಿ ಮುಪ್ಪಿನ ಷಡಕ್ಷರಿಯ ಹಾಡುಗಳಲ್ಲಿ ಪ್ರವಹಿಸಿರುವದನ್ನು ಗುರುತಿಸುತ್ತ ಈ ಹಾಡುಗಬ್ಬ ಪರಂಪರೆಯ ಸಾರವನ್ನು ಹೀರಿಕೊಂಡು ಆಧುನಿಕ ಕನ್ನಡ ಕಾವ್ಯದಲ್ಲಿ ಭಾವಗೀತೆ ಮುನ್ನಡೆದಿರುವದನ್ನು ವಿವರಿಸಿದ್ದಾರೆ.

ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಕಣವಿಯವರ ಈ ಎಲ್ಲ ವಿಮರ್ಶಾ ಲೇಖನಗಳಲ್ಲಿ ಸಾಹಿತ್ಯ ಚಿಂತನೆಯೇ ಪ್ರಧಾನವಾದದ್ದು. ಬಸವಣ್ಣನವರ ವಚನಗಳನ್ನು ಪುನರ್ ಸಂಯೋಜಿಸಿ, ಅವುಗಳ ವಿಶಿಷ್ಟತೆಯನ್ನು ಸಾಹಿತ್ಯಿಕ ಮೌಲ್ಯವನ್ನು ಕಣವಿಯವರು ವಿವೇಚಿಸಿದ್ದಾರೆ. ಬಸವಣ್ಣನವರ ವಚನಗಳು, ಪುರಂದರದಾಸರ ಕೀರ್ತನೆಗಳಲ್ಲಿರುವ ಸಾಮಾಜಿಕ ಆಶಯಗಳು ಕಣವಿಯವರಿಗೆ ಅತ್ಯಂತ ಪ್ರಿಯವಾದದ್ದು. ಬಸವಣ್ಣನವರ ವಚನಗಳ ಪುನರ್‌ವ್ಯಾಖ್ಯಾನವಾಗಲೀ, ಸಂಸ್ಕೃತಿ ಚಿಂತನೆಯಾಗಲೀ, ಮೌಲ್ಯ ನಿರ್ಧಾರಕ್ಕಿಂತ ಮುಖ್ಯವಾಗಿ ಕನ್ನಡ ಸಾಹಿತ್ಯದ ಓದಿಗೆ ಮೊದಲ ಪ್ರವೇಶ ಪಡೆಯುತ್ತಿರುವ ಆಸಕ್ತರನ್ನು ಕಣವಿಯವರ ವಿಮರ್ಶೆಯ ಲೇಖನಗಳು ಉಲ್ಲಾಸಪಡಿಸುತ್ತವೆ.

ಕಣವಿಯವರು ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರನ್ನು ಅತ್ಯಂತ ಆದರ, ಗೌರವಪೂರ್ವಕವಾಗಿ ನೋಡುತ್ತ ಬಂದಿದ್ದಾರೆ. ನವೋದಯದ ಹಿರಿಯ ಕವಿಗಳಾದ ಬೇಂದ್ರೆ, ಮಧುರಚೆನ್ನ, ಕುವೆಂಪು, ವಿ.ಸೀ. ಗೋಕಾಕ, ಆನಂದಕಂದ ಮೊದಲಾದವರ ಕಾವ್ಯದ ಚರ್ಚೆ ಕಣವಿಯವರ ವಿಮರ್ಶೆಯಲ್ಲಿ ಸೇರಿದೆ. ಯಾವ ದ್ವಂದ್ವವೂ ಇಲ್ಲದೆ ಕಾವ್ಯ ವಿಮರ್ಶೆಯ ಲೇಖನಗಳನ್ನು ಕಣವಿಯವರು ಬರೆದಿದ್ದಾರೆ.

ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ೧೯೪೧ ರಲ್ಲಿ ಧಾರವಾಡಕ್ಕೆ ಬಂದ ಕಣವಿ ಅವರು ವರಕವಿ ಬೇಂದ್ರೆ ಅವರ ಆಕರ್ಷಣೆಗೆ ಒಳಗಾದವರು. ಧಾರವಾಡದ ಸಾರ್ವಜನಿಕ ಸಮಾರಂಭಗಳಲ್ಲಿ ಬೇಂದ್ರೆಯವರ ಭಾಷಣ, ಕಾವ್ಯವಾಚನ ಮತ್ತು ಬೇಂದ್ರೆ ಭಾವಗೀತೆಗಳನ್ನು ಕೇಳುತ್ತಿದ್ದ ಕಣವಿಯವರಿಗೆ ಬೇಂದ್ರೆ ಕಾವ್ಯದ ಸೆಳೆತ ಉಂಟಾಯಿತು. ಬೇಂದ್ರೆಯವರೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕಣವಿ ಅವರ ಕವಿತೆಗಳನ್ನು ಗಮನಿಸಿದ್ದರು. ಅವರ 'ಕಾವ್ಯಾಕ್ಷಿ' ಮೊದಲ ಕವಿತಾ ಸಂಕಲನಕ್ಕೆ ಬೇಂದ್ರೆ ಮುನ್ನುಡಿ ಬರೆದರು. ಕಣವಿ ಬೇಂದ್ರೆ ಸಾಹಿತ್ಯ ಸಂಬಂಧ ಗಾಢವಾಗಿ ಬೆಳೆದು ಬಂದುದು ಧಾರವಾಡದ ಸಾಹಿತ್ಯದ ಇತಿಹಾಸದಲ್ಲಿ ಮಹತ್ವಪೂರ್ಣವಾದ ಸಂಗತಿಯಾಗಿದೆ. ಬೇಂದ್ರೆಯವರ ಕವಿತೆಗಳನ್ನು ಓದಿ ಆನಂದಿಸಿದ ಕವಿ ಕಣವಿ

ಅವರು ಬೇಂದ್ರೆಯವರ ಕಾವ್ಯಾಧ್ಯಯನದ ಹತ್ತು ಲೇಖನಗಳನ್ನು ಬರೆದಿದ್ದಾರೆ. ಅವುಗಳನ್ನು ಇತ್ತೀಚೆಗೆ ಧಾರವಾಡದ ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ **'ಬೇಂದ್ರೆ ಕಾವ್ಯದ ಕುಹುಕ್ಕುಹೂ'** (೨೦೧೨) ಪ್ರತ್ಯೇಕ ವಿಮರ್ಶಾಗ್ರಂಥವನ್ನು ಪ್ರಕಟಿಸಿದೆ.

'ಬೇಂದ್ರೆ ಕಾವ್ಯದ ಭಾವ ಸಂಪದ' (ಸಾಹಿತ್ಯ ಚಿಂತನ)ದಲ್ಲಿ 'ಬೇಂದ್ರೆ ಕವಿತೆಗಳು ಕಾವ್ಯಗುಣದಲ್ಲಿ ಉನ್ನತ ಮಟ್ಟವನ್ನು ಬಿಟ್ಟು ಕೆಳಗಿಳಿಯುವದಿಲ್ಲ. ವಸ್ತು ಎಷ್ಟೇ ಸಾಮಾನ್ಯವೆನಿಸಿದರೂ ಅದು ತನ್ನ ವಿಶೇಷತೆಯನ್ನು ಬಿಟ್ಟುಕೊಡದೆ, ಭಾವಸಂಪತ್ತನ್ನು ಗಳಿಸಿಕೊಂಡೇ ಬರುತ್ತದೆ. ಯಾವ ವಾಗಾಡಂಬರಕ್ಕೂ ಎಡೆಗೊಡದೆ ಕಿರಿದರಲ್ಲಿ ಭಾವಗರ್ಭಿತವಾಗಿ, ನಾದ ಮಾಧುರ್ಯದಿಂದ, ಧ್ವನಿಪೂರ್ಣವಾಗಿ ಓದುಗರನ್ನು ರಸಪರವಶರನ್ನಾಗಿ ಮಾಡುತ್ತದೆ. ಜಾನಪದ ಶೈಲಿ, ಛಂದಸ್ಸುಗಳಿಂದ ಆತ್ಮೀಯತೆ ಪಡೆಯುತ್ತದೆ. ಬೇಂದ್ರೆಯವರ ಅತ್ಯುಚ್ಚ ಕಲ್ಪಕತೆ ವಿಶ್ವರೂಪಕಗಳನ್ನು ಬಳಸಿದಾಗ ಅದರ ಭವ್ಯತೆಯ ಅರಿವೂ ನಮಗಾಗುತ್ತದೆ' ಎಂದಿದ್ದಾರೆ. ಬೇಂದ್ರೆ ಭಾವಗೀತಗಳ ರಸಸ್ಥಾನಗಳನ್ನು ಸ್ಪರ್ಶಿಸಿ ಅದರ ಅನುಭೂತಿ ನಮಗಾಗುವಂತೆ ಮಾಡಿದ್ದಾರೆ.

ಕವಿ ಅಂಬಿಕಾತನಯದತ್ತರ ಅಖಂಡ ತಪಸ್ಸಿನ ಫಲವಾದ 'ಅರಳು–ಮರಳು' ಪಂಚಕಾವ್ಯ ಗುಚ್ಛದಲ್ಲಿ ಕವಿಯ ಜೀವನದೃಷ್ಟಿ ವಿಕಾಸಗೊಳ್ಳುತ್ತ ಸಾಧನೆಯ ಮಾರ್ಗದಲ್ಲಿ ಉನ್ನತ ಹಂತ ಮುಟ್ಟಿರುವದನ್ನು 'ಅರಳು–ಮರಳು' (ಸಾಹಿತ್ಯ ಚಿಂತನ) ವಿಮರ್ಶೆಯಲ್ಲಿ ವ್ಯಕ್ತಪಡಿಸಿದ್ದಾರೆ. ಕಾವ್ಯಕೃತಿಗಳ ಬಗೆಗೆ ಬರೆಯುವಾಗ ಕಣವಿಯವರು ತುಂಬ ಎಚ್ಚರಿಕೆಯಿಂದ ಪ್ರತಿಕ್ರಿಯೆ ನೀಡುವದನ್ನು ಇಲ್ಲಿ ಗಮನಿಸಬೇಕು. "ಅಂಬಿಕಾತನಯ ದತ್ತರ ಹಿಂದಿನ ಕವನ ಸಂಗ್ರಹಗಳೆಲ್ಲ ಒಂದು ತೂಕವಾದರೆ 'ಅರಳು–ಮರಳು' ಇನ್ನೊಂದು ತೂಕ. ಆದರೆ ಎರಡನ್ನೂ ಒಂದೇ ತಕ್ಕಡಿಯಲ್ಲಿ ತೂಗಬಾರದು" ಎಂದು ಕಣವಿ ಹೇಳಿದರೆ ಅನಂತಮೂರ್ತಿ ಅವರು ಅರಳು–ಮರಳು ವರೆಗಿನ ಬೇಂದ್ರೆ ನಿಜವಾದ ಕವಿ ಎಂದು ಪ್ರತಿಕ್ರಿಯಿಸಿ ಕೆಲಕಾಲದ ನಂತರ ತಾನು ಹಾಗೆ ಹೇಳಿದ್ದು ತಪ್ಪು ಎಂದು ಸ್ವತಃ ಅನಂತಮೂರ್ತಿ ಒಪ್ಪಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಬೇಂದ್ರೆ ಕಾವ್ಯದ ಬಗೆಗೆ ಪ್ರಾಯೋಗಿಕ ವಿಮರ್ಶೆಯ ಒಂದು ಲೇಖನವೂ ಇದರಲ್ಲಿದೆ. 'ಎದೆಯ ಒಕ್ಕಲಿಗನ ಹಾಡು' (ಸಮಾಹಿತ) ಬೇಂದ್ರೆಯವರ 'ನಾಕುತಂತಿ'ಯಲ್ಲಿ ಬರುವ ಒಂದು ಕವಿತೆಯಾಗಿದ್ದು ಅದರಲ್ಲಿ ಮೂಡಿದ ಒಕ್ಕಲುತನದ ಪ್ರತಿಮೆಯೇ ತನ್ನ ಸಕಲ ಸಲಕರಣೆಗಳೊಂದಿಗೆ ಸಂಪುಷ್ಟಿಗೊಂಡು ಭಾವ ವಿಕಾಸದ ಮಾರ್ಗದಲ್ಲಿ ಕವಿಯ ಸಮಗ್ರಾನುಭವ ನಿರೂಪಣೆಗೆ ಸಿದ್ಧವಾದಂತಿದೆ' ಎಂದು ವಿಶ್ಲೇಷಿಸಿದ್ದಾರೆ.

ಕಣವಿ ಅವರು 'ಬೇಂದ್ರೆ : ಕಾವ್ಯ ಭಾಷೆ ಮತ್ತು ಪ್ರತಿಮಾ ಯೋಜನೆ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಬೇಂದ್ರೆಯವರ ಕಾವ್ಯಭಾಷೆಯ ಚರ್ಚೆಯನ್ನು ಮಾಡುತ್ತ 'ಶಿಷ್ಟ ಕನ್ನಡದಲ್ಲಿ ಕವಿತೆಗಳನ್ನು ಬರೆದಿದ್ದರೂ ಬೇಂದ್ರೆ ಕಾವ್ಯಭಾಷೆಯ ವೈಶಿಷ್ಟ್ಯ ಎದ್ದು ಕಾಣುವದು ಉತ್ತರ ಕರ್ನಾಟಕದ ಜನಪದ ಉಪಭಾಷೆಯನ್ನು ಅವರು ಬಳಸಿಕೊಂಡ ರೀತಿಯಲ್ಲಿ. ಹೊಸಗನ್ನಡ ಕಾವ್ಯಕ್ಕೆ ಯಾವುದೇ ಸಿದ್ಧಭಾಷೆ ಇನ್ನೂ ರೂಪುಗೊಂಡಿರದ ಸಂದರ್ಭದಲ್ಲಿ ಭಾಷೆಯ ಮಡಿವಂತಿಕೆಯಿಂದ ಹೊರಬಂದು, ಆಡುನುಡಿಯನ್ನು,

ಜನಪದ ಭಾಷೆಯನ್ನು ಕಾವ್ಯಕ್ಕೆ ಒಗ್ಗಿಸಿಕೊಂಡ, ಬಗ್ಗಿಸಿಕೊಂಡ ನಿರ್ಧಾರ ಹಾಗೂ ಅದರಲ್ಲಿ ಪಡೆದ ಕಣ್ಣು ಕುಕ್ಕುವಂತಹ ಯಶಸ್ಸು ಕನ್ನಡ ಸಾಹಿತ್ಯದ ದೃಷ್ಟಿಯಿಂದ ಒಂದು ಐತಿಹಾಸಿಕವಾದ ಮಹತ್ವದ ಸಂಗತಿಯಾಗಿದೆ' ಎಂದಿದ್ದಾರೆ. ಬೇಂದ್ರೆಯವರ ಕಾವ್ಯಭಾಷೆಯ ರೂಪಕಶಕ್ತಿ ವಿನೂತನವಾದ ಪ್ರತಿಮಾ ಸೃಷ್ಟಿಗೂ ನೆಲೆಯಾಗಿದ್ದು ಅದು ಹೆಚ್ಚು ಧ್ವನಿಪೂರ್ಣವೂ ಆಗಿದೆ..... ಬೇಂದ್ರೆಯವರ ಕಾವ್ಯಪ್ರತಿಮೆಗಳ ಒಂದು ಮುಖ್ಯ ಲಕ್ಷಣ ಅವು ಕೆಲವು ಸಂದರ್ಭಗಳಲ್ಲಿ ಕವಿಯ ವ್ಯಕ್ತಿತ್ವದೊಡನೆ ಹೊಂದಿರುವ ಅವಿನಾಭಾವ ಸಂಬಂಧ. ಉದಾಹರಣೆಗೆ, 'ಮಲ್ಲಾಡದ ಗಿಣಿ', 'ನಿರ್ಭಯ', 'ಶುಭ ನುಡಿಯೆ ಶಕುನದ ಹಕ್ಕಿ' –ಇವು ಕವಿಯ ಭಾವಸ್ಥಿತಿಗಳಿಗೆ ಒಡ್ಡಿದ ಪ್ರತಿಮೆಗಳು. ವ್ಯಕ್ತಿನಿಷ್ಠವಾದರೂ ವಸ್ತುನಿಷ್ಠವಾಗಿ, ನಾಟಕೀಯವಾಗಿ ಹೇಳುವ ಅವಕಾಶವನ್ನು ಅವು ಪಡೆದುಕೊಂಡಿವೆ. ಇಂಥ ಚರ್ಚೆಯ ಮೂಲಕ ಕಣವಿಯವರು ಬೇಂದ್ರೆಯವರ ಅನನ್ಯತೆಯನ್ನು ಗುರುತಿಸುವದನ್ನು ನಾವು ಕಾಣುತ್ತೇವೆ.

ಬೇಂದ್ರೆಯವರನ್ನು ಕುರಿತು ಕನ್ನಡದ ಮೂವರು ಲೇಖಕರ ಪುಸ್ತಕಗಳ ಅವಲೋಕನವನ್ನೂ ಕಣವಿಯವರು ಮಾಡಿದ್ದಾರೆ. ಕನ್ನಡದ ಹಿರಿಯ ಲೇಖಕರಾಗಿದ್ದ ಎನ್ಕೆ ಅವರ **ಬೇಂದ್ರೆ ನಾ. ದ. ಸಂವಾದ** ಮೊದಲನೆಯದು. ಜ್ಞಾನಪೀಠ ಪ್ರಶಸ್ತಿ ಪಡೆದ ಬೇಂದ್ರೆಯವರ ಒಡನಾಟದ ಅನುಭವ ಕಥನದ ಏಳು ಪ್ರಬಂಧಗಳ ಹರಟೆಯ ರೂಪದಲ್ಲಿರುವ ಈ ಪುಸ್ತಕದಲ್ಲಿ ಕಾಣುವ ಬೇಂದ್ರೆ ದರ್ಶನವನ್ನು ವಿವರಿಸಿದ್ದಲ್ಲದೆ ಎನ್ಕೆಯವರು ಬೇಂದ್ರೆಯವರ ಚರಿತ್ರೆಯನ್ನು ಒಬ್ಬ ಬಾಸ್ವೆಲ್ ಆಗಿ ಕಟ್ಟಿಕೊಡಲಿ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಮಾರಂಭದಲ್ಲಿ ಬೇಂದ್ರೆಯವರು ಮಾಡಿದ ಭಾಷಣದ ಸೊಗಸಾದ ಕನ್ನಡ ಅನುವಾದ ಗ್ರಂಥದ ಕೊನೆಯಲ್ಲಿ ಪ್ರಥಮ ಬಾರಿಗೆ ಪ್ರಕಟವಾಗಿರುವದನ್ನು ಉಲ್ಲೇಖಿಸಿ ಅದರಲ್ಲಿ ತತ್ವಜ್ಞಾನಿ, ಅಧ್ಯಾತ್ಮಿ, ವಿದ್ವಾಂಸ ಮೂವರು ಕವಿಯಲ್ಲಿ ಸಮರಸಗೊಂಡಿದ್ದನ್ನು ಗುರುತಿಸಿದ್ದಾರೆ. ಎರಡನೆಯದು ಸುಮತೀಂದ್ರ ನಾಡಿಗರ ಮಹಾಪ್ರಬಂಧ **'ಬೇಂದ್ರೆ ಕಾವ್ಯದ ವಿಭಿನ್ನ ನೆಲೆಗಳು.'** (ಸದ್ಭಾವ) ಅದರ ಬಗ್ಗೆ ಬರೆಯುತ್ತ ಸಂಶೋಧನೆ ಹಾಗೂ ವಿಮರ್ಶೆ ಪರಸ್ಪರ ಪೋಷಕವಾಗಿ, ಬೇಂದ್ರೆ ಕಾವ್ಯದ ವೈವಿಧ್ಯಗಳನ್ನು ಒಟ್ಟಿಗೆ ಹಿಡಿದು ಅವುಗಳ ಪರಸ್ಪರ ಸಂಬಂಧವನ್ನು ಕೃತಿನಿಷ್ಠ ವಿಶ್ಲೇಷಣೆಯ ಮೂಲಕ ವ್ಯಾಖ್ಯಾನಿಸುವ ರೀತಿ ಮೆಚ್ಚುವಂತಿದೆ ಎಂದು ಕಣವಿ ಅವರು ಉತ್ಸಾಹದಿಂದ ಹೇಳಿದ್ದಾರೆ. ಡಾ. ಜಿ. ಎಸ್. ಆಮೂರ ಅವರು 'ಭುವನದ ಭಾಗ್ಯ'ದಲ್ಲಿ ನಾಡಿಗರ ವಿಚಾರಗಳನ್ನು ಬೇರೊಂದು ರೀತಿಯಲ್ಲಿ ಚರ್ಚಿಸಿರುವದನ್ನೂ ಕನ್ನಡ ವಿಮರ್ಶೆ ಗುರುತಿಸಿದೆ. ಕಣವಿಯವರು ವಿಮರ್ಶೆಯಲ್ಲಿ ನಿಷ್ಠುರತೆಗಿಂತ ಸಹೃದಯತೆಗೆ ಹೆಚ್ಚಿನ ಒತ್ತು ನೀಡುವದನ್ನು ನಾವು ಗಮನಿಸುತ್ತೇವೆ.

ಮೂರನೆಯ ಪುಸ್ತಕ ಜೀವಿ ಕುಲಕರ್ಣಿ ಅವರ 'ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ.' ಇದರಲ್ಲಿ ಜೀವಿ ಅವರು ವರಕವಿ ಬೇಂದ್ರೆಯವರೊಡನೆ ನಡೆಸಿದ ಮುಕ್ತ ಮನಸ್ಸಿನ ಸಹೃದಯ ಸಂವಾದವನ್ನು ಕುರಿತು ಚರ್ಚಿಸಿದ್ದಾರೆ. ನನಗೆ ಮತ್ತೊಮ್ಮೆ

ಹುಟ್ಟುವ ಪ್ರಸಂಗ ಬಂದರೆ ವಿಜ್ಞಾನಿಯಾಗ ಬಯಸುವೆ. ನನ್ನ ಅನೇಕ ಸಂಶೋಧನೆಗಳು ಅರ್ಧದಲ್ಲಿಯೇ ಉಳಿದಿವೆ..... ನನ್ನ ಜೀವನವನ್ನೇ ಕರ್ನಾಟಕಕ್ಕೆ ಕೊಟ್ಟಿದ್ದೇನೆ. ದೇಹವನ್ನು ಬಹುಶಃ ಮಹಾರಾಷ್ಟ್ರದಲ್ಲಿ ಬಿಡುವೆ ಎಂದು ಹೇಳಿದ್ದ ಬೇಂದ್ರೆ ಭವಿಷ್ಯವಾಣಿ ನಿಜವಾಗಿಬಿಟ್ಟಿತು. ವರಕವಿಯೊಂದಿಗೆ ಒಡನಾಟ – ಲೇಖನದಲ್ಲಿ ಕಣವಿ – ಬೇಂದ್ರೆ ನಾಲ್ಕು ದಶಕಗಳ (೧೯೪೧–೧೯೮೧) ಒಡನಾಟದ ಸಂಬಂಧಗಳನ್ನು ನೆನೆದಿದ್ದಾರೆ. 'ಬೇಂದ್ರೆ ಕಾವ್ಯ ಪದ್ಧತಿ', 'ಬೇಂದ್ರೆ ಮತ್ತು ನಾವು (ಕವಿ ಮಿತ್ರರು) ಒಂದು ಸೃಜನಾತ್ಮಕ ಪ್ರತಿಕ್ರಿಯೆ' ಬೇಂದ್ರೆ ನಿಧನದ ನಂತರ ಬರೆದ ಲೇಖನಗಳಾಗಿವೆ. "ಮಹಾಕವಿಯೊಬ್ಬ ಸಾಮಾನ್ಯರಂತೆಯೇ ಓಡಾಡಿಕೊಂಡು ನಮ್ಮ ನಿಮ್ಮೊಡನೆ ಬೆರೆತು, ಜಗಳಾಡಿ ಮತ್ತೆ ಕೂಡಿ 'ಸಮರಸವೇ ಜೀವನ' ಎಂಬ ತಮ್ಮ ಮಾತಿಗೆ ತಾವೇ ಸಾಕ್ಷಿಯಾಗಿದ್ದುದನ್ನು ಹೃದಯಾರೆ ಅನುಭವಿಸುವ ಭಾಗ್ಯ ನನ್ನ ಹಾಗೂ ಸಮಕಾಲೀನ ಕವಿಗಳದಾಗಿತ್ತು" ಎಂದು ಕಣವಿಯವರು ಪ್ರತಿಕ್ರಿಯಿಸಿದ್ದಾರೆ. ಕಣವಿ ಮತ್ತು ವರಕವಿ ಬೇಂದ್ರೆಯವರ ಸಾಹಿತ್ಯ ಸಂಬಂಧ ಅತ್ಯಂತ ಗಾಢವಾಗಿರುವದನ್ನು ಕಣವಿ ವಿಮರ್ಶೆ ಹೇಳುತ್ತದೆ. ಕವಿ ಕಣವಿಯವರು ವಿದ್ಯಾರ್ಥಿ ಜೀವನದಲ್ಲಿರುವಾಗಲೇ ಕನ್ನಡ ನವೋದಯದ ಹಿರಿಯ ಕವಿ ಮಧುರಚೆನ್ನರ ಪ್ರಭಾವಕ್ಕೆ ಒಳಗಾದರು. ೧೯೫೦ ರಲ್ಲಿ ಪ್ರಕಟವಾದ ಕಣವಿಯವರ 'ಭಾವಜೀವಿ' ಮಧುರಚೆನ್ನರಿಗೆ ಅರ್ಪಿತವಾಗಿದೆ. ಮಧುರಚೆನ್ನ ಜೀವನ ಮತ್ತು ಸಾಹಿತ್ಯ, ಮಧುರಚೆನ್ನರ 'ಮಧುರಗೀತ', 'ಮಧುರ ಚೆನ್ನರ ಅನುಭಾವ ಕಾವ್ಯ. ಲೇಖನಗಳ ಮೂಲಕ ಮಧುರಚೆನ್ನರ ಬಗೆಗೆ ವಿಸ್ತೃತ ಅಧ್ಯಯನವನ್ನು ಕಣವಿಯವರು ಒದಗಿಸಿದ್ದಾರೆ. ಮಧುರಚೆನ್ನ ಕಾವ್ಯನಾಮದ ಹಲಸಂಗಿ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ ಅವರು ವರಕವಿ ಬೇಂದ್ರೆಯವರ ಸಖ್ಯಯೋಗದಲ್ಲಿ ಅನುಭಾವಿ ಕವಿಗಳಾಗಿ ಬಾಳಿದವರು. ಕವಿಯಾಗಿ ಉಳಿಯದೆ ಸಂಶೋಧಕರಾಗಿ, ಲೇಖಕರಾಗಿ, ಅನುವಾದಕರಾಗಿ, ಜನಪದ ಸಾಹಿತ್ಯ ಸಂಗ್ರಹದ ಆದ್ಯ ಪ್ರವರ್ತಕರಾಗಿ ಬೆಳಗಿದ್ದನ್ನು ನಮ್ಮ ಸಾಹಿತ್ಯ ಚರಿತ್ರೆ ಮರೆಯುವಂತಹದಲ್ಲ. ಅವರಿಂದಾಗಿ ಹಲಸಂಗಿ ನಾಡು ಸಾಂಸ್ಕೃತಿಕ ಕೇಂದ್ರವಾಯಿತು. ಅವರು ಆರಂಭಿಸಿದ 'ಗೆಳೆಯರ ಗುಂಪು' ಮುಂದೆ 'ಅರವಿಂದ ಮಂಡಲ'ವಾಗಿ ಮಾರ್ಪಟ್ಟಿತು. ಅವರದು ಆಧ್ಯಾತ್ಮಿಕ ಜೀವನವಾಗಿತ್ತು. ಅರವಿಂದರ ಪೂರ್ಣಯೋಗದೊಂದಿಗೆ ಅವರು ಶಿವಯೋಗದ ಸಾಧನೆಯನ್ನೂ ಮಾಡಿದರು. ಅರವಿಂದರ ಪರಮಭಕ್ತರಾದ ಮಧುರಚೆನ್ನರು ಅರವಿಂದರ ಜನ್ಮದಿನದಂದೇ (೧೫ ಅಗಸ್ಟ ೧೯೫೩) ಸರಿಯಾಗಿ ಅರ್ಧ ಶತಮಾನ ಕಾಲ ಪೂರೈಸಿ ಮಹಾ ಸಮಾಧಿ ಹೊಂದಿದರು. 'ಹಲಸಂಗಿಯಂಥ ಅಜ್ಞಾತ ಹಳ್ಳಿಯಲ್ಲಿ ಬದುಕಿ, ದೈಹಿಕ, ಪ್ರಾಪಂಚಿಕ ಅನಾನುಕೂಲತೆಗಳನ್ನು ಹೊಂದಿ ಲಿಪಿಶಾಸ್ತ್ರ, ಭಾಷಾಶಾಸ್ತ್ರ, ಜನಪದ ಸಾಹಿತ್ಯ, ಕಾವ್ಯ, ಪ್ರಬಂಧ ಆತ್ಮಕಥನ, ಅನುವಾದ ಮುಂತಾದ ಸಾಹಿತ್ಯ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಕಾರ್ಯ ಮಾಡಿದ್ದೇ ಒಂದು ಪವಾಡವೆನ್ನಿಸಿದೆ. ಐವತ್ತು ವರ್ಷಗಳ ಅಲ್ಪಾಯುಷ್ಯದಲ್ಲಿ ಇಪ್ಪತ್ತೆರಡು ಭಾಷೆಗಳನ್ನು ಕಲಿತರು. ಜ್ಯೋತಿಷಶಾಸ್ತ್ರವನ್ನೂ ಅರೆದು ನೋಡಿದರು. ಆಧ್ಯಾತ್ಮಿಕ ಸಾಧನೆಯನ್ನು ಕೊನೆಯ ಉಸಿರಿನವರೆಗೂ ಮಾಡಿದರು. (ಮಧುರಚೆನ್ನ ಪು. ೨೧೩)

ಮಧುರಚೆನ್ನರ ಕಾವ್ಯಸೃಷ್ಟಿ ಭಾಗದಲ್ಲಿ 'ನನ್ನ ನಲ್ಲ' 'ಮಧುರಗೀತ'ದ ಬಗೆಗೆ ವಿವರವಾದ ಚರ್ಚೆ ನಡೆಸಿದ ಕಣವಿಯವರು ಮಧುರಚೆನ್ನರ 'ನನ್ನ ನಲ್ಲ' ನೀಳ್ಗವನವು ವಿಶ್ವದ ಯಾವುದೇ ಉಜ್ವಲವಾದ ಅನುಭಾವಗೀತದೊಡನೆ ಸರಿತೂಗಿ ನಿಲ್ಲಬಲ್ಲದು ಎಂದಿದ್ದಾರೆ. ಮಧುರಚೆನ್ನರ 'ಆತ್ಮಶೋಧ' ಕನ್ನಡ ಆತ್ಮಚರಿತ್ರೆಗಳಲ್ಲಿ ಭಿನ್ನವಾದದ್ದು. ಬೇಂದ್ರೆಯವರ 'ಕಾವ್ಯೋದ್ಯೋಗ', ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕಾರಂತ, ಕಟ್ಟೀಮನಿ ಅವರು ಲೌಕಿಕ ಜೀವನದ ಕಥನವನ್ನು ಕಟ್ಟಿಕೊಟ್ಟರೆ, ಮಧುರಚೆನ್ನರು ತಮ್ಮ ಆಧ್ಯಾತ್ಮಿಕ ಸಾಧನೆಯನ್ನು ಆತ್ಮೀಯವಾಗಿ ಚಿತ್ರಿಸಿದ್ದಾರೆ ಎಂದು ತೌಲನಿಕವಾಗಿ ವಿಮರ್ಶಿಸಿದ್ದಾರೆ. ಅರವಿಂದರ ಪೂರ್ಣಯೋಗದ ಪಥವನ್ನು ಕನ್ನಡದಲ್ಲಿ ಪ್ರಕಟಿಸಿದ ಹೆಗ್ಗಳಿಕೆಯೂ ಮಧುರಚೆನ್ನರದಾಗಿದೆ. ಮಧುರಚೆನ್ನರ ಬಿಡಿಲೇಖನಗಳ ದೊಡ್ಡ ಸಂಪುಟ ಅವರ ಸಂಶೋಧನಾಸಕ್ತಿಯ ದ್ಯೋತಕವಾಗಿದೆ. ಹಲವು ಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡಿದ ಮಧುರಚೆನ್ನರು ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನೂ ನಡೆಸಿದರು. 'ಮಧುರಚೆನ್ನರ ಮಧುರಗೀತ' (ಸಾಹಿತ್ಯ ಚಿಂತನ) ಮಧುರಚೆನ್ನರ ಅನುಭಾವ ಕಾವ್ಯ (ಸದ್ಭಾವ) ಪ್ರತ್ಯೇಕ ನಿಚ್ಚಣಿಕೆಯನ್ನು ವಿವೇಚಿಸಿದ್ದಾರೆ. ಕಣವಿ ಅವರ 'ಮಧುರಚೆನ್ನ' ಅಧ್ಯಯನ ಕನ್ನಡ ನವೋದಯ ಸಾಹಿತ್ಯದ ಒಂದು ಮುಖವಾದ ಅನುಭಾವದ ಶ್ರೇಷ್ಠತೆಯನ್ನು ತೋರಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಹೀಗೆ ಬೇಂದ್ರೆ, ಮಧುರಚೆನ್ನ ಕಾವ್ಯವನ್ನು ಕಣವಿಯವರು ಸಮಗ್ರಮುಖವಾದ ಅಧ್ಯಯನದ ಶಿಸ್ತಿಗೆ ಅಳವಡಿಸಿದ್ದಾರೆ. 'ಮಧುರಚೆನ್ನರ ಕಾವ್ಯ ಎಲ್ಲಾ ಮತಧರ್ಮ, ಸಂಕೇತಗಳಿಂದ ಅನುಭಾವವನ್ನು ಮುಕ್ತವಾಗಿಸಿದೆ. ನಮ್ಮ ಧರ್ಮನಿರಪೇಕ್ಷ ಯುಗದಲ್ಲಿ ಇದೊಂದು ದೊಡ್ಡ ಸಾಧನೆ' ಎಂದು ಕಣವಿಯವರು ಮಧುರಚೆನ್ನರ ಕೊಡುಗೆಯನ್ನು ಕುರಿತು ಹೇಳುತ್ತ ಸಮಾರೋಪಗೊಳಿಸಿದ್ದಾರೆ.

ಬೇಂದ್ರೆ ಮಧುರಚೆನ್ನರಂತೆ ಕುವೆಂಪು ಕಾವ್ಯ ವಿಮರ್ಶೆಯಲ್ಲೂ ಸಮಾನವಾದ ಶ್ರದ್ಧೆಯನ್ನು ಕಣವಿಯವರು ಪ್ರಕಟಪಡಿಸಿದ್ದಾರೆ. 'ಕುವೆಂಪು ಕಾವ್ಯದಲ್ಲಿ ಪಕ್ಷಿಲೋಕ' (ಸಾಹಿತ್ಯ ಚಿಂತನ) ವಿಶಿಷ್ಟವಾದ ಅನುಶೀಲನ. ಕುವೆಂಪು ಸಮಗ್ರಕಾವ್ಯದ ಅಂತರಂಗವನ್ನು ಪ್ರವೇಶಿಸಿ ಮಲೆನಾಡಿನ ಪಕ್ಷಿ ಸಂಕುಲದ ಮಧುರಧ್ವನಿ ಕುವೆಂಪು ಅವರನ್ನು ರೋಮಾಂಚನಗೊಳಿಸಿದ್ದನ್ನು ಕಣವಿಯವರು ಬೇರೆ ಬೇರೆ ಕವಿತೆಗಳ ಉಲ್ಲೇಖಗಳ ಮೂಲಕ ವಿವೇಚಿಸಿದ್ದಾರೆ. ಪ್ರಕೃತಿಯ ಒಂದು ಸುಂದರ ಆವರಣದಲ್ಲಿ ಪಕ್ಷಿಸಂಕುಲದ ನಾನಾ ಬಗೆಯ ಚಟುವಟಿಕೆಗಳನ್ನು ಕವಿ ಚಿತ್ರಿಸಿದಂತೆಯೇ ಪಕ್ಷಿಗಳನ್ನೇ ಕುರಿತು ಬರೆದ ಕವಿತೆಗಳಲ್ಲಿ ಕವಿಯ ವೈಯಕ್ತಿಕ ಭಾವನೆಗಳ ನಿರೂಪಣೆಯೊಂದಿಗೆ ಸ್ವಭಾವೋಕ್ತಿಯೂ ಬೆರೆತಿರುವದನ್ನು ಗುರುತಿಸಿದ್ದಾರೆ. ಕುವೆಂಪು ನಿಸರ್ಗದ ಸಾನ್ನಿಧ್ಯದಲ್ಲಿ ವಿಶೇಷವಾದ ರಸಾನುಭೂತಿಯನ್ನು ಪಡೆದು ಅದರ ಅಂತರಂಗದ ಸತ್ವವನ್ನು ಅನಂತ ಸೌಭಾಗ್ಯವನ್ನು ಶಬ್ದರೂಪದಲ್ಲಿ ಸೆರೆ ಹಿಡಿದದ್ದು ಕುವೆಂಪು ಕಾವ್ಯ ಆಧುನಿಕ ಕನ್ನಡದಲ್ಲಿ ಧನ್ಯತೆಯನ್ನು ಪಡೆದಿದೆ ಎಂದಿದ್ದಾರೆ.

ಕುವೆಂಪು ಕವಿತೆ 'ಇಬ್ಬನಿಯವತಾರ' (ಸಮತೋಲನ) ವಿಶ್ಲೇಷಣೆಯಲ್ಲಿ ಪ್ರಾಯೋಗಿಕ ವಿಮರ್ಶೆಯನ್ನು ಕಣವಿಯವರು ಬರೆದಿದ್ದಾರೆ. 'ಕುವೆಂಪು ಅವರ ಸೌಂದರ್ಯಾನುಭವದ ಸಮಗ್ರಶಕ್ತಿ ವೈಭವಗಳು ಅವರ ಸೂರ್ಯೋದಯದ ಗೀತಗಳಲ್ಲಿ ಸಮುಜ್ವಲವಾಗಿ ಕಾಣಿಸಿಕೊಂಡಿವೆಯಾದರೂ 'ಇಬ್ಬನಿ'ಯಂಥ ಇತರ ಕವಿತೆಗಳಲ್ಲಿಯೂ ತನ್ನ ಮಣಿದೀಪವನ್ನು ಹೊತ್ತಿಸದೆ ಬಿಟ್ಟಿಲ್ಲ. ಪ್ರಕೃತಿಯಲ್ಲಿ ಯಾವುದನ್ನು ಸಾಮಾನ್ಯವೆಂದು ಇಲ್ಲವೆ ಕ್ಷುದ್ರವೆಂದು ಅರಸಿಕರು ಕಡೆಗಣಿಸಿ ಬಿಡಬಹುದೋ ಅಂಥದರ ಬಗ್ಗೆ ಕವಿ ಅವರನ್ನು ಎಚ್ಚರಿಸಿ, ಕೆಲಮಟ್ಟಿಗೆ ಒತ್ತಾಯಿಸಿ ಅವರಿಗೆ ಸೌಂದರ್ಯ ದೃಷ್ಟಿಯನ್ನು ನೀಡಿ ಅದರಲ್ಲಿ ತನ್ಮಯತೆಗೊಳ್ಳುವಂತೆ ಮಾಡುವದು ಕುವೆಂಪು ಕಾವ್ಯದ ಒಂದು ರೀತಿ. 'ಇಬ್ಬನಿಯವತಾರ'ದ ಕವಿತೆಯನ್ನು ಬೇರೆ ಬೇರೆ ಆಯಾಮಗಳಲ್ಲಿ ಚರ್ಚಿಸುತ್ತ ಅದರ ಅಭಿವ್ಯಕ್ತಿ ವಿಧಾನವನ್ನೂ ಒರೆಗೆ ಹಚ್ಚಿ ನೋಡಿದ್ದಾರೆ. 'ಇಬ್ಬನಿಯವತಾರ'ದಲ್ಲಿ ಕವಿಚೇತನಕ್ಕೊದಗಿದ ರಸಾನುಭವದ ಜಾಗತಿಕ ಪ್ರಜ್ಞೆಯನ್ನು ಒಡಹಾಯ್ದು ಅನುಭವವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಪರಿಭಾವಿಸಲು ಸಹಾಯಕವಾಗಿದೆ' ಎಂದಿದ್ದಾರೆ.

'ಕುವೆಂಪು ಕಾವ್ಯ : ಒಂದು ಸೃಜನಶೀಲ ಪ್ರತಿಕ್ರಿಯೆ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಕಣವಿಯವರು ಕುವೆಂಪು ಕವಿತೆ, ಕಾದಂಬರಿ, ಜೀವನ ಚರಿತ್ರೆಯ ಓದು ವಿದ್ಯಾರ್ಥಿ ಜೀವನದಲ್ಲಿ ಬೀರಿದ ಪ್ರಭಾವವನ್ನು ನೆನೆಯುತ್ತಾರೆ. ಕುವೆಂಪು ಶೈಲಿಯನ್ನು ಅನುಕರಣೆ ಮಾಡದೆ ಆ ಮೂಲಕ ಅದ್ಭುತವಾಗಿ ಅಭಿವ್ಯಕ್ತಗೊಂಡ ಅವರ ನಿಸರ್ಗೋಪಾಸನೆಯನ್ನು ಅರಗಿಸಿಕೊಳ್ಳುತ್ತಲೇ ಧಾರವಾಡದ 'ದೇಸಿ'ಗೆ ಸಹಜವಾಗಿ ಒಲಿದಿರುವದನ್ನು ಹೇಳಿದ ಕಣವಿಯವರು ೧೯೪೬ ರಲ್ಲಿ ಬಂದ ಕುವೆಂಪು ಅವರ 'ಕೃತ್ತಿಕೆ'ಯಲ್ಲಿಯ ಸಾನೆಟ್ಟುಗಳು ಬೇಂದ್ರೆಯವರ 'ಉಯ್ಯಾಲೆ'ಯಲ್ಲಿ ಬಂದ ಅಷ್ಟಷಟ್ಪದಿ ಇವುಗಳನ್ನೋದಿ ಈ ಪ್ರಕಾರದಲ್ಲಿ ಬೇರೆ ಬೇರೆ ಪ್ರಯೋಗ ಮಾಡುತ್ತ ಕಲಾತ್ಮಕ ಬಾಂಧವ್ಯದ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿರುವದನ್ನು ಸ್ಮರಿಸಿದ್ದಾರೆ. ಕುವೆಂಪು ಭಾಷೆ 'ಸಂಸ್ಕೃತ ಭೂಯಿಷ್ಟ' ಎಂಬ ಮಾತು ಕ್ಲೀಷೆಯಾಗಿದ್ದು ಅದನ್ನು ಒಪ್ಪದ ಕಣವಿಯವರು ಕುವೆಂಪು ಭಾಷೆ ಹಳೆಗನ್ನಡ, ಸಂಸ್ಕೃತ, ಹೊಸಗನ್ನಡದ ಲಲಿತ ಮಿಶ್ರಣ ಎಂದು ಹೇಳಿದ್ದಾರೆ.

ಉತ್ತರ ಕರ್ನಾಟಕದ ನವೋದಯ ಕವಿಗಳಾದ 'ಆನಂದಕಂದರ ಕಾವ್ಯ : ಒಂದು ಸಮೀಕ್ಷೆ (ಸಾಹಿತ್ಯ ಚಿಂತನ) ಲೇಖನದಲ್ಲಿ ಆನಂದಕಂದರ 'ಮುದ್ದನ ಮಾತು', 'ಅರುಣೋದಯ', ವಿರಹಿಣಿ', 'ಒಡನಾಡಿ', 'ಕಾರಹುಣ್ಣಿವೆ', 'ನಲ್ವಾಡುಗಳು', ಆರು ಕವನ ಸಂಗ್ರಹಗಳನ್ನು ಸಮೀಕ್ಷಿಸಿದ್ದಾರೆ. 'ನಮ್ಮ ನಾಗರಿಕತೆ ಜಾನಪದ ಸೌಂದರ್ಯದಿಂದ, ಭಾಷಾ ಸೌಂದರ್ಯದಿಂದ ದೂರ ಸರಿಯುತ್ತಿರುವಾಗ ಅದರ ಸಮಸ್ತ ಶಕ್ತಿ ಸೌಂದರ್ಯಗಳನ್ನು ಎತ್ತಿಹಿಡಿದು ಆನಂದಕಂದರು ಉಪಕರಿಸಿದ್ದಾರೆ' ಎಂದು ಹೇಳಿದ್ದಾರೆ. ಆನಂದಕಂದರ ಕಾವ್ಯದ ಬಗೆಗೆ ಸಮಗ್ರ ದೃಷ್ಟಿಯ ಪರಿಶೀಲನೆಯನ್ನು ಕಣವಿಯವರು ಬಹುಹಿಂದೆಯೇ ಮಾಡಿರುವದು ಕಂಡುಬರುತ್ತದೆ.

ಇದೇ ಮಾದರಿಯಲ್ಲಿ ಕಣವಿಯವರು ವಿ. ಸೀ. ಕಾವ್ಯದ 'ಹೆಜ್ಜೆಪಾಡು' (ಕಾವ್ಯಾನುಸಂಧಾನ) ಲೇಖನದಲ್ಲಿ ವಿ. ಸೀ. ಅವರ 'ಗೀತಗಳು', 'ದೀಪಗಳು', 'ನೆಳಲು ಬೆಳಕು', 'ದ್ರಾಕ್ಷಿ ದಾಳಿಂಬೆ' ಹಾಗೂ 'ಹೆಜ್ಜೆಪಾಡು' ಕವನ ಸಂಗ್ರಹಗಳ ಸಮೀಕ್ಷೆ ಮಾಡಿದ್ದಾರೆ. ವಿ. ಸೀ. ಕಾವ್ಯದ ಗುಣಮೌಲ್ಯಗಳನ್ನು ಹೇಳಿ ಕೊನೆಯಲ್ಲಿ ಹೀಗೆ ವಿ. ಸೀ. ಅವರ ಕಾವ್ಯ ಸಾಮಾನ್ಯ ಮಟ್ಟವನ್ನು ಮೀರಿ, ರಸಪುಷ್ಟಿ ಪಡೆದು ಕಾಲಕಾಲಕ್ಕೂ ತೂಗುವ ಹತ್ತಾರು ಕವಿತೆಗಳನ್ನು ನೀಡಿದ್ದರೂ ಹಲವು ಪದ್ಯಗಳಿಗೆ ತೂಕ ತಾಕತ್ತು ಸಾಲದು ಎನ್ನಿಸುತ್ತದೆ. ಭಾವ ಸಾಂದ್ರವಾಗಿ ಅನುಭವದ ಸಾರದೊಡನೆ ಬೆಸೆದು ನಿಲ್ಲದೆ ಕೆಲವೊಮ್ಮೆ ಸರಳವಾದ ಮಾತಿನಲ್ಲಿ ಹರಡಿ ಹಂಚಿ ಹೋಗುತ್ತದೆ' ಎಂದಿದ್ದಾರೆ. ಹೀಗೆ ವಿ. ಸೀ ಕಾವ್ಯದ ಮಿತಿಗಳನ್ನೂ ಕಣವಿಯವರು ಚರ್ಚಿಸಿರುವದು ಗಮನಿಸುವ ಅಂಶವಾಗಿದೆ.

ಕಣವಿಯವರು ನವೋದಯ ಕಾವ್ಯದ ವಿಮರ್ಶೆಯಲ್ಲಿ ತಳೆದ ಆಸ್ಥೆಯಂತೆ ನವ್ಯಕಾವ್ಯದ ಜಿಜ್ಞಾಸೆಯೂ ಅಷ್ಟೇ ಮುಖ್ಯವಾದದ್ದು. 'ವಿನಾಯಕರ ಐದು ನವ್ಯ ನೀಳ್ಗವನಗಳು' (ಸಾಹಿತ್ಯ ಸಮಾಹಿತ) ಲೇಖನದಲ್ಲಿ 'ಒಂದು ಕಾವ್ಯ ಮಾರ್ಗದ ನವ್ಯತೆಯು ಅದರ ವಿಶಾಲ ದರ್ಶನದಲ್ಲಿದೆ. ವಿಕೃತಿಗಳ ಪ್ರದರ್ಶನದಲ್ಲಿಲ್ಲ ಎಂದು ನಂಬಿರುವ ವಿನಾಯಕರು ನವ್ಯ ನೀಳ್ಗವನಗಳೆಂದು ಕರೆದಿರುವದು ಯಥೋಚಿತವಾಗಿದೆ. ಆದರೆ ಅದಕ್ಕಿಂತ ಈ ಕವನಗಳ ವಿವಿಧ ಸ್ತರಗಳಲ್ಲಿ ಒಡಮೂಡಿರುವ ಸಾಂಕೇತಿಕತೆ ಮತ್ತು ಶೈಲಿಯ ಸಂಕೀರ್ಣತೆ ಆ ಮಾತನ್ನು ಹೆಚ್ಚು ಬಲಪಡಿಸುತ್ತದೆ..... ಭಾರತೀಯ ಪರಂಪರಾ ಪ್ರಜ್ಞೆಯನ್ನು ವಿಕಸನಶೀಲ ದೃಷ್ಟಿಯಿಂದ ನವ್ಯವಾಗಿಸುವದು ಅವರ ಕಾವ್ಯದ ರೀತಿ. ಜಿಜ್ಞಾಸೆಯೇ ಅದರ ಜೀವಾಳ. ಜೀವನದ ಸಮಗ್ರತೆಯನ್ನು ಕಂಡುಕೊಂಡು, ವೈವಿಧ್ಯವನ್ನು ಸಮನ್ವಯಗೊಳಿಸುತ್ತ ಸಮರಸವನ್ನು ಸಾಧಿಸುವದು ಅದರ ಗುರಿ. ಸಾಂಕೇತಿಕತೆಯಿಂದ ಅರ್ಥವಿಸ್ತಾರ ಪಡೆಯುವ ಸಂಕೀರ್ಣ ಶೈಲಿ ಮುಕ್ತಛಂದದಲ್ಲಿ ಪರಿಣತಿ ಪಡೆದಿರುವದನ್ನು ಕಾಣಬಹುದು' ಎಂದು ವಿನಾಯಕರ ನವ್ಯ ನೀಳ್ಗವನಗಳ ಬಗ್ಗೆ ಕಣವಿಯವರ ಒಳನೋಟವನ್ನು ನೀಡಿದ್ದಾರೆ.

ಆಧುನಿಕ ಕನ್ನಡ ಕಾವ್ಯದ ಅಧ್ಯಯನವನ್ನು ಕಣವಿಯವರು ಹೊಸ ಹೊಸ ದೃಷ್ಟಿಯಿಂದ ಮಾಡುತ್ತ ಬಂದಿದ್ದಾರೆ. ಅವರ ವಿಮರ್ಶೆಯ ಲೇಖನಗಳಲ್ಲಿ ಕಾಣುವ ಇನ್ನೊಂದು ವಿಶಿಷ್ಟತೆಯೆಂದರೆ ಕಾವ್ಯ ವಸ್ತುವಿನ ಆಯ್ಕೆಯಲ್ಲಿ ಅವರು ತೋರುವ ಕುತೂಹಲ ಮತ್ತು ಸ್ವಾತಂತ್ರ್ಯ. ಕೆ. ಎಸ್ ನರಸಿಂಹಸ್ವಾಮಿಯವರ ಬಗ್ಗೆ ಬರೆಯುವಾಗ ಅವರ ದಾಂಪತ್ಯಗೀತೆಗಳ ವೈಭವ ಕಣ್ಣಿಗೆ ರಾಚುತ್ತದೆ. ಆದರೆ ಕವಿ ಕಣವಿಯವರಿಗೆ ನರಸಿಂಹಸ್ವಾಮಿಯವರ ಕಾವ್ಯಸಾಧನೆಯಲ್ಲಿ ದಾಂಪತ್ಯ ಜೀವನದ ಸಂಪದ್ಭರಿತ ಚಿತ್ರಣ ಪ್ರಮುಖ ಘಟ್ಟವಾಗಿದ್ದರೂ ಅದನ್ನು ದಾಟಿ ಅವರು ಮುನ್ನಡೆದ ವಾತ್ಸಲ್ಯ ಗೀತಗಳ ಬಗೆಗೆ ಕಣವಿಯವರು ಆದರಭಾವದಿಂದ ಚರ್ಚಿಸಿದ್ದಾರೆ. ವಾತ್ಸಲ್ಯ ಭಾವದ ವ್ಯಾಪ್ತಿಯನ್ನು 'ಶಾನಭೋಗರ ಮಗಳು', 'ಬಳೆಗಾರನ ಹಾಡು', 'ಮಣಿಯಮ್ಮನ ಮದುವೆ', ಮೊದಲಾದ ಕವಿತೆಗಳಲ್ಲೂ ಉದಾರವಾಗಿ ಕಾಣುತ್ತೇವೆ. ಆತ್ಮೀಯತೆಯೊಡನೆ ಬೆರೆತ ಅನುಕಂಪ, ಮನಮೋಹಕವಾದ ಕಲ್ಪನಾಚಿತ್ರ, ಅಂತಃಕರಣವನ್ನು ನೇರವಾಗಿ ಮುಟ್ಟುವ ಜಾನಪದ

ಕಾವ್ಯಸತ್ವ ಇವುಗಳ ಅನುರೂಪ ಹೊಂದಿಕೆ ಆಧುನಿಕ ಜನಪ್ರಿಯ ಕವಿತೆಗೆ ನರಸಿಂಹಸ್ವಾಮಿಯವರ ವಿಶಿಷ್ಟ ಕೊಡುಗೆಯಾಗಿದೆ. ಪ್ರೇಮಗೀತಗಳಲ್ಲಿ ಕವಿ ಪಡೆದ ಸಿದ್ಧಿ ಹೀಗೆ ವಾತ್ಸಲ್ಯ ಗೀತಗಳಲ್ಲಿಯೂ ಕೌಶಲ್ಯಪೂರ್ಣವಾಗಿ ಕಂಗೊಳಿಸುತ್ತದೆ. ಸಹಜತೆ, ಶುಚಿತ್ವ, ಸುಕುಮಾರತೆ, ಸೂಕ್ಷ್ಮ ನಿರೀಕ್ಷಣೆ, ಸೌಂದರ್ಯಪ್ರಜ್ಞೆ, ಜೀವನೋತ್ಸಾಹ ಮೊದಲಾದ ಗುಣಗಳನ್ನು ಇವರ ಇತರ ಉತ್ತಮ ಕವಿತೆಗಳಲ್ಲಿಯಂತೆ ಇಲ್ಲಿಯೂ ಧಾರಾಳವಾಗಿ ಕಾಣುತ್ತೇವೆ' ಎಂದಿದ್ದಾರೆ.

ಜಿ. ಎಸ್. ಎಸ್. ಕಾವ್ಯದ ಒಂದು ನೋಟ (ಕಣವಿ ಸಮಗ್ರ ಗದ್ಯ–೧, ಪು. ೩೬೦) ಲೇಖನದಲ್ಲಿ ಅರವತ್ತು ವರ್ಷಕಾಲ ಬೆಳೆದುಬಂದ ಜಿ. ಎಸ್. ಶಿವರುದ್ರಪ್ಪನವರ ಕಾವ್ಯದ ಬಗೆಗೆ ಕಣವಿ ಹೇಳುವ ಮಾತುಗಳು ಮುಖ್ಯವಾಗುತ್ತವೆ. 'ನವೋದಯ – ನವ್ಯ ಮಾರ್ಗಗಳ ಕೃತ್ರಿಮವಾದ ತಿಕ್ಕಾಟದಲ್ಲಿ ಇವರ ಕಾವ್ಯ ಯಾವ ಅಬ್ಬರವೂ ಇಲ್ಲದೆ ತನ್ನ ನಿಯತಗತಿಯನ್ನು ಕಾಯ್ದುಕೊಂಡು ಬಂದಿರುವದು ಇವರ ಜೀವನದ ಹಾಗೆಯೇ ಕಾವ್ಯದ ಧೋರಣೆಯೂ ಆಗಿದೆ. ಶಿವರುದ್ರಪ್ಪನವರ ಕಾವ್ಯೋದಯಕ್ಕೆ ಕಾರಣವಾದ ವಿಸ್ಮಯಭಾವ (ಸಂತೋಷ, ಖೇದ ಎರಡರಲ್ಲೂ) ಪ್ರಕೃತಿಯಲ್ಲಿ, ಜೀವನದಲ್ಲಿ ಎರಡರ ಸಮರಸದಲ್ಲಿ. ಅನುಭವ ಹಾಗೂ ಆಲೋಚನೆಯ ಮಟ್ಟದಲ್ಲಿ ದಟ್ಟೈಸಿ ನಿಂತು ಅವರ ಕಾವ್ಯಕ್ಕೆ ಹೊಸ ರುಚಿಯನ್ನು, ದೃಷ್ಟಿಯನ್ನು ತಂದುಕೊಟ್ಟಿದೆ. ನಿಸರ್ಗ ಹಾಗೂ ಮಾನವ ಜೀವನದ ಸಂಪರ್ಕವನ್ನು ನಿಕಟಗೊಳಿಸಿ ಬಾಳಿಗೆ ಪೂರ್ಣತೆಯನ್ನೂ, ಅರ್ಥಪೂರ್ಣತೆಯನ್ನೂ ತಂದುಕೊಡುವ ಪ್ರಯತ್ನದಲ್ಲಿ ಗೆಲುವಾಗಿದೆ. ಜಡೆಯಾಚೆಗಿರುವ ವಿಶ್ವಮಾತೆಯ ಮುಖವನ್ನು ಕಾಣುವ ಹಂಬಲವನ್ನು ಹುಟ್ಟಿಸಿದೆ' ಎಂದಿದ್ದಾರೆ.

ಕಣವಿಯವರು ಕನ್ನಡ ವಿಮರ್ಶೆ ಅಷ್ಟಾಗಿ ಚರ್ಚಿಸದ ಕವಿಕೃತಿಗಳ ಬಗೆಗೂ ಬರೆದಿದ್ದಾರೆ. 'ಜೋಳದ ರಾಶಿಯವರ ಕಾವ್ಯ' (ಸದ್ಭಾವ) ಲೇಖನದಲ್ಲಿ "ಜೋಳದ ರಾಶಿಯವರಂಥ ಶ್ರೇಷ್ಠ ಗಮಕಿಯ ಹೃದಯದಲ್ಲಿ ಅಡಗಿರುವ ಕವಿಯ ಹಿರಿಮೆಯನ್ನು ನವೋದಯ ಕಾವ್ಯದ ವಿಮರ್ಶಕರು ಗುರುತಿಸದೆ ಹೋದದ್ದು ಆಶ್ಚರ್ಯದ ಸಂಗತಿ. ಗಮಕಿಯಾಗಿಯೇ ಇವರು ಹೆಚ್ಚು ಪ್ರಸಿದ್ಧಿಗೆ ಬಂದದ್ದೂ ಇದಕ್ಕೆ ಕೆಲಮಟ್ಟಿಗೆ ಕಾರಣವಾಗಿರಬಹುದು. 'ರಸವರ್ಷ' ಜೋಳದ ರಾಶಿಯವರ ವಿಶಿಷ್ಟ ಕೊಡುಗೆ" ಎಂದಿದ್ದಾರೆ. ಇದೇ ಮಾದರಿಯಲ್ಲಿ 'ಎಂ. ವಿ. ಸೀ ಅವರ ಸುನೀತಗಳು' (ಸಮತೋಲನ) ಲೇಖನದಲ್ಲಿ ಎಂ. ವಿ. ಸೀತಾರಾಮಯ್ಯನವರ ಇಪ್ಪತ್ತೆರಡು ಸುನೀತಗಳನ್ನು ಸಮೀಕ್ಷಿಸಿದ್ದಾರೆ. ಅವುಗಳ ಸಫಲತೆ, ವಿಫಲತೆಯನ್ನು ಚರ್ಚಿಸಿದ್ದಾರೆ. ಸಿದ್ಧಯ್ಯ ಪುರಾಣಿಕರ ೫೨೫ ವಚನಗಳ 'ವಚನೋದ್ಯಾನ'ದ ವೈಶಿಷ್ಟ್ಯ (ಸಮತೋಲನ) ಲೇಖನದಲ್ಲಿ ಕಣವಿಯವರು ಅನೇಕ ವಾದಗಳು ತಾಂಡವವಾಡುತ್ತಿರುವ, ಹಲವಾರು ಬೋಧೆಗಳು ಬೀದಿಗಿಳಿದಿರುವ ಕಾಲದಲ್ಲಿ ತನ್ನತನವನ್ನು ಕಾಪಾಡಿಕೊಂಡು ಆಧುನಿಕ ವಚನಗಳನ್ನು ಬರೆದ ಕಾವ್ಯಾನಂದರು ಕಾಡನ್ನು ಸೋಸಿ ಉದ್ಯಾನ ಮಾಡಿದ್ದಾರೆ ಎಂದು ಹೇಳುತ್ತ ಸಿದ್ಧಯ್ಯ ಪುರಾಣಿಕರ ಪ್ರತಿಭೆಯ ಅನನ್ಯತೆಯನ್ನು ಪರಿಚಯಿಸುತ್ತಾರೆ. ಸಾ. ಶಿ. ಮರುಳಯ್ಯನವರ ಕಾವ್ಯ (ಸಾಹಿತ್ಯ ಸಮಾಹಿತ)ದ ಬಗೆಗೆ ಬರೆಯುತ್ತ ಅವರು ರಮ್ಯ

ಸಂಪ್ರದಾಯದ ಸತ್ವವನ್ನು ಪಡೆದುಕೊಂಡ ರಸಿಕ ಕವಿಯಾಗಿದ್ದಾರೆ. 'ಕೋಟಿ ದೀಪದ ನಡುವೆ ನಮ್ಮ ದೀಪಿಗೆಯಿರಿಸಿ ಹಾಡೋಣ ಅನುರಾಗ ರಾಗವನ್ನು' ಎಂದು ಹಾಡಿದ ಮರುಳಯ್ಯನವರಲ್ಲಿ ವಿನಯ ಮತ್ತು ಸ್ವಂತಿಕೆಯನ್ನು ಕಣವಿಯವರು ಗುರುತಿಸಿದ್ದಾರೆ.

'ವೀಚಿಯವರ ಕಾವ್ಯ ಒಂದು ಅವಲೋಕನ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ 'ಭಾವ ಸಮೃದ್ಧಿ', ವೈಚಾರಿಕತೆಯ ಮಿಂಚು, ಸಮಕಾಲೀನ ಸ್ಪಂದನಗಳಿಂದ ಹಾಗೂ ವ್ಯಕ್ತಿ ವೈಶಿಷ್ಟ್ಯದಿಂದ ವೀಚಿಯವರ ಕಾವ್ಯ ಓದುಗರಿಗೆ ಮನಸಂಸ್ಕಾರವನ್ನು ಒದಗಿಸುವಲ್ಲಿ ಹಿಂದೆ ಬೀಳಲಾರದು' ಎಂದಿದ್ದಾರೆ.

'ಹೊಸಗನ್ನಡ ಕಾವ್ಯದ ಭಾಷೆ ಮತ್ತು ಶೈಲಿ' (ಸಾಹಿತ್ಯ ಚಿಂತನ) ಲೇಖನದಲ್ಲಿ ಕಣವಿಯವರು ನವೋದಯ ಕವಿಗಳಾದ ಡಿವಿಜಿ, ಬೇಂದ್ರೆ, ಕುವೆಂಪು, ವಿನಾಯಕ, ಮುಗಳಿ, ರಾಜರತ್ನಂ, ಈಶ್ವರ ಸಣಕಲ್ ಮೊದಲಾದವರ ಬಗೆಗೆ ಮಾತ್ರ ಚರ್ಚಿಸುತ್ತಾರೆ. ಆದರೆ ನವ್ಯಕಾವ್ಯದ ಭಾಷೆಯ ಬಗೆಗೆ ಚರ್ಚೆ ನಡೆಸದೆ ಇರುವದು ಕಂಡುಬರುತ್ತದೆ. ಆದರೆ 'ಕನ್ನಡ ಕಾವ್ಯದಲ್ಲಿ ನೂತನ ಪ್ರತಿಮೆ, ಸಂಕೇತಗಳು' ಲೇಖನದಲ್ಲಿ ಸಮಕಾಲೀನ ಕವಿಗಳು ಹೊಸ ಹೊಸ ಪ್ರತಿಮೆ ಸಂಕೇತಗಳನ್ನು ಬಳಸುವ ಮೂಲಕ ಅಭಿವ್ಯಕ್ತಿಯ ನೂತನ ದಾರಿಗಳನ್ನು ಕಂಡುಕೊಳ್ಳುತ್ತಿರುವದನ್ನು ಹಲವಾರು ನಿದರ್ಶನಗಳ ಮೂಲಕ ವಿವೇಚಿಸಿದ್ದಾರೆ.

'ಕನ್ನಡ ಕಾವ್ಯದ ಹೊಸ ಬದುಕು' (ಸಾಹಿತ್ಯ ಚಿಂತನ) ಲೇಖನದಲ್ಲಿ ನವೋದಯದಿಂದ ನವ್ಯ ಮಾರ್ಗದತ್ತ ಕನ್ನಡ ಕಾವ್ಯ ಹೊರಳುವ ದಾರಿಯಲ್ಲಿ ಯಾವ ಯಾವ ವಿಚಾರ, ಸ್ಥಿತ್ಯಂತರಗಳನ್ನು ಪಡೆದುಕೊಂಡಿತು. ಅಭಿವ್ಯಕ್ತಿಯ ನೂತನ ಸಾಧ್ಯತೆಗಳನ್ನು ಕಂಡುಕೊಂಡಿತು ಎಂಬುದನ್ನು ಕಣವಿಯವರು ವಿಸ್ತಾರವಾಗಿ ಚರ್ಚಿಸಿದ್ದಾರೆ. ಅದರಲ್ಲಿ ತಮ್ಮ ಕಾವ್ಯದ ಹಾದಿಯಲ್ಲಿ 'ದೀಪಧಾರಿ', 'ಮಣ್ಣಿನ ಮೆರವಣಿಗೆ' ನವ್ಯತೆಯ ಕಡೆಗೆ ಸಾಗುತ್ತಿರುವದನ್ನೂ ದಾಖಲಿಸಿದ್ದಾರೆ.

ಕಣವಿಯವರ ಕಾವ್ಯ ವಿಮರ್ಶೆಯಲ್ಲಿ ನವೋದಯ ಕಾವ್ಯದ ಬೆಳವಣಿಗೆಯ ಚರ್ಚೆ ಪ್ರಧಾನವೆಂಬುದು ನಿಜವಾದರೂ ಅವರು ನವ್ಯ ಕಾವ್ಯದ ಹೊಸ ಒಲವುಗಳ ಕುರಿತು ಆಲೋಚನೆಯನ್ನು ಅರವತ್ತರ ದಶಕದಲ್ಲೇ ನಡೆಸಿದ್ದು ಕಂಡುಬರುತ್ತದೆ. 'ನವ್ಯತೆ ಒಂದು ತಂತ್ರವೆನಿಸಿದರೂ ಅದರ ನಿರ್ವಹಣೆಗೆ ತಕ್ಕ ಪರಿಕರಗಳು ಕವಿಯಲ್ಲಿ ಸಿದ್ಧಗೊಂಡಿರಬೇಕಾಗುತ್ತದೆ. ವೈಯಕ್ತಿಕ ಪ್ರಯೋಗಶೀಲತೆ ಆಂತರಿಕ ಅವಶ್ಯಕತೆ ಇಲ್ಲದೆ ಸತ್ವಪೂರ್ಣವಾಗಿ ನಿಲ್ಲಲಾರದು..... ಎಲ್ಲ ಕವಿಗಳೂ ವೀರಪ್ರತಿಜ್ಞೆಯನ್ನು ಮಾಡಿಯೇ ನವ್ಯತೆಯ ದೀಕ್ಷೆ ತೊಡಬೇಕೆಂದೇನೂ ಇಲ್ಲ. ಆಯಾ ಕವಿಯ ವಿಶಿಷ್ಟ ವ್ಯಕ್ತಿತ್ವದ ಮೂಲಕ ಅವನ ಅಭಿವ್ಯಕ್ತಿಯ ಶಕ್ತಿಗನುಸರಿಸಿ ಅನುಭವ ಕಾವ್ಯರೂಪವನ್ನು ಪಡೆದಾಗಲೇ ಅದಕ್ಕೆ ಆಲಂಬನವಲ್ಲ. ಕವಿಯ ಅಂತರಂಗದ ಒಂದು ವಿಶಿಷ್ಟ ಆವಿಷ್ಕಾರ..... ಬದುಕಿನ ಅಖಂಡಾನುಭವದ ಅನುಭೂತಿಯನ್ನು ಕಾವ್ಯರೂಪದಲ್ಲಿ ಪಾಕಗೊಳಿಸಿ ನೂತನ ಪ್ರತಿಮಾಧಾರಣೆಯಿಂದ ಅಡಿಗರ ಕಾವ್ಯ ತನ್ನ ವ್ಯಾಪ್ತಿಯನ್ನೂ, ಸಾಮರ್ಥ್ಯವನ್ನೂ ಹೆಚ್ಚಿಸಿಕೊಂಡಿದೆ. ಲೈಂಗಿಕ ಪ್ರಜ್ಞೆಯನ್ನೊಳಗೊಂಡ ರಾಮಚಂದ್ರ ಶರ್ಮರ ಕಾವ್ಯ ತನ್ನ

ಗಾಢತೆಯನ್ನು ಇನ್ನೂ ಪಡೆಯಬೇಕಾಗಿದೆ' ಎಂದು ಹೇಳುತ್ತ ಹೊಸ ಪೀಳಿಗೆಯ ಕವಿಗಳು ಹೊಸ ಸಂವೇದನೆಯನ್ನು ರೂಪಿಸುತ್ತಿರುವದು ಕನ್ನಡ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ವಿಚಾರ ಎಂದಿದ್ದಾರೆ. ಇದೇ ಲೇಖನದಲ್ಲಿ ನವ್ಯಕವಿಗಳು ನವೋದಯ ಸಂಪ್ರದಾಯವನ್ನು ವಿರೋಧಿಸುವ ಉದ್ದೇಶದಿಂದಲೇ ಕಾವ್ಯ ರಚನೆಗೆ ತೊಡಗುವದು ಒಳ್ಳೆಯ ಲಕ್ಷಣವಲ್ಲ. ಹೊಸ ಬಗೆಯ ಅನುಭವ ಸಂವೇದನೆಗಳನ್ನು ಹೊಸ ರೀತಿಯಲ್ಲಿ ಅಭಿವ್ಯಕ್ತಿಸುವಾಗ ತಂತ್ರ ಕ್ಲಿಷ್ಟತೆ ಅನಿವಾರ್ಯ ಎಂದೂ ಹೇಳಿದ್ದಾರೆ.

'ಆಧುನಿಕ ಕನ್ನಡಕಾವ್ಯ, ರೂಪವಿನ್ಯಾಸ, ದೃಷ್ಟಿಧೋರಣೆ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಹೊಸ ಕಾವ್ಯದ ಬೆಳವಣಿಗೆಯನ್ನು ಕಣವಿಯವರು ವಿಸ್ತಾರವಾಗಿ ಅವಲೋಕಿಸಿ ಅನೇಕ ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾರೆ. ಇದರಲ್ಲಿ ನವೋದಯ ಕವಿಗಳ ಕೊಡುಗೆ ಮತ್ತು ನವ್ಯಕಾವ್ಯದ ಕೃಷಿಯಲ್ಲಿ ತೊಡಗಿಕೊಂಡವರ ಕಾವ್ಯದ ಹಾದಿಯನ್ನು ನೋಡುವ ಪ್ರಯತ್ನವಿದೆ. ಕಣವಿ – ಶಿವರುದ್ರಪ್ಪನವರ ಕಾವ್ಯವನ್ನು ಸಮನ್ವಯ ಮಾರ್ಗವೆಂದು ವಿವರಿಸಲು ಬರುವದಿಲ್ಲ ಎಂದು ಸ್ಪಷ್ಟವಾಗಿ ಎಪ್ಪತ್ತರ ದಶಕದ ಆರಂಭದಲ್ಲಿ ಕಣವಿ ಹೇಳಿದ್ದಾರೆ. ಇದೇ ಲೇಖನದ ಕೊನೆಯಲ್ಲಿ ನಮ್ಮ ಮನಸ್ಸಿನಲ್ಲಿರುವದು ದಲಿತಕಾವ್ಯ. ಭಾರತದ ಸಾಂಪ್ರದಾಯಿಕ, ಸಾಮಾಜಿಕ ಶ್ರೇಣಿಯ ಎಲ್ಲ ಬಗೆಯ ಪ್ರಯೋಜನಗಳಿಗೆ ಹೊರತಾದ ಈ ಜನಾಂಗದ ಆಸೆ – ಆಕಾಂಕ್ಷೆಗಳಿಗೆ, ನೋವು–ನಿರಾಶೆಗಳಿಗೆ ದನಿಗೂಡಿಸಲು ಪ್ರಯತ್ನಿಸುವ ಕಾವ್ಯವಿದು. ಇಂದು ದೇಶದಲ್ಲಿ ತಲೆಯೆತ್ತಿರುವ ಹೊಸ ಸಾಮಾಜಿಕ ಅರಿವಿನ ಆವೇಗವನ್ನು ಪಡೆಯುವ ಸೂಚನೆಗಳಿದ್ದು, ಆಧುನಿಕ ಕನ್ನಡ ಕಾವ್ಯ ಸಂಪ್ರದಾಯ ಅವರ ಕೊಡುಗೆಯಿಂದ ಶ್ರೀಮಂತಗೊಳ್ಳುವ ಅವಕಾಶವಿದೆ' ಎಂಬ ಭವಿಷ್ಯವನ್ನು ನುಡಿದಿದ್ದಾರೆ. ಕಣವಿಯವರ ಕವಿವಾಣಿ ನಿಜವನ್ನೆ ಹೇಳಿದುದನ್ನು ಕನ್ನಡ ದಲಿತ ಕಾವ್ಯದ ಚರಿತ್ರೆಯಲ್ಲಿ ನಾವು ನೋಡುತ್ತೇವೆ.

ಕಣವಿಯವರು ಆಧುನಿಕ ಕನ್ನಡ ಕಾವ್ಯದ ಕುರಿತು ಬಹುವಾಗಿ ಚಿಂತನ–ಮಂಥನ ನಡೆಸಿದ್ದಾರೆಂದು ನಮಗೆ ಕಂಡುಬಂದರೆ ಅದಕ್ಕೆ ಅವು ಖ್ಯಾತ ಕವಿಗಳಾಗಿರುವದೇ ಕಾರಣವಾಗಿದೆ. 'ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳು' ಭೂಸನೂರಮಠರ 'ಶೂನ್ಯಸಂಪಾದನೆಯ ಪರಾಮರ್ಶೆಯ ಪಶ್ಯಂತೀವಾಣಿ', 'ಒಡೆಯರ ಅವರ ಪ್ರಬಂಧಗಳು' ಲೇಖನಗಳಲ್ಲಿ ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಔರಂಗಜೇಬ ಮತ್ತು ಇತರ ಕವನಗಳು' ಕಣವಿಯವರ ಸಾಹಿತ್ಯಾಸ್ವಾದದ ಸಹೃದಯತೆ ಪ್ರಕಟವಾಗಿದೆ.

ಕಣವಿಯವರು 'ಕನ್ನಡದಲ್ಲಿ ವಿಮರ್ಶೆಯ ಒಲವು – ನಿಲುವು' (ಸಾಹಿತ್ಯ ಚಿಂತನ) ಲೇಖನದಲ್ಲಿ ವಿಮರ್ಶೆಯ ಸೈದ್ಧಾಂತಿಕ ಸ್ವರೂಪವನ್ನು ಚರ್ಚಿಸಿ ಕನ್ನಡದ ಮುಖ್ಯ ವಿಮರ್ಶಾಕೃತಿಗಳ ಅವಲೋಕನವನ್ನು ನಡೆಸಿದ್ದಾರೆ. ಉಳಿದ ಸಾಹಿತ್ಯ ಪ್ರಕಾರಗಳಂತೆ ವಿಮರ್ಶೆಯನ್ನು ನಾವು ಇಂಗ್ಲೀಷ್ ಸಾಹಿತ್ಯದಿಂದ ಪಡೆದಿದ್ದರೂ ಅದು ಕನ್ನಡದ ಪರಂಪರೆಯಲ್ಲಿ ಬೆಳೆಯಬೇಕೆಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದಾರೆ. ವಿಮರ್ಶೆ ನಮ್ಮ ಪ್ರಾಚೀನ ಸಾಹಿತ್ಯ ಪರಂಪರೆಯಲ್ಲಿ ಕಾಣಿಸಿಕೊಳ್ಳದಿದ್ದರೂ ಕಾವ್ಯಮೀಮಾಂಸೆಯ ವಿಚಾರಧಾರೆ ಧಾರಾಳವಾಗಿ ಬೆಳೆದುಬಂದಿದೆ. ಕಣವಿಯವರ ದೃಷ್ಟಿಯಲ್ಲಿ ವಿಮರ್ಶೆ ಸಹೃದಯಕೇಂದ್ರಿತ ವಾಗಿರಬೇಕು. ಕವಿಯ ಕೃತಿಯನ್ನು ಪರಿಶೀಲಿಸಿ, ಮೌಲ್ಯ ನಿರ್ಧಾರ ಮಾಡುವ ವಿಮರ್ಶೆ ಒಳನೋಟಗಳನ್ನು ನೀಡುತ್ತದೆ. ಯಾವುದೇ

ಪೂರ್ವಾಗ್ರಹಕ್ಕೆ ಒಳಗಾಗದೆ ವಿಮರ್ಶಕನು ಕವಿಯ ಅರ್ಥಲೋಕವನ್ನು ನಮಗೆ ತೆರೆದು ತೋರಿಸುತ್ತಾನೆ. 'ಕವಿಯ ಹೊಟ್ಟೆಯಲ್ಲಿ ವಿಮರ್ಶಕ ಅಡಗಿರುವಂತೆ ವಿಮರ್ಶಕನ ಹೊಟ್ಟೆಯಲ್ಲಿ ಕವಿ ಅಡಗಿದ್ದಾನೆ. ಭುವನದ ಭಾಗ್ಯದಿಂದ ಒಬ್ಬ ವರಕವಿಯು ಉದಯಿಸುವಂತೆ ಒಬ್ಬ ಒಳ್ಳೆಯ ವಿಮರ್ಶಕ ಬೆಳೆಯಬೇಕು. ವಿಮರ್ಶೆ ಬೆಳೆದಷ್ಟೂ ಸಾಹಿತ್ಯದ ಜೀವಶಕ್ತಿ ಪುಷ್ಟಿಗೊಳ್ಳುತ್ತದೆ. ವಿಮರ್ಶೆಯಿಂದಾಗುವ ಪ್ರಯೋಜನಗಳ ಚರ್ಚೆಯನ್ನೂ ಕಣವಿಯವರು ಮಾಡಿದ್ದಾರೆ. 'ಒಳ್ಳೆಯ ವಿಮರ್ಶೆ ವಿಮರ್ಶಕನ ಎಲ್ಲ ಒಲವುಗಳನ್ನೂ ಒಂದು ಹದದಲ್ಲಿ ಬೆರೆಸಿಕೊಂಡ ಕಲಾಕೃತಿ. ವಿಮರ್ಶೆಯಿಂದ ಕೃತಿಯ ಅಂತರ್ದರ್ಶನ ವಾಚಕನಿಗೆ ಆಗಬೇಕು. ಅದರಿಂದ ಅವನ ಕಣ್ಣು ತೆರೆಯುತ್ತದೆ. ಹೃದಯ ಅರಳುತ್ತದೆ. ಅವನ ಅಭಿರುಚಿಗೊಂದು ಸಂಸ್ಕಾರ ಒದಗುತ್ತದೆ. ಗುಣ-ದೋಷಗಳ ಸೂಕ್ಷ್ಮ ವಿವೇಚನೆಯಿಂದ ಪ್ರಯೋಜನವುಂಟು. ವಾಚಕರ ಅಭಿರುಚಿಯ ಮಟ್ಟ ಹೆಚ್ಚಿದಂತೆ ಅವರಲ್ಲಿ ಕಾವ್ಯದ ಸಂಸ್ಕಾರ ನೆಲೆಗೊಳ್ಳುವಂತಾಗುತ್ತದೆ. ತನ್ಮೂಲಕ ನಾಡಿನ ಸಂಸ್ಕೃತಿಯೂ ಹೆಚ್ಚುತ್ತದೆ. ಕಳೆದ ಶತಮಾನದ ಮೊದಲ ಆರು ದಶಕಗಳಲ್ಲಿ ಕನ್ನಡ ವಿಮರ್ಶೆಯ ವಿಹಂಗಮ ನೋಟವನ್ನು ಕಣವಿಯವರು ಒದಗಿಸಿದ್ದಾರೆ. ಹೊಸ ವಿಮರ್ಶಕರು ಪಾಶ್ಚಾತ್ಯ ವಿಮರ್ಶಾ ರೀತಿಯಿಂದ ಪ್ರಭಾವಿತರಾದರೂ ಭಾರತೀಯ ಕಾವ್ಯ ಮೀಮಾಂಸೆಯ ಪರಿಚಯವನ್ನು ಪಡೆಯಬೇಕಾದುದು ಅವಶ್ಯಕ ಎಂದಿದ್ದಾರೆ. ಕನ್ನಡ ವಿಮರ್ಶೆಯ ಬೆಳವಣಿಗೆ ಬಗೆಗೆ ಕಣವಿಯವರು ಆಶಾವಾದಿಯಾಗಿದ್ದಾರೆ. ಕೊನೆಯಲ್ಲಿ ಉತ್ತಮ ವಿಮರ್ಶೆ ಹಾಗೂ ಉತ್ತಮ ವಿಮರ್ಶಕರ ಬಗೆಗೂ ಖಚಿತವಾದ ತಮ್ಮ ನಿಲುವನ್ನು ಹೀಗೆ ವ್ಯಕ್ತಪಡಿಸಿದ್ದಾರೆ : 'ವಿಮರ್ಶೆ ಅವಸರದ ಪ್ರತಿಕ್ರಿಯೆಯಲ್ಲ. ಸಂಯಮಶೀಲವಾದ ಪರಿಭಾವನೆ ದುಡುಕು ಮಾತಿನ, ತಾರತಮ್ಯ ಜ್ಞಾನವಿಲ್ಲದ 'ಸತೃಣಾಭ್ಯ ವ್ಯವಹಾರಿ'ಗಳಿಗೆ ಇಲ್ಲಿ ಪ್ರವೇಶವಿಲ್ಲವೆಂದು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಸಾಹಿತ್ಯವನ್ನು ಕುರಿತು ಸಿದ್ಧಾಂತಗಳು, ವಿಮರ್ಶೆಯ ತತ್ವಗಳು ಕಾಲಕಾಲಕ್ಕೆ ಬೆಳೆದು, ಬದಲುಗೊಂಡು ಬಂದಿರುವದುಂಟು. ಹಾಗೆಯೇ ಸಾಹಿತ್ಯದಲ್ಲಿ ಹೊಸ ಹೊಸ ಪ್ರಯೋಗಗಳು ಹೊಸ ಹೊಸ ರೂಪ ವಿನ್ಯಾಸದಲ್ಲಿ ಮೈದೋರುತ್ತಲೇ ಇರುತ್ತವೆ. ಆದ್ದರಿಂದ ವಿಮರ್ಶೆಯೂ ಅದಕ್ಕೆ ತಕ್ಕಂತೆ ಹೊಸ ಹೊಸ ಮಾನದಂಡಗಳನ್ನು ನಿರ್ಮಿಸಿಕೊಂಡು ಹೊಸ ಭಾಷೆಯಲ್ಲಿ ತನ್ನ ಅಭಿವ್ಯಕ್ತಿಯನ್ನು ಪಡೆದು ಮುನ್ನಡೆಯಬೇಕಾಗುತ್ತದೆ.

'ಕಣವಿಯವರ ಒಟ್ಟಾರೆ ವಿಮರ್ಶೆ ಸಹೃದಯ ಪ್ರತಿಕ್ರಿಯೆಯ ಮಾದರಿಯದು. ಕಾವ್ಯವನ್ನು ಅದು ಮೊದಲು ಕಾವ್ಯವಾಗಿದೆಯೇ ಎಂದು ಪರೀಕ್ಷೆಗೆ ಒಡ್ಡುವ ರೀತಿಯದು. ಹಾಗೆ ಕಾವ್ಯವಾಗಿದ್ದಲ್ಲಿ ಅದನ್ನು ಕಾವ್ಯವಾಗಿರಿಸಿರುವ ಅಂಶಗಳಾವವು ? ಅದರ ಭಾಷೆಯೆ, ವಸ್ತುವೆ, ಪ್ರತಿಮೆ, ರೂಪಕ, ಛಂದಸ್ಸು, ಲಯ, ಪ್ರಾಸವೇ ಎಂಬ ವಿಶ್ಲೇಷಣಾತ್ಮಕ ಜಾಡನ್ನು ಅವಲಂಬಿಸುವದು. ಕಾವ್ಯದ ಆಶಯ ಮತ್ತು ಆಕೃತಿಗಳನ್ನು ಒಂದು ಹದವಾದ ಸಮತೂಕದ ತಕ್ಕಡಿಯಲ್ಲಿಟ್ಟು ತೂಗುವದು ಅದರ ಗದ್ಯದ ವಿಶೇಷ. ಅವರು ಯಾವುದೇ ಕವಿಯ ಕಾವ್ಯವನ್ನು ಪ್ರವೇಶಿಸುವದು ಭಾವದಿಂದ ಮಾತ್ರವೇ ಹೊರತು ಬುದ್ಧಿಯಿಂದಲ್ಲ. ಹೀಗಾಗಿ ಅವರ ಕಾವ್ಯ ವಿಮರ್ಶೆಯಲ್ಲಿ ಬೌದ್ಧಿಕ ಸರ್ಕಸ್ಸು ಕಾಣಿಸಿಕೊಳ್ಳುವದಿಲ್ಲ. ಭಾವಸ್ಪಂದನಗಳು, ಕಾವ್ಯಾನುಸಂಧಾನದ ತರಂಗಗಳು ಕಾಣುತ್ತವೆ' ಎಂದು ಡಾ. ಪ್ರಹ್ಲಾದ ಅಗಸನಕಟ್ಟೆ ಅವರು ಸಮಗ್ರ ಕಣವಿ ಗದ್ಯದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಕಣವಿಯವರು ತಾವು ವಿಮರ್ಶಿಸುವ ಕವಿಕೃತಿಗಳನ್ನು ಸಹೃದಯತೆಯಿಂದ ಪರಿಶೀಲನೆ

ನಡೆಸುತ್ತಾರಾದರೂ ಅವರ ಮಿತಿಗಳನ್ನೂ ಹೇಳದೆ ಬಿಟ್ಟಿಲ್ಲ. ಅಡಿಗರ ಕಾವ್ಯ ಪ್ರತಿಮಾನಿಷ್ಠವಾಗಿರುವದೂ ರಾಮಚಂದ್ರ ಶರ್ಮ ಕವಿತೆಗಳಲ್ಲಿ ಅತಿಯಾದ ಲೈಂಗಿಕತೆಯನ್ನು ಒಳಗೊಂಡಿರುವದನ್ನು ಹೇಳಿದ್ದಾರೆ. ಬಹಳ ಮುಖ್ಯವಾದದ್ದು ಎಂದರೆ ಕಣವಿಯವರು ಯಾವುದೇ ಭಾವಾವೇಶಕ್ಕೆ ಒಳಗಾಗದೆ, ವಾಗ್ವಾದಗಳನ್ನು ಸೃಷ್ಟಿಸದೆ, ಬೌದ್ಧಿಕ ಗಿಮಿಕ್ ಮಾಡದೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಿರುವದು. ಹೀಗೆ ಮಾಡುವಾಗ ಅವರ ಸಮತೋಲನ ನಿಲುವು ಪ್ರಿಯವಾಗುತ್ತದೆ. ಎಲ್ಲ ಬಗೆಯ ಚಳುವಳಿಗಳಿಗೆ ಸ್ಪಂದಿಸುವ ವಿಮರ್ಶನ ದೃಷ್ಟಿ ಅವರದಾಗಿದೆ. ಕಣವಿಯವರ ಜಾನಪದಾಧ್ಯಯನದ ಲೇಖನಗಳು ಅವರ ಸಾಹಿತ್ಯಾನುಸಂಧಾನದ ಹೊಸ ಮಾರ್ಗವನ್ನು ತೆರೆದು ತೋರಿಸುತ್ತವೆ. ಕಣವಿಯವರು ಬಾಲ್ಯವನ್ನು ಕಳೆದದ್ದು ಗ್ರಾಮೀಣ ಪರಿಸರದಲ್ಲಿ. ಸಹಜವಾಗಿಯೇ ಅಲ್ಲಿಯ ಜಾನಪದ ಜೀವನ ಕಣವಿಯವರ ವ್ಯಕ್ತಿತ್ವವನ್ನು ರೂಪಿಸಿದೆ. 'ಭಾವಜೀವಿ'ಯಲ್ಲಿ ಕಣವಿಯವರು ತಾವು ಹಳ್ಳಿಯ ಜಾನಪದ ಜೀವನದಿಂದ ಸ್ಫೂರ್ತಿ ಪಡೆದದ್ದನ್ನು ನಿರೂಪಿಸಿದ್ದಾರೆ. 'ಸ್ವಾತಂತ್ರ್ಯಪೂರ್ವದ ಜನಪದ ಸಾಹಿತ್ಯ' (ಸಾಹಿತ್ಯ ಚಿಂತನ) ಸಂಗ್ರಹಗಳಲ್ಲಿ 'ಗರತಿಯ ಹಾಡು', 'ಜೀವನ ಸಂಗೀತ', 'ಮಲ್ಲಿಗೆ ದಂಡೆ', 'ನಾಡಪದಗಳು', ಸಂಗ್ರಹಗಳ ವಿಶಿಷ್ಟತೆಯನ್ನು ಕಣವಿಯವರು ವಿವೇಚಿಸಿದ್ದಾರೆ. ಕನ್ನಡ ಜಾನಪದ ಗೀತೆಗಳು ಮಹಾಪ್ರಬಂಧ ಬರೆದ ಡಾ. ಬಿ. ಎಸ್. ಗದ್ದಿಗಿಮಠ ಅವರ 'ಲೋಕಗೀತಗಳು' ಸಂಗ್ರಹ, ಸಂಪಾದನೆಯ ವೈಶಿಷ್ಟ್ಯಗಳನ್ನು ಎರಡನೆಯ ಲೇಖನದಲ್ಲಿ ಕೊಟ್ಟಿದ್ದಾರೆ.

'ಜನಪದ ಸಾಹಿತ್ಯದ ಕಾವ್ಯಭಾಷೆ' (ಸಮಾಹಿತ) ಕಣವಿಯವರ ಅಧ್ಯಯನಪೂರ್ಣ ಲೇಖನವಾಗಿದೆ. 'ಜನಪದ ಕಾವ್ಯ ಹಳ್ಳಿಯ ಜೀವನದ ಪರಿಸರದಲ್ಲಿ ಒಂದು ವಿಶಿಷ್ಟ ಸಂಸ್ಕೃತಿಯಲ್ಲಿ ಮೂಡಿ ಬಂದದ್ದಾದ್ದರಿಂದ ಅದರ ಭಾಷೆ, ಲಯ, ಪ್ರತಿಮಾ ಶಿಲ್ಪ, ಧಾಟಿ, ಧೋರಣೆಗಳಲ್ಲಿ ಅವರ ಸಂಸ್ಕಾರಗಳು ದಟ್ಟವಾಗಿರುತ್ತವೆ. ಅಲ್ಲಿಯ ಆಡುಮಾತಿನ ಲಯಕ್ಕೆ, ಶಬ್ದ ಸಂಪತ್ತಿಗೆ ಪಡೆನುಡಿ, ಧ್ವನಿಶಕ್ತಿಗಳಿಗೆ, ವಿಶಿಷ್ಟವಾದ ಸಂವೇದನೆಯಿದೆ. ಜನಪದ ಕಾವ್ಯಭಾಷೆ ಅದೆಲ್ಲವನ್ನೂ ಒಳಗೊಂಡು ಜನಪದ ಪ್ರಜ್ಞೆಯ ಪ್ರತೀಕವಾಗಿರುತ್ತದೆ.' ಈ ಹಿನ್ನೆಲೆಯಲ್ಲಿ ಕೆಲವು ಪದ್ಯಗಳನ್ನು ಉದಾಹರಿಸಿ ಅವುಗಳ ಕಾವ್ಯಭಾಷೆ, ಕಾವ್ಯಗುಣಗಳನ್ನು ಎತ್ತಿ ತೋರಿಸಿದ್ದಾರೆ.

'ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ' (ಕಾವ್ಯಾನುಸಂಧಾನ) ವಿಸ್ತಾರವಾದ ಲೇಖನದಲ್ಲಿ 'ಅನುಭವದ ಆಳ, ರಸಾನುಭೂತಿಯ ಗಾಢತೆ, ಭಾವದ ತಲ್ಲೀನತೆ, ಸಮುಚಿತವಾದ ಭಾಷೆ, ವ್ಯಂಜಕ ಶಕ್ತಿ, ಸ್ವತಂತ್ರವಾದ ವ್ಯಕ್ತಿತ್ವ –ಇವುಗಳ ಸಾಮರಸ್ಯದಿಂದ ಉತ್ತಮ ಕಾವ್ಯ ರೂಪುಗೊಳ್ಳುತ್ತದೆ. ಜನಪದ ಗೀತೆಗಳಲ್ಲಿ ಕಾಣುವ ಪ್ರತಿಮಾ ವಿಧಾನವನ್ನು ಹಲವಾರು ನಿದರ್ಶನಗಳ ಮೂಲಕ ಕಣವಿಯವರು ವಿವೇಚಿಸಿದ್ದಾರೆ. ಯಾವುದೇ ಪ್ರೌಢಕವಿಗಳು ಬರೆದ ಕಾವ್ಯವನ್ನು ಓದದೆ ತಮ್ಮ ಕಿವಿಗಳಿಂದ ಜೀವನ ಸಂಗೀತವನ್ನು ಕೇಳಿ ವೈಯಕ್ತಿಕ ಸ್ವಂತ ಅನುಭವದ ಬಲದಿಂದ ಕಾವ್ಯದ ಪ್ರತಿಮಾಶಿಲ್ಪವನ್ನು ಕಟ್ಟಿಕೊಟ್ಟು ಜನಪದರ ಪ್ರತಿಭೆಯನ್ನು ಅವರ ತ್ರಿಪದಿಗಳ ಮೂಲಕವೇ ವಿವೇಚಿಸಿದ್ದಾರೆ. 'ಜನಪದ ಕಾವ್ಯದ ಮೂಲಕ ಜನಾಂಗದ ಸಂಸ್ಕೃತಿಯ ಅಧ್ಯಯನ' (ಸಮಾಹಿತ) ಮಾನವಶಾಸ್ತ್ರಜ್ಞ ಎಲ್ವಿನ್ ವೆರಿಯರ್ ಅವರ 'ಗಿರಿಜನ ಪ್ರಪಂಚ' ಅಪರೂಪದ ಗೀತಗಳ ಪುಸ್ತಕವಾಗಿದ್ದು

ಮಾನವ ಕುಲಗಳ, ಜನಾಂಗಗಳ ಇಡಿಯ ಜೀವನವನ್ನು ಬರೆದಂತೆ ಇದೆ. ಕಣವಿಯವರು ಗಿರಿಜನರ ಹೋಳಿ ಸಂಪ್ರದಾಯವನ್ನು ಪ್ರತ್ಯೇಕ ಲೇಖನದಲ್ಲಿ ವಿವೇಚಿಸಿದ್ದಾರೆ. 'ಆಧುನಿಕ ಪರಿಸರ ಮತ್ತು ಜನಪದ ಸಾಹಿತ್ಯ' (ಸಮತೋಲನ) ಲೇಖನದಲ್ಲಿ ಕಣವಿಯವರು ಆಧುನಿಕ ಕನ್ನಡ ಕಾವ್ಯಕ್ಕೆ ಸಂಬಂಧಿಸಿದಂತೆ ಜಾನಪದವು ಉತ್ತರ ಕರ್ನಾಟಕದ ಕವಿಗಳ ಮೇಲೆ ಆದಂತೆ ಮೈಸೂರು ಕವಿಗಳ ಮೇಲೆ ಆಗಿಲ್ಲ. ಇದಕ್ಕೆ ಕಾರಣ ಮೈಸೂರ ನಗರಗಳಲ್ಲಿ ಶಿಷ್ಟ ಭಾಷೆಗೆ ಸಿಕ್ಕ ಪ್ರಾಮುಖ್ಯತೆ. ಆಧುನಿಕ ನಾಟಕ, ಸಮೂಹ ಮಾಧ್ಯಮಗಳಲ್ಲಿ ಜಾನಪದೀಯ ಅಂಶಗಳನ್ನು ಕಣವಿಯವರು ಚರ್ಚಿಸಿದ್ದಾರೆ. ನಗರ ಜಾನಪದ ಇತ್ತೀಚಿನ ಪರಿಕಲ್ಪನೆಯಾಗಿದ್ದು ಅದರ ಬಗೆಗೂ ಕಣವಿಯವರು ಒಳನೋಟಗಳನ್ನು ಹರಿಸಿದ್ದಾರೆ. ಹೀಗೆ ಕಣವಿಯವರ ಜಾನಪದ ಅಧ್ಯಯನವು ಕಾವ್ಯ ವಿಮರ್ಶೆ, ಕಾವ್ಯಭಾಷೆ, ಜನಾಂಗಿಕ ಅಧ್ಯಯನ, ಸಂಸ್ಕೃತಿ ಸಂಕಥನದ ವರೆಗೆ ಹರಿದಿದ್ದು ವ್ಯಾಪಕ ಅನ್ವಯಿಮುಖವಾಗಿದೆ.

ಒಡನಾಟದಲ್ಲಿ ಅರಳಿದ ವ್ಯಕ್ತಿ ಚಿತ್ರಗಳು

ಕಣವಿಯವರು ಕಳೆದ ಏಳು ದಶಕಗಳಿಂದ ನಾಡಿನ ಹಿರಿಕಿರಿಯ ಸಾಹಿತಿಗಳ ಒಡನಾಟದಲ್ಲಿ ಅವರನ್ನು ಗಾಢವಾಗಿ ಪ್ರಭಾವಿಸಿದ ಸಾಹಿತ್ಯಲೋಕದ ಹಿರಿಯರ, ಸ್ನೇಹಿತರ ಅನೇಕ ಲೇಖಕರ ವ್ಯಕ್ತಿಚಿತ್ರಗಳನ್ನು ಮಹತ್ವದ ವಿವಿಧ ಸಂದರ್ಭಗಳಲ್ಲಿ ಬರೆದಿದ್ದಾರೆ. **ಸಾಹಿತ್ಯ ಸಮಾಹಿತ** ದಲ್ಲಿ ಮೂವತ್ತೊಂದು ಲೇಖನಗಳು, **ಸದ್ಭಾವ**ದಲ್ಲಿ ಮೂವತ್ಮೂರು ಲೇಖನಗಳು, **ಅವಿನಾಭಾವ**ದಲ್ಲಿ ನಾಲ್ವತ್ತು ಲೇಖನಗಳು ಹೀಗೆ ನೂರೊಂದು ಲೇಖನಗಳಲ್ಲಿ ಕನ್ನಡ ಸಾಹಿತ್ಯಲೋಕದ ಮಹನೀಯರ ನುಡಿಚಿತ್ರಗಳನ್ನು ಕಣವಿಯವರು ಬರೆದಿದ್ದಾರೆ. ಕಣವಿಯವರ ಸುನೀತಗಳಲ್ಲಿ ಬಂದ ವ್ಯಕ್ತಿಚಿತ್ರಗಳು ಕವಿತೆಯಲ್ಲಿ ಅನೇಕ ಮಹನೀಯರು ಮೈದಾಳಿ ನಿಂತರೆ ನೂರೊಂದು ವ್ಯಕ್ತಿಗಳ ಬಗೆಗೆ ಬರೆದ ಗದ್ಯದ ಲೇಖನಗಳು ಅಷ್ಟೇ ಮಹತ್ವಪೂರ್ಣವಾಗಿವೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತಿಗಳ ಹಲವು ಅಭಿನಂದನ ಗ್ರಂಥಗಳು, ಸಾಹಿತಿಗಳ ಜನ್ಮಶತಾಬ್ಧಿ, ಸಂಸ್ಮರಣ ಗ್ರಂಥಗಳು ಪ್ರಕಟವಾಗಿದ್ದು ಕಣವಿಯವರು ಸಾಹಿತ್ಯಲೋಕದ ಹಿರಿಯರಾಗಿ ಬರೆದ ಅನೇಕ ಲೇಖನಗಳು ಕಣವಿ ಗದ್ಯ ಸಾಹಿತ್ಯದ ವಿಶಿಷ್ಟ ಭಾಗವಾಗಿವೆ. ಸಮಕಾಲೀನ ಸಾಹಿತ್ಯ, ಸಾಹಿತಿಗಳ ಜೊತೆ ಕಣವಿಯವರು ಅಪಾರವಾದ ಸ್ನೇಹ ಮೈತ್ರಿಯನ್ನು ನಿರಂತರವಾಗಿ ಇಟ್ಟುಕೊಂಡು ಬಂದ ಅಜಾತಶತ್ರುವಾಗಿದ್ದಾರೆ. ಹಿರಿಯ ಲೇಖಕರ ಜೊತೆ ಗೌರವ, ಒಡನಾಡಿಗಳ ಜೊತೆ ಸ್ನೇಹಭಾವ, ಎಳೆಯರ ಜೊತೆ ಪ್ರೀತಿ–ವಾತ್ಸಲ್ಯ ತೋರುವ ಕಣವಿಯವರ ವ್ಯಕ್ತಿಚಿತ್ರಗಳು ಆಪ್ತಬರವಣಿಗೆಯಾಗಿವೆ. ಅವರ ವ್ಯಕ್ತಿಚಿತ್ರಗಳು ಎಷ್ಟು ಮೋಹಕವಾಗಿವೆಯೆಂದರೆ ಇತ್ತೀಚೆಗೆ ಧಾರವಾಡದ ಮನೋಹರ ಗ್ರಂಥಮಾಲೆಯವರು ಕಣವಿಯವರ ವ್ಯಕ್ತಿಚಿತ್ರಗಳ 'ಸ್ಮೃತಿಸೌರಭ'ವನ್ನು ಪ್ರಕಟಿಸಿದ್ದಾರೆ.

ಕಣವಿಯವರು ಕನ್ನಡ ಸಾಹಿತ್ಯಲೋಕದ ಹಿರಿಯ ಚೇತನಗಳನ್ನು ನೆನೆಯುವ ವ್ಯಕ್ತಿಚಿತ್ರಗಳು ಅತ್ಯಂತ ಮನೋಜ್ಞವಾಗಿವೆ. ವಿದ್ಯಾರ್ಥಿ ಜೀವನದಲ್ಲಿರುವಾಗಲೇ ಸಾಹಿತ್ಯಾಭಿರುಚಿ ಹುಟ್ಟಿಕೊಂಡದ್ದರಿಂದ ಕಣವಿಯವರು ಮಾಸ್ತಿ, ಬೇಂದ್ರೆ, ಕುವೆಂಪು, ಮಧುರಚೆನ್ನ ಮೊದಲಾದವರ ಕೃತಿಗಳನ್ನು ಓದಿದರು. ಅವರಲ್ಲಿರುವ ಸುಪ್ತ ಸಾಹಿತ್ಯಚೇತನವನ್ನು ಅವು ಪ್ರಭಾವಿಸಿದವು. ಧಾರವಾಡದ ಮುರುಘಾಮಠ, ಕರ್ನಾಟಕ

ವಿದ್ಯಾವರ್ಧಕ ಸಂಘದಲ್ಲಿ ಸಾಹಿತಿಗಳನ್ನು ನೋಡಿ ಅವರ ಉಪನ್ಯಾಸಗಳನ್ನು ಕೇಳುತ್ತಿದ್ದರು. ಮಾಸ್ತಿಯವರ 'ಸಣ್ಣಕತೆಗಳು' 'ಸುಬ್ಬಣ್ಣ' ನೀಳ್ಗತೆಯನ್ನು ಓದಿದ ಕಣವಿಯವರು ಮಾಸ್ತಿಯವರನ್ನು ಮೊದಲು ನೋಡಿದ್ದು ೧೯೪೪ ರಲ್ಲಿ ಬಸವನಾಳರ ಅಧ್ಯಕ್ಷತೆಯಲ್ಲಿ ಜರುಗಿದ ರಬಕವಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ. ಅನಂತರ ೧೯೪೬ ರಲ್ಲಿ ಧಾರವಾಡದಲ್ಲಿ ಜರುಗಿದ ಬೇಂದ್ರೆಯವರ ಐವತ್ತನೆಯ ಸಮಾರಂಭದಲ್ಲಿ ಮಾಸ್ತಿ-ಬೇಂದ್ರೆ ಅಣ್ಣತಮ್ಮಂದಿರಂತೆ ಇರುವದನ್ನು ಕಂಡದ್ದು, ಮಾಸ್ತಿಯವರು ಧಾರವಾಡದ ಕಾರ್ಯಕ್ರಮಕ್ಕೆ ಬಂದಾಗ ಮಾಸ್ತಿಯವರಿಗೆ ಜ್ವರ ಬಂದು ಅವರ ಆರೈಕೆಯನ್ನು ಕಣವಿಯವರು ಮಾಡಿದ್ದು, ಮುಂದೆ ಮಾಸ್ತಿಯವರ ಮನೆಗೆ ಹೋಗಿ ಬಂದ ಪ್ರಸಂಗವನ್ನು ವರ್ಣಿಸುತ್ತ ಅವರ ನಿರ್ಮಲವಾದ ವ್ಯಕ್ತಿತ್ವವನ್ನು ಕಂಡರಿಸಿದ್ದಾರೆ. ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ಮಾಸ್ತಿಯವರು ತಮ್ಮ ಸಾಹಿತ್ಯದ ಬಗ್ಗೆ ಎದ್ದ ವಾದ ಪ್ರತಿವಾದಗಳಲ್ಲಿ ನಯವಾಗಿ ವಿಚಾರ ಮಂಡನೆ ಮಾಡುವದನ್ನು ಹೇಳುತ್ತ ಬಸವರಾಜ ಕಟ್ಟೀಮನಿ, ಕೋ.ಚೆನ್ನಬಸಪ್ಪ ನಮ್ಮದು ಅನುದಾರವಾದ ಖಂಡನೆ ಎಂದು ಪ್ರಾಮಾಣಿಕತೆಯಿಂದ ಒಪ್ಪಿಕೊಂಡದ್ದನ್ನು ಪ್ರಸ್ತಾಪಿಸಿದ್ದಾರೆ. 'ಚೆನ್ನಬಸವನಾಯಕ', 'ಚಿಕವೀರರಾಜೇಂದ್ರ' ಕಾದಂಬರಿಗಳ ಬಗ್ಗೆ ಎದ್ದ ವಿವಾದದಲ್ಲೂ ಮಾಸ್ತಿಯವರು ಆಕ್ರೋಶಕ್ಕೆ ಒಳಗಾದರು ಎಂದರೆ ನಂಬುವದು ಕಷ್ಟ. 'ಅವರದು ಎಷ್ಟೋ ಬಗೆಯ ನೋವುಗಳ ಸಂಸ್ಕಾರದಿಂದ ಹದಗೊಂಡ ದೊಡ್ಡ ಜೀವ' ಎಂದು ಹೇಳಿದ್ದಾರೆ.

'ವರಕವಿಯೊಂದಿಗೆ ಒಡನಾಟ'ದಲ್ಲಿ ಬೇಂದ್ರೆಯವರ ಜೊತೆ ನಾಲ್ಕು ದಶಕಗಳ ಸಂಬಂಧವನ್ನು ಕಣವಿಯವರು ದಾಖಲಿಸಿದ್ದಾರೆ. ಕಣವಿಯವರ 'ಕಾವ್ಯಾಕ್ಷಿ' ಸಂಕಲನಕ್ಕೆ ಬೇಂದ್ರೆ ಮುನ್ನುಡಿ ಬರೆದದ್ದು, ಅವರು ಮತ್ತು ಗೋಕಾಕರು ಕಣವಿಯವರು ವಿದ್ಯಾರ್ಥಿಯಾಗಿದ್ದಾಗ ಆರಂಭಿಸಿದ 'ಕಾವ್ಯಾನುಭವ ಮಂಟಪ'ಕ್ಕೆ ಬಂದದ್ದು, ಬೇಂದ್ರೆಯವರ ಅರವತ್ತನೆಯ ಹುಟ್ಟುಹಬ್ಬದ ಸಮಾರಂಭ, 'ನೆಲ ಮುಗಿಲು' ಸಂಕಲನಕ್ಕೆ ಅವರಿಂದ ಮುನ್ನುಡಿ, ಕಣವಿಯವರಿಗೆ ಅರ್ಪಿತವಾದ 'ಚೆಂಬೆಳಕು' ಅಭಿನಂದನ ಗ್ರಂಥದ ಸಮಾರಂಭಕ್ಕೆ ಬಂದು ಭಾಷಣ ಮಾಡಿದ್ದು, ಅದೇ ಅವರ ಕೊನೆಯ ಸಾರ್ವಜನಿಕ ಭಾಷಣವಾದದ್ದನ್ನು ಕಣವಿಯವರು ನೆನೆದಿದ್ದಾರೆ.

ಧಾರವಾಡದ ಸಾಧನಕೇರಿಯ ಸಂಶೋಧನ ದಿಗ್ಗಜರಾದ ಶಂಬಾ ಕುರಿತ ಸ್ಮೃತಿಚಿತ್ರವೂ ಕಣವಿಯವರ ಒಡನಾಟದ ಅನುಭವದಲ್ಲಿ ಸೇರಿದೆ. ಕನ್ನಾಡು, ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆಯ ಶೋಧದಿಂದ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದಾಗ ಧಾರವಾಡದಲ್ಲಿ ನಡೆದ ಕುಲಪತಿ ಡಾ. ಡಿ.ಸಿ. ಪಾವಟೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬೇಂದ್ರೆ – ಶಂಬಾ ನಡುವೆ ನಡೆದ ವಾಗ್ವಾದದ ಪ್ರಸ್ತಾಪವನ್ನೂ ಕಣವಿಯವರು ಮಾಡಿದ್ದಾರೆ.

ಕನ್ನಡದಲ್ಲಿ ನವ್ಯಕಾವ್ಯ ರಭಸದಿಂದ ಪ್ರಾರಂಭಗೊಂಡ ಕಾಲದಲ್ಲಿ ವಿ. ಸೀ. ಅವರು ಬೆಂಗಳೂರು ಆಕಾಶವಾಣಿ ಏರ್ಪಡಿಸಿದ ಕವಿಗೋಷ್ಠಿಯಲ್ಲಿ ನವ್ಯಕವಿತೆಗಳ ಜಟಿಲತೆ, ಕ್ಲಿಷ್ಟತೆ, ತಳಮಳಗಳನ್ನು ವಿವರಿಸಿದ್ದು ಆಗಲೇ ಕಣವಿಯವರ 'ಮಣ್ಣಿನ ಮೆರವಣಿಗೆ' ಬಂದದ್ದು ಶಿವರುದ್ರಪ್ಪನವರೊಂದಿಗೆ ವಿಸೀ ಅವರ ಭೇಟಿಯನ್ನು 'ವಿಸೀ ಮಾಸದ ನೆನಪು' ಲೇಖನದಲ್ಲಿ ಕಣವಿ ವಿವರಿಸಿದ್ದಾರೆ. ಬೇರೆ ಬೇರೆ ದೇಶಗಳಲ್ಲಿಯ

ಸಾಹಿತ್ಯದ ಆಗುಹೋಗುಗಳ ಬಗೆಗಿನ ಅವರ ತಿಳಿವಳಿಕೆ, ಕಾಣಿಸುವ ಹೊಸನೋಟ ಅಚ್ಚರಿಗೊಳಿಸಿದೆ ಎಂದೂ ಹೇಳಿದ್ದಾರೆ.

'ತೀ ನಂ ಶ್ರೀ : ನೆನಪಿನಂಗಳದಲ್ಲಿ' ಲೇಖನದಲ್ಲಿ ಕಣವಿಯವರು ಅವರೊಡನೆ ಆತ್ಮೀಯ ಕ್ಷಣಗಳನ್ನು ಮೆಲುಕು ಹಾಕುತ್ತ ತೀ. ನಂ. ಶ್ರೀಯವರು ಆ ಕಾಲದಲ್ಲಿ ಕುಲಪತಿ ಪಾವಟೆಯವರಿಗೆ ಕಣವಿಯವರು ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಬೇಕೆಂದು ಬರೆದುಕೊಟ್ಟಿದ್ದರೂ ಅದು ಕಾಗದದಲ್ಲೇ ಉಳಿದು ಕಾರ್ಯರೂಪಕ್ಕೆ ಬರಲಿಲ್ಲವೆಂಬ ವಿಚಾರವನ್ನೂ ದಾಖಲಿಸಿದ್ದಾರೆ.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಗೋಕಾಕ – ಕಾರಂತರೊಂದಿಗೆ ಧಾರವಾಡದಲ್ಲಿ ಕಣವಿಯವರು ನಡೆಸಿದ ಕೊನೆಯ ಆಕಾಶವಾಣಿ ಸಂದರ್ಶನ ಅನೇಕ ಸ್ವಾರಸ್ಯಪೂರ್ಣ ವಿಚಾರಗಳೊಂದಿಗೆ ಪ್ರಕಟವಾಗಿದೆ. ಅನೇಕ ವಿಚಾರಗಳಲ್ಲಿ ಭಿನ್ನ ನಿಲುವು ತಳೆದ ಈ ಸಾಹಿತ್ಯ ದಿಗ್ಗಜರ ಸಂವಾದ ಕುತೂಹಲಕರವಾಗಿದೆ.

ನವೋದಯ, ನವ್ಯ, ದಲಿತ ಬಂಡಾಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಣವಿಯವರು ಸ. ಸ. ಮಾಳವಾಡರ ಜೊತೆ ನಡೆಸಿದ ಬಿಸಿ ಬಿಸಿ ಚರ್ಚೆ ಅವರು ಆಕಾಶವಾಣಿಗೆ ನಡೆಸಿದ ಸಂದರ್ಶನದಲ್ಲಿ ಬಂದಿದೆ. ಕಣವಿಯವರು ಸಾಹಿತ್ಯದ ನಾಲ್ಕು ಚಳುವಳಿಗಳನ್ನು ಮುಕ್ತಮನಸ್ಸಿನಿಂದ ಬರಮಾಡಿಕೊಳ್ಳುವದನ್ನು ನಾವು ಕಾಣುತ್ತೇವೆ.

ಕಣವಿಯವರು ಕನ್ನಡ ಸಾಹಿತ್ಯಲೋಕದ ವ್ಯಕ್ತಿ–ಶಕ್ತಿಗಳನ್ನು ಅತ್ಯಂತ ಆದರ, ಪ್ರೀತಿ, ಗೌರವದಿಂದ ಕಾಣುತ್ತ ಬಂದಿದ್ದು ಅದು ಅವರ ವ್ಯಕ್ತಿಚಿತ್ರಗಳಲ್ಲೂ ಅಂತಸ್ಥವಾಗಿದೆ. ಯಾರ ಬಗೆಗೂ ವ್ಯಂಗ್ಯ, ಟೀಕೆ, ನಿಂದೆ, ಅಸಹನೆ, ಕುಹಕ ನುಡಿಗಳು ನಮಗೆ ಎಲ್ಲಿಯೂ ಕಾಣುವದಿಲ್ಲ. ಬಹಳಷ್ಟು ವ್ಯಕ್ತಿಚಿತ್ರ ಲೇಖನಗಳು ಅಭಿನಂದನ ಗ್ರಂಥಗಳಿಗೆ ಬರೆದವುಗಳಾದ್ದರಿಂದ ಅವುಗಳಲ್ಲಿ ಪ್ರಶಂಸಾಪರ ಮಾತುಗಳು ಬಂದಿವೆ. ಆದರೆ ಅದು ಸಾಹಿತ್ಯ ಸಾಧಕರ ಗುಣಪ್ರಶಂಸೆಯಾಗಿದೆಯೇ ಹೊರತು ಬೇರೆ ಯಾವ ಉದ್ದೇಶವೂ ಅದರ ಹಿಂದೆ ಇರದೆ ಇರುವದನ್ನು ನಾವು ಕಾಣುತ್ತೇವೆ. ಸಮಕಾಲೀನ ಸಾಹಿತಿಗಳನ್ನು ಸ್ನೇಹ, ಪ್ರೀತಿಯಿಂದ ಕಾಣುವ ಒಂದು ಆದರ್ಶ ಕಣವಿಯವರ ವ್ಯಕ್ತಿಚಿತ್ರಗಳ ವೈಶಿಷ್ಟ್ಯವಾಗಿದೆ.

ಕಣವಿಯವರ ವ್ಯಕ್ತಿಚಿತ್ರಗಳಲ್ಲಿ ಮುಖ್ಯವಾಗಿ ಅವರ ಒಡನಾಟ ಸಂಬಂಧದ ಘಟನೆಗಳ ಉಲ್ಲೇಖ ಪ್ರತಿಯೊಂದರಲ್ಲೂ ಬರುತ್ತದೆ. ತಮ್ಮ ಸಂಪರ್ಕಕ್ಕೆ ಬಾರದ ಯಾರ ಬಗೆಗೂ ಅವರು ಬರೆದಿಲ್ಲ. ಶುದ್ಧ ಸಾಹಿತ್ಯಾಸಕ್ತಿ ಮತ್ತು ಆಯಾ ಲೇಖಕರ ವ್ಯಕ್ತಿತ್ವದ ವಿಭಿನ್ನ ಮುಖಗಳು ಇಲ್ಲಿ ಚಿತ್ರಿತವಾಗಿವೆ. ಆಧುನಿಕ ಸಾಹಿತ್ಯದ ನೂರೊಂದು ವ್ಯಕ್ತಿಗಳ ಕುರಿತಾದ ಕಣವಿಯವರ ಲೇಖನಗಳು ವ್ಯಕ್ತಿಸಂಬಂಧದ ಜೊತೆಗೆ ಸಾಹಿತ್ಯ ಪರಂಪರೆ ಎದುರಿಸಿದ ತವಕ – ತಲ್ಲಣಗಳನ್ನೂ ಪ್ರಸ್ತಾಪಿಸುತ್ತವೆ. ಕಣವಿಯವರು ತಮ್ಮ ಅಂತರಂಗಕ್ಕೆ ಹತ್ತಿರವಾಗಿರುವವರ ಬಗ್ಗೆ ಬರೆದಿರುವಂತೆ ಸ್ವಲ್ಪ ಅಂತರ ಇಟ್ಟುಕೊಂಡವರ ಬಗೆಗೂ ಬರೆದಿದ್ದಾರೆ. 'ದೇಜಗೌ' ಸ್ವಲ್ಪ ದೂರದಿಂದ ಇದಕ್ಕೊಂದು ನಿದರ್ಶನವಾಗಿದೆ. ಅದರಲ್ಲಿ ದೇಜಗೌ ಸಾಹಿತ್ಯದ ಬಗೆಗೂ ಕಣವಿ ಬರೆದಿದ್ದಾರೆ.

ಕನ್ನಡ ನವೋದಯದ ಕವಿ ಸಾಹಿತಿಗಳನ್ನು ಕಣವಿಯವರು ಚರ್ಚಿಸುವಾಗ

ಆ ಕಾಲದ ಭಾವನೆಗಳಿಗೆ ಸಹಸ್ಪಂದನವನ್ನು ವ್ಯಕ್ತಪಡಿಸುತ್ತಾರೆ. 'ಜಿ.ಬಿ. ಜೋಶಿ ಕನಸು ನನಸು', 'ಕರ್ಕಿ ಕಾವ್ಯ ಗೌರವ', 'ಗೊರೂರು ನಮನ', 'ವಿದ್ವನ್ಮಣಿ ಡಾ. ಕೆ. ಕೃಷ್ಣಮೂರ್ತಿ', 'ಗುರುನಾಥ ಜೋಶಿ ಹಾಗೂ ಭಾಷಾ ಬಾಂಧವ್ಯ' ಮೊದಲಾದ ಲೇಖನಗಳಲ್ಲಿ ಅವರ ಮನೋಧರ್ಮಗಳನ್ನು ಸೆರೆಹಿಡಿಯುತ್ತಾರೆ.

'ಸಾಹಿತ್ಯವನ್ನು ಜನತೆಗೆ ಮುಟ್ಟಿಸುವ ಕಾರ್ಯದಲ್ಲಿ ಪ್ರಕಾಶಕನ ಪಾತ್ರ ಬಹಳ ಮುಖ್ಯವಾದದ್ದು. ಲೇಖಕ, ಪ್ರಕಾಶಕ, ಪುಸ್ತಕ ವ್ಯಾಪಾರಿ ಮೂರೂ ಆಗಿದ್ದ ಜಿ. ಬಿ ಜೋಶಿ ಅವರು ಮೂವರ ಸಮಸ್ಯೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಧೋತರ, ಹಾಫ್‌ಶರ್ಟ, ಕರಿಟೊಪ್ಪಿಗೆ ಅವರ ಖಾಯಂ ವೇಷವಾಗಿತ್ತು. (ಸಾಹಿತ್ಯ ಸಮಾಹಿತ)

'ಸದಾ ನಗೆಮೊಗದ, ಸಮಾಧಾನ, ಸಾತ್ವಿಕ ಕಳೆಯನ್ನುಕ್ಕಿಸುವ ಸರಸ ಸಜ್ಜನಿಕೆಯ ನಿರ್ಮಲ ಸ್ನೇಹಾಂತಃಕರಣದ ಕವಿ ಕರ್ಕಿಯವರನ್ನು ಕಂಡಾಗಲೆಲ್ಲ ಅವರ ಪದ್ಯ ಕಣ್ಣ ಮುಂದೆ ಕಟ್ಟಿದಂತಾಗುತ್ತದೆ. ದುಃಖ ಮೂಸದ ಸುಖದ ಸಂವೇದನೆಯನ್ನು ಪಡೆದುಕೊಂಡಿದ್ದ ಅವರ ಕಾವ್ಯ ಜೀವನ ಕೊನೆಗಾಲದಲ್ಲಿ ದುಃಖ ಪರಂಪರೆಯನ್ನೇ ಎದುರಿಸಬೇಕಾಗಿ ಬಂದದ್ದು ವಿಧಿಯ ಒಂದು ವಿಪರ್ಯಾಸವೆನ್ನಬೇಕು.' (ಸಾಹಿತ್ಯ ಸಮಾಹಿತ)

'ಗೊರೂರವರ ಹಾಸ್ಯಕ್ಕೆ ಅವರದೇ ಆದ ಮೆರುಗಿದೆ. ನವಿರಾಗಿ ಯಾರ ಮನಸ್ಸನ್ನು ನೋಯಿಸದೆ ಗುಣದೋಷಗಳನ್ನು ವ್ಯಂಗ್ಯ ಸರಣಿಯಲ್ಲಿ ಕಟಕಿಯ ಮಾತಿನಲ್ಲಿ ಉಪಾಯವಾಗಿ ಎತ್ತಿ ತೋರಿಸಿದಾಗಲೂ ಅದು ಮನಸ್ಸಿನಲ್ಲಿ, ಪ್ರಿಯವಾಗಿ ಉಳಿಯುವಂತೆ ಮಾಡುವದು ಅದರ ಕಲಾವೈಶಿಷ್ಟ್ಯ.' (ಕಣವಿ ಸಮಗ್ರ ಗದ್ಯ ಪು. ೬೨)

ಕಣವಿಯವರ 'ಜತೆಗಾರ ಜಿ.ಎಸ್.ಎಸ್. (ಸಾಹಿತ್ಯ ಸಮಾಹಿತ) ಗಮನಾರ್ಹವಾದ ಲೇಖನವಾಗಿದೆ. ಜಿ. ಎಸ್. ಶಿವರುದ್ರಪ್ಪನವರ ಸ್ನೇಹಭಾವದಲ್ಲಿ ಸಮರಸಗೊಂಡು ಮೈಸೂರು, ಧಾರವಾಡದ ನಡುವೆ ಸ್ನೇಹ ಸೇತುವೆ ಕಟ್ಟಿಕೊಂಡು ಏಳು ದಶಕಗಳ ಕಾಲ ಬೆಳೆದ ಅಪರೂಪದ ಘಟನೆಗಳನ್ನು ಕಣವಿಯವರು ಇದರಲ್ಲಿ ದಾಖಲಿಸಿದ್ದಾರೆ. ಪರಸ್ಪರ ಕವಿತೆಗಳನ್ನು ಬರೆಯುತ್ತ ಪತ್ರ ವ್ಯವಹಾರ ಮಾಡುತ್ತ ಆತ್ಮೀಯ ಗೆಳೆಯರಾಗಿ ತಮ್ಮ ತಮ್ಮ ಕವಿತೆಗಳನ್ನು ಪರಸ್ಪರ ವಿಮರ್ಶಿಸುತ್ತ, ಪತ್ರಿಕೆಗಳಲ್ಲಿ ಕವಿತೆಗಳನ್ನು ಪ್ರಕಟಿಸುತ್ತ ಸಮಕಾಲೀನ ಸಾಹಿತ್ಯ ವಿಚಾರಗಳನ್ನು ಚರ್ಚಿಸುತ್ತಿದ್ದರು. ಶಿವರುದ್ರಪ್ಪನವರು ಬರೆದ ಪತ್ರದಲ್ಲಿ ನವ್ಯತೆಯ ಧೋರಣೆಯನ್ನು ಹೀಗೆ ಬಿಡಿಸಿಟ್ಟಿದ್ದಾರೆ: 'ನವ್ಯತೆಯ ಬಗೆಗೆ ನನಗೆ ರೋಮಾಂಚಕತೆ ಇಲ್ಲ. ಏಕೆಂದರೆ ನಿಜವಾದ ನವ್ಯತೆ ಒಂದು ರಚನೆ ಅಲ್ಲ, ವಿಕಾಸ ಎಂದು ಕಂಡುಕೊಂಡವರಲ್ಲಿ ನಾನೊಬ್ಬ ನನ್ನ ಒಳಗಿನ 'ನವ್ಯಕವಿ', ತಾನೊಬ್ಬ ಭಾರತೀಯನೆಂಬುದನ್ನು ಎಂತಹ ಹೊತ್ತಿನಲ್ಲೂ ಮರೆಯುವದಿಲ್ಲ. ಎಂತಹ ಕಷ್ಟಕಾರ್ಪಣ್ಯಗಳಲ್ಲೂ ಏನೊ ಒಂದು ಅದಕ್ಕೆ ಮೀರಿದ ಆನಂದ, ಆದರ್ಶಗಳನ್ನು ಕಾಣಬಲ್ಲನು.' ಕುವೆಂಪು ರಾಮಾಯಣ ದರ್ಶನದ ಬಗೆಗೆ ಬರೆಯುತ್ತ 'ಜಗತ್ತಿನ ಯಾವ ಮಹಾಕಾವ್ಯವೂ ಇದರ ಮಟ್ಟಕ್ಕೆ ಏರಲಾರದು. 'ದರ್ಶನ'ದ ದೃಷ್ಟಿಯಿಂದ! ಇದು ಅರ್ಥವಾಗಬೇಕಾದರೆ ಸುಮಾರು ಒಂದೆರಡು ಶತಮಾನ ಕಾಯಬೇಕಾದೀತು.'

ಶಿವರುದ್ರಪ್ಪನವರ ವಿಮರ್ಶನ ಸೂಕ್ಷ್ಮತೆಯನ್ನು ಆಗಲೇ ಗಮನಿಸಿದ್ದ ಕಣವಿಯವರು ಅವರೊಡನೆ ಪಡೆದುಕೊಂಡ ಸಾಹಿತ್ಯ ಸಂಬಂಧವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಕಣವಿಯವರು ಕನ್ನಡದ ಪ್ರಗತಿಶೀಲ ಸಾಹಿತಿಗಳ ಬಗೆಗೆ ಬರೆದ ವ್ಯಕ್ತಿಚಿತ್ರಗಳೂ ಗಮನಾರ್ಹವಾಗುತ್ತವೆ. 'ಹಲವು ಹೋರಾಟಗಳ ಕಲಿ : ಅ.ನ.ಕೃ.', 'ಕ್ರಾಂತಿಕಾರಿ ಕಾದಂಬರಿಕಾರ ಬಸವರಾಜ ಕಟ್ಟೀಮನಿ', 'ಸುಸಂಸ್ಕೃತ ಸ್ನೇಹಜೀವಿ ಚದುರಂಗ', 'ನಿರಂಜನ ಸಂಚಯ' ಲೇಖನಗಳಲ್ಲಿ ಪ್ರಗತಿಶೀಲ ಸಾಹಿತಿಗಳಾದ ಅ.ನ.ಕೃ., ಕಟ್ಟೀಮನಿ, ನಿರಂಜನ ಚದುರಂಗ ಜೀವನದ ಅಪರೂಪದ ಚಿತ್ರವನ್ನು ಕೊಟ್ಟಿದ್ದಾರೆ. ಅ.ನ.ಕೃ ಕನ್ನಡ ಹೋರಾಟಗಾರರಾಗಿ ಕಾದಂಬರಿ ಲೋಕದ ಸಾರ್ವಭೌಮರಾಗಿ, ಅದ್ಭುತ ವಾಗ್ಮಿಯಾಗಿ, ವೀರಶೈವ ಧರ್ಮ ಸಾಹಿತ್ಯದ ಅಭ್ಯಾಸಿಯಾಗಿ, ಪ್ರಗತಿಪಂಥದ ಲೇಖಕರಾಗಿ ಕನ್ನಡ ಸಂಸ್ಕೃತಿಯ ಪ್ರಸಾರದಲ್ಲಿ ತೊಡಗಿಕೊಂಡ ಬಹುಮುಖಿ ನೆಲೆಯನ್ನು ಕಣವಿಯವರು ಕಟ್ಟಿಕೊಟ್ಟಿದ್ದಾರೆ. ಬಸವರಾಜ ಕಟ್ಟೀಮನಿ ಮತ್ತು ಕಣವಿ ಸಾಹಿತ್ಯ ಸಂಬಂಧ ನಾಲ್ಕು ದಶಕಗಳದ್ದು. ಕಟ್ಟೀಮನಿ ಅವರ ಕಾದಂಬರಿಗಳು, 'ಉಷಾ' ವಾರ ಪತ್ರಿಕೆ ಪ್ರಗತಿಶೀಲ ಸಾಹಿತ್ಯದ ಹಿರಿಯ ಲೇಖಕರಾಗಿದ್ದ ಅನೇಕ ಘಟನೆಗಳನ್ನು ಕಣವಿಯವರು ಇಲ್ಲಿ ದಾಖಲಿಸಿದ್ದಾರೆ. ಪ್ರಗತಿಶೀಲ ಸಾಹಿತ್ಯದ ವಕ್ತಾರ ನಿರಂಜನ ಅವರು ಅನುಪಮಾ ನಿರಂಜನ ಜೊತೆ ಧಾರವಾಡದಲ್ಲಿ ನೆಲಸಿದ್ದು, ಅನಂತರ ಅವರು ತಮ್ಮ ಕಥೆ, ಕಾದಂಬರಿಗಳ ಮೂಲಕ ಕನ್ನಡ ಜಗತ್ತಿನಲ್ಲಿ ಕೀರ್ತಿವಂತರಾದದ್ದು, ಎಲ್ಲಕ್ಕೂ ಮುಖ್ಯವಾಗಿ ಕಣವಿಯವರ ಕಾಲೇಜು ವಿದ್ಯಾರ್ಥಿ ಜೀವನದ ಸಹಪಾಠಿ ಶಿವೇಶ್ವರ ದೊಡ್ಡಮನಿ ತಮ್ಮ ಕಾವ್ಯ ಸಂಗ್ರಹದ ಜೊತೆ 'ಜನಶಕ್ತಿ' ಪತ್ರಿಕೆಯ ಸಂಪಾದಕರಾಗಿ ದುಡಿದದ್ದು, ಕೆಲವು ಕಾಲ ಸಕ್ರಿಯ ಕಾರ್ಯಕರ್ತ ಆಗಿ ಭೂಗತರಾಗಿ ಕೆಲಸ ಮಾಡಿದ್ದು ಇವುಗಳೆಲ್ಲವನ್ನೂ ಕಣವಿಯವರು ಅಂತರಂಗದ ಮಿತ್ರನಾಗಿ ನೆನೆದಿರುವದನ್ನು ನಾವು ಕಾಣುತ್ತೇವೆ. ಪ್ರಗತಿಶೀಲ ಲೇಖಕರ ಬಗೆಗೂ ಕಣವಿಯವರು ಅದೇ ಸ್ನೇಹಭಾವದಿಂದ ವರ್ಣಿಸಿದ್ದಾರೆ.

ಬಸವರಾಜ ಕಟ್ಟೀಮನಿಯವರೊಂದಿಗೆ ಪ್ರಗತಿಶೀಲ ಕಥೆಗಾರ ಚದುರಂಗರನ್ನು ಕಂಡ ಸಂದರ್ಭವನ್ನು ನೆನೆದು ಅವರ 'ಸರ್ವಮಂಗಳಾ', 'ಉಯ್ಯಾಲೆ', 'ವೈಶಾಖ' ಕಾದಂಬರಿಗಳಲ್ಲಿ ವ್ಯಕ್ತವಾಗುವ ಗ್ರಾಮೀಣ ಸಂಸ್ಕೃತಿಯನ್ನು ಚರ್ಚಿಸಿದ್ದಾರೆ.

'ಹಿರೇಮಲ್ಲೂರ್ ಈಶ್ವರನ್ : ಒಂದು ಅದ್ಭುತ ಚೇತನ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಅಂತಾರಾಷ್ಟ್ರೀಯ ಸಮಾಜಶಾಸ್ತ್ರಜ್ಞ ಹಿರೇಮಲ್ಲೂರ ಈಶ್ವರನ್ ಹೋರಾಟದ ಬದುಕನ್ನು ಚಿತ್ರಿಸುತ್ತ ಅವರ ಕಲ್ಪನಾ ಗ್ರಂಥಮಾಲೆಯಲ್ಲಿ ಕಣವಿಯವರ 'ಕಾವ್ಯಾಕ್ಷಿ' ಕವಿತಾ ಸಂಕಲನ ಪ್ರಕಟಿಸಿದ್ದಲ್ಲದೆ ಕನ್ನಡದ ಹಿರಿಯ ಕವಿಗಳ ಕವನ ಸಂಗ್ರಹದ ಪುಸ್ತಕ ಭಂಡಾರವನ್ನು ಕಣವಿಯವರಿಗೆ ಕೊಟ್ಟ ವಿಷಯವನ್ನು ದಾಖಲಿಸಿದ್ದಾರೆ. ಮುಂದೆ ಅದೇ ರೂಮಿನಲ್ಲಿ ಕಾವ್ಯಾನುಭವ ಮಂಟಪವನ್ನು ಕಣವಿ ಆರಂಭಿಸಿ ಸಾಹಿತ್ಯಾಸಕ್ತ ಗೆಳೆಯರೆಲ್ಲ ಸೇರಲು ಸಾಧ್ಯವಾದದ್ದು ಒಂದು ಐತಿಹಾಸಿಕ ಘಟನೆಯೇ ಆಗಿದೆ. ಹಿರೇಮಲ್ಲೂರ್ ಈಶ್ವರನ್ ಲಿಂಗಾಯತ ಧರ್ಮದ ಬಗೆಗೆ ಬರೆದ ಮೂರು ಪುಸ್ತಕಗಳು ಅವರಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟವೆ. ಎಷ್ಟೇ ದೊಡ್ಡ ವ್ಯಕ್ತಿಗಳಾಗಿದ್ದರೂ ಅವರಲ್ಲಿರುವ ದೋಷಗಳನ್ನೂ ಕಣವಿಯವರು ಹೇಳದೆ ಬಿಟ್ಟಿಲ್ಲ.

ಹಿರೇಮಲ್ಲೂರ ಈಶ್ವರನ್ ಅವರ ಸ್ವಭಾವದಲ್ಲಿ ಸ್ನೇಹಪರತೆ ಇರುವಂತೆ ನಿಷ್ಠುರತೆ ಇರುವದನ್ನೂ ಹೇಳಿದ್ದಾರೆ.

ಕನ್ನಡದ ಲೇಖಕ–ಪ್ರಕಾಶಕರ ಬಗೆಗೂ ಕಣವಿಯವರು ಬರೆದಿದ್ದಾರೆ. 'ಸ್ನೇಹ ಸಿಂಧುವಳ್ಳಿ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಸಿಂಧುವಳ್ಳಿ ಅನಂತಮೂರ್ತಿ ಅವರ ಬಗೆಗೆ ಬರೆಯುತ್ತ ಅವರು ಧಾರವಾಡದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಪುಸ್ತಕ ಪ್ರಕಾಶನ ಆರಂಭಿಸಿದ್ದು, ತೀ.ನಂ.ಶ್ರೀ ಅವರು 'ಸುರುಚಿ' ಎಂದು ಹೆಸರಿಟ್ಟದ್ದು ಅನಂತಮೂರ್ತಿ ಅವರ 'ಎಂದೆಂದೂ ಮುಗಿಯದ ಕಥೆ', 'ಗೋಕಾಕರ ನವ್ಯತೆ ಹಾಗೂ ಕಾವ್ಯಜೀವನ' ಕನ್ನಡದ ಮೊದಲ ನವ್ಯಕಥೆಗಾರ್ತಿ ರಾಜಲಕ್ಷ್ಮಿ ಎನ್. ರಾವ್ ಅವರ ಕಥಾ ಸಂಗ್ರಹ 'ಸಂಗಮ' ಧಾರವಾಡದಲ್ಲೇ ಅಚ್ಚಾದದ್ದು, ಕಣವಿಯವರ 'ದೀಪಧಾರಿ', ಶಾಂತಾದೇವಿ ಕಣವಿಯವರ 'ಸಂಜೆ ಮಲ್ಲಿಗೆ', 'ಬಯಲು ಆಲಯ' ಕಥಾಸಂಗ್ರಹ ಪ್ರಕಟಿಸಿದ್ದನ್ನು ಹೇಳಿದ್ದಾರೆ.

ಲಂಕೇಶ ಬಗ್ಗೆ ಬರೆಯುತ್ತ 'ಅವರು ಲಂಕೇಶ ಪತ್ರಿಕೆಯ ಮೂಲಕ ಖ್ಯಾತರಾಗಿದ್ದಾರೆಂದರೆ ಮೂರ್ಖತನದ ಮಾತಾಗುತ್ತದೆ. ಅವರು ಏನೇ ಆಗಿದ್ದರೂ ಮೂಲತಃ ಕವಿಯೆಂಬುದನ್ನು ಮರೆಯುವಂತಿಲ್ಲ. 'ನೀಲು ಪದ್ಯಗಳು' ಅವರ ಕಾವ್ಯಶಕ್ತಿಯನ್ನು ಜೀವಂತವಾಗಿಟ್ಟಿವೆ' ಎಂದಿದ್ದಾರೆ. – 'ತಲೆಮಾರಿನ ತಳಮಳ' (ಸಾಹಿತ್ಯ ಸಮಾಹಿತ)

'ಕೀರ್ತಿಯೊಡನೆ ಕಾವ್ಯ ಸಲ್ಲಾಪ' (ಸಾಹಿತ್ಯ ಸಮಾಹಿತ)ದಲ್ಲಿ ಕಣವಿಯವರು ತಮ್ಮ ವಿದ್ಯಾರ್ಥಿ ಜೀವನದ ಸವಿ ನೆನಪುಗಳನ್ನು ಬಿಚ್ಚಿ ಕುರ್ತುಕೋಟಿಯವರ ಪ್ರತಿಭೆಯ ಮಿಂಚನ್ನು ವಿದಿತಪಡಿಸಿದ್ದಾರೆ.

ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಬಗೆಗೆ ಬರೆಯುತ್ತ 'ವೃತ್ತ' ಸಂಕಲನದಿಂದ 'ಅರುಣಗೀತ'ದ ವರೆಗೆ ಅವರ ಕಾವ್ಯಾನುಭವ ವಿಸ್ತಾರಗೊಳ್ಳುತ್ತ, ಪ್ರತಿಮಾ ನಿರ್ಮಾಣ ಸಾಮರ್ಥ್ಯದಿಂದ, ಭಾಷೆಯ ಶಿಲ್ಪಗಾರಿಕೆಯಿಂದ ಗಮನಾರ್ಹ ರಚನೆ ನೀಡಿ ಇಂದಿನ ಮುಖ್ಯ ಕವಿಗಳಲ್ಲಿ ಒಬ್ಬರಾಗಿದ್ದಾರೆ' ಎಂದಿದ್ದಾರೆ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು 'ನೀನಾ' ದಿಂದ 'ಸಮಗ್ರ ಕಾವ್ಯ'ದ ವರೆಗೆ ಅವರದೇ ಆದ ವಿಶಿಷ್ಟ ದನಿಯನ್ನು ಪ್ರಕಟಿಸಿದ್ದನ್ನು ಹೇಳಿದ್ದಾರೆ.

'ಜಾನಪದ ಭಾಷೆ ಮತ್ತು ಕಾವ್ಯದ ಮೂಲ ಸತ್ವವನ್ನು ಮೈಗೂಡಿಸಿಕೊಂಡು ಅಭಿವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಆಡುಮಾತಿನ ಲಯವನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡದ್ದನ್ನು ಸೋಮಶೇಖರ ಇಮ್ರಾಪೂರ ಕಾವ್ಯದ ವಿಶಿಷ್ಟತೆಯ ಬಗೆಗೆ ಹೇಳಿದ್ದಾರೆ.

'ಸಾಂಸ್ಕೃತಿಕ ಲೋಕದ ಮಾಧುರ್ಯ ಹೆಚ್ಚಿಸಿದ ಕವಿ' (ಸಾಹಿತ್ಯ ಸಮಾಹಿತ) ಎಚ್.ಎಸ್. ವೆಂಕಟೇಶ ಮೂರ್ತಿ ಕಾವ್ಯದ ಬಗೆಗೆ ಜಿ.ಎಸ್. ಶಿವರುದ್ರಪ್ಪ, ಅನಂತಮೂರ್ತಿ, ಆಮೂರ, ಕುರ್ತುಕೋಟಿ ರಾಘವೇಂದ್ರರಾವ್, ಸಿ.ಎನ್. ರಾಮಚಂದ್ರನ್ ವಿಮರ್ಶೆಯನ್ನು ಹರಿಹಿ ಒಂದು ರಸಪಾಕವಾಗಿ ಮಾಡಿದ್ದಾರೆ ಕಣವಿಯವರು.

ಕಣವಿಯವರ ವ್ಯಕ್ತಿತ್ವದ ವಿಶಿಷ್ಟತೆಗಳಲ್ಲೊಂದು ಅವರ ಕಲಾಪ್ರೀತಿ. ಕನ್ನಡ ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವದನ್ನು ಅವರು ಕಳೆದ ಏಳು ದಶಕಗಳಿಂದ ಕೇಳಿ ಆನಂದಿಸುತ್ತ ಬಂದಿದ್ದಾರೆ. ಸ್ವತಃ ಕಣವಿಯವರ ಭಾವಗೀತೆಗಳನ್ನು ಶಾಂತಾದೇವಿಯವರು ಹಾಡುವದನ್ನು ಕೇಳಿ ಅವರಲ್ಲಿ ಪ್ರೇಮಾಂಕುರವಾದ ವಿಷಯ ಅತ್ಯಂತ ರೋಚಕ ಸಂಗತಿಯಾಗಿದೆ. ಕಣವಿಯವರು ಸುಗಮ ಸಂಗೀತ ಸಮ್ಮೇಳನದಲ್ಲಿ ಪ್ರತಿ ವರ್ಷ ಭಾಗಿಯಾಗುತ್ತ ಬಂದುದು ಅವರ ಸಂಗೀತ ಪ್ರೀತಿಯ ದ್ಯೋತಕವಾಗಿದೆ. ಸುಗಮ ಸಂಗೀತದ ಕಲಾವಿದರ ಜೊತೆ ಮಧುರವಾದ ಸಂಬಂಧವಿಟ್ಟುಕೊಂಡ ಕಣವಿಯವರು ಸುಗಮ ಸಂಗೀತ ಕಲಾವಿದರ ಬಗೆಗೆ ಬರೆದ ಲೇಖನಗಳು ಅವರ ಗದ್ಯಸಾಹಿತ್ಯದ ವಿಶಿಷ್ಟ ಭಾಗವಾಗಿದೆ.

ಎಚ್. ಆರ್. ಲೀಲಾವತಿಯವರ ಬಗೆಗೆ ಬರೆದ 'ಸುಗಮ ಸಂಗೀತದ ಸೌಭಾಗ್ಯ' (ಸಾಹಿತ್ಯ ಸಮಾಹಿತ) ಲೇಖನದಲ್ಲಿ ಎಚ್. ಆರ್. ಲೀಲಾವತಿ ಅವರು ಸಾಹಿತ್ಯ ಪ್ರಜ್ಞೆ, ಸಂಗೀತ ಸಂಯೋಜನಾಶಕ್ತಿ, ಕಲಾಕೌಶಲ್ಯ, ಭಾವಾಭಿಜ್ಞತೆ, ಅಭ್ಯಾಸ ಪ್ರವೃತ್ತಿ ಈ ಮೊದಲಾದವುಗಳ ಸುಂದರ ಸಮನ್ವಯ ಸಾಧಿಸಿರುವದನ್ನು ಹೇಳುತ್ತ ಸುಗಮ ಸಂಗೀತದ ಗಾಯನ ಶೈಲಿ, ಪ್ರಯೋಗ ವಿಧಾನ, ಸಂಪ್ರದಾಯಗಳ ಬಗೆಗೆ ಮೌಲಿಕವಾದ ವಿಚಾರಗಳನ್ನು ಕಣವಿಯವರು ವಿದಿತಪಡಿಸಿದ್ದಾರೆ.

ಕಣವಿಯವರ ಭಾವಗೀತಗಳ ಧ್ವನಿ ಸುರುಳಿ 'ಮಲ್ಲಿಗೆ ದಂಡೆ' ಯನ್ನು ಹೊರತಂದ ಜಿ. ವಿ. ಅತ್ರಿಯವರು ಸುಗಮ ಸಂಗೀತ ಸಮ್ಮೇಳನಗಳನ್ನು ಸಂಘಟಿಸಿದ ಅತ್ಯುತ್ತಮ ಕಲಾವಿದರಾಗಿದ್ದು ಏರುಜವ್ವನದಲ್ಲಿ ಅವರು ತುಂಗೆಯ ಪ್ರವಾಹದಲ್ಲಿ ತೇಲಿ ಹೋದ ಸಂದರ್ಭದಲ್ಲಿ ಕಣವಿಯವರು ಅವರ ಗಾಯನದ ವಿಶಿಷ್ಟತೆಯನ್ನು ನೆನೆದು ಜಿ. ವಿ. ಅತ್ರಿ ಸ್ಮರಣೆ (ಸಾಹಿತ್ಯ ಸಮಾಹಿತ) ಲೇಖನ ಬರೆದಿದ್ದಾರೆ.

'ಗಾಯನ ಗಂಗಾ' (ಅವಿನಾಭಾವ) ಹಿಂದುಸ್ತಾನಿ ಸಂಗೀತದ ಕಿರಾಣಾ ಘರಾಣಾದ ಅಮರ ಗಾಯಕಿ ಗಂಗೂಬಾಯಿ ಹಾನಗಲ್ ನಾಡಿನ, ದೇಶದ ಕಳೆದ ಶತಮಾನದ ಸಾಕ್ಷಿಪ್ರಜ್ಞೆಯಾಗಿ ಸಂಗೀತ ಸುಧೆಯನ್ನು ರಸಿಕರಿಗೆ ನೀಡಿದವರು ಭಾರತದ ಅತ್ಯುನ್ನತ ಸಂಗೀತ ಪ್ರಶಸ್ತಿಯಾದ ತಾನಸೇನ ಸನ್ಮಾನ್, ಪದ್ಮವಿಭೂಷಣ ಮೊದಲಾದ ನಾಲ್ವತ್ತೈದು ರಾಷ್ಟ್ರೀಯ ಪ್ರಶಸ್ತಿಗಳನ್ನು ಒಂಬತ್ತು ಪ್ರಧಾನಿಗಳಿಂದ ಪಡೆದಿದ್ದರೂ ಗಂಗೂಬಾಯಿ ಹಾನಗಲ್ ಅವರಿಗೆ ಬೇಂದ್ರೆಯವರು ಕೊಟ್ಟ 'ಗಾಯನ ಗಂಗಾ' ಬಿರುದು ಹೆಚ್ಚು ಬೆಲೆಯುಳ್ಳದ್ದಾಗಿತ್ತು. ಗಾಯನ ಕಲೆಯನ್ನು ದೈವತ್ವದ ಸೋಪಾನವಾಗಿ ಮಾಡಿದವರು ಗಂಗೂಬಾಯಿ ಹಾನಗಲ್ ಎಂದು ಅವರ ಅಮರ ಗಾಯನವನ್ನು ಕಣವಿಯವರು ಮೆಲುಕು ಹಾಕಿದ್ದಾರೆ.

'ಸುಗಮ ಸಂಗೀತದ ಸಾಂಸ್ಕೃತಿಕ ಮಹತ್ವ' (ಕಣವಿ ಸಮಗ್ರ ಗದ್ಯ ಸಂಪುಟ ೨) ಕನ್ನಡ ಕಾವ್ಯಗಳ ಗಮಕ ವಾಚನ ಪರಂಪರೆ ಇದ್ದ ನಮ್ಮ ನಾಡಿನಲ್ಲಿ ಭಾವಗೀತ ಗಾಯನ ಬಹು ಹಿಂದೆಯೇ ಆರಂಭವಾಗಿದ್ದು ಜಯಂತಿದೇವಿ, ಪಿ.ಆರ್.ಭಾಗವತ, ಪಿ.ಕಾಳಿಂಗರಾವ್, ಅನಂತಸ್ವಾಮಿ, ಎಚ್.ಆರ್.ಲೀಲಾವತಿ, ಅನುರಾಧಾ ಧಾರೇಶ್ವರ, ಬಾಳಪ್ಪ ಹುಕ್ಕೇರಿ ಹೀಗೆ ಹಲವರ ಕಾವ್ಯ ಗಾಯನ ಪರಂಪರೆ ಆರಂಭವಾಗಿ

ಸಿ. ಅಶ್ವತ್ಥ ಮೊದಲಾದವರಿಂದ ಸಂಗೀತ ಕಲಾವಿದರಿಗೆ ಮಾರ್ಗದರ್ಶನವಾಗುವ ಗ್ರಂಥ ರಚನೆಯಾಗಿದೆ. 'ಕವಿಗಳ ಹಾಡು ಕೇಳಿ ಸಂತೋಷಿಸುವ ಪರಂಪರೆ ನಾಡಿನಲ್ಲಿ ಆರಂಭವಾಗಿದೆ. ಇದರಿಂದ ವಾಣಿಜ್ಯ ಸಂಸ್ಕೃತಿಯನ್ನು ತಡೆಗಟ್ಟುವ ಅಲೆಯೊಂದು ಕಾಣಿಸಿಕೊಳ್ಳುತ್ತಿದ್ದು ಹೃದಯ ದಾರಿದ್ರ್ಯಕ್ಕೆ ತಕ್ಕ ಔಷಧವನ್ನು ಸುಗಮ ಸಂಗೀತ ಒದಗಿಸುತ್ತದೆ' ಎಂಬ ವಿಚಾರವನ್ನು ಕಣವಿಯವರು ವ್ಯಕ್ತಪಡಿಸಿದ್ದಾರೆ.

ಸುಗಮ ಸಂಗೀತ ಪರಿಷತ್ತಿನ ಎಲ್ಲ ಸಮ್ಮೇಳನಗಳಲ್ಲಿ ಭಾಗವಹಿಸಿ ಉಪನ್ಯಾಸ ಮಾಡಿದ ಕಣವಿಯವರು ಮಾಡಿದ ಎಲ್ಲ ಭಾಷಣಗಳೂ ಪ್ರಕಟವಾಗಿಲ್ಲ. ೨೦೧೨ ರಲ್ಲಿ ದಾವಣಗೆರೆಯಲ್ಲಿ ನಡೆದ ೯ನೆಯ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನದಲ್ಲಿ ಕಣವಿಯವರು ಉದ್ಘಾಟನಾ ಭಾಷಣ ಮಾಡಿದ್ದು ಮಾತ್ರ ಪ್ರಕಟವಾಗಿದೆ. ಅದರಲ್ಲಿ ಸುಗಮ ಸಂಗೀತ ಎನ್ನುವದು ಕಾವ್ಯದ ಅರ್ಥಭಾವಗಳನ್ನು ಸ್ಫುರಿಸುವ ವಿಧಾನ ; ಸುಗಮ ಸಂಗೀತ ಆಧುನಿಕ ಕನ್ನಡ ಕಾವ್ಯದ ಅವಿಭಾಜ್ಯ ಅಂಗ ; ಅದಕ್ಕೆ ಸ್ವತಂತ್ರ ಶೈಲಿ ಇದೆ, ಒಂದು ಸ್ವತಂತ್ರ ವ್ಯಕ್ತಿತ್ವವಿದೆ' ಕಾವ್ಯವನ್ನು ಹಾಡಲೇಬಾರದು ಎಂದ ನವ್ಯರ ಆಕ್ಷೇಪಕ್ಕೆ ಯಾವ ಅರ್ಥವೂ ಇಲ್ಲ. ಅವರ ವಿರೋಧಕ್ಕಿರುವ ಕಾರಣಗಳೂ ದುರ್ಬಲವಾದುವು' ಎಂದು ಸುಗಮ ಸಂಗೀತ ಗಾಯನ ಪರಂಪರೆಯನ್ನು ಸಮರ್ಥಿಸಿದ್ದಾರೆ. 'ಹಾಡುವದಕ್ಕೆಂದೇ ಕಟ್ಟಿದ ಕವಿತೆಗಳಲ್ಲಿ ಕಾವ್ಯ ನೈಪುಣ್ಯ ಇಲ್ಲವಾಗುತ್ತದೆ. ಆದ್ದರಿಂದ ಹಾಡುವದಕ್ಕಾಗಿ ಕವಿತೆ ಬರೆಯದೆ ಬರೆದ ಕವಿತೆಗಳನ್ನು ಹಾಡುವದು ಒಳ್ಳೆಯದು' ಎಂಬ ಅಭಿಮತ ವ್ಯಕ್ತಪಡಿಸಿದ್ದಾರೆ.

'ಸೃಜನಶೀಲ ಗಾಯಕ' (ಸಾಹಿತ್ಯ ಸಮಾಹಿತ) ಶಿವಮೊಗ್ಗ ಸುಬ್ಬಣ್ಣ ಅವರ ಹಾಡುಗಾರಿಕೆಯ ಬಗೆಗೆ ಬರೆಯುತ್ತ 'ಸುಗಮ ಸಂಗೀತವನ್ನು ಉಳಿದ ಎಲ್ಲ ಸಂಗೀತ ಪ್ರಕಾರಗಳಿಂದ ಬೇರ್ಪಡಿಸುವ ವಿಶಿಷ್ಟ ಲಕ್ಷಣವೆಂದರೆ ಅದು ಸಾಹಿತ್ಯಕ್ಕೆ ನೀಡಿರುವ ಅಗ್ರಪಟ್ಟ. ಸಾಹಿತ್ಯ ಮೌಲ್ಯವನ್ನು ಪ್ರಧಾನವಾಗಿಸಿ, ಕವಿತೆಯಲ್ಲಿಯ ಗೇಯಗುಣವನ್ನು ದುಡಿಸಿಕೊಳ್ಳುತ್ತ ತಕ್ಕ ರಾಗಸಂಯೋಜನೆಯೊಂದಿಗೆ ಭಾವಾರ್ಥಗಳನ್ನು ಒಂದು ಅನುಭವವಾಗಿ ಕೇಳುಗರಿಗೆ ಸಮರ್ಪಿಸುವದು. ಸುಗಮ ಸಂಗೀತದ ವೈಶಿಷ್ಟ್ಯ. ಕಾವ್ಯರಚನೆಯಂತೆ ಕಾವ್ಯ ಗಾಯನವೂ ಒಂದು ಸೃಜನಶೀಲ ಕ್ರಿಯೆ ಎಂಬುದನ್ನು ತೋರಿಸಿಕೊಟ್ಟವರಲ್ಲಿ ಸುಬ್ಬಣ್ಣ ಮುಖ್ಯರು' ಎಂದು ಹೇಳಿರುವದು ತುಂಬ ಅರ್ಥಪೂರ್ಣವಾಗಿದೆ. ಕೀಳುಮಟ್ಟದ ಸಾಹಿತ್ಯವನ್ನು ಮನರಂಜನೆಗಾಗಿ ಹಾಡುವ ಪ್ರವೃತ್ತಿ ಸರಿಯಲ್ಲವೆಂದು ಇದೇ ಸಂದರ್ಭದಲ್ಲಿ ಪ್ರತಿಪಾದಿಸಿದ್ದಾರೆ. ಶಾಸ್ತ್ರೀಯ ಸಂಗೀತದ ಮೂಲಭೂತ ಜ್ಞಾನದಿಂದ ಸುಬ್ಬಣ್ಣ ಸುಗಮ ಸಂಗೀತಕ್ಕೆ ಗಾಂಭೀರ್ಯ ತಂದುಕೊಟ್ಟಿದ್ದಾರೆಂದು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಖ್ಯಾತ ಜನಪದ ಗಾಯಕ ಬಸಲಿಂಗಯ್ಯ ಹಿರೇಮಠ ಅವರು ಜನಪದ ಗೀತೆ, ಪಾರಿಜಾತ, ರಂಗಗೀತೆ, ಭಾವಗೀತೆಗಳ ಗಾಯಕರಾಗಿ, ಸಂಗೀತ ನಿರ್ದೇಶಕರಾಗಿ 'ದೇಸಿ ಸಂಪ್ರದಾಯದ ಸಂರಕ್ಷಣೆ' (ಅವಿನಾಭಾವ) ಮಾಡುತ್ತಿರುವದನ್ನು 'ಹಾಡ ತೂರ್ಯಾಡತಾವ' ಗ್ರಂಥಕ್ಕೆ ಬರೆದ ಲೇಖನದಲ್ಲಿ ಹೇಳಿದ್ದಾರೆ.

ಕಣವಿಯವರ ಒಡನಾಟದಲ್ಲಿ ಬಂದ ಮಹನೀಯರಲ್ಲಿ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಸ. ಸ. ಮಾಳವಾಡ, ಆರ್. ಸಿ. ಹಿರೇಮಠ, ಎಚ್. ತಿಪ್ಪೇರುದ್ರಸ್ವಾಮಿ (ಗೃಹಸ್ಥಸ್ವಾಮಿ),

ಸಿ.ಪಿ.ಕೆ., ಪ್ರೊ. ಎಂ. ರಾಮಚಂದ್ರ, ಪಿ.ಕೆ. ಭಾಗೋಜಿ, ಚಿದಂಬರ ದೀಕ್ಷಿತ ಮೊದಲಾದವರಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶಿವಮೂರ್ತಿ ಶಾಸ್ತ್ರಿ, ಜಿ. ನಾರಾಯಣ, ಮರುಳಯ್ಯ, ಗೊರುಚ, ಹರಿಕೃಷ್ಣ ಪುನರೂರು ಮೊದಲಾದವರ ಸಾಹಿತ್ಯ ಸಂಘಟನೆಯ ಆದರ್ಶವನ್ನು ಕುರಿತು ಹೇಳಿದ್ದಾರೆ. 'ನಿಡಸೋಸಿಯ ನಿಶ್ಶಬ್ದಮೂರ್ತಿ' ಮತ್ತು 'ಶತಮಾನದ ಶ್ರೀಮದ್ವಿಭೂತಿ' ಲೇಖನಗಳಲ್ಲಿ ತಾವು ಕಂಡ ಅಪರೂಪದ ಸ್ವಾಮಿಗಳ ಬಗೆಗೆ ಬರೆದಿದ್ದಾರೆ.

ಕಣವಿಯವರ ತಂದೆ ಸಕ್ರೆಪ್ಪ ಮಾಸ್ತರರು ಆದರ್ಶ ಶಿಕ್ಷಕರಾಗಿ ಶಿರುಂದದ ಜನತೆಯ ಪ್ರೀತಿಗೆ ಭಾಜನರು. ಬಡತನದಲ್ಲಿಯೂ ಅವರು ಅಧ್ಯಾತ್ಮ ಜೀವಿಗಳಾಗಿ ಗುರು ಚೆನ್ನವೀರಯ್ಯನವರ ಪ್ರೀತಿಗೆ ಪಾತ್ರರಾದವರು. ನಿಜಗುಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿಗಳ ಹಾಡು, ತತ್ವಪದಗಳನ್ನು ಹಾಡುತ್ತಿದ್ದ ತಂದೆಯವರ ಪ್ರಭಾವ ಕಣವಿಯವರ ಮೇಲೆ ಆದುದನ್ನು 'ತಂದೆಯವರನ್ನು ನೆನೆಯುತ್ತ' (ಅವಿನಾಭಾವ) ಲೇಖನದಲ್ಲಿ ಸ್ಮರಿಸಿದ್ದಾರೆ. 'ನಾನು ಕಂಡಂತೆ ನನ್ನವಳು' (ಅವಿನಾಭಾವ) ಶಾಂತಾದೇವಿ ಕಣವಿ ದಾಂಪತ್ಯ ಜೀವನದ ಸ್ಮೃತಿ ಚಿತ್ರಮಾಲೆ ಇಲ್ಲಿ ವರ್ಣಿತವಾಗಿದೆ.

ಮುನ್ನುಡಿ ಬೆನ್ನುಡಿಗಳು

ಚೆನ್ನವೀರ ಕಣವಿಯವರು ಕನ್ನಡ ಕಾವ್ಯದ ಉತ್ಕರ್ಷದಲ್ಲಿ ಅಪಾರವಾದ ಆಸ್ಥೆಯುಳ್ಳವರು. ಕವಿಗೋಷ್ಠಿಯಲ್ಲಿ ಕವಿಗಳು ಒಳ್ಳೆಯ ಕವಿತೆಗಳನ್ನು ವಾಚಿಸಬೇಕು, ಕವಿಗೋಷ್ಠಿ ಚೆನ್ನಾಗಿ ಆಗಬೇಕು ಎಂಬುದು ಕಣವಿಯವರ ಹೃದಯದ ಹಂಬಲ. ಅವರು ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಕವಿಗೋಷ್ಠಿಗಳ ಅಧ್ಯಕ್ಷ ಉದ್ಘಾಟಕರಾಗಿ ಭಾಷಣ ಮಾಡಿದ್ದಾರೆ. ಕವಿಗೋಷ್ಠಿಗಳಲ್ಲಿ ಸ್ಫಟಿಕ ಸ್ಪಷ್ಟವಾಗಿ ಸೊಗಸಾಗಿ ಕವಿತಾ ವಾಚನ ಮಾಡುತ್ತ ಬಂದಿದ್ದಾರೆ. ಕಣವಿಯವರಿಗೆ ತಮ್ಮ ಕವಿತೆಗಳಂತೆ ಇತರರ ಕವಿತೆಗಳಲ್ಲೂ ಅಷ್ಟೇ ಕಾವ್ಯಾಸಕ್ತಿಯಿದೆ. ಹಿರಿಯ ಕವಿಗಳಾಗಿ ಅವರು ಉದಯೋನ್ಮುಖ ಕವಿಗಳಿಗೆ ಮಾರ್ಗದರ್ಶನ ಮಾಡುತ್ತ ಬಂದಿದ್ದಾರೆ. ತರುಣ ಕವಿಗಳನ್ನು ಎದುರಿಗೆ ಕೂಡ್ರಿಸಿಕೊಂಡು ಅವರಿಗೆ ಕವಿಕರ್ಮದ ರಹಸ್ಯಗಳನ್ನು ತಿಳಿಸಿಕೊಟ್ಟಿದ್ದಾರೆ. ಯುವಕವಿಗಳ ಕವಿತೆಯ ಗುಣದೋಷಗಳ ಬಗೆ ಹೇಗೆ ಎಂಬುದನ್ನು ಚರ್ಚಿಸುತ್ತ ಬಂದಿದ್ದಾರೆ. ಕಣವಿಯವರ ಮಾರ್ಗದರ್ಶನ ಪಡೆದ ಹೊಸಕವಿಗಳು ಅವರ ಕವಿತಾ-ಸಂಕಲನಗಳಿಗೆ ಕಣವಿಯವರಿಂದಲೇ ಮುನ್ನುಡಿ ಬರೆಸಿದ್ದಾರೆ. ಕಣವಿಯವರು ಅನಸೂಯಾ ಪರರು, ಗುಣಪಕ್ಷಪಾತಿಗಳು. ಎಲ್ಲರನ್ನೂ ಪ್ರೀತಿಸುವವರು. ಸೌಜನ್ಯ ಸಜ್ಜನಿಕೆಯ ಕಣವಿಯವರು ಬರೆದ ಮುನ್ನುಡಿ-ಬೆನ್ನುಡಿಗಳು ಅವರ 'ಶುಭ ನುಡಿಯೆ ಶಕುನದ ಹಕ್ಕಿ' ಮತ್ತು 'ಸದ್ಭಾವ' ಪ್ರತ್ಯೇಕ ಗ್ರಂಥಗಳಲ್ಲಿ ಪ್ರಕಟವಾಗಿವೆ.

ಕಣವಿ ಸಮಗ್ರ ಗದ್ಯ ಸಂಪುಟ -೨ ರ ಮೊದಲ ಭಾಗದಲ್ಲಿ ೯೧ ಮುನ್ನುಡಿಗಳು ಎರಡನೆಯ ಭಾಗದಲ್ಲಿ ೨೫ ಬೆನ್ನುಡಿಗಳು ಪ್ರಕಟವಾಗಿವೆ. ೨೦೧೦ ರ ನಂತರ ಕಳೆದ ಏಳು ವರ್ಷಗಳಲ್ಲಿ ಐವತ್ತಕ್ಕೂ ಹೆಚ್ಚು ಮುನ್ನುಡಿ - ಬೆನ್ನುಡಿಗಳನ್ನು ಕಣವಿಯವರು ಬರೆದಿದ್ದಾರೆ. ಮೊದಲ ಮುನ್ನುಡಿ ೧೯೫೨ ರಲ್ಲಿ ಪ್ರಕಟವಾಗಿದ್ದು ಈಗ ೨೦೧೭ ರ

ವರೆಗೆ ಅಂದರೆ ಸರಿಯಾಗಿ ಅರವತ್ತೈದು ವರ್ಷ ಮುನ್ನುಡಿ -ಬೆನ್ನುಡಿ ಬರೆದು ಕವಿಕುಲವನ್ನು ಪ್ರೋತ್ಸಾಹಿಸಿದ್ದಾರೆ. ಕಣವಿಯವರ ಮುನ್ನುಡಿಗಳಲ್ಲಿ ಎದ್ದು ಕಾಣುವ ಗುಣವೈಶಿಷ್ಟ್ಯಗಳನ್ನು ಇಲ್ಲಿ ಚರ್ಚಿಸಬಹುದಾಗಿದೆ.

ಕಣವಿಯವರ ಮುನ್ನುಡಿಗಳು ಹೆಚ್ಚಾಗಿ ಕವಿತಾ ಸಂಕಲನಗಳಿಗೆ ಬರೆದವುಗಳು. ಇದರಲ್ಲಿ ಯುವ ಕವಿಗಳಿದ್ದಾರೆ, ಕವಯಿತ್ರಿಯರಿದ್ದಾರೆ, ಹಿರಿಯ ಕವಿಗಳಿದ್ದಾರೆ, ಹೊಸದಾಗಿ ಕಾವ್ಯದ ರಂಗಪ್ರವೇಶ ಮಾಡುವವರು ಕಣವಿಯವರಿಂದ ಮುನ್ನುಡಿ ಬರೆಯಿಸಿಕೊಂಡು ಆನಂದಪಟ್ಟಿದ್ದಾರೆ. ಕಣವಿಯವರು ಎಲ್ಲ ತಲೆಮಾರಿನ ಕವಿಗಳ ಕವಿತೆಗಳನ್ನು ಸಮಾನವಾದ ಆಸಕ್ತಿಯಿಂದ ಓದಿ ಅವುಗಳ ಬಗೆಗೆ ಸಹೃದಯತೆಯ ನೋಟ ಬೀರಿ ಕಾವ್ಯಪಂಕ್ತಿಗಳನ್ನು ಉದಾಹರಿಸಿ, ಮುಖ್ಯ ಕವಿತೆಗಳನ್ನು ಹೆಸರಿಸಿ, ಮೊದಲ ಓದುಗರಾಗಿ ತಮಗೆ ಅನ್ನಿಸಿದ ಪ್ರತಿಕ್ರಿಯೆಯನ್ನು ಇಲ್ಲಿ ದಾಖಲಿಸಿದ್ದಾರೆ. ಕಣವಿಯವರು ಪ್ರತಿಯೊಂದು ಮುನ್ನುಡಿಯಲ್ಲೂ ಕವಿಗಳಿಗೆ ಮಾರ್ಗದರ್ಶನ ಮಾಡುತ್ತಲೇ ಕವಿತೆ ಬರೆಯುವದು ಅವರು ತಿಳಿದುಕೊಂಡಷ್ಟು ಸುಲಭ ವ್ಯಾಪಾರ ಅಲ್ಲ. ಕವಿತೆ ಹೇಗೆ ಹುಟ್ಟುತ್ತದೆ. ಅದರ ಬಗ್ಗೆ ನಿರಂತರ ಕುತೂಹಲವಿಟ್ಟುಕೊಂಡು ಅನುಭವವನ್ನು ಕಲಾತ್ಮಕಗೊಳಿಸುವ ಬಗೆಯನ್ನು ವಿದಿತಪಡಿಸುತ್ತಾರೆ. ಅವರು ಯಾರನ್ನೂ ವಿನಾಕಾರಣ ಪ್ರಶಂಸೆ ಮಾಡುವದಿಲ್ಲ.

ಪ್ರತಿಯೊಬ್ಬ ಕವಿಯಲ್ಲೂ ಗುಣಾತ್ಮಕ ಮೌಲ್ಯ ಇರುವ ಹಾಗೆ ಕೆಲವು ಮಿತಿಗಳೂ ಇರುತ್ತವೆ. ಮುನ್ನುಡಿ ಎಂದರೆ ಕವಿ ಪ್ರಶಂಸೆಯಲ್ಲ. ಕವಿಗಳ ಸಂಹಾರವೂ ಅಲ್ಲ. ಕಣವಿ ಅವರು ತಮ್ಮ ಸಮತೋಲನವನ್ನು ಕಳೆದುಕೊಳ್ಳದೆ ಪ್ರತಿಯೊಂದು ಕವಿತಾ ಸಂಕಲನಕ್ಕೂ ಏನು ಹೇಳಬೇಕೊ ಅದನ್ನು ಸಮರ್ಥವಾಗಿ ಹೇಳಿ ಕವಿಯನ್ನು ಹುರಿದುಂಬಿಸುತ್ತಾರೆ. ಕಣವಿಯವರಿಗೆ ಕಾವ್ಯಕಲೆಯನ್ನು ಮುನ್ನಡೆಸುವದರ ಬಗೆಗೆ ವಿಶೇಷ ಆಸಕ್ತಿ. ಆದ್ದರಿಂದಲೇ ಕವಿಗಳು ನಿರಂತರ ಯತ್ನಶೀಲರಾಗಲು ಅವರು ಕರೆಕೊಟ್ಟಿದ್ದಾರೆ.

ಅನೇಕ ಮುನ್ನುಡಿಗಳಲ್ಲಿ ಹೇಳಿದಂತೆ ಯಾರಿಗೆ ಒಳ್ಳೆಯ ಕವಿತೆಯನ್ನು ರಚಿಸುವ ಅಭಿವ್ಯಕ್ತಿ ಮಾರ್ಗ ಕಾಣುವದೊ ಅವರು ಮಾತ್ರ ಕವಿಗಳಾಗಲು ಸಾಧ್ಯ. ತಾನೂ ಕವಿಯಾಗಬೇಕು. ಪ್ರಚಾರ, ಪ್ರಸಿದ್ಧಿಗಾಗಿ ಹಾತೊರೆಯುವವರು ಈ ಕ್ಷೇತ್ರದಲ್ಲಿ ಮಾಡುವದು ಏನೂ ಇಲ್ಲ. ಒಂದು ಸಂದರ್ಭದಲ್ಲಿ ಕಣವಿಯವರು ಕೆಲವರಿಗೆ ಕವಿಯಾಗಬೇಕೆಂಬ ಹುಚ್ಚನ್ನು ಬಿಡಿಸಿರುವದಾಗಿಯೂ ಹೇಳಿದ್ದಾರೆ. ಏನೇನೋ ಬರೆದುಕೊಂಡು ಬಂದು ಕಣವಿಯವರ ಮುಂದಿಟ್ಟಾಗ ಅವರಿಗೆ ಅದರಿಂದ ಎಷ್ಟೇ ಬೇಸರವಾದರೂ ತಾಳ್ಮೆ ಕಳೆದುಕೊಳ್ಳದೆ ನಯವಾಗಿ ಅಂತಹ ಸಂಕಲನಗಳಿಗೆ ಮುನ್ನುಡಿ ಬರೆಯಲಿಲ್ಲ. ಬಂದವರಿಗೆಲ್ಲ ಮುನ್ನುಡಿ ಬರೆಯದೆ ನಿಜವಾದ ಕಾವ್ಯಾಸಕ್ತಿ ಇದೆಯೇ ಇಲ್ಲವೆ ಎಂಬುದನ್ನು ಮೊದಲು ಒರೆಗೆ ಹಚ್ಚಿ ನೋಡಿ ಆ ನಂತರ ತಮಗೆ ಬರೆಯಬೇಕೆಂದು ಅನ್ನಿಸಿದಾಗ ಮಾತ್ರ ಮುನ್ನುಡಿ ಬರೆದಿದ್ದಾರೆ. ಕಣವಿಯವರು ಬರೆದ ಮುನ್ನುಡಿಗಳ ಕವಿಗಳ ಭಾವಜೀವನವನ್ನು ಅರಳಿಸಿ ಅವರ ಸೃಜನಶೀಲತೆಗೆ ಚಾಲನೆ ಕೊಡಲು ಕಾರಣವಾಯಿತೆಂಬುದೂ ಅಷ್ಟೇ ಮುಖ್ಯ. ಕಣವಿಯವರು ಮುನ್ನುಡಿ ಬರೆಯುವಾಗ ಇಟ್ಟುಕೊಂಡ ಧೋರಣೆಗಳನ್ನೂ ಚರ್ಚಿಸುವದು ಅವಶ್ಯಕ.

ತಮ್ಮ ಮುಂದಿರುವ ಕವಿತಾ ಸಂಕಲನ ಆಧುನಿಕ ಕನ್ನಡದ ಯಾವ ಕಾವ್ಯ ಮಾರ್ಗ, ಪಂಥ ಪ್ರಣಾಲಿಗೆ ಸೇರಿದ್ದು ಎಂದು ನೋಡದೆ ತಮ್ಮ ಮುಂದಿರುವ ಸಂಕಲನ ಕವಿತೆಯಾಗಿದೆಯೇ ಎಂಬುದನ್ನು ಪರಿಶೀಲಿಸುತ್ತಾರೆ. ನವೋದಯ ನವ್ಯ, ದಲಿತ ಬಂಡಾಯ ಹೀಗೆ ಎಲ್ಲ ಕಾವ್ಯ ಮಾರ್ಗಕ್ಕೆ ಸಂಬಂಧಿಸಿದ ಕವಿತಾ ಸಂಕಲನಗಳಿಗೆ ಅವರು ಮುನ್ನುಡಿ ಬರೆದಿದ್ದಾರೆ. ಮಹಿಳೆಯರ ಕವನ ಸಂಕಲನಗಳಿಗೂ ಈ ಮಾತು ಅನ್ವಯಿಸುತ್ತದೆ. ಕಣವಿಯವರು ಮುನ್ನುಡಿ ಬರೆಯುವಾಗ ಸಂಕಲನದ ಎಲ್ಲ ಕವಿತೆಗಳನ್ನೂ ಓದಿ, ತಮಗೆ ಇಷ್ಟವಾದ ಕವಿತೆಗಳನ್ನು ಹೆಸರಿಸಿ, ಕೆಲವು ಕವಿತೆಗಳ ಸಾಲುಗಳನ್ನು ಉಲ್ಲೇಖಿಸಿ ಕವಿತಾ ಸಂಕಲನದ ವಿಶಿಷ್ಟತೆಯನ್ನು ಗುರುತಿಸುತ್ತಾರೆ. ಹೀಗೆ ಮಾಡುವಾಗ ವ್ಯಕ್ತಿಗಿಂತ ಕೃತಿ ಮುಖ್ಯವೆಂದು ಕಣವಿ ಪರಿಭಾವಿಸುತ್ತಾರೆ. ಕವಿತಾ ಸಂಕಲನವನ್ನು ಸಮಗ್ರವಾಗಿ ಪರಿಶೀಲನೆ ಮಾಡದೆ ಮುನ್ನುಡಿ ಬರೆಯುವದಿಲ್ಲ. ಕೆಲವು ಮುನ್ನುಡಿಗಳು ಬಹಳ ದೀರ್ಘವಾಗಿ, ಕೆಲವು ಮುನ್ನುಡಿಗಳು ಕಿರಿದಾಗಿ ಕಂಡು ಬರದೆ ಅಲ್ಲಿಯೂ ಕಣವಿಯವರು ಬಹುಮಟ್ಟಿಗೆ ಸಮತೋಲನ ಸಾಧಿಸಿದ್ದಾರೆ. ಕವಿತೆಗಳ ಬಂಧ, ಭಾಷೆ, ಲಯ, ಅಭಿವ್ಯಕ್ತಿಯ ಕುರಿತು ತಮ್ಮ ಖಚಿತ ಅಭಿಪ್ರಾಯಗಳನ್ನು ಹೇಳುತ್ತ ಪ್ರತಿಯೊಂದು ಕವಿಯ ಕವಿತಾಸಂಕಲನವನ್ನು ಮೌಲ್ಯಮಾಪನ ಮಾಡುತ್ತಾರೆ. ಕಣವಿಯವರು ಬರೆದ ಮುನ್ನುಡಿಗಳಿಂದ ಉತ್ಸಾಹಗೊಂಡು ಕೆಲವರು ಕಾವ್ಯಕ್ಷೇತ್ರದಲ್ಲಿ ಬಹುಮುಖ್ಯ ಸಾಧನೆ ಮಾಡಿದ್ದಾರೆ. ಆದರೆ ಯಾರನ್ನೂ ನೋಯಿಸುವಂತೆ ಕಣವಿಯವರು ಬರೆಯಲಿಲ್ಲ. ಸಂವೇದನಾಶೀಲವಾದ ಕವಿಯ ಹೃದಯ ಇನ್ನೂ ಉತ್ತಮ ರಚನೆಗಳನ್ನು ನೀಡಬಲ್ಲುದೆಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ಮುನ್ನುಡಿಯ ಕೊನೆಯಲ್ಲಿ ಕಣವಿ ವ್ಯಕ್ತಪಡಿಸಿದ ಆಶಾವಾದ, ಭರವಸೆಯ ಮಾತು, ಕವಿಗಳ ಕೊಡುಗೆಯ ಬಗೆಗೆ ಆದರಭಾವ, ಅವರ ಸಹೃದಯತೆಯ ಪ್ರತೀಕವಾಗಿದೆ.

ಕಣವಿಯವರ ಮುನ್ನುಡಿಗಳು ಕನ್ನಡ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿಯೇ ಕಾವ್ಯ ಚರ್ಚೆ ನಡೆಸುತ್ತವೆ. ಅವರ ಮುನ್ನುಡಿಗಳಲ್ಲಿ ವೈಚಾರಿಕ ತಾಕಲಾಟಗಳಾಗಲಿ, ತಳಮಳಗಳಾಗಲಿ ಕಾಣಿಸುವದಿಲ್ಲ. ಯಾಕೆಂದರೆ ಅವರು ಎಲ್ಲ ಬಗೆಯ ಮನೋಧರ್ಮದ ಕವಿಗಳನ್ನು ಮುಕ್ತವಾಗಿ ಸ್ವಾಗತಿಸುವವರಾಗಿದ್ದಾರೆ. ಕಣವಿಯವರಿಗೆ ಕನ್ನಡ ಕಾವ್ಯದ ಉತ್ಕರ್ಷದಲ್ಲಿ ವಿಶ್ವಾಸವೆ ಹೊರತು ಯಾವುದೇ ವ್ಯಕ್ತಿ, ಪ್ರಕಾರ, ಸಿದ್ಧಾಂತದಲ್ಲಲ್ಲ.

ಕಣವಿಯವರು ಬರೆದ ಮುನ್ನುಡಿಗಳನ್ನು ಓದುವಾಗ ಅವರು ಎಷ್ಟೊಂದು ಕವಿತಾಸಂಕಲನಗಳನ್ನು ಓದಿ ಅವುಗಳನ್ನು ಪರಿಶೀಲಿಸಿ ಮೌಲ್ಯ ನಿರ್ಧಾರ ಮಾಡಿ ಕಾವ್ಯ ವಿಮರ್ಶನ ಅಭಿಪ್ರಾಯಗಳನ್ನು ಬರೆದು ಆಧುನಿಕ ಕನ್ನಡ ಕಾವ್ಯದ ಬೆಳೆಯನ್ನು ಚರ್ಚಿಸಿದರೆಂಬುದು ಅಚ್ಚರಿಯಾಗುತ್ತದೆ. ಕಣವಿಯವರು ಬರೆದ ಮುನ್ನುಡಿಗಳು ಎಲ್ಲ ಪ್ರದೇಶದ ಕವಿಗಳ ಕವಿತಾಸಂಕಲನಗಳಾಗಿದ್ದರೂ ಬಹುಪಾಲು ಸಂಕಲನಗಳು ಉತ್ತರ ಕರ್ನಾಟಕದ ಕವಿಗಳದೇ ಆಗಿರುವದು ಕಂಡುಬರುತ್ತದೆ. ಇದರಿಂದ ಹಿರಿಯ ಕವಿಗಳಾಗಿ ಉತ್ತರ ಕರ್ನಾಟಕದಲ್ಲಿ ಕಾವ್ಯದ ಒರತೆ ಬತ್ತಲಾರದಂತೆ ನೋಡುತ್ತ ಅದರ ಸವಿಯನ್ನು ಆಸ್ವಾದಿಸುತ್ತ ಅನೇಕ ಒಳನೋಟಗಳನ್ನು ಒದಗಿಸಿದ್ದಾರೆ.

ಕಣವಿಯವರ ಮುನ್ನುಡಿಯುಳ್ಳ ಕವಿತಾ ಸಂಕಲನಗಳಲ್ಲಿ ಸೇರಿರುವ ಕವಿಗಳಲ್ಲಿ ಕನ್ನಡದ ಖ್ಯಾತನಾಮರಾದ ಎಸ್.ಡಿ. ಇಂಚಲ, ಗಂಗಪ್ಪ ವಾಲಿ, ಬುದ್ದಣ್ಣ ಹಿಂಗಮಿರೆ,

ಕಾವ್ಯಾನಂದ, ಬಿ.ಎ.ಸನದಿ, ಮಾಲತಿ ಪಟ್ಟಣಶೆಟ್ಟಿ, ದೇಶಪಾಂಡೆ ಸುಬ್ಬರಾಯ, ಶಾಂತರಸ, ಡಾ. ಕೆ. ಸರೋಜಾ, ಇಮ್ರಾಪುರ, ದಿನಕರ ದೇಸಾಯಿ, ಶಿವಶರಣ ಜಾವಳಿ, ಸುಮತೀಂದ್ರ ನಾಡಿಗ, ಜೀವಿ ಕುಲಕರ್ಣಿ, ಆನಂದಕಂದ, ಇವರಲ್ಲದೆ ಅನೇಕ ಯುವಕವಿಗಳು ಸೇರಿದ್ದಾರೆ. ಕವಿತಾ ಸಂಕಲನಗಳಿಗೆ ಮುನ್ನುಡಿ ಬರೆದ ಕವಯಿತ್ರಿಯರು, ಕವಿಗಳು ಕಣವಿಯವರ ಸಹೃದಯ ಸ್ಪಂದನದಿಂದ ಪ್ರಭಾವಿತರಾದವರಾಗಿದ್ದಾರೆ. ಮಹಿಳಾಕಾವ್ಯ ಮತ್ತು ದಲಿತ ಬಂಡಾಯ ಕವಿಗಳ ಸಂಕಲನಗಳಿಗೆ ಕಣವಿಯವರು ಮುನ್ನುಡಿಗಳನ್ನು ಬರೆದಿದ್ದಾರೆ. ಎಲ್ಲ ಕವಿಗಳನ್ನೂ ಅದೇ ಪ್ರೀತಿ, ಅಂತಃಕರಣಗಳಿಂದ ಕಾಣುತ್ತ ವಿಶೇಷವಾಗಿ ಹೊಸ ಕಾವ್ಯದ ಬೆಳವಣಿಗೆಯಲ್ಲಿ ಆಸೆ–ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತ ಕಣವಿಯವರು ಆಧುನಿಕ ಕನ್ನಡ ಕಾವ್ಯದ ಚರಿತ್ರೆಗೆ ತಮ್ಮ ಕಾವ್ಯಾಸ್ವಾದದ ಒಳನೋಟಗಳನ್ನು ಒದಗಿಸಿದ್ದಾರೆ. ಕಾವ್ಯಸೃಷ್ಟಿಯ ಅಸಲು ಕಸಬುಗಾರಿಕೆ, ಭಾವದ ತೀವ್ರತೆಯನ್ನು ಕಣವಿಯವರು ಥಟ್ಟನೆ ಗುರುತಿಸಬಲ್ಲರು. ಡಾ. ಕೆ. ಸರೋಜಾ ಅವರು ಜೀವನದ ಕಹಿ ಪ್ರಸಂಗದಲ್ಲಿ ತೀವ್ರ ಹತಾಶೆ, ಅಸಹಾಯಕತೆಯಿಂದ ಮನಸ್ಸು ಖಿನ್ನತೆಗೆ ಒಳಗಾದಾಗ ಕವಿತೆ ಬರೆದಿರುವದನ್ನು ಗುರುತಿಸಿದ ಕಣವಿಯವರು ಕವನ 'ಜೀವಭಾವನೆಗಳ ಕಾಯುವ ತಾಯಿ' ಎಂದು ಹೇಳುತ್ತ ಮೊದಲ ಸಂಕಲನದಲ್ಲೇ ನಮ್ಮದೇ ದನಿ ಹತ್ತಿ ಹಾಡಿ ಸ್ತ್ರೀ ಸಮುದಾಯದ ಹತಾಶೆ, ಹಂಬಲ ಪ್ರಕಟಿಸಿದ್ದನ್ನು ಬಹಳ ಚೆನ್ನಾಗಿ ವಿಮರ್ಶಿಸಿದ್ದಾರೆ. ದಲಿತ ಕವಿಯ 'ನನ್ನ ಮಾದರಿ' ಸಂಕಲನವನ್ನು ಮೆಚ್ಚಿಕೊಳ್ಳುತ್ತಲೇ ಭಾವಕ್ಕೆ ತಕ್ಕ ಭಾಷೆಯನ್ನು ಸಾಣೆ ಹಿಡಿಯದಿದ್ದರೆ ಕವಿತೆಯ ಆಶಯ ಸಫಲಗೊಳ್ಳದೆ ಹೋಗಬಹುದು ಎಂಬ ಕಿವಿಮಾತನ್ನೂ ಹೇಳಿದ್ದಾರೆ.

ಹಿರಿಯ ಕವಿ ಶ್ರೀನಿವಾಸ ತೋಫಖಾನೆಯವರ 'ಗೀತಸುಮನ'ಕ್ಕೆ ಬರೆದ ಮುನ್ನುಡಿಯಲ್ಲಿ ಕಣವಿಯವರು 'ಕನ್ನಡದ ನವೋದಯ ಕಾವ್ಯ ಸಂಪ್ರದಾಯದಲ್ಲಿಯೇ ತಮ್ಮ ಕಾವ್ಯ ರಚನೆಯ ಸಾಫಲ್ಯವನ್ನು ಕಂಡುಕೊಳ್ಳುವ ಅವರ ಪ್ರಯತ್ನವನ್ನು ಸ್ವಾಗತಿಸುತ್ತ, ಛಂದಸ್ಸು ಹಾಗೂ ಪ್ರಾಸಗಳ ಬಳಕೆ ಭಾವಾನುಸಾರಿಯಾದಲ್ಲಿ ಮಾತ್ರ ಜೀವಂತಿಕೆಯನ್ನುಳಿಸಿಕೊಳ್ಳುವದು ಸಾಧ್ಯವಾಗುತ್ತದೆ' ಎಂದು ಹೇಳಿದ್ದಾರೆ. ನವೋದಯ, ನವ್ಯ, ದಲಿತ ಬಂಡಾಯ ಮಾರ್ಗದ ಕವಿತಾಸಂಕಲನಗಳಿಗೆ ಮುನ್ನುಡಿ ಬರೆಯುವಾಗಲೂ ಕವಿತೆಯ ಸತ್ವ, ಭಾಷೆ, ಅಭಿವ್ಯಕ್ತಿ ವಿಧಾನದ ಉತ್ತಮಿಕೆಯನ್ನು ಪ್ರಧಾನವಾಗಿ ಗಮನಿಸುವದು ಅವರ ವಿಮರ್ಶನ ರೀತಿಯಾಗಿದೆ. ಎಲ್ಲ ಪರಂಪರೆಯ ಕಾವ್ಯವನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವ ಕಣವಿಯವರು ಉದಾರ ಮಾನವತಾವಾದಿ ಧೋರಣೆಯಿಂದ ಮುನ್ನುಡಿಗಳನ್ನು ಬರೆದಿದ್ದಾರೆ. ಹೊಸ ಹೊಸ ಕಾವ್ಯ ಪ್ರತಿಭೆಗೆ ಚಾಲನೆ ಕೊಟ್ಟು ಆಧುನಿಕ ಕನ್ನಡ ಕಾವ್ಯಧಾರೆ ಬತ್ತಲಾರದ ಗಂಗೆಯಾಗಿ ಹರಿಯುವಂತೆ ಮಾಡಿದ್ದಾರೆ.

ಕಣವಿಯವರು ಬರೆದ ಬೆನ್ನುಡಿಗಳೂ ಸಾಹಿತ್ಯಕೃತಿಗಳ ಮೌಲ್ಯವನ್ನು ಹೆಚ್ಚಿಸಿವೆ. ಬಿಡುವಿಲ್ಲದ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಒತ್ತಡದಲ್ಲಿದ್ದರೂ ಕಣವಿಯವರು ಲೇಖಕರಿಗೆ ನಿರಾಶೆ ಉಂಟುಮಾಡದೆ ಅವರ ಕೃತಿಗಳಿಗೆ ಬೆನ್ನುಡಿ ಬರೆದಿದ್ದಾರೆ. ಕಣವಿ ಸಮಗ್ರ ಗದ್ಯದ ಎರಡನೆಯ ಭಾಗದ ಇಪ್ಪತ್ತೈದು ಬೆನ್ನುಡಿಗಳಲ್ಲಿ ಕವಿತಾಸಂಕಲನಗಳೇ ಹೆಚ್ಚಾಗಿವೆ. ಇದರಲ್ಲಿಯೂ ನವೋದಯ, ನವ್ಯ, ನವ್ಯೋತ್ತರ ಕಾವ್ಯದ ಬಗೆಗೆ ಅವರು ವಿಮರ್ಶನ ನೋಟವನ್ನು ಹರಿಸಿದ್ದಾರೆ. ಸಮಕಾಲೀನ

ಕವಿಕಾವ್ಯದ ಬಗೆಗೆ ತೀವ್ರವಾದ ಭಾವನೆಗಳನ್ನು ತುಂಬಿಕೊಂಡ ಈ ಬೆನ್ನುಡಿಗಳು ಕವಿಕೃತಿಗಳಿಗೆ ಮಹತ್ವ ತಂದುಕೊಟ್ಟಿವೆ. ಯಾವುದೇ ಕವಿತಾ ಸಂಕಲನ ನಮ್ಮ ಕೈಗೆ ಬಂದಾಗ ಅದರ ಮೊದಲ ನೋಟದಲ್ಲಿ ಉಂಟಾಗುವ ಕಾವ್ಯಾಸಕ್ತಿ ಹೆಚ್ಚಿಸುವ ಕಣವಿಯವರ ಬೆನ್ನುಡಿ ಓದುಗರನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ೧೯೮೧ ರಿಂದ ೨೦೧೧ರ ವರೆಗೆ ಕನ್ನಡದ ಬೇರೆ ಬೇರೆ ಗದ್ಯ-ಪದ್ಯ ಸಂಕಲನಗಳಿಗೆ ಬರೆದ ಕಣವಿಯವರ ಬೆನ್ನುಡಿಗಳು ಆಯಾ ಲೇಖಕರ ವಿಶಿಷ್ಟತೆಯನ್ನು ಚರ್ಚಿಸುತ್ತವೆ. ಪ್ರತಿಯೊಂದು ಸಂಕಲನದ ಮಹತ್ವದ ಕವಿತೆಗಳು ನಮ್ಮ ಗಮನಕ್ಕೆ ಬರುತ್ತವೆ. ಇದರಲ್ಲಿ ಹಿರಿಯ ಕವಿಗಳಾದ ಜಿನದತ್ತ ದೇಸಾಯಿ, ಶೇ. ಗೋ ಕುಲಕರ್ಣಿ ಪ್ರಹ್ಲಾದ ಅಗಸನಕಟ್ಟೆ, ರವಿ ಉಪಾಧ್ಯ, ಜಗದೀಶ ಮಂಗಳೂರಮಠ, ವಿಷ್ಣು ನಾಯಕ, ಲಕ್ಷ್ಮೀನಾರಾಯಣ ಭಟ್ಟ, ಮೋಹನ ನಾಗಮ್ಮನವರ, ವಿಜಯ ಧಾರವಾಡ, ಲೇಖಕಿಯರಾದ ಶಶಿಕಲಾ ವಸ್ತದ, ಶಾಂತಾ ಇಮ್ರಾಪುರ ಮೊದಲಾದವರ ಕೃತಿಗಳಿಗೆ ಕಣವಿಯವರು ಬೆನ್ನುಡಿ ಬರೆದಿದ್ದಾರೆ.

ಸಂಕೀರ್ಣ ಲೇಖನಗಳು

ಕಣವಿ ಸಮಗ್ರ ಗದ್ಯ ಎರಡನೆಯ ಸಂಪುಟದ ಸಂಕೀರ್ಣ ಲೇಖನಗಳು ಭಾಗದಲ್ಲಿ ಹತ್ತೊಂಬತ್ತು ಲೇಖನಗಳು ಮತ್ತು 'ಅವಿನಾಭಾವ'ದಲ್ಲಿ ಮತ್ತೆ ಹತ್ತೊಂಬತ್ತು ಲೇಖನಗಳು ಒಟ್ಟು ಮೂವತ್ತೆಂಟು ಲೇಖನಗಳು ಇದರಲ್ಲಿವೆ.

ಕಣವಿಯವರು ರವೀಂದ್ರನಾಥ ಠಾಕೂರರು ಬರೆದ 'ಶಿಕ್ಷಣದ ಸಮಸ್ಯೆ' ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ್ದು, ಇದರಲ್ಲಿ ಸಮಕಾಲೀನ ಭಾರತದ ಶೈಕ್ಷಣಿಕ ಸಮಸ್ಯೆಗಳ ಚಿತ್ರಣವಿದೆ. ಪಾಶ್ಚಾತ್ಯ ಶಿಕ್ಷಣ ಪದ್ಧತಿಗಳ ಅನುಕರಣದಿಂದ ಭಾರತೀಯ ಸಮಾಜದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈಗ ಅತ್ಯಂತ ಪ್ರಸ್ತುತವಾದ ಪ್ರಾದೇಶಿಕ ಭಾಷೆಗಳಿಗೆ ಶಿಕ್ಷಣದಲ್ಲಿ ಪ್ರಮುಖವಾದ ಸ್ಥಾನವಿರಬೇಕೆಂಬ ರವೀಂದ್ರರ ವಿಚಾರದಲ್ಲಿ ಕಣವಿಯವರ ಸಹಮತ ಉಳ್ಳವರಾಗಿದ್ದಾರೆ.

'ಸಂಯುಕ್ತ ಕರ್ನಾಟಕಕ್ಕೆ ಸುವರ್ಣಾಮೃತ ವರ್ಷ' ಲೇಖನದಲ್ಲಿ ಕಣವಿಯವರು ಆ ಪತ್ರಿಕೆ ನಡೆದುಬಂದ ದಾರಿಯನ್ನು ಸಿಂಹಾವಲೋಕನ ಮಾಡುತ್ತ ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಪತ್ರಿಕೆ. ಈಗ ತನ್ನ ಪಕ್ಷಾತೀತ, ಜಾತ್ಯತೀತ ನಿಲುವಿಗೆ ಅಂಟಿಕೊಂಡು ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಪತ್ರಿಕೆ ಶ್ರಮಿಸಬೇಕೆಂದು ಹೇಳಿದ್ದಾರೆ.

'ಬಸವೇಶ್ವರ ವಿದ್ಯಾವರ್ಧಕ ಸಂಘ ನೂರರ ನಮನ' ಲೇಖನದಲ್ಲಿ ಉತ್ತರ ಕರ್ನಾಟಕದ ಶೈಕ್ಷಣಿಕ ಅಭಿವೃದ್ಧಿಗೆ ಅದು ಶ್ರಮಿಸಿದ ಬಗೆಯನ್ನು ವಿವರಿಸಿದ್ದಾರೆ. ಅಂಕೋಲೆಯ ಕೆನರಾ ವೆಲ್‌ಫೇರ್ ಟ್ರಸ್ಟ 'ಜನತಾ ಜನಾರ್ಧನನ ಸೇವೆಗೆ ಚಿನ್ನದ ಕಿರೀಟ' ಪಡೆದದ್ದನ್ನು ಹೇಳುತ್ತ ದಿನಕರ ದೇಸಾಯಿ ಅವರು ಶಿಕ್ಷಣದಲ್ಲಿ ಮಾಡಿದ ದೊಡ್ಡ ಕ್ರಾಂತಿಯನ್ನು ವಿವರಿಸಿದ್ದಾರೆ.

ಕಣವಿಯವರು 'ಕನ್ನಡದ ಹಿತಚಿಂತನೆ'ಯನ್ನು ನಿರಂತರವಾಗಿ ಮಾಡುತ್ತ ಬಂದವರು ಅವರ ವಿಚಾರಧಾರೆ ರಾಜ್ಯದ ಶಿಕ್ಷಣ, ಆಡಳಿತ, ಸಾರ್ವತ್ರಿಕ ಜೀವನದಲ್ಲಿ ಕನ್ನಡಕ್ಕೆ ಅಗ್ರಸ್ಥಾನವಿರಬೇಕು ಎಂದು ಪ್ರತಿಪಾದಿಸುತ್ತಾರೆ. 'ಕನ್ನಡ ಭಾಷೆ ಅಪ್ಸರೆಯಿದ್ದಂತೆ. ಬೇರೆ ಭಾಷೆಗಳ ಪ್ರಭಾವ ಇವಳ ಮೇಲೆ ಆದರೂ ಇವಳು ಕನ್ಯೆಯಾಗಿಯೇ ಉಳಿದಿರುತ್ತಾಳೆ. ತಾನು ಜೀವಿಸುವ ಭಾಷೆಯಲ್ಲಿ ಕಲಿಯದ ಮಗು ಕೇವಲ ಬಾಯಿಪಾಠ ಮಾಡುವ ಗಿಣಿಯಾಗುತ್ತದೆ. ಸ್ವತಂತ್ರ ವಿಚಾರ ಮಾಡುವದು ಅದಕ್ಕೆ ಸಾಧ್ಯವಾಗುವದಿಲ್ಲ ಎಂಬ ಖಚಿತವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಧರ್ಮಸ್ಥಳದಲ್ಲಿ ನಡೆಯುತ್ತಿರುವ ಸರ್ವಧರ್ಮ ಸಾಹಿತ್ಯ ಸಮ್ಮೇಳನ 'ನೈಜ ಸಂಸ್ಕೃತಿಯ ಸುಖಾನುಭವ' ಒದಗಿಸಿದ್ದನ್ನು ಹೇಳಿದ ಕಣವಿಯವರು ಗಡಿನಾಡಿನ ಅಲ್ಲಮಪ್ರಭು ಮಠ ಕನ್ನಡದ ತೇರನ್ನು ಎಳೆಯುತ್ತಿರುವದನ್ನು ವರ್ಣಿಸುತ್ತ 'ಭುವನೇಶ್ವರಿದೇವಿ ರಥವನೇರಿದಳು' ಎಂದು ಉದ್ಗರಿಸಿದ್ದಾರೆ.

ಚೀನಾದೇಶದ ಲಿನ್‌ಯುಟಾಂಗ್‌ನ ವಿಚಾರಲಹರಿ 'ಹೂವುಗಳು ಹಾಗೂ ಹಣ್ಣುಗಳು' ಮೂಲಕ ಕಣವಿಯವರು ಜಾಗತಿಕ ಲೇಖಕನನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ.

ಸಂಕೀರ್ಣ ಲೇಖನಗಳಲ್ಲಿ ಕಣವಿಯವರ ಆತ್ಮವೃತ್ತಾಂತದ ಹಲವು ವಿಚಾರಗಳು ಪ್ರಕಟವಾಗಿರುವದು ಗಮನಿಸುವ ಅಂಶವಾಗಿದೆ. ಬೇಂದ್ರೆ, ಕುವೆಂಪು, ಶಿವರುದ್ರಪ್ಪ ಕವಿಯಾಗಿ ಬೆಳೆದ ಬಗೆಯನ್ನು ತಮ್ಮ ಆತ್ಮಚರಿತ್ರೆಗಳಲ್ಲಿ ಹೇಳಿದ್ದಾರೆ. ಆದರೆ ಕಣವಿಯವರು ಆತ್ಮಚರಿತ್ರೆ ಎಂಬ ಪ್ರತ್ಯೇಕ ಗ್ರಂಥ ಪ್ರಕಟಿಸದಿದ್ದರೂ ಅವರ ಲೇಖನಗಳಲ್ಲಿ ಅವು ಬಂದಿವೆ. 'ಮೊದಲ ಕುಸುಮ ಕಾವ್ಯಾಕ್ಷಿ', 'ಮುರುಘಾಮಠದ ಪರಿಸರ ಪ್ರಭಾವ', ಪ್ರಭಾವ ಬೀರಿದ ಪುಸ್ತಕಗಳು', 'ನನ್ನ ನಾ ಕಂಡಂತೆ' ಈ ಲೇಖನಗಳಲ್ಲಿ ಕಣವಿ ಪ್ರಜ್ಞೆಯ ವಿಕಾಸ, ಕಣವಿ ನಡೆದು ಬಂದ ಹಾದಿ ಯಥಾವತ್ತಾಗಿ ವರ್ಣಿತವಾಗಿದೆ.

ಜಿ. ಎಸ್. ಶಿವರುದ್ರಪ್ಪನವರ ಗೆಳೆತನದ ಮಧುರ ರಸಪ್ರಸಂಗಗಳನ್ನು ಕಣವಿಯವರು ಮೆಲುಕು ಹಾಕಿದ್ದು, ಅವರ ಬಿಡಿ ಲೇಖನಗಳಲ್ಲಿ ಪ್ರಕಟವಾಗಿರುವಂತೆಯೆ ಅವರ ಕಾವ್ಯ ವಿಮರ್ಶೆಗೆ ಸಂಬಂಧಿಸಿದ **ಅವಿನಾಭಾವದ** ಎರಡು ಲೇಖನಗಳು ಗಮನಾರ್ಹವಾಗುತ್ತವೆ. ಜಿ. ಎಸ್. ಶಿವರುದ್ರಪ್ಪನವರ 'ಕಾವ್ಯ : ಒಂದು ನೋಟ', 'ಸ್ನೇಹ ಕಾರ್ತೀಕ' ಅಭಿನಂದನ ಗ್ರಂಥಕ್ಕೆ ಬರೆದುದಾಗಿದೆ. 'ಶಿವರುದ್ರಪ್ಪನವರ ಕಾವ್ಯೋದಯಕ್ಕೆ ಕಾರಣವಾದ ವಿಸ್ಮಯಭಾವ ಪ್ರಕೃತಿಯಲ್ಲಿ, ಜೀವನದಲ್ಲಿ, ಎರಡರ ಸಮರಸದಲ್ಲಿ, ಅನುಭವ ಹಾಗೂ ಆಲೋಚನೆಯಲ್ಲಿ ದಟ್ಟೈಸಿ ನಿಂತು ಅವರ ಕಾವ್ಯಕ್ಕೆ ನಿಂತು ಅವರ ಕಾವ್ಯಕ್ಕೆ ಹೊಸ ರುಚಿಯನ್ನು, ದೃಷ್ಟಿಯನ್ನು ತಂದುಕೊಟ್ಟಿದೆ' ಎಂದಿದ್ದಾರೆ. 'ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರ ಕಾವ್ಯ : ಒಂದು ಮರು ಓದು' ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣದ ಉದ್ಘಾಟನ ಭಾಷಣವಾಗಿದೆ. ಅದರಲ್ಲಿ ಕಣವಿ ಶಿವರುದ್ರಪ್ಪ ಕವಿ ಮಿತ್ರರ ಕಾವ್ಯದ ತೌಲನಿಕ ಅಭ್ಯಾಸ ಮಾಡುವವರಿಗೆ ಅನೇಕ ಉಪಯುಕ್ತ ವಿಚಾರಗಳಿವೆ. ಕಣವಿ ಶಿವರುದ್ರಪ್ಪ ಅವರ ಸ್ನೇಹ ಅರವತ್ತು ಮಳೆಗಾಲಗಳಷ್ಟು ವಿಸ್ತಾರವಾದದ್ದು. ಅವರು ಕಾವ್ಯಲೋಕ ಪ್ರವೇಶಿಸಿದ್ದು ನವೋದಯ ಕಾಲದಲ್ಲಿ ಶಿವರುದ್ರಪ್ಪನವರು ಕುವೆಂಪು ಪ್ರಭಾವದಲ್ಲಿ ಮೈಸೂರಿನಲ್ಲಿ ಕಣವಿಯವರು ಬೇಂದ್ರೆ,

ಮಧುರಚೆನ್ನರ ಪ್ರಭಾವದಲ್ಲಿ ಧಾರವಾಡದಲ್ಲಿ ಕವಿತೆ ಬರೆಯುತ್ತ ಸಾಹಿತ್ಯದ ಉಜ್ವಲವಾದ ಕಾಲಮಾನವನ್ನು ದಾಟಿ ಬಂದಿದ್ದಾರೆ. ಅವರಿಬ್ಬರ ಕವಿತೆಗಳು 'ಜೀವನ', 'ಜಯಂತಿ'ಗಳಲ್ಲಿ ಪ್ರಕಟವಾದದ್ದು. ಕಣವಿಯವರ 'ಕಾವ್ಯಾಕ್ಷಿ'ಗೆ ಬೇಂದ್ರೆ ಮುನ್ನುಡಿ ಬರೆದಿದ್ದು, ಕುವೆಂಪು ಮುನ್ನುಡಿಯೊಡನೆ ಶಿವರುದ್ರಪ್ಪನವರ 'ಸಾಮಗಾನ' ಪ್ರಕಟವಾದದ್ದು ಹೀಗೆ ಆರಂಭವಾದ ಕಣವಿಯವರ ವಿಚಾರ ಶಿವರುದ್ರಪ್ಪನವರು ಸಾಂಸ್ಕೃತಿಕ ಲೋಕದ ವಕ್ತಾರರಾಗಿ ಬೆಳೆದ ಬಗೆಯನ್ನು ವಿಶ್ಲೇಷಿಸಲು ತೊಡಗುತ್ತದೆ. ಶಿವರುದ್ರಪ್ಪನವರ ಕಾವ್ಯಲೋಕದ ಪ್ರತಿಮೆ 'ಹಣತೆ' ಆಗಿದ್ದು, ಅವರು ಕುವೆಂಪು ಪರಂಪರೆಯನ್ನು ಹೀರಿಕೊಂಡು ಚಲನಶೀಲವಾಗಿ ಬೆಳೆಯುತ್ತ ಕವಿ ವಿಮರ್ಶಕ ಪರಂಪರೆಯಲ್ಲಿ ಎತ್ತರದ ಸ್ಥಾನ ಪಡೆದರು ಎಂದಿದ್ದಾರೆ.

ಧಾರ್ಮಿಕ ಮೂಲಭೂತವಾದ, ಮೂಢನಂಬಿಕೆ, ಜಾತೀಯತೆ, ಮಾತೃಭಾಷೆಯ ಬಗೆಗಿನ ಅನಾಸಕ್ತಿ ಮುಂತಾದವುಗಳ ಬಗ್ಗೆ ಸಾಕಷ್ಟು ಗಟ್ಟಿಯಾಗಿಯೇ ಜಿ.ಎಸ್.ಎಸ್. ತಮ್ಮ ಕಾವ್ಯದಲ್ಲಿ ಬೇರೆ ಬರಹಗಳಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಆದರೂ ವಿರೋಧಿಗಳ ಜೊತೆಗೆ ಸಹನೆಯಿಂದ ಸಂವಾದ ನಡೆಸುವ ಸಹಿಷ್ಣುತೆಯೂ ಇದೆ. ಆಧುನಿಕ ಜೀವನದ ಒರಟುತನ, ಬಿಕ್ಕಟ್ಟು, ಆತಂಕ, ತಲ್ಲಣಗಳ ಅನುಭವವನ್ನು ತೀವ್ರವಾಗಿ ತಮ್ಮ ಕಾವ್ಯದಲ್ಲಿ ಚಿತ್ರಿಸಿಯೂ ನವೋದಯ ಕಾಲದ ಉತ್ಸಾಹವನ್ನೂ, ಉಲ್ಲಾಸವನ್ನೂ ಇವರು ಮತ್ತೆ ಮತ್ತೆ ಬದುಕ ಬಯಸುತ್ತಾರೆ' ಎಂಬ ಮೌಲಿಕ ವಿಮರ್ಶನ ವಿಚಾರಗಳನ್ನು ಕಣವಿಯವರು ಹೇಳಿದ್ದಾರೆ. ಜಿ.ಎಸ್.ಎಸ್. ಕಾವ್ಯದ ಬೆಳವಣಿಗೆಯನ್ನು ಆಧುನಿಕ ಕಾವ್ಯದ ಬೆಳವಣಿಗೆಯೇ ಆಗಿದೆ' ಎಂದಿದ್ದಾರೆ.

ಜಿ. ಎಸ್. ಶಿವರುದ್ರಪ್ಪನವರ ಎಲ್ಲ ಬಗೆಯ ಜಾತಿ, ಮತ, ಧರ್ಮಗಳಿಂದ ತಮ್ಮನ್ನು ಬಿಡಿಸಿಕೊಂಡು ಸೃಜನಶೀಲತೆಯ ಅನನ್ಯತೆಯನ್ನು ಸಾಧಿಸಿರುವದನ್ನು ಹೇಳಿದ ಕಣವಿಯವರು ಅವರ ಪ್ರೀತಿಯ ಕಲ್ಪನೆ ವಿಶ್ವ ವಿಶಾಲವಾದದ್ದು ಎಂದು ವಿಶ್ಲೇಷಿಸಿದ್ದಾರೆ.

ಕಣವಿಯುವರು ಕವಿ ಲೇಖಕರಾಗಿ ಖ್ಯಾತರಾಗಿರುವಂತೆ ಶ್ರೇಷ್ಠ ಸಾಹಿತ್ಯೋಪಾಸಕರೂ ಆಗಿದ್ದಾರೆ. ಅವರು ಕನ್ನಡದಲ್ಲಿ ಬರುತ್ತಿರುವ ಕವಿತೆ, ಕಾದಂಬರಿ, ಕಥೆ, ವಿಮರ್ಶೆ ಹೀಗೆ ಸಾಹಿತ್ಯದ ಯಾವುದೇ ಪ್ರಕಾರಕ್ಕೆ ಸಂಬಂಧಿಸಿದ ಉತ್ತಮ ಕೃತಿ ಪ್ರಕಟವಾಗಿದೆಯೆಂದರೆ ಅದನ್ನು ನೋಡಿ ಓದುವ ಮೂಲಕ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ಸಾಹಿತಿಗಳಿಗೆ ಪತ್ರಗಳನ್ನೂ ಬರೆದು ಅಭಿಪ್ರಾಯ ತಿಳಿಸುತ್ತಾರೆ. **ಅವಿನಾಭಾವ**ದ ಎರಡನೆಯ ಭಾಗದಲ್ಲಿ ಕನ್ನಡ ಸಾಹಿತ್ಯದ ಇತ್ತೀಚಿನ ಕೃತಿಗಳ ಓದಿನ ಅನುಭವವನ್ನು ವಿವರಿಸಿದ್ದನ್ನು ನೋಡಬಹುದು. ದಲಿತ ಬಂಡಾಯದ ಕವಿ ಚೆನ್ನಣ್ಣ ವಾಲೀಕಾರ ಅವರ 'ವ್ಯೋಮಾವ್ಯೋಮ'ದ ಬಗೆಗೆ ಬರೆಯುತ್ತ ಅದರ ಮಿತಿಯನ್ನು ಗುರುತಿಸುತ್ತಾರೆ.

'ದಲಿತ ಬಂಡಾಯದ ಚೆನ್ನಣ್ಣ ವಾಲೀಕಾರ ಭೂಮಿಯಲ್ಲಿ ಬದುಕಿನ ನೆಲೆಯನ್ನು ಕಂಡುಕೊಂಡು ಆ ಮೂಲಕವೇ ಅನುಭಾವಿಕ ಆಕಾಶವನ್ನು ಕಾಣಲು ಪ್ರಯತ್ನಿಸುತ್ತಿದ್ದಾರೆ. ಅದೇನೆ ಇದ್ದರೂ ಇದೊಂದು ಅದ್ಭುತ ರಚನೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಬೆಳಗಾವಿ : ಕನ್ನಡ ಹೋರಾಟದ ಕೆಲವು ಪುಟಗಳು' (**ಅವಿನಾಭಾವ**) ರಾಘವೇಂದ್ರ ಜೋಶಿಯವರ ಪುಸ್ತಕ ಬೆಳಗಾವಿಯುಲ್ಲಿ ನಡೆದ ಕನ್ನಡ ಹೋರಾಟದ

ಇತಿಹಾಸವನ್ನು ನಿರೂಪಿಸುತ್ತದೆ. ಬೆಳಗಾವಿಯಲ್ಲಿ ಮರಾಠಿಗರು ಕನ್ನಡಿಗರ ವಿರುದ್ಧ ಹಿಂಸಾಚಾರ ನಡೆಸಿದ್ದಾರೆ. ಆದರೆ ಕನ್ನಡಿಗರಾರೂ ಮರಾಠಿಗಳ ವಿರುದ್ಧ ಹಿಂಸಾಚಾರ ನಡೆಸಿಲ್ಲ. ಉಗ್ರಗಾಮಿಗಳಂತೆ ಮರಾಠಿಗರು ನಡೆಸಿದ ಎಲ್ಲ ವಿಧವಾದ ಹಿಂಸೆ, ಪ್ರತಿಭಟನೆಯನ್ನು ಎದುರಿಸಿ ಬೆಳಗಾವಿಯನ್ನು ಉಳಿಸಿಕೊಳ್ಳಲು ಕನ್ನಡಿಗರು ನಡೆಸಿದ ಹೋರಾಟವನ್ನು ಮೆಚ್ಚಿಕೊಳ್ಳುತ್ತ ಬೆಳಗಾವಿಯಲ್ಲಿ ಕನ್ನಡ ತಲೆಎತ್ತಿ ನಿಲ್ಲಬೇಕಾದ ಅಗತ್ಯವನ್ನು ಬೆಂಬಲಿಸುತ್ತಾರೆ. ಗಡಿನಾಡಿನಲ್ಲಿ ಕನ್ನಡ ಭದ್ರವಾಗಿರಬೇಕೆಂಬುದು ಕಣವಿಯವರ ಸದಾಶಯವಾಗಿದೆ.

ಕರ್ಮವೀರ ವಾರಪತ್ರಿಕೆಯಲ್ಲಿ ನೂರಿಪ್ಪತ್ತು ಅಂಕಣ ಬರೆದ ಜರಗನಹಳ್ಳಿ ಶಿವಶಂಕರ ಅವರ 'ಜಾತಕ' (ಅವಿನಾಭಾವ) ಪುಸ್ತಕದ ಓದು ಕವಿ ಕಣವಿಯವರ ಮನಸ್ಸನ್ನು ಮುದಗೊಳಿಸಿದೆ. ತಮ್ಮ ಹನಿಗವನಗಳ ಮೂಲಕ ಖ್ಯಾತರಾದ ಜರಗನಹಳ್ಳಿ ಶಿವಶಂಕರ ಈ ಲೇಖನಗಳ ಮೂಲಕ ಹನಿಗವನಗಳಿಗೆ ವ್ಯಾಖ್ಯಾನ ಮಾಡುವ ಮೂಲಕ ಸಮಕಾಲೀನ ಸಾಮಾಜಿಕ, ರಾಜಕೀಯ ವಿದ್ಯಮಾನಗಳಿಗೆ ವಿಶ್ಲೇಷಣೆ ಮಾಡಿರುವದನ್ನು ಕಣವಿಯವರು ವಿವೇಚಿಸಿದ್ದಾರೆ.

'ಮಕ್ಕಳ ಸಾಹಿತ್ಯಕ್ಕೆ ಕಂಚ್ಯಾಣಿ ಶರಣಪ್ಪನವರ ಕೊಡುಗೆ' (ಅವಿನಾಭಾವ) ಲೇಖನದಲ್ಲಿ ಶರಣಪ್ಪನವರ ಶಿಶುಗೀತಗಳ ವಿಶಿಷ್ಟತೆಯನ್ನು ಕಣವಿಯವರು ಗುರುತಿಸಿದ್ದಾರೆ.

ಭಾಷಣಗಳು

ಚೆನ್ನವೀರ ಕಣವಿಯವರು ನಾಡಿನ ಹಿರಿಯ ಸಾಹಿತಿಗಳು. ಅವರು ಕನ್ನಡ ನಾಡಿನಾದ್ಯಂತ ಸಂಚರಿಸಿ ಸಾಹಿತ್ಯ ಸಮಾರಂಭಗಳಲ್ಲಿ ಮುಖ್ಯ ಅತಿಥಿಯಾಗಿ ಹಲವಾರು ಸಭೆಗಳಲ್ಲಿ ಭಾಷಣ ಮಾಡಿದ್ದಾರೆ. ಕಳೆದ ೬೫ ವರ್ಷಗಳಲ್ಲಿ ಅವರು ಅಸಂಖ್ಯಾತ ಭಾಷಣಗಳನ್ನು ಮಾಡಿದ್ದಾರೆ. ಧಾರವಾಡದ ಎಲ್ಲ ಮುಖ್ಯ ಸಾಹಿತ್ಯ ಸಮಾರಂಭ - ಕವಿಗೋಷ್ಠಿಗಳಲ್ಲಿ ಕವಿ ಕಣವಿ ಭಾಷಣ ಮಾಡಿದ್ದಾರೆ. ಕಣವಿಯವರು ಯಾವುದೇ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ಟಿಪ್ಪಣಿ ಮಾಡಿಕೊಂಡು ಸೊಗಸಾಗಿ ಭಾಷಣ ಮಾಡುತ್ತಾರೆ. ಅವರ ವಿಚಾರಗಳು ಸ್ಪಷ್ಟವೂ, ನೇರವೂ ಪರಿಣಾಮಕಾರಿಯೂ ಆಗಿರುತ್ತವೆ. ಕಣವಿಯವರ ಭಾಷಣಗಳನ್ನು ವಿವಿಧ ಸಂಪುಟಗಳಲ್ಲಿ ಪ್ರಕಟಿಸಬೇಕಿತ್ತು. ಆದರೆ ಅವು ಬೇರೆ ಬೇರೆ ಕಾರಣಗಳಿಂದ ಸಾಧ್ಯವಾಗಿಲ್ಲ. ಈಗ ಕರ್ನಾಟಕ ಸರಕಾರ ಪ್ರಕಟಿಸಿದ ಕಣವಿ ಸಮಗ್ರ ಗದ್ಯ ಸಂಪುಟ ಎರಡರ ಭಾಗ ೩ರಲ್ಲಿ ೧೦ ಭಾಷಣಗಳು ಪ್ರಕಟವಾಗಿವೆ. ಈ ಮೊದಲು **'ಸಾಹಿತ್ಯ ಸಮಾಹಿತ ಮತ್ತು ಸದ್ಭಾವ'** ಗ್ರಂಥಗಳಲ್ಲಿ ಈ ಭಾಷಣಗಳು ಬಂದಿವೆ. ಈ ಭಾಷಣಗಳ ಬಗೆಗೆ ಇಲ್ಲಿ ಚರ್ಚಿಸಬಹುದಾಗಿದೆ.

ಕಣವಿಯವರು ಕನ್ನಡದ ಉತ್ತಮ ವಾಗ್ಮಿಗಳು. ಯಾವುದೇ ಸಾಹಿತ್ಯ ಸಭೆಯಿರಲಿ, ಸಾರ್ವಜನಿಕ ಸಭೆಯಿರಲಿ ಕಣವಿಯವರು ಮಾತಿಗೆ ನಿಂತರೆ ಅವರ ಭಾಷಣಗಳನ್ನು ಮತ್ತೆ ಮತ್ತೆ ಕೇಳಬೇಕೆಂದೆನಿಸುತ್ತದೆ. ತಮ್ಮ ಮುಂದೆ ಇರುವ ಸಭಿಕರನ್ನು ನೋಡಿ ಅವರನ್ನುದ್ದೇಶಿಸಿ ವಿಷಯಾಧಾರಿತವಾಗಿ ವಿಚಾರದ ಮಂಡನೆ ಮಾಡುತ್ತಾರೆ. ಭಾಷಣ ಮಾಡುವಾಗ ಟಿಪ್ಪಣಿಯನ್ನು ಮುಂದಿಟ್ಟುಕೊಂಡು ನೇರವೂ, ಸ್ಪಷ್ಟವೂ, ವಿಚಾರ ಪರಿಪ್ಲುತವೂ ಆಗಿ ಭಾಷಣ ಮಾಡುತ್ತಾರೆ. ಯಾರನ್ನೂ ವಿನಾಕಾರಣ ಪ್ರಶಂಸೆ

ಮಾಡುವದಾಗಲಿ, ತೆಗಳುವದಾಗಲಿ ಮಾಡುವದಿಲ್ಲ. ತಮ್ಮ ಅಭಿಪ್ರಾಯಗಳಿಗೆ ಸಮರ್ಥನೆಯನ್ನು ಕೊಡುತ್ತಾರೆ. ಕವಿತಾಸಂಕಲನದ ಬಿಡುಗಡೆ ಮಾಡಿ ಅದರಲ್ಲಿರುವ ಒಳ್ಳೆಯ ಕವಿತೆಗಳ ಪಂಕ್ತಿಗಳನ್ನು ಉದ್ಧರಿಸಿ ಕಾವ್ಯ ಚರ್ಚೆಯನ್ನು ಮಾಡುತ್ತಾರೆ. ಕನ್ನಡ ಕಾವ್ಯ ಪರಂಪರೆಯಲ್ಲೇ ಅವರ ಒಳನೋಟಗಳು ಮೂಡಿಬರುತ್ತವೆ. ಕಣವಿಯವರು ಭಾಷಣಗಳಲ್ಲಿ ವ್ಯಕ್ತಿ, ವಸ್ತು, ಸಾಹಿತ್ಯ ಪರಂಪರೆಯ ಬಗೆಗೆ ಸಮಗ್ರ ನೋಟವನ್ನು ನೀಡುತ್ತಾರೆ. ಕಣವಿಯವರದು ಸಮಗ್ರದೃಷ್ಟಿಯ ಪರಿಶೀಲನೆಯಾಗಿರುತ್ತದೆ. ಇದರಿಂದ ಅವರ ಅಭಿಪ್ರಾಯಕ್ಕೆ ಸಮಗ್ರತೆ ಬರುತ್ತದೆ. ಕಣವಿಯವರ ವಿಚಾರಗಳು ಅವರ ಪರಿಣತದೃಷ್ಟಿಯ ಪ್ರತೀಕವಾಗಿರುತ್ತವೆ. ನಾಡುನುಡಿಯ ಹಿತಚಿಂತಕರಾಗಿ ಅವರು ಮಾತಾಡಿದರೂ ಯಾವುದೇ ಸಂದರ್ಭದಲ್ಲಿ ವೀರಾವೇಶಕ್ಕೆ ಒಳಗಾಗುವದಿಲ್ಲ. ಅವರೆಂದೂ ಭಾವಾವೇಶಕ್ಕೆ ಪಕ್ಕಾಗುವದಿಲ್ಲ. ಸಮನ್ವಯ ಸಮತೂಕವನ್ನು ಇಟ್ಟುಕೊಂಡೆ ವಿಚಾರ ಮಂಡಿಸುತ್ತಾರೆ. ಕಣವಿಯವರಿಗೆ ನಾಡಿನ ಅನೇಕ ಸಾಹಿತಿಗಳ ಸ್ನೇಹ ಸಂಪರ್ಕ ಇರುವದರಿಂದ ಅವರನ್ನೆಲ್ಲ ಕರೆಸಿ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಸಾಹಿತ್ಯೋಪಾನ್ಯಾಸಗಳನ್ನು ಮಾಡಿಸಿದ್ದಾರೆ. ತಾವೂ ಉಪನ್ಯಾಸವನ್ನು ಎಡಬಿಡದೆ ಮಾಡುತ್ತ ಬಂದಿದ್ದಾರೆ.

ಕಣವಿಯವರ ಪ್ರಕಟಿತ ಹತ್ತು ಭಾಷಣಗಳಲ್ಲಿ ಮೊದಲನೆಯದು ಅವರು ೧೯೯೬ ರಲ್ಲಿ ಹಾಸನದಲ್ಲಿ ಜರುಗಿದ ೬೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣ. ಅದರಲ್ಲಿ ಕಣವಿಯವರು ಕನ್ನಡ ನಾಡು-ನುಡಿ ಸಾಹಿತ್ಯ ಪರಂಪರೆಯ ಬಗೆಗೆ ವಿವರವಾಗಿ ಭಾಷಣ ಮಾಡುತ್ತ ಸಮಕಾಲೀನ ಸಾಹಿತ್ಯದ ಸ್ಥಿತಿಗತಿಯ ಕುರಿತು ಸಮಾಲೋಕನ ಮಾಡಿದ್ದಾರೆ. ತಾವು ನೋಡಿದ ೧೯೪೪ರ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಆರಂಭಿಸಿ ಕನ್ನಡವನ್ನು ಕಟ್ಟುವ ವ್ಯಕ್ತಿ, ಸಂಸ್ಥೆಗಳ ಕುರಿತು ಹೇಳುತ್ತ ರಾಜ್ಯದ ಆಡಳಿತದಲ್ಲಿ ಶಿಕ್ಷಣದಲ್ಲಿ ಕನ್ನಡವನ್ನು ಪ್ರತಿಷ್ಠಾಪಿಸುವ ವಿಚಾರವನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಕಣವಿ ಅವರು ಕನ್ನಡದ ಗಡಿಗಳು ಚಲಿಸದಂತೆ ನೋಡಿಕೊಳ್ಳುವ ಹಾಗೂ ಗಡಿನಾಡಿನ ಅಭಿವೃದ್ಧಿಗಾಗಿ ಗಡಿನಾಡ ಅಭಿವೃದ್ಧಿ ಪ್ರಾಧಿಕಾರ ನಡೆಸುವ ವಿಧಾಯಕ ಸೂಚನೆಯನ್ನು ನೀಡಿದ್ದಾರೆ. ಸುದೀರ್ಘವಾದ ತಮ್ಮ ಅಧ್ಯಕ್ಷ ಭಾಷಣದ ಕೊನೆಯಲ್ಲಿ 'ನಮ್ಮ ಎಲ್ಲ ಬಗೆಯ ಸೃಜನಾತ್ಮಕ ಬರವಣಿಗೆ ಹಾಗೂ ವಿಮರ್ಶೆಯ ಮೂಲಕ ಭಾರತದ ಪುನಃಶೋಧ ಹಾಗೂ ಭಾರತೀಯತೆಯ ಪುನರ್ವ್ಯಾಖ್ಯಾನ ಅತ್ಯಂತ ಅಗತ್ಯವಾಗಿದೆಯೆಂದು ಭಾವಿಸಿದ್ದೇನೆ. ಭಾರತೀಯತೆಯ ಪುನರ್ವ್ಯಾಖ್ಯಾನವೆಂದರೆ ಈ ಮೊದಲೇ ಇದ್ದು ಸ್ಥಾವರವಾಗಿರುವದರ ಗುಣವಿಶೇಷದ ವರ್ಣನೆ ಮಾಡುತ್ತ ಹೋಗುವದಲ್ಲ. ಆದರೆ ಅದು ಹೇಗಿರತಕ್ಕದ್ದು ಎಂಬುದನ್ನು ಕ್ರಿಯಾತ್ಮಕವಾಗಿ ಸ್ಪಷ್ಟಗೊಳಿಸುವ ಪ್ರಕ್ರಿಯೆ ಕೂಡ ಆಗಿದೆ' ಎಂದಿದ್ದಾರೆ. ಭಾಷಣದ ಮುಕ್ತಾಯಕ್ಕೂ ಮುಂಚೆ ಓದಿದ ಕವಿತೆ 'ನೀವೆಲ್ಲಿಯವರು ನಾವಲ್ಲಿಯವರೆ ನಮ್ಮೂರು ದೂರವಿಲ್ಲ. ಕನ್ನಡದ ತವರು ಕರೆದಾಗ ನಮಗೆ ಮೈನವಿರು ಮಾತ್ರವಲ್ಲ, ಗಂಗೋತ್ರಿಯಲ್ಲಿ ಮೂಡಿರುವ ಕನಸು ಮಾನಸದ ಹಂಸದಂತೆ ಹಾಲು, ನೀರು ಬೇರ್ಪಡಿಸಿ ಮೇಲೆ ದಿಗ್ವಲಯಕೇರಿದಂತೆ'. ಇದನ್ನು ಕೇಳಿದ ಸಭಿಕರು ರೋಮಾಂಚನಗೊಂಡರು.

ಮಂಗಳೂರಿನಲ್ಲಿ ಜರುಗಿದ ೬೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಯ್ಯಾರ ಕಿಞ್ಞಣ್ಣರೈ ಅವರು ಈ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪೀಠವನ್ನು

ಅಲಂಕರಿಸಲು ಹೇಳುವ ನಿಕಟಪೂರ್ವ ಅಧ್ಯಕ್ಷರ ನುಡಿ ಸಂಕ್ಷಿಪ್ತ ಭಾಷಣವಾಗಿದ್ದರೂ ಅದರಲ್ಲಿ ಗಡಿನಾಡಿನಲ್ಲಿ ಕನ್ನಡ ಅಭಿವೃದ್ಧಿಯ ಬಗೆಗೆ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಹಿರಿಯ ಕವಿ ಎಸ್.ವಿ. ಪರಮೇಶ್ವರ ಭಟ್ಟರ 'ಉಪ್ಪುಕಡಲು' ಸಂಕಲನದ ಆಧುನಿಕ ವಚನವನ್ನು ಹೇಳಿ ಕನ್ನಡಿಗರು ಉಪ್ಪಿನ ಋಣ ತೀರಿಸಲು ಸಜ್ಜಾಗಲು ಕರೆ ನೀಡಿದ್ದಾರೆ.

ಮಧುರೈ ಕಾಮರಾಜ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಬೆಳ್ಳಿಹಬ್ಬದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತ ಕನ್ನಡ-ತಮಿಳು ಸಾಹಿತ್ಯ ಸಂಬಂಧವನ್ನು ವಿವರವಾಗಿ ಸಮೀಕ್ಷಿಸಿದ ಕಣವಿಯವರು 'ನೂರು ಮನಸು ನೂರು ಕನಸು ವಿಳಿ ಬೆಳ್ಳಿ ಮೂಡಿದೆ' ಕವಿತೆ ಓದಿ ಜನರನ್ನು ಸಮ್ಮೋಹನಗೊಳಿಸಿದರು.

ಕರ್ನಾಟಕ ಸಾಹಿತ್ಯ ಅಕಾಡಮಿಯ ಆಶ್ರಯದಲ್ಲಿ ಜರುಗಿದ ಕನ್ನಡ ನವೋದಯ ಮತ್ತು ಸಾಲಿ ರಾಮಚಂದ್ರರಾಯರ ಕಾವ್ಯ ವಿಚಾರ ಸಂಕಿರಣದ ಸಮಾರೋಪ ಭಾಷಣ ಮಾಡುತ್ತ 'ಸಾಲಿಯವರ ಕಾವ್ಯದ ವಿಶಿಷ್ಟತೆಯನ್ನು ವಿವೇಚಿಸಿ ಅವರ ಕಾವ್ಯದಿಂದ ನಮಗೆ ದೊರೆಯುವ ಆದರ್ಶವೆಂದರೆ ನಾವು ಬರೆಯುವ ಕಾವ್ಯಕ್ಕಿಂತ ನಾವು ಬದುಕುವ ಕಾವ್ಯ ಬಹಳ ಮಹತ್ವದ್ದು ಎಂಬುದನ್ನು ತಿಳಿಸುತ್ತದೆ' ಎಂದಿದ್ದಾರೆ.

ಕಣವಿಯವರು ಘಟಪ್ರಭಾದಲ್ಲಿ 'ಚಲೇಜಾವ್ ಚಳುವಳಿ : ಅರವತ್ತರ ನೆನಪು ಹಾಗೂ ಬಸವರಾಜ ಕಟ್ಟೀಮನಿ ಸ್ಮರಣೆ' ಕಾರ್ಯಕ್ರಮದಲ್ಲಿ ಮಾಡಿದ ಐದನೆಯ ಭಾಷಣದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾದಂಬರಿಕಾರ ಕಟ್ಟೀಮನಿಯವರ ಪಾತ್ರವನ್ನು ವಿವೇಚಿಸಿದ್ದಾರೆ.

'ಮಕ್ಕಳ ಸಾಹಿತ್ಯ ಚಿಂತನೆ ಮತ್ತು 'ಸಿಸು' ಸಂಗಮೇಶ : ಸ್ಮರಣೆ' ಉದ್ಘಾಟನಾ ಭಾಷಣ ಮಾಡಿದವರು ಚೆನ್ನವೀರ ಕಣವಿ. ವಿಜಾಪುರ ಜಿಲ್ಲೆ ಮಕ್ಕಳ ಸಾಹಿತ್ಯದ ಕಣಜವನ್ನಾಗಿ ಮಾಡಿದವರಲ್ಲಿ ಸಿಸು ಸಂಗಮೇಶ ಒಬ್ಬರಾಗಿದ್ದು ಮಕ್ಕಳ ಸಾಹಿತ್ಯಕ್ಕೆ ಅವರ ಕೊಡುಗೆಯನ್ನು ಸಮೀಕ್ಷಿಸುತ್ತ ಮಕ್ಕಳ ಸಾಹಿತ್ಯದ ಸ್ಥಿತಿ-ಸ್ವರೂಪಗಳನ್ನೂ ಚರ್ಚಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡಮಿ ಬಾಗಲಕೋಟೆಯಲ್ಲಿ ಜರುಗಿಸಿದ 'ಮಧುರಚೆನ್ನ : ಬದುಕು, ಬರಹ ಚಿಂತನೆ' ವಿಚಾರ ಸಂಕಿರಣವನ್ನು ಡಾ. ಜಿ. ಎಸ್. ಶಿವರುದ್ರಪ್ಪ ಉದ್ಘಾಟಿಸಿದರೆ ಅದರ ಸಮಾರೋಪ ಭಾಷಣವನ್ನು ಚೆನ್ನವೀರ ಕಣವಿ ನೆರವೇರಿಸಿದರು. ಆ ಭಾಷಣದಲ್ಲಿ ದೇಶದ ಸ್ಥಿತಿ-ಗತಿಗಳಲ್ಲಿ ತೀವ್ರ ಬದಲಾವಣೆಗಳಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡ ಕಾವ್ಯ ಮತ್ತೆ ಸಂಕ್ರಮಣದ ತಿರುವಿಗೆ ಬಂದಿದೆ. ನಮ್ಮ ದೇಶದ ಬಹುಮುಖಿ ಸಂಸ್ಕೃತಿಯ ತಿಳಿವಳಿಕೆ ಭವಿಷ್ಯದ ದಿಕ್ಕನ್ನು ಸೂಚಿಸಬಹುದು. ಅನುಭಾವಿಕ ನೆಲೆಯಲ್ಲಿ ದೇಸಿಮೂಲದ ಕನ್ನಡ ಕವಿತೆ ಚಲಿಸುತ್ತಿರುವ ಲಕ್ಷಣ ಕಂಡುಬರುತ್ತಿದೆ' ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

'ಸಿಂಪಿ ಲಿಂಗಣ್ಣ : ಅಪ್ಪಟ ಜಾನಪದ ಪ್ರತಿಭೆ' ಕರ್ನಾಟಕ ಸಾಹಿತ್ಯ ಅಕಾಡಮಿ

ಏರ್ಪಡಿಸಿದ ವಿಚಾರ ಸಂಕಿರಣದ ಉದ್ಘಾಟನಾ ಭಾಷಣದಲ್ಲಿ ಸಿಂಪಿ ಲಿಂಗಣ್ಣನವರ ಸಾಹಿತ್ಯದ ಕುರಿತು ಸುಂದರ ಪ್ರವೇಶಿಕೆಯನ್ನು ಒದಗಿಸಿದ್ದಾರೆ.

'ಜಾನಪದ ದೀಪಾರಾಧನೆ' ಉದ್ಘಾಟನಾ ಭಾಷಣ ಕಣವಿಯವರ ಉತ್ತಮ ಭಾಷಣಗಳಲ್ಲೊಂದಾಗಿದೆ. ಕವಿಗಳ ಕಣ್ಣಿನಲ್ಲಿ ದೀಪವನ್ನು ಕಣವಿಯವರು ವಿಶ್ಲೇಷಿಸುತ್ತ ಕನ್ನಡ ಕಾವ್ಯ-ಸಾಹಿತ್ಯದುದ್ದಕ್ಕೂ ವಿವಿಧ ಸಂದರ್ಭಗಳಲ್ಲಿ ದೀಪ ಸಂಸ್ಕೃತಿಯ ಪ್ರತೀಕವಾಗಿ ವಿಶೇಷಾರ್ಥ ನೀಡಿರುವದನ್ನು ಹಲವು ನಿದರ್ಶನಗಳ ಮೂಲಕ ವಿವೇಚಿಸಿದ್ದಾರೆ.

೨೦೦೫ರ ಮೈಸೂರ ದಸರಾ ಕವಿಗೋಷ್ಠಿಯ ಉದ್ಘಾಟನ ಭಾಷಣ ಮಾಡಿದ ಕಣವಿಯವರು ಮಾನವೀಯತೆಯ ಸೂತ್ರದಿಂದ ಒಡೆದು ಹೋಗುತ್ತಿರುವ ಮನುಷ್ಯ ಸಂಬಂಧಗಳನ್ನು ಜೋಡಿಸುವ, ಬೆಸೆಯುವ ಕಾರ್ಯ ನಿರಂತರವಾಗಿ ಮುಂದುವರಿಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಕಣವಿಯವರ ಇನ್ನಷ್ಟು ಭಾಷಣಗಳು 'ಅವಿನಾಭಾವ'ದಲ್ಲಿ ಅಕ್ಷರ ರೂಪ ಪಡೆದಿವೆ. ಬೆಳಗಾವಿಯ ಸಾಹಿತ್ಯ ಸಮಾರಂಭಗಳಲ್ಲಿ ಕಣವಿಯವರು ಬಹುವರ್ಷಗಳಿಂದ ಭಾಗವಹಿಸಿ ಭಾಷಣ ಮಾಡುತ್ತ ಬಂದಿದ್ದಾರೆ. ಇದರಿಂದ ಕನ್ನಡಿಗರಲ್ಲಿ ನವೋತ್ಸಾಹ ಉಂಟಾಗುತ್ತಿದೆ. ಬೆಳಗಾವಿ 'ವಿಶ್ವ ಕನ್ನಡ ಸಮ್ಮೇಳನ ಉದ್ಘಾಟನಾ ಸಮಾರಂಭ' (ಅವಿನಾಭಾವ) ಭಾಷಣದಲ್ಲಿ 'ಕನ್ನಡ ಪ್ರಜ್ಞೆ ತನ್ನ ಸ್ವೋಪಜ್ಞತೆಯಿಂದ ಇಂದು ವಿಶ್ವಪ್ರಜ್ಞೆಯಾಗಿ, ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವಹಿಸಿ ಸಮನ್ವಯಗೊಂಡು ಸಾಕ್ಷಾತ್ಕಾರಗೊಳ್ಳಬೇಕಾದ ಅಗತ್ಯವನ್ನು' ಕಣವಿಯವರು ಪ್ರತಿಪಾದಿಸಿದ್ದಾರೆ.

ಕನ್ನಡಿಗರಲ್ಲಿ ಕರ್ನಾಟಕದ ಕಲ್ಪನೆಯನ್ನು ಮೂಡಿಸಿ, ಏಕೀಕರಣಕ್ಕಾಗಿ ಹೋರಾಡಿ, ಕಡೆಗೆ ಏಕೀಕರಣವಾದದ್ದನ್ನು ಕಂಡ ಆಲೂರ ವೆಂಕಟರಾಯರ ೧೩೨ನೆಯ ಜನ್ಮ ದಿನಾಚರಣೆ ಉದ್ಘಾಟನಾ ಭಾಷಣದಲ್ಲಿ ಅವರ ಕೊಡುಗೆಯನ್ನು ಎಳೆಎಳೆಯಾಗಿ ಕಣವಿಯವರು ಬಿಡಿಸಿಟ್ಟಿದ್ದಾರೆ. ಧಾರವಾಡದ ಕನ್ನಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನ ಶತಮಾನೋತ್ತರ ಸುವರ್ಣ ಮಹೋತ್ಸವ ಉದ್ಘಾಟನ ಭಾಷಣದಲ್ಲಿ ಕಣವಿಯವರು ಡೆಪ್ಯುಟಿ ಚೆನ್ನಬಸಪ್ಪನವರ ಕನ್ನಡ ಕಾರ್ಯವನ್ನು ನೆನೆದು ಕನ್ನಡವನ್ನು ಶಿಕ್ಷಣದಲ್ಲಿ ಪ್ರತಿಷ್ಠಾಪಿಸುವ ಕೆಲಸವನ್ನು ಧಾರವಾಡದ ಟ್ರೇನಿಂಗ್ ಕಾಲೇಜು ಹೇಗೆ ಮಾಡಿತು ಎಂಬುದನ್ನು ವಿವರಿಸಿ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಿದ ಮಾತ್ರಕ್ಕೆ ಶಿಕ್ಷಣದ ನಿಜವಾದ ಉದ್ದೇಶ ಈಡೇರಿಸಿದಂತಾಗುವದಿಲ್ಲ. ಟ್ರೇನಿಂಗ ಕಾಲೇಜು ಡಾಯಟ್‌ನಂಥ ಶಿಕ್ಷಣ ಸಂಸ್ಥೆಗಳಿಗೆ ಮೂಲ ಸೌಕರ್ಯ ಒದಗಿಸಿ ಅವುಗಳನ್ನು ಬಲಗೊಳಿಸಲು ಕರೆ ನೀಡಿದ್ದಾರೆ. 'ಹಲಸಂಗಿ ಗೆಳೆಯರ ಪ್ರತಿಷ್ಠಾನದ ಉದ್ಘಾಟನ' (ಅವಿನಾಭಾವ) ಭಾಷಣದಲ್ಲಿ ವಿಜಾಪುರದಲ್ಲಿ ಆರಂಭಗೊಂಡ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ ಮತ್ತು ಹಲಸಂಗಿ ಗೆಳೆಯರ ಪ್ರತಿಷ್ಠಾನ ಸಮಗ್ರದೃಷ್ಟಿ ಮತ್ತು ದೂರದೃಷ್ಟಿಯಿಂದ ಬೆಳೆಯಬೇಕೆಂಬ ಆಶಯವನ್ನು ಕಣವಿಯವರು ವ್ಯಕ್ತಪಡಿಸಿದ್ದಾರೆ.

ಕಣವಿಯವರ ಭಾಷಣಗಳು ಸಮಕಾಲೀನ ಜೀವನದ ಆಗುಹೋಗುಗಳ ಪ್ರತಿಬಿಂಬವಾಗಿವೆ. ಅವರು ಮಾಡಿದ ಹಲವಾರು ಭಾಷಣಗಳು ಪೂರ್ಣವಾಗಿ

ಪ್ರಕಟವಾದಾಗ ಕನ್ನಡ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅವರು ಮಾಡಿದ ಕಾರ್ಯದ ಅಗಾಧತೆಯು ತಿಳಿಯುತ್ತದೆ. ಕಣವಿಯವರ ಭಾಷಣಗಳು ಟಿಪ್ಪಣಿ ರೂಪದಲ್ಲಿವೆ. ಕೆಲವು ಭಾಷಣಗಳು ಬೇರೆ ಬೇರೆ ಕಾರ್ಯಕ್ರಮಗಳ ಧ್ವನಿಸುರುಳಿಯಲ್ಲಿ ಉಳಿದುಕೊಂಡಿವೆ. ಈ ಎಲ್ಲ ಭಾಷಣಗಳಲ್ಲಿ ಕಣವಿ ಕವಿ ಹೃದಯದ ಮಿಡಿತವನ್ನು ನಾವು ಅನುಭವಿಸುತ್ತೇವೆ.

ಕಣವಿಯವರ ಮನೋಧರ್ಮ ವಿಮರ್ಶೆಯ ನಿಲುವುಗಳನ್ನು ಕುರಿತು ಅರ್ಧಶತಮಾನದ ಹಿಂದೆ ಸ. ಸ. ಮಾಳವಾಡರು ಅವರ ಸಾಹಿತ್ಯ ಚಿಂತನಕ್ಕೆ ಬರೆದ ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಇಂದಿಗೂ ತುಂಬ ಅರ್ಥಪೂರ್ಣವಾಗಿವೆ. 'ನಯವು ಕಣವಿಯವರ ಸಹಜ ಮನೋಧರ್ಮವಾಗಿದೆ. ಅವರು ಅದನ್ನು ಅನುಕೂಲ ಸಿಂಧುವಾಗಿ ಬಳಸಿಕೊಳ್ಳುವದಿಲ್ಲ. ಹಸಿಯ ಗೋಡೆಯ ಮೇಲೆ ಹರಳಿಡುವಂತೆಯೇ ಅವರು ಹೇಳಬಲ್ಲರು. ವ್ಯಾಸಂಗದೊಂದಿಗೆ ಬೌದ್ಧಿಕ ಪ್ರಾಮಾಣಿಕತನವನ್ನು ನಯದೊಂದಿಗೆ ಸ್ಪಷ್ಟೋಕ್ತಿಯನ್ನು ರೂಢಿಸಿಕೊಂಡುದರ ಫಲವಾಗಿ ಹೊರಹೊಮ್ಮಿದ ಇಲ್ಲಿಯ ವಿಮರ್ಶೆಯು ಸತ್ವಯುತವಾಗಿದೆ. ಹಿರಿಯ ತಲೆಮಾರಿನ ಕವಿಗಳ ಕಾವ್ಯಸೃಷ್ಟಿಯ ಕೆಲವೊಂದು ಲೋಪದೋಷಗಳನ್ನು ಅವರು ನಿಷ್ಠುರವಲ್ಲದ ಆದರೆ ನಿರ್ಧಾರದ ರೀತಿಯಲ್ಲಿ ನಿರೂಪಿಸಿದ್ದಾರೆ. ಇದು ನಮ್ಮ ಸಾಹಿತ್ಯರಂಗದ ಆರೋಗ್ಯವನ್ನು ಕಾಯ್ದುಕೊಳ್ಳಲು ಉಪಯುಕ್ತವಾಗಬಲ್ಲದು.'

ಕಣವಿ ಅವರ ಕಾವ್ಯ ಎಷ್ಟು ನೈಜವಾಗಿ ಸಮಯಸ್ಫೂರ್ತಿಯಿಂದ ಹಾಗೆಯೇ ಚಿಂತನಪರವಾಗಿ ಹೊಮ್ಮುವದೋ ಅಷ್ಟೇ ಅವರ ಗದ್ಯದ ಪ್ರೌಢಿಮೆ ರೂಪುಗೊಳ್ಳುತ್ತದೆ. ವ್ಯಕ್ತಿಯಾಗಿ, ಕವಿಯಾಗಿ, ಕವಿ–ವಿಮರ್ಶಕನಾಗಿ ಕಣವಿಯವರ ಭಾವಜೀವನದ ಸಂಯಮ, ಸಮತೋಲನ, ಆರೋಗ್ಯದ ಸಾತ್ವಿಕ ಚಿತ್ರ ಓದುಗರಿಗೆ ಪ್ರಿಯವಾಗುತ್ತದೆ' ಎಂದು ಶಂಕರ ಮೊಕಾಶಿ ಪುಣೇಕರರು ಕಣವಿ ಅವರ ಸಮಗ್ರ ವಿಮರ್ಶಾ ಸಂಕಲನಗಳ ಕುರಿತು ಒಳನೋಟವನ್ನು ನೀಡಿದ್ದಾರೆ.

ಕಣವಿಯವರ ಗದ್ಯಕೃಷಿ ಕಳೆದ ಅರ್ಧ ಶತಮಾನದ ಕನ್ನಡದ ಸಾಹಿತ್ಯಿಕ – ಸಾಂಸ್ಕೃತಿಕ ಚರಿತ್ರೆಯ ಪಲಕುಗಳನ್ನು ತನ್ನ ತೆಕ್ಕೆಗೆ ಆಹ್ವಾನಿಸಿಕೊಂಡು ಅದರ ಗತಿ–ಪ್ರಗತಿಗಳನ್ನು ಅದರ ಸಾಧಕ –ಬಾಧಕಗಳನ್ನು ತುಂಬಾ ಸಾವಧಾನವಾಗಿ ಯಾವ ಪೂರ್ವಾಗ್ರಹಕ್ಕಾಸ್ಪದವಿಲ್ಲದೆ ಮೌಲ್ಯ ವಿವೇಚನೆ ನಡೆಸಿದೆ. 'ಈ ಅಗಾಧ ಕಾಲ ಮತ್ತು ವ್ಯಾಪ್ತಿಯ ಚೌಕಟ್ಟಿನೊಳಗೆ ಕಾಣಿಸಿಕೊಂಡ ಕ್ರಿಯಾಶೀಲ ವ್ಯಕ್ತಿಗಳನ್ನು ಅವರ ಸಿದ್ಧಿ–ಸಾಧನೆಗಳನ್ನು ಮತ್ತು ಈ ಕಾಲಘಟ್ಟದಲ್ಲಿ ತಲೆ ಎತ್ತಿದ ಸಂಘ–ಸಂಸ್ಥೆಗಳನ್ನು ಅವು ನಿರ್ವಹಿಸಿದ ನಿರ್ಣಾಯಕ ಪಾತ್ರಗಳನ್ನು ಹಾಗೂ ಸಾಹಿತ್ಯದ ವಲಯದೊಳಗೆ ಆವಿರ್ಭವಿಸಿದ ಪಂಥ, ಪಂಗಡ, ಚಳುವಳಿಗಳನ್ನು ಅವು ಸೃಷ್ಟಿಸಿದ ಸಂಚಲನಗಳನ್ನು ಅವರ ಗದ್ಯ ನ್ಯಾಯೋಚಿತ ತಕ್ಕಡಿಯಲ್ಲಿಟ್ಟು ತೂಗಿದೆ. ಆಧುನಿಕ ಹಾಗೂ ಪರಂಪರೆಯ ಒಂದು ಹದವಾದ ಬೆಸುಗೆಯಾಗಿಯೂ ಅವರ ಗದ್ಯವನ್ನು ನಾವು ನೋಡಬಹುದು' ಎಂದು ಡಾ. ಪ್ರಹ್ಲಾದ ಅಗಸನಕಟ್ಟೆ ಬರೆದಿದ್ದಾರೆ.

ಪ್ರಜ್ಞಾನೇತ್ರದ ಬೆಳಕಿನಲ್ಲಿ ಕಣವಿ ವ್ಯಕ್ತಿತ್ವ

ಚೆನ್ನವೀರ ಕಣವಿ ಅವರು ಹೊಸಗನ್ನಡ ಸಾಹಿತ್ಯದ ಶತಮಾನದ ಚರಿತ್ರೆಯಲ್ಲಿ ಅನನ್ಯವಾದ ಸಾಧನೆ ಮಾಡಿದವರಾಗಿದ್ದಾರೆ. ಎಲ್ಲ ಕಾಲಘಟ್ಟಗಳಲ್ಲಿ ಅವರು ಅನ್ಯ ಪ್ರಭಾವಕ್ಕೆ ಬಳಗಾಗದೆ ತಮ್ಮದೆ ಆದ ವ್ಯಕ್ತಿ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ನವೋದಯದ ಹಿರಿಯ ಕವಿ ಬೇಂದ್ರೆ ಪರಿಸರದಲ್ಲಿದ್ದರೂ ಅವರು ಬೇಂದ್ರೆಯವರಂತೆ ಕವಿತೆ ಬರೆಯಲಿಲ್ಲ. ಕುವೆಂಪು ಅವರ ಭಾವಗೀತೆ, ಸಾಹಿತ್ಯದೆಡೆ ಒಲವು ಇದ್ದರೂ ಅವರ ಕಾವ್ಯಶೈಲಿಯನ್ನು ಮೆಚ್ಚಿಕೊಂಡರೂ ಅವರ ಹಾದಿಯಲ್ಲಿ ಸಾಗಲಿಲ್ಲ. ಮಧುರಚೆನ್ನರ 'ನನ್ನ ನಲ್ಲ' ಕಾವ್ಯದ ಪ್ರಭಾವ ವಿದ್ಯಾರ್ಥಿ ಜೀವನದಲ್ಲೇ ಕಣವಿ ಅವರ ಮೇಲೆ ಆಗಿದ್ದರೂ ಮಧುರಚೆನ್ನರ ಅರವಿಂದ ದರ್ಶನ ಅಷ್ಟಾಗಿ ಅವರನ್ನು ಹಿಡಿಯಲಿಲ್ಲ. ಪುತಿನ ಅವರ ಚಿಂತನ ಪರತೆ, ರಸಾರ್ದ್ರ ದೃಷ್ಟಿಯನ್ನು ಪರಿಭಾವಿಸಿದರೂ ಅದು ಅವರ ಕಾವ್ಯದ ದಾರಿ ಆಗಿರಲಿಲ್ಲ. ನವೋದಯದ ಹಿರಿಯ ಕವಿಗಳ ನಂತರದ ಕಾವ್ಯದ ಹಾದಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಕಣವಿಯವರು ರೋಮ್ಯಾಂಟಿಕ್ ದೃಷ್ಟಿಯನ್ನು ಇಟ್ಟುಕೊಂಡು ನವ್ಯಕಾವ್ಯದ ಅಭಿವ್ಯಕ್ತಿ ವಿಧಾನವನ್ನು ತಮ್ಮದಾಗಿಸಿಕೊಂಡವರು. ಅಡಿಗರೊಂದಿಗೆ ಕಾವ್ಯ ಸಂವೇದನೆಯ ಚರ್ಚೆ ಅವರು ನಡೆಸಿದ್ದರೂ ಅಡಿಗರು ಹೇಳಿದ 'ನಡೆದು ಬಂದ ದಾರಿ ಕಡೆಗೆ ಹೊರಳಿ ನೋಡಬೇಡ' ಎಂಬುದನ್ನು ಬಿಟ್ಟುಕೊಟ್ಟವರು. ನವ್ಯದವರು ನವೋದಯದವರ ಬಗ್ಗೆ ಇಟ್ಟುಕೊಂಡ 'ಪಿತೃಹತ್ಯೆ'ಯ ಭಾವವನ್ನು ಕಣವಿಯವರು ತೆಗೆದುಕೊಳ್ಳಲಿಲ್ಲ. ಕಣವಿಯವರು ಸಮಕಾಲೀನ ಕಾವ್ಯ ಸಂದರ್ಭದಲ್ಲಿ ಅಂದಂದಿನ ವಿಚಾರಗಳಿಗೆ ಸ್ಪಂದಿಸುತ್ತಲೇ ಬಂದಿದ್ದಾರೆ.

'ಸಮನ್ವಯ ಕವಿ' ಪದದ ನಿರಾಕರಣೆ :

ಕಣವಿಯವರ ಕವಿ ವ್ಯಕ್ತಿತ್ವ ಸ್ವಯಂಪೂರ್ಣವಾಗಿ ಬೆಳವಣಿಗೆ ಹೊಂದಿದ್ದರೂ ಕಣವಿಯವರು ಸಮನ್ವಯ ಕವಿ ಎಂದು ಹೇಳುವದು, ಕಾವ್ಯ ಪರಂಪರೆಯಲ್ಲಿ ಸಮನ್ವಯ ಕವಿಗಳೆಂದು ಕಣವಿ- ಶಿವರುದ್ರಪ್ಪನವರ ಹೆಸರನ್ನು ಹೇಳುತ್ತ ಬರಲಾಗಿದೆ. ಅದನ್ನು ಅವರಿಬ್ಬರೂ ಸಾರ್ವಜನಿಕವಾಗಿ ವಿರೋಧಿಸಿರುವದನ್ನು ಕಾಣಬಹುದು. ತಮಗೆ ಒಪ್ಪಿಗೆಯಾಗದ 'ಸಮನ್ವಯ ಕವಿ ಪಟ್ಟ' ನಿರಾಕರಣೆಯನ್ನು ಮುಂಡರಗಿಯಲ್ಲಿ ಜರುಗಿದ ಕಣವಿ- ಶಿವರುದ್ರಪ್ಪನವರ ಕಾವ್ಯ ವಿಚಾರ ಸಂಕಿರಣದಲ್ಲಿ ಒಟ್ಟಾಗಿ ಮಾಡಿರುವದು, ಅದಕ್ಕೆ ಡಾ. ಜಿ. ಎಸ್. ಆಮೂರ ಅವರು ಅದೇ ಸಭೆಯಲ್ಲಿ ಕಣವಿ- ಶಿವರುದ್ರಪ್ಪ ಸಮನ್ವಯ ಕವಿಗಳೆಂಬುದನ್ನು ಕನ್ನಡ ವಿಮರ್ಶೆ ಪರಿಭಾವಿಸುವದಿಲ್ಲವೆಂಬುದನ್ನು ಸ್ಪಷ್ಟ ಪಡಿಸಿದ್ದಾರೆ. ಸಮನ್ವಯ ಕವಿ ಎಂಬುದನ್ನು ಒಂದು ಕ್ಲೀಷೆಯಾಗಿ ಅವರು ಭಾವಿಸಿದ್ದಾರೆ.

ಏಕಪ್ರಕಾರವಾಗಿ ಹರಿಯುವ ವಿಕಸನಶೀಲವಾದ ಕಾವ್ಯಸ್ರೋತವನ್ನು ಕಣವಿಯವರ ಕಾವ್ಯದಲ್ಲಿ ನಾವು ಕಾಣುತ್ತೇವೆ. ಬುದ್ಧಿಭಾವಗಳ ಸಮತೋಲನವನ್ನು ನಿರಂತರವಾಗಿ ಕಾಯ್ದುಕೊಂಡು ಹೋಗಿರುವದು ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ. ಜನಪರವಾದ ನಿಲುವುಗಳಿಗೆ, ಉದಾರವಾದ ನಿಲುವುಗಳಿಗೆ ಸ್ಪಂದಿಸುತ್ತ ಬಂದ ಕಣವಿಯವರು ಉದಾರವಾದ ಮಾನವತಾವಾದದ ಧೋರಣೆಯಲ್ಲಿ ಕಾವ್ಯವನ್ನು ನೆಲೆಗೊಳಿಸಿದ್ದಾರೆ. ಭಾವನೆ, ಚಿಂತನೆಗಳ ಸಮನ್ವಯವನ್ನು ಅವರು ಸಾಧಿಸಿದ್ದಾರೆ. ನವೋದಯ ಕಾವ್ಯದಲ್ಲಿರುವ ಭಾವತೀವ್ರತೆ, ಕನಸುಗಾರಿಕೆ ಹಾಗೂ ನವ್ಯದಲ್ಲಿ ಬೌದ್ಧಿಕ ಚಿಂತನ, ಪ್ರತಿಮೆ, ಸಂಕೇತಗಳ ಮೂಲಕ ಧ್ವನಿಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಎರಡೂ ವಿಧಾನಗಳನ್ನು ಕಣವಿಯವರು ತಮ್ಮದಾಗಿಸಿಕೊಂಡದ್ದು ಒಂದು ವಿಶೇಷವಾಗಿದೆ. ಸಮತೂಕ, ಸಮಾಹಿತ ಪ್ರತಿಭೆಯ ಕಣವಿಯವರಲ್ಲಿ ಕಾವ್ಯಪರಂಪರೆಯ ಬಗೆಗೆ ಶ್ರದ್ಧೆ ಇರುವದರಿಂದ ಸಮಗ್ರ ಕನ್ನಡ ಕವಿಪರಂಪರೆಯ ಒಂದು ಭಾಗವಾಗಿ ತಾವು ಕಾವ್ಯ ಸೃಷ್ಟಿಸುತ್ತಿರುವ ಗ್ರಹಿಕೆ ಅವರಲ್ಲಿ ಅಂತಸ್ಥವಾದುದನ್ನು ನಾವು ಕಾಣುತ್ತೇವೆ.

ಕನ್ನಡ ವಿಮರ್ಶಾಲೋಕದಲ್ಲಿ ಕಣವಿಯವರ ಕಾವ್ಯ ವಿವಿಧ ಆಲೋಚನೆ, ವಿಮರ್ಶೆ, ವಿಚಾರಗಳಿಗೆ ವಸ್ತುವಾಗಿದೆ. ಗೌರೀಶ ಕಾಯ್ಕಿಣಿಯವರು ಬರೆದ 'ಚೆನ್ನವೀರ ಕಣವಿ ಕಾವ್ಯದೃಷ್ಟಿ' (೧೯೭೭) ಸಮೀಕ್ಷಾಗ್ರಂಥ; ಡಾ. ಗುರುಲಿಂಗ ಕಾಪಸೆ ಸಂಪಾದಿಸಿದ 'ಚೆಂಬೆಳಕು' (೧೯೮೦) ಅಭಿನಂದನಗ್ರಂಥ, ಡಾ. ಗುರುಪಾದ ಮರಿಗುದ್ದಿ ಸಂಪಾದಿಸಿದ 'ಕಣವಿ ಸಾಹಿತ್ಯ ಸಂಪದ' (೧೯೯೪) ಈ ಗ್ರಂಥಗಳಲ್ಲಿ ನಾಡಿನ ಹಿರಿ ಕಿರಿಯ ಲೇಖಕರಿಂದ ಕಣವಿ ಸಾಹಿತ್ಯ ವಿಮರ್ಶೆಯ ವಿಸ್ತಾರವಾದ ಅಧ್ಯಯನ ನಡೆದಿದೆ. 'ಚೆನ್ನವೀರ ಕಣವಿ : ಬದುಕು ಬರಹ' ಗ್ರಂಥದಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಕೆಲವು ಹೊಸ ಒಳನೋಟಗಳನ್ನು ಒದಗಿಸಿದ್ದಾರೆ. ಕಣವಿ ಅವರಿಗೆ ೭೫ ತುಂಬಿದಾಗ 'ಬೆಳ್ಳಿ ತೇರಿನ ದಾರಿ'ಯ ೮೦ ಲೇಖನಗಳಲ್ಲಿ ವಿಮರ್ಶಕರು ಕಣವಿಯವರ ಕಾವ್ಯದ ಅನುಸಂಧಾನ ನಡೆಸಿರುವುದು ಅತ್ಯಂತ ಗಮನಾರ್ಹವಾಗಿದೆ.

ಕಣವಿಯವರಿಗೆ ೮೦ ತುಂಬಿದಾಗ ಅವರಿಗೆ ಅರ್ಪಿತವಾದ 'ಕಣವಿಯವರ ಕವಿತೆ ಹೊಸ ಓದು' ಬೃಹತ್ ಗ್ರಂಥದಲ್ಲಿ ಕಣವಿಯವರ ೧೦೫ ಕವಿತೆಗಳ ಪ್ರಾಯೋಗಿಕ ವಿಮರ್ಶೆಯ ಲೇಖನಗಳಿದ್ದು ಕಣವಿಯವರ ಕಾವ್ಯವನ್ನು ಗ್ರಹಿಸುವದು ಹೇಗೆ ಎನ್ನುವದರ ದಿಗ್ದರ್ಶನ ಮಾಡುವದಲ್ಲದೆ, ಈಗಾಗಲೆ ಅವರ ಕಾವ್ಯವನ್ನು ಕುರಿತು ಗೃಹೀತವಾದ ತಿಳಿವಳಿಕೆಯನ್ನು ಪರಿಷ್ಕರಿಸುತ್ತ, ಹೊಸ ಓದುವಿಕೆಗೆ ಮನಸ್ಸನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಕೈದೀವಿಗೆಯಂತೆ ಇದೆ. 'ಜಾಗತೀಕರಣದ ಇಂದಿನ ಪ್ರಾಯೋಜನಿಕ ಪ್ರಪಂಚದ ನಡುವೆ ಕಾವ್ಯಕ್ಕೂ ನಮಗೂ ದೊಡ್ಡದೊಂದು ಕಂದಕ ಏರ್ಪಡುತ್ತಿರುವ ಹೊತ್ತಿನಲ್ಲಿ ಕಣವಿಯವರಂಥ ಮುಖ್ಯ ಕವಿತೆಗಳನ್ನು, ಅವುಗಳನ್ನು ಕುರಿತ ಪ್ರಾಯೋಗಿಕ ವಿಮರ್ಶೆಯ ಸಮೇತ ಕಾವ್ಯಾಸಕ್ತ ಸಹೃದಯರ ಹತ್ತಿರಕ್ಕೆ ತೆಗೆದುಕೊಂಡು ಹೋಗುವ ಈ ಪ್ರಯತ್ನ ಸಾಹಿತ್ಯಿಕವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ಮಹತ್ವದ್ದು' ಎಂದು ಡಾ. ಜಿ. ಎಸ್. ಶಿವರುದ್ರಪ್ಪ ಹೇಳಿದ್ದಾರೆ.

ಕಣವಿ ಅವರು ಯಾವುದೇ ಪಂಥ, ಪ್ರಭಾವ, ಬದ್ಧತೆಗೆ ಒಳಗಾಗದೆ ಜೀವನದ ವಾಸ್ತವಕ್ಕೆ ಸ್ಪಂದಿಸುತ್ತ ಕಾವ್ಯವನ್ನು ರಚಿಸುತ್ತ ಬಂದಿದ್ದಾರೆ. ಹೀಗೆ ಕಣವಿಯವರು ತಾವೇ ಒಂದು ಪರಂಪರೆಯಾಗಿ ಬೆಳೆದಿದ್ದಾರೆ. ಎಲ್ಲ ಕಾಲದ ಪ್ರತಿಭೆ ಚೈತನ್ಯಗಳಿಗೆ ಗೌರವಾದರ ಸೂಚಿಸುತ್ತ ಕಾವ್ಯ ರಚಿಸುತ್ತ ಸಾಗಿದ್ದಾರೆ. ಪ್ರಕೃತಿಯನ್ನು ಅದರ ನೈಜರೂಪದಲ್ಲಿ ಗ್ರಹಿಸಿ ಮನುಷ್ಯನ ಬದುಕಿನ ಸಂಬಂಧಗಳಿಗೆ ಸಾಂಗತ್ಯಗೊಳಿಸಿ, ಅದನ್ನು ಪ್ರತೀಕ, ಪ್ರತಿಮೆಯನ್ನಾಗಿ ಮಾಡಿಕೊಂಡು, ನವೀನ ಆವಿಷ್ಕಾರಗಳನ್ನು ನೀಡುವುದು ಅವರ ಕಾವ್ಯದ ಅಭಿವ್ಯಕ್ತಿಯ ಸ್ವರೂಪವಾಗಿದೆ. ಪ್ರಕೃತಿಯನ್ನು ಮನುಷ್ಯ ಜೀವನದಿಂದ ಪ್ರತ್ಯೇಕಿಸಿ ನೋಡದೆ, ಅದರ ಅವಿಭಾಜ್ಯ ಅಂಗವಾಗಿ ಅವರು ಅವಲೋಕಿಸುತ್ತ ಬಂದಿರುವುದು ಕಂಡುಬರುತ್ತದೆ.

ಕಣವಿಯವರ ಕಾವ್ಯದಲ್ಲಿ ಮನುಷ್ಯ ಸ್ವಭಾವದ ಕ್ರಿಯೆಗಳು ಜೀವಧಾತುವಾಗಿ ಬರುತ್ತವೆ. ಬೇರೆ ಬೇರೆ ಸ್ತರಗಳಲ್ಲಿಯೂ ಅವರ ಕವಿತೆಗಳ ಮಹತ್ವವನ್ನು ಅರಿಯಬಹುದಾಗಿದೆ. ಕಣವಿಯವರು ಸ್ವವಿಮರ್ಶೆಯ ಕವಿಯೂ ಆಗಿದ್ದಾರೆ. ಅವರು ಕಾವ್ಯದ ಮೂಲಕ ಕನ್ನಡ ಸಂಸ್ಕೃತಿಯ ವ್ಯಾಖ್ಯೆ ಬರೆಯುತ್ತಿರುವಂತೆ ಭಾಸವಾಗುತ್ತದೆ. ಕವಿತೆಯ ರಚನೆಯಲ್ಲಿ ಚಾಕಚಕ್ಯತೆಯನ್ನು ಉಳಿಸಿಕೊಂಡ ಕಲಾಭಿಜ್ಞತೆಯಿಂದ ಜೀವನ ಮೌಲ್ಯಗಳನ್ನು ಎತ್ತಿಹಿಡಿಯುತ್ತ ವಿಶೇಷವಾದದ್ದನ್ನು ಜನತೆಗೆ ನೀಡುತ್ತಾರೆ. ಅವರು ನವೋದಯ, ನವ್ಯ ಕಾವ್ಯದ ನಂತರದ ಸಂದರ್ಭದಲ್ಲೂ ತಮ್ಮ ರೊಮ್ಯಾಂಟಿಕ್ ಮನೋಧರ್ಮವನ್ನು ಬಿಟ್ಟುಕೊಡಲಿಲ್ಲ ಎಂದು ನಮಗೆ ಅನ್ನಿಸುವ ಹಾಗೆಯೇ ರೊಮ್ಯಾಂಟಿಕ್ ಗುಣ ನಿಷೇಧಾತ್ಮಕವಲ್ಲ ಎಂಬ ದೃಷ್ಟಿಕೋನವೂ ಇರುತ್ತದೆ. ರಮ್ಯಾತ್ಮಕ ವರ್ಣನೆಯಲ್ಲೂ ಚೇತೋಹಾರಿಯಾದ ಗುಣ ಇದ್ದೇ ಇರುತ್ತದೆ ಎನ್ನುವುದನ್ನು ನಾವು ಮರೆಯಬಾರದು. ತಮ್ಮ ಚಿಂತನೆಯನ್ನು ಸದಾ ಕ್ರಿಯಾಶೀಲಗೊಳಿಸುತ್ತ ಬಂದ ಕಣವಿಯವರದು ಆತ್ಮವಿಮರ್ಶಕ ಕಾವ್ಯವೆಂದೂ ಹೇಳಬಹುದು. ಸಮಕಾಲೀನ ಜೀವನ, ವ್ಯಕ್ತಿ, ಪರಿಸರಗಳು ಚರಿತ್ರೆಯ ಭಾಗವೆಂದು ಅವರು ಗ್ರಹಿಸುತ್ತ ಬಂದಿದ್ದಾರೆ. 'ಎಷ್ಟು ಹಣತೆಯಿದ್ದರೂ ಕತ್ತಲೆಯು ಕರಗುವದಿಲ್ಲ' ಎಂದು ಹೇಳುವಲ್ಲಿ ಕಣವಿಯವರ ಆಳವಾದ ಚಿಂತನೆಯಿದೆ. ಕವಿತೆಯ ಕೆಲಸ ಮನ ಕರಗಿಸುವದು ಹಾಗೂ ಹೃದಯಕ್ಕೆ ಮುಟ್ಟುವುದು ಎಂಬ ನಿಲುವು ಕಣವಿಯವರದು. ತಮ್ಮ ಕವಿತೆಗಳಲ್ಲಿ ನಿಸರ್ಗ ವ್ಯಾಪಾರದ ಬಗೆಗೆ, ಜೀವನದ ನೂರಾರು ಸಮಸ್ಯೆಗಳ ಬಗೆಗೆ ಅಸಂಖ್ಯ ಪ್ರಶ್ನೆಗಳ ಮೂಲಕ ಸಹೃದಯನ ಜೊತೆ ಕವಿ ಸಂವಾದ ನಡೆಸುತ್ತಾರೆ. ಕಾವ್ಯ ಜಿಜ್ಞಾಸೆಯ ಚರ್ಚೆಯೂ 'ಸ್ಫೂರ್ತಿ' ಮೊದಲಾದ ಕವಿತೆಗಳಲ್ಲಿ ಬಂದಿದೆ.

ಕಾವ್ಯವನ್ನು ಘೋಷಣೆ, ಶಬ್ದಜಾಲಗಳ ಮೂಲಕ ಹದಗೆಡಿಸದೆ ಭಾಷೆಯ ಲಯಶಕ್ತಿಯನ್ನು ಜೀವಧ್ವನಿಯಾಗಿಸಿದವರು ಕಣವಿಯವರು. ಸಾಮಾಜಿಕ ಪ್ರತಿಭಟನೆ, ಬಂಡಾಯದ ಘೋಷಣೆಯ ಬೀಜಗಳು ಸ್ಫೋಟಗೊಳ್ಳುವ, ವಾಚಾಳಿತನದಿಂದ ಚಿತ್ರಿಸುವ ಕಾರ್ಯವನ್ನು ಕಣವಿಯವರು ಮಾಡಲಿಲ್ಲ ನಿಜ. ಆದರೆ ಸಾಮಾಜಿಕ ವಿಷಮತೆಯ ಕಾರಣಗಳ ಶೋಧನೆ, ಅದರ ಬಗೆಗೆ ಆಳವಾದ ಬೌದ್ಧಿಕ ಚಿಂತನೆ, ವ್ಯಂಗ್ಯ, ವಿಡಂಬನೆಯ ಮೂಲಕ ಕಾವ್ಯಾಭಿವ್ಯಕ್ತಿಗೊಳಿಸಿರುವ ವಿಧಾನ ಕಣವಿಯವರ ಕವಿತೆಗಳಲ್ಲಿ ಕಂಡು ಬಂದಿದೆ. ಸ್ವಾನುಭೂತಿಯಿಂದ ವಿವೇಕಯುತವಾದ ಬದಲಾವಣೆಗೆ ಕರೆಕೊಡುತ್ತ ಭಾರತದ ಸಾಮಾಜಿಕ ಪರಿವರ್ತನೆಗೆ ಮುಖ ಮಾಡಿ ನಿಂತ ಕವಿಯ

ವ್ಯಕ್ತಿತ್ವ ನಿಜಕ್ಕೂ ಆಶ್ಚರ್ಯಕರವಾದುದು. ತಮ್ಮ ಕವಿತೆಗಳಲ್ಲಿ ಅನುಭಾವದ ಅಥವಾ ಧರ್ಮದ ತಾತ್ವಿಕ ಅಂಶಗಳಿಗೆ ಒತ್ತು ಕೊಡದೆ ಜೀವನದ ಮೂಲಭೂತವಾದ ಆಶಯಗಳಿಗೆ ಇದನ್ನು ವಿಸ್ತರಿಸಿ ಹೇಳುವದಾದರೆ ಹರ್ಷ, ಸ್ನೇಹ, ಪ್ರೀತಿ, ಕರುಣೆಯ ಭಾವಗಳಿಗೆ ಕಣವಿಯವರು ಮಹತ್ವ ನೀಡಿರುವದು ಕಂಡುಬರುತ್ತದೆ. ಉದಾರವಾದ ಮಾನವಾನುಭವಗಳನ್ನು ಎರಕ ಹೊಯ್ಯುವದರಲ್ಲಿ ಕಣವಿ ನಿರಂತರ ಪ್ರಯತ್ನಶೀಲರಾಗಿದ್ದಾರೆ. ಇದರಿಂದ ಕಣವಿಯ ಕಾವ್ಯ ಜೀವಸ್ಪಂದಿಯಾದ ಅನುಭವಗಳನ್ನು ನೆಲೆಗೊಳಿಸಿದಂತಾಗಿದೆ. ಇರುವೆಯಿಂದ ಹಿಡಿದು ವಿಶ್ವದ ಸಮಷ್ಟಿ ವಸ್ತು ಅನುಭವಗಳನ್ನು ಅದು ತನ್ನದಾಗಿಸಿಕೊಳ್ಳುತ್ತದೆ.

ಬೇಂದ್ರೆಯವರು ಮೊದಲೇ ಗುರುತಿಸಿದ ಜೀವಂತಗತಿ, ಕಣವಿ ಕಾವ್ಯದಲ್ಲಿ ಉದ್ದಕ್ಕೂ ಎದ್ದು ಕಾಣುತ್ತದೆ. ಬೇಂದ್ರೆಯವರ ಕಾವ್ಯ ವಿಮರ್ಶೆಯ ಮಾತಿನ ಮೂಲಕವೇ ಕಣವಿ ಕಾವ್ಯ ವಿಮರ್ಶೆ ಆರಂಭವಾದದ್ದು ಒಂದು ಚಾರಿತ್ರಿಕವಾದ ಸಂದರ್ಭ ಎನ್ನಬಹುದು. ಗೋಕಾಕರೂ ಕೂಡ 'ಸೂಕ್ಷ್ಮಾಂತಃಕರಣ ಪ್ರಜ್ಞೆಯಲ್ಲಿಯೇ ಕಣವಿಯವರ ಕಾವ್ಯದ ಉಗಮಸ್ಥಾನವಿದೆ. ಅವರ ಆಂತರಿಕ ಹಾಗೂ ಸಾಮಾಜಿಕ ಸ್ಪಂದನಗಳು ಇಲ್ಲಿಂದ ಉದ್ಭವಿಸುತ್ತವೆ. ಅವರ ಪ್ರತಿಮೆ ಸಂಕೇತಗಳನ್ನು ಈ ಪ್ರಜ್ಞೆಯೇ ಒದಗಿಸುತ್ತದೆ' ಎಂದಿದ್ದಾರೆ. ನವೋದಯ ಸಾಹಿತ್ಯದ ಹಿರಿಯ ಕವಿ ಪು.ತಿ.ನ. ಅವರೂ ಕಣವಿ ಕಾವ್ಯದಲ್ಲಿ 'ಅಮೋಘವಾದ ಅನುಭವ, ರಸಾರ್ದ್ರವಾದ, ಉಜ್ವಲ ಮನಸ್ಸಿನ ಸಂಪರ್ಕ ನಮಗಿಲ್ಲಿ ಸಿಕ್ಕಿ ನಾವು ಒಂದು ತೆರನ ಅಲೌಕಿಕವಾದ ಉಲ್ಲಾಸವನ್ನು ಪಡೆಯುತ್ತೇವೆ' ಎಂದು ಮುಕ್ತಮನಸ್ಸಿನಿಂದ ಪ್ರಶಂಸಿಸಿದ್ದಾರೆ.

ಕಣವಿಯವರ ಕಾವ್ಯವನ್ನು 'ನಡೆದುಬಂದ ದಾರಿ'ಯ ಸಂದರ್ಭದಲ್ಲಿ ವಿಮರ್ಶಿಸುತ್ತ ಕುರ್ತಕೋಟಿಯವರು 'ಕಣವಿ ಅವರ ಕಾವ್ಯದೃಷ್ಟಿ, ನಿಸರ್ಗದ, ಜೀವನದ ಚೆಲುವಿಗೆ ಆಕರ್ಷಿತವಾದ 'ರೊಮ್ಯಾಂಟಿಕ್' ದೃಷ್ಟಿಯಾಗಿದೆ' ಎಂದು ಹೇಳಿದ್ದರು. ನವ್ಯಕಾವ್ಯ ಪ್ರಯೋಗದ ಸಂದರ್ಭದಲ್ಲಿ 'ಪ್ರೀತಿ, ಅಂತಃಕರಣಗಳ ಮೂಲಕ ಭಾಷೆಗೆ ಮೂಡಿದ ರೋಮಾಂಚನವೇ ಇವರ ಕಾವ್ಯವಾಗಿದೆ' ಎಂದಿದ್ದಾರೆ. ನವ್ಯೋತ್ತರದ ಸಂದರ್ಭದಲ್ಲಿ 'ಪ್ರಾಸಂಗಿಕ ಕಾವ್ಯಕ್ಕಾಗಿ ಒಂದು ವಿಶಿಷ್ಟ ಶೈಲಿಯನ್ನು, ವಿನಯವೇ ಸ್ಥಾಯಿಯಾಗಿ ಉಳ್ಳ ಒಂದು ಭಾವ ಸಂದೋಹವನ್ನು, ಗುಣ ಗ್ರಾಹಕ ಪ್ರಜ್ಞೆಯನ್ನು ಕಣವಿಯವರ ಕಾವ್ಯ ಮೊದಲಿನಿಂದಲೂ ರೂಢಿಸಿಕೊಂಡು ಬಂದಿದೆ' ಎಂದು ಅದರ ಚಾರಿತ್ರಿಕ ಸಂದರ್ಭವನ್ನು ಕುರ್ತಕೋಟಿ ಅವರು ಎತ್ತಿ ಹೇಳಿದ್ದಾರೆ.

ಕಣವಿಯವರ ಕಾವ್ಯವನ್ನು ಕುರಿತು ಕನ್ನಡ ವಿಮರ್ಶೆ ಬಹುವಿಧದ ಚರ್ಚೆ, ಚಿಂತನಗಳನ್ನು ಕಾಲಕಾಲಕ್ಕೆ ನಡೆಸುತ್ತ ಬಂದಿದೆ. ಹಾಗೆ ನೋಡಿದರೆ ಕನ್ನಡದ ಪ್ರಸಿದ್ಧ ವಿಮರ್ಶಕರೆಲ್ಲ ಕಣವಿಯವರ ಕವಿ ಪ್ರತಿಭೆಯ ವಿಲಾಸವನ್ನು ಮೆಚ್ಚಿ, ವಿಭಿನ್ನ ನೆಲೆಗಳಿಂದ ವಿಶ್ಲೇಷಿಸಿದ್ದಾರೆ. ಯಾವುದೇ ಪಂಥ, ಪ್ರಣಾಲಿಯ ಉತ್ತಮಾಂಶಗಳನ್ನು ಸ್ವೀಕರಿಸಿ ಮಾನವಾನುಭವದ ಕಾವ್ಯವನ್ನು ಅವರು ಕನ್ನಡಕ್ಕೆ ಕೊಟ್ಟಿದ್ದಾರೆ.

ಜಿ. ಎಸ್. ಶಿವರುದ್ರಪ್ಪನವರು ಕಣವಿ ಕಾವ್ಯವನ್ನು ವಿಮರ್ಶಿಸುತ್ತ 'ಈ ದೇಶದ ಎಲ್ಲ ಪ್ರಗತಿಪರ ಹಾಗೂ ಮಾನವೀಯ ನಿಲುವುಗಳನ್ನು ಅಳವಡಿಸಿಕೊಳ್ಳುತ್ತ ಕಣವಿಯವರು ತಮ್ಮ ವ್ಯಕ್ತಿತ್ವದ ಮೂಲದ್ರವ್ಯಗಳಾದ ನಿಸರ್ಗ ಪ್ರೀತಿ, ಮಾರ್ದವತೆ, ಅನುಭಾವಿಕತೆ

ಮತ್ತು ಮಾನವೀಯತೆಯನ್ನು ಬಿಟ್ಟುಕೊಡದೆ ತಮ್ಮ ಕಾಲಮಾನದ ಪಲ್ಲಟಗಳಿಗೆ ಹಾಗೂ ತಲ್ಲಣಗಳಿಗೆ ಸ್ಪಂದಿಸುತ್ತ, ಅಂದಿನ ಏರುದನಿಯ ಕಾವ್ಯಸಂದರ್ಭದ ನಡುವೆ ಅವ್ಯಗ್ರವಾದ ಮನಃಸ್ಥಿತಿಯ ಮಂದ್ರಸ್ವರದ ಕಾವ್ಯವನ್ನು ಕಟ್ಟಿದರು. ಕವಿ ಕಣವಿಯವರು ನಗರೀಕರಣದ ಚಕ್ರಚಲನೆಯ ಗಡಿಬಿಡಿಯ ಗದ್ದಲದ ಮಧ್ಯೆಯೂ 'ಸಾಲಾಗಿ ನವಿಲು ಗರಿಗೆದರಿ ನರ್ತಿಸಿದಂತೆ' 'ಮುಂಜಾವದಲಿ ಬೇಲಿಯ ತುಂಬ ನೀಲಿ ಹೂ' ಅರಳಿರುವ ಪರಿಗೆ ಬೆರಗಾದವರು. ಸೃಜನಶೀಲತೆಯ ಸಂಕೇತದಂತಿರುವ ಧಾರವಾಡದ ಮಳೆಗಾಲವನ್ನು ಸಂಭ್ರಮದಿಂದ ವರ್ಣಿಸಿದವರು. ದೈನಂದಿನ ಸರಳ ಸಾಧಾರಣ ಸಂಗತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ವೀಕ್ಷಿಸುತ್ತ ಬದುಕಿನ ಅರ್ಥವನ್ನು ಶೋಧಿಸಿದವರು; ನಿಸರ್ಗ ಹಾಗೂ ಸಂಸ್ಕೃತಿಯ ಮುಖಾಮುಖಿಯನ್ನು, ಕಾಲ ಮನುಷ್ಯ ಸಂಬಂಧಗಳನ್ನು ಕುರಿತು ನಾವು ಮತ್ತೆ ಮತ್ತೆ ಓದಬೇಕೆನ್ನುವ ಅನೇಕ ಮಹತ್ವದ ಕವಿತೆಗಳನ್ನು ಕಣವಿಯವರು ಬರೆದಿದ್ದಾರೆ. 'ಮುಖ್ಯ ಬೇಕಾದದ್ದು ಓಟ, ಕೂಗಾಟ' ಎಂದು ಅಡಿಗರು ವರ್ಣಿಸಿದ ಸಾಮಾಜಿಕ ಸಂದರ್ಭದಲ್ಲಿ 'ಮುಖ್ಯ ಬೇಕಾದದ್ದು ಜೀವಂತ ಗತಿ. ಹೊಸ ನೆತ್ತರಿನ ಕೊಡುಗೆ' ಎಂದು ಪ್ರತಿಕ್ರಿಯಿಸುತ್ತ ಕಣವಿಯವರ ಪ್ರತಿಭೆ ತನ್ನ ಈವರೆಗಿನ ಸಾಧನೆಯಿಂದ ಕನ್ನಡ ಕಾವ್ಯಕ್ಕೆ ಜೀವಂತ ಗತಿಯನ್ನು ತಂದುಕೊಟ್ಟು ಹೊಸ ನೆತ್ತರಿನ ಕೊಡುಗೆಯನ್ನು ನೀಡಿದೆ' ಎಂದು ಡಾ. ಜಿ. ಎಸ್. ಶಿವರುದ್ರಪ್ಪನವರು ಮೌಲಿಕವಾದ ವಿಚಾರವನ್ನು ಹೇಳಿದ್ದಾರೆ.

"ಒಂದು ಕಾವ್ಯ ಸಂಪ್ರದಾಯದ ಆಟ ಮುಗಿದು ಕಾವ್ಯ ಸತ್ವದ ಪುನರವತಾರ ನವಶರೀರದಲ್ಲಿ ಮತ್ತೊಮ್ಮೆ ಆಗಬೇಕಾಗಿರುವ ಸಂಧಿಕಾಲದಲ್ಲಿ ಕವಿಯ ಬೆಳವಣಿಗೆ ಕಠಿಣ ಎಂಬುದನ್ನು ನಾವು ಮರೆಯಬಾರದು. ಕಣವಿಯವರ ಇತ್ತೀಚಿನ ಕವಿತೆಗಳನ್ನು ಓದಿದವರಿಗೆ ನವ್ಯ ಪರಿಸರದ ಪ್ರಜ್ಞೆ ಅವರಲ್ಲಿ ಆಗಲೇ ಜಾಗೃತವಾಗಿದೆಯೆಂದು ತಿಳಿಯುತ್ತದೆ."

"ಈ ಕವಿಯ ಮನೋಧರ್ಮ ಪ್ರಶಾಂತಿಯದಲ್ಲದೆ ರಭಸದ್ದಲ್ಲ. ಎಲ್ಲಿ ಚಿಂತನೆ, ಸೂಕ್ಷ್ಮತೆ, ನಯ ಬೇಕೋ ಅಲ್ಲಿ ಈ ಕವಿಯ ಕಾವ್ಯ ಯಶಸ್ವಿಯಾಗುತ್ತದೆ. ಮಾನವ ಹೃದಯದ ಚಿರಂತನ ಭಾವಭಾವಾಂತರಗಳ ಚಿತ್ರಣಕ್ಕೆ ಈ ಕವಿಯ ಮನೋಧರ್ಮ ಯೋಗ್ಯವಾದದ್ದು ಎನಿಸುತ್ತದೆ. ಇಲ್ಲಿ ಅಂಥ ಕವಿತೆಗಳ ಜೊತೆಗೆ 'ಪ್ರಗತಿಶೀಲ' ಎನ್ನಬಹುದಾದ ರಾಜಕೀಯ ಸಾಮಾಜಿಕ ಪದ್ಯಗಳೂ ಇವೆ.....

"ಕಲಾಪರವಶತೆಯಿಂದ, ನಿಷ್ಠುರ ಆತ್ಮವಿಮರ್ಶೆಯಿಂದ, ಪರಿಪೂರ್ಣತೆಯ ಛಲದಿಂದ ಮುಂದುವರಿದರೆ ಈ ಕವಿ ಕೃತಿರತ್ನಗಳ ರಚನೆಯಿಂದ ಕೃತಾರ್ಥರಾಗುವುದರಲ್ಲಿ ಸಂದೇಹವಿಲ್ಲ" ಎಂದು ಎಂ. ಗೋಪಾಲಕೃಷ್ಣ ಅಡಿಗರು ೧೯೫೩ ರಲ್ಲಿ ಹೇಳಿದ್ದಾರೆ.

"ಕನ್ನಡ ಕಾವ್ಯಧಾರೆಯಲ್ಲಿ ಕಣವಿಯವರ ಕವಿತಾವಾಹಿನಿ ಕಳೆದ ಇಪ್ಪತ್ತೈದು ವರ್ಷಕ್ಕೂ ಮೇಲ್ಪಟ್ಟು ಸತತವಾಗಿ ನಿರರ್ಗಳವಾಗಿ ಹರಿಯುತ್ತಿದೆ. ಕಣವಿಯವರು ತಮ್ಮ ನೈಸರ್ಗಿಕ ಅನುಭಾವ (Natural Mysticism) ಮಾರ್ಗವನ್ನು ಈ ವಿಸ್ತಾರ ಸಮಯದಲ್ಲೂ ಹದಗೆಡದಂತೆ ಉಳಿಸಿಕೊಂಡು ಬಂದದ್ದೇ ಅವರ ಮೊದಲಿನ ಕಾವ್ಯ ಯಶಸ್ಸಿನ (Authenticity) ದ್ಯೋತಕ. ಪ್ರಗತಿಶೀಲ ಕಾವ್ಯದ ದಿನಗಳಲ್ಲಿ, ನವ್ಯಯುಗದ ನವೋತ್ಸಾಹ ದಿನಗಳಲ್ಲಿ ಕಣವಿಯವರು ಕನ್ನಡ ಕಾವ್ಯ ಹಾಗೂ ಭಾಷೆಗಳ ಬೆಳೆಯುತ್ತಿರುವ

ಅರ್ಥವಿನ್ಯಾಸ (Semantic)ಕ್ಕೆ ತಮ್ಮ ಕಾವ್ಯಜೀವಾಳದ ಪ್ರತಿಸ್ಪಂದವೇನೋ ಎಂಬಂತೆ ಆಯಾ ಕೃಷಿಯ ಹದಗಾರಿಕೆಯನ್ನು ತಮ್ಮ ಕಾವ್ಯದಲ್ಲಿಯೂ ಸ್ಫುಟಗೊಳಿಸಿದರು. ಒಲಿದು ಬಂದ ಭಾಷೆಗೆ ಆಯಾ ಸಮಯಕ್ಕೆ ತಕ್ಕ ಉಡುಗೊರೆಯನ್ನು ಕೊಡುವುದು ಕವಿಯ ಪುರುಷಾರ್ಥದ ಲಕ್ಷಣ, ಹೀಗೆ ನವ್ಯರಲ್ಲಿ ಗಣನೀಯ ನವ್ಯರು, ಪ್ರಗತಿಶೀಲರಲ್ಲಿ ಗಣ್ಯ ಪ್ರಗತಿಶೀಲರು, ರೊಮ್ಯಾಂಟಿಕ್‌ರಲ್ಲಿ ಗಣ್ಯರೊಮ್ಯಾಂಟಿಕ್‌ರು ಎಂಬ ಕೀರ್ತಿಯನ್ನು ಕಣವಿಯವರು ಅವ್ಯಾಹತವಾಗಿ ನಿರ್ಬಾಧಿತವಾಗಿ ಉಳಿಸಿಕೊಂಡಿದ್ದಾರೆ" ಎಂದು ಶಂಕರ ಮೊಖಾಸಿ ಪುಣೇಕರ ಅವರು ಬಹು ಹಿಂದೆಯೇ ಅಭಿಪ್ರಾಯಪಟ್ಟಿದ್ದಾರೆ.

ನನ್ನ ದೃಷ್ಟಿಯಲ್ಲಿ ಕಣವಿ ಕಾವ್ಯದ ಪ್ರಮುಖ ಹಾಗೂ ಮೌಲಿಕ ಗುಣವೆಂದರೆ, ಒಟ್ಟಾರೆಯಾಗಿ ಅದರ ಅದ್ಭುತ ಭೌತಿಕ ಸ್ವರೂಪ. ಅವರಿಗೆ ಮುಖ್ಯವಾಗುವುದು ದ್ರವ್ಯ ನಿರ್ಮಿತ ಮರ್ತ್ಯಲೋಕ, ಅದರಲ್ಲಿ ಉಸಿರಾಡುವ, ಅಳುವ, ನಗುವ, ಜೀವಜಾತುಗಳು, ಪಂಚಭೂತಗಳು ಕಟ್ಟಿ ಕೊಟ್ಟಿರುವ ಮಾನವನ ಇಹದ ಬದುಕು. ಈ ಕಾರಣಕ್ಕಾಗಿಯೇ ಅಲ್ಲಮ ಇತ್ಯಾದಿ ಇತರ ಶರಣರಿಗಿಂತ ಬಸವಣ್ಣನಿಗೆ ಇವರು ಹೆಚ್ಚು ಗೌರವ ಕೊಡುತ್ತಾರೆ. ದೃಗ್ಗೋಚರ ವಿಶ್ವಕ್ಕೆ ಮಹತ್ವ ಕೊಡುವ ಕಾವ್ಯ ಭಾರತೀಯ ಕಾವ್ಯ ಪರಂಪರೆಗಳಲ್ಲಿ ಒಂದು ಪ್ರಮುಖ ಪರಂಪರೆ. ಆದ್ದರಿಂದಲೇ ಕಣವಿಯವರ ಕಾವ್ಯವನ್ನು ಆಳವಾಗಿ ಅಧ್ಯಯನ ಮಾಡಿರುವ ಡಾ. ಆಮೂರರು ಅದರಲ್ಲಿ ಕಂಡು ಬರುವುದು 'ಅಭಿಜಾತ ಒಲವು' ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

ಇವರ ಕಾವ್ಯದ ಎದ್ದು ಕಾಣುವ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಖಚಿತ, ಸಾಂದ್ರ ಹಾಗೂ ಇಂದ್ರಿಯಾನುಭವಗಮ್ಯ ರೂಪಕಗಳು. ಅವರ ನಿಸರ್ಗ ಕವನಗಳಲ್ಲಿ ನಿಸರ್ಗ ಹಾಗೂ ಮಾನವಲೋಕ ಎರಡನ್ನೂ ಒಂದೇ ಚೈತನ್ಯದ ಎರಡು ಭಿನ್ನ ವಿನ್ಯಾಸಗಳೆಂದು ನೋಡುತ್ತಾರೆ. ಕಣವಿಯವರಿಗೆ ಬದುಕಿನಲ್ಲಿ ನಂಬಿಕೆ, ಆದರಗಳು ಸಾಧ್ಯವಾಗಿರುವುದು ಅವರಿಗೆ ಅಗೋಚರ, ಅದಮ್ಯ ಸೃಷ್ಟಿ ಚೈತನ್ಯದಲ್ಲಿ ಇರುವ ಗಾಢ ನಂಬಿಕೆಯಿಂದ 'ಸೃಷ್ಟಿ' ನಿರ್ಮಾಣ ನಿಯಂತ್ರಣ ಮಂತ್ರದಲ್ಲಿ ಇವರಿಗಿರುವ ನಂಬಿಕೆಯಿಂದ ಎಂದು ಡಾ. ಸಿ. ಎನ್. ರಾಮಚಂದ್ರನ್ ಅಭಿಪ್ರಾಯಪಟ್ಟಿದ್ದಾರೆ.

ಶಾಂತಿನಾಥ ದೇಸಾಯಿ ಅವರು ಕಣವಿ ಕಾವ್ಯದ ಆವಿಷ್ಕಾರದ ಸಾಂಸ್ಕೃತಿಕ ಸಂದರ್ಭವನ್ನು ಗುರುತಿಸುತ್ತ 'ಕಣವಿಯವರು ಕನ್ನಡ ನಾಡಿನ ಸಾಹಿತ್ಯಿಕ ಬೆಳವಣಿಗೆಯೊಂದಿಗೆ ಸಾಧಿಸಿದ ತಾದಾತ್ಮ್ಯದ ಪರಿಣಾಮವಾಗಿ ಕನ್ನಡದ ಅನಭಿಷಿಕ್ತ 'ರಾಜಕವಿ (Poet laureate)ಯಾಗಿ ಕೆಲಸ ಮಾಡುವ ಹೊಣೆಗಾರಿಕೆ ಅವರ ಮೇಲೆ ಬಿದ್ದಿತು. ಅಂತೆಯೇ ಅವರು ಸಾರ್ವಜನಿಕ ಭಾವದ ಅಭಿವ್ಯಕ್ತಿಯಾಗಿ ಸಾಂದರ್ಭಿಕ (Occasional) ಕಾವ್ಯ ಬರೆಯಬೇಕಾಯಿತು' ಎಂದಿದ್ದಾರೆ.

ಗೌರೀಶ ಕಾಯ್ಕಿಣಿಯವರು ಕಣವಿಯವರ ಕಾವ್ಯದೃಷ್ಟಿಯಲ್ಲಿ 'ಕವಿಯ ಕಾವ್ಯಸಿದ್ಧಿ, ಕವಿತ್ವದ ಕಲಾಸಿದ್ಧಿ, ಶೈಲಿಯ ಶಕ್ತಿ, ಪಾಕ ಮತ್ತು ಮೇಧಕತೆ ಅಂದಿನಿಂದ ಇಂದಿನ ತನಕವೂ ಒಂದೇ ಹದದಲ್ಲಿ ತನ್ನ ಮೌಲ್ಯವನ್ನು ಸರಿಯಾಗಿ ಕಾಪಾಡಿಕೊಂಡಿವೆ. ಅವರ ಕವಿತೆಗಳ ಕಸಬುಗಾರಿಕೆ, ನಯನಾಜೂಕು, ಮೂರ್ತಿಶಿಲ್ಪದಂತೆ ಕವಿತೆಯ ಅಭಿವ್ಯಕ್ತಿ ಅಸಾಧಾರಣವಾದದ್ದು' ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ.

ಕಣವಿಯವರ ಸಮಗ್ರಕಾವ್ಯ 'ಹೊಂಬೆಳಕು' ಪ್ರಸ್ತಾವನೆಯಲ್ಲಿ ಜಿ. ಎಸ್. ಆಮೂರ

ಅವರು ಕಣವಿ ಕಾವ್ಯದ ಪುನರ್ವಿಮರ್ಶೆ ಮಾಡುತ್ತ 'ಏಕಾಗ್ರತೆ, ಅಮೂರ್ತಕ್ಕೆ ಆಕಾರ ಕೊಡುವ ಮೂರ್ತ ಪ್ರತಿಮೆಗಳ ಸೃಷ್ಟಿ, ವಚನಕಾರರಲ್ಲಿ ಕಂಡುಬರುವ ದರ್ಶನದ ಸ್ಪಷ್ಟತೆ, ನಿರಾಭರಣ, ಸುಂದರವಾದ ಭಾಷೆ, ಲಯದ ನಿಯಂತ್ರಣದಲ್ಲಿ ಹುಟ್ಟಿಕೊಳ್ಳುವ ಅರ್ಥಕ್ರಿಯೆ, ಮೌನ ಹೊರಡಿಸುವ ಶಬ್ದ ಇವು ಈ ಕವಿತೆಗಳ ಶ್ರೇಷ್ಠ ಗುಣಗಳಾಗಿವೆ. ಈ ಎಲ್ಲ ಕವಿತೆಗಳ ಯಶಸ್ಸಿನ ಮಟ್ಟ ಏಕರೂಪವಾಗಿಲ್ಲವಾದರೂ ಅವು ಕಣವಿಯವರ ಕಾವ್ಯ ಸಾಧಿಸಿದ ಪಕ್ವತೆಯ ಫಲಗಳೆನ್ನುವದರಲ್ಲಿ ಸಂಶಯವಿಲ್ಲ' ಎಂದು ಹೇಳಿರುವದು ಒಂದು ವಸ್ತುನಿಷ್ಠ ವಿಮರ್ಶೆಯಾಗಿದೆ.

ಡಿ. ಆರ್. ನಾಗರಾಜ ಅವರು 'ಜೀವನದ ಸಮಸ್ತ ಸವಾಲುಗಳಿಗೆ ಪ್ರತಿಸ್ಪಂದಿಸುತ್ತಲೇ ತಮ್ಮ ಸೃಜನಶೀಲತೆಯನ್ನು ಉಳಿಸಿಕೊಳ್ಳಬೇಕಾದ ಭಾರತದ ಈಗಿನ ಚಾರಿತ್ರಿಕ ಸಂದರ್ಭದಲ್ಲಿ ಕಣವಿಯವರ ಕಾವ್ಯ ಮಾರ್ಗ ಉದಾರವಾದಿ ಮಾನವತಾ ಧೋರಣೆಯನ್ನು ಹೊಂದಿಯೂ ಅರ್ಥಪೂರ್ಣ ಕಾವ್ಯ ರಚಿಸಬಲ್ಲ ಸಾಧ್ಯತೆಯನ್ನು ತೋರಿಸುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಚ್. ಎಸ್. ರಾಘವೇಂದ್ರರಾವ್ ಅವರು 'ಕಣವಿಯವರ ಕಾವ್ಯವು ಎಲ್ಲಾ ಹಂತಗಳಲ್ಲೂ ತನ್ನ ಭಾವಗೀತಾತ್ಮಕತೆಯನ್ನು (Lyricality) ಉಳಿಸಿಕೊಂಡು, ವರ್ಣನಾನಿಷ್ಠ ನಿರೂಪಣಾ ವಿಧಾನದ ವಾಸ್ತವಿಕತೆಯ ಸ್ಪರ್ಶವನ್ನೂ ಪಡೆದುಕೊಂಡಿರುವದು ಅದರ ಮತ್ತೊಂದು ಸಾಧನೆ' ಎಂದಿರುವದು ಕಣವಿ ಕಾವ್ಯದ ಅಭಿವ್ಯಕ್ತಿ ವಿಧಾನದ ಸ್ವರೂಪವನ್ನು ಸೂಚಿಸುತ್ತದೆ.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ಚೆನ್ನವೀರ ಕಣವಿ ಹೊಂಬೆಳಕಿನ ಹೊಳಹಿನಲ್ಲಿ ಎಂಬ ಲೇಖನದಲ್ಲಿ 'ಕನ್ನಡ ಭಾಷೆಯ ಲಯ ಸಂಪತ್ತನ್ನು ಕಣವಿಯವರು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಅವರ ಸಾನೆಟ್‌ಗಳಂತೂ ಕಣವಿಯವರ ಕಲೆಗಾರಿಕೆಯ ಶ್ರೇಷ್ಠ ಮಾದರಿಗಳು. ವರ್ಣನೆಯನ್ನು ತಮ್ಮ ಕಾವ್ಯದ ಪ್ರಮುಖ ಉಪಕರಣವನ್ನಾಗಿ ಮಾಡಿಕೊಂಡಿರುವ ಕಣವಿಯವರು ಕಟ್ಟಿಕೊಡುವ ಶಬ್ದಚಿತ್ರಗಳು ಮೇಲು ದರ್ಜೆಯವು. ಕಣವಿಯವರ ಕಾವ್ಯದ ಓದು ಮನಸ್ಸಿಗೆ ಉಲ್ಲಾಸ ನೀಡುತ್ತದೆ; ಹೃದಯವನ್ನು ಬೆಚ್ಚಗಾಗಿಸುತ್ತದೆ. ಬದುಕಿನ ಬಗೆಗಿನ ನಮ್ಮ ಅರಿವಿಗೆ ಹೊಸ ಬೆಳಕು ನೀಡುತ್ತದೆ' ಎಂದಿದ್ದಾರೆ.

ಕಣವಿಯವರ ಕಾವ್ಯ, ವಿಮರ್ಶಕರ ವಿಭಿನ್ನವಾದ ಸಂವಾದಗಳಿಗೆ ಆಸ್ಪದವನ್ನು ನೀಡುತ್ತದೆ. ನಿರಂತರವಾಗಿ ಹರಿಯುವ ಅವರ ಕಾವ್ಯ ಅಂದಂದಿನ ವಿಮರ್ಶಕರ ಗಮನ ಸೆಳೆಯುತ್ತಲೇ ಬಂದಿದೆ. ಅರ್ಧಶತಮಾನದ ಕಾಲಾವಧಿಯಲ್ಲಿ ಆಧುನಿಕ ಕಾವ್ಯ ವಿವಿಧ ಮಜಲುಗಳನ್ನು ಕಂಡಿದ್ದರೂ ಕಣವಿಯವರು ಆ ಮಜಲಿನ ಅಂತಸ್ಸತ್ವವನ್ನು ಅರಿತುಕೊಂಡು, ಯಾವುದನ್ನೂ ತಿರಸ್ಕರಿಸದೆ ತಮ್ಮದೇ ಆದ ದಾರಿಯಲ್ಲಿ ನಡೆದಿದ್ದು ಕಂಡುಬರುತ್ತದೆ. ಅವರೇ ಹೇಳಿದಂತೆ, 'ಕಾಲ ನಿಲ್ಲುವುದಿಲ್ಲ' ಸದಾ ಚಲಿಸುವುದೇ ಅದರ ಗುಣ. ಕಾಲದೊಂದಿಗೆ ಸಾರ್ಥಕವಾಗಿ ಸ್ಪಂದಿಸುವುದು ಅಷ್ಟು ಸುಲಭವಾದದ್ದೇನಲ್ಲ. ತಲೆಮಾರಿನಿಂದ ತಲೆಮಾರಿಗೆ ಕಂದಕಗಳು ನಿರ್ಮಾಣವಾಗುತ್ತಿರುವುದನ್ನೂ ನಾವು ಕಾಣುತ್ತೇವೆ. ಕಂದಕಗಳಿಗೆ ಸೇತುವೆ ನಿರ್ಮಿಸುವವರು ಕೆಲವರು ಮಾತ್ರ. ಆ ಕೆಲವರಲ್ಲಿ ಕವಿ ಕಣವಿಯವರೂ ಒಬ್ಬರು. ಯಾಕೆಂದರೆ ಅವರದು 'ಚಿರಂತನ ದಾಹ'. ತೀವ್ರ

ಸಂವೇದನಾಶೀಲರಾದ ಅವರು ಭಾರತ ಸ್ವಾತಂತ್ರ್ಯದ ಸಂದರ್ಭದಲ್ಲಿ ಉಲ್ಲಸಿತರಾಗಿ ಹಾಡಿದವರು, ಇತ್ತೀಚಿನ ಅಯೋಧ್ಯಾ ಘಟನೆಯ ಬಗ್ಗೆ ಮಮ್ಮಲ ಮರುಗಿದವರು. 'ಹೂವು ಹೊರಳುವವು ಸೂರ್ಯನ ಕಡೆಗೆ ನಮ್ಮ ದಾರಿ ಬರಿ ಚಂದ್ರನವರೆಗೆ' ಎಂದು ನಿಸರ್ಗ ಪ್ರೀತಿಯನ್ನೂ ಮಾನವನ ವೈಜ್ಞಾನಿಕ ಬೆಳವಣಿಗೆಯನ್ನೂ ಒಟ್ಟಿಗೆ ಗುರುತಿಸುವ ರಸಜ್ಞರೂ ಅಹುದು, ವಿಚಾರವಾದಿಗಳೂ ಅಹುದು. ಕಣವಿಯವರೇ ಒಂದೆಡೆಯಲ್ಲಿ ಹೇಳಿದಂತೆ 'ಬರೆದ ಕವಿತೆಗಿಂತ ಬರೆಯದ ಕವಿತೆಯ ಭಾರ ಹೆಚ್ಚು'. ಕವಿತೆಯ ಭಾರ ಹೊತ್ತಿರುವ ಈ ಕವಿ ತಮ್ಮ ಕಾವ್ಯದ ಸಾಧನೆಯನ್ನು ಅನುಸ್ಯೂತವಾಗಿ ಮುಂದುವರಿಸುವುದು ಕನ್ನಡದ ಭಾಗ್ಯ, ಕನ್ನಡಿಗರ ಭಾಗ್ಯವೆಂದೇ ಹೇಳಬೇಕು.

ಕಣವಿಯವರ ವಿಮರ್ಶನ ಪ್ರತಿಭೆಯ ವಿಶಿಷ್ಟತೆಯನ್ನು ಗುರುತಿಸಿದ ಅವರ ಗುರುಗಳಾಗಿದ್ದ ಸ. ಸ. ಮಾಳವಾಡ ಅವರು 'ಸಾಹಿತ್ಯ ಚಿಂತನ'ಕ್ಕೆ ಬರೆದ ಮುನ್ನುಡಿಯಲ್ಲಿ 'ರೊಮ್ಯಾಂಟಿಕ್ ಮತ್ತು ನವ್ಯ ಸಂಪ್ರದಾಯಗಳ ಮಧ್ಯದ ಒಂದು ಸೇತುವೆ ಆಗಿದ್ದಾರೆ ಕವಿ ಕಣವಿ. ಅಂತೆಯೇ ಇವರು ಎರಡೂ ಸಂಪ್ರದಾಯಗಳ ಹಿನ್ನೆಲೆಯನ್ನು ಸಾರ್ಥಕತೆಯನ್ನು, ಲೋಪದೋಷಗಳನ್ನು ಸ್ಫುಟವಾಗಿ ನಿರೂಪಿಸಿದ್ದಾರೆ. ರೊಮ್ಯಾಂಟಿಕ್ ಸಂಪ್ರದಾಯದ ಕವಿಗಳಿಗೆ ಜೀವನಾನುಭವದ, ವ್ಯಾಸಂಗದ ಬಲವಿತ್ತು. ನವ್ಯ ಸಂಪ್ರದಾಯದ ಅನೇಕರಿಗೆ ಪ್ರಯೋಗಪ್ರಿಯತೆಯ ಉತ್ಸಾಹ ಮಾತ್ರವಿದೆ. ಅವೆರಡರ ಸಮನ್ವಯದಿಂದ ನಮ್ಮ ಕಾವ್ಯ ವಾಹಿನಿ ಮುಂದೆ ಸಾಗಬೇಕಾಗಿದೆ. ಈ ಮಾತನ್ನು ಕಣವಿಯವರು ಅರಿತುಕೊಂಡಿದ್ದಾರೆ' ಎಂದು ಹೇಳಿರುವದು ಅರ್ಥಪೂರ್ಣವಾಗಿದೆ. ಕಣವಿಯವರು ನವೋದಯದ ಪರವಾಗಿಯಾಗಲಿ, ನವ್ಯದ ಪರವಾಗಿಯಾಗಲಿ ನಿಲ್ಲಲಿಲ್ಲ. ಅವರು ಸಾಹಿತ್ಯವನ್ನು ತೆರೆದ ಮನಸ್ಸಿನಿಂದ ಪರಿಭಾವಿಸಿದರು.

ಕಣವಿಯವರು ತಮ್ಮ ನಂತರದ ತಲೆಮಾರಿನವರಿಗೆ ಇಪ್ಪತ್ತೊಂದನೆಯ ಶತಮಾನದ ಕಿರಿಯರಿಗೆ ಒಂದು ದೀಪಸ್ತಂಭದಂತೆ ಇದ್ದಾರೆ. ಅವರು ಕನ್ನಡ ಕಾವ್ಯಕ್ಷೇತ್ರಕ್ಕೆ, ಗಾಢವಾದ ಸಾಂಸ್ಕೃತಿಕ ಪ್ರಜ್ಞೆಗೆ ಒಂದು ಮಾದರಿ. ವಿಮರ್ಶಾಕ್ಷೇತ್ರಕ್ಕೆ ಮಾನವೀಯ ಸಹೃದಯತ್ವಕ್ಕೆ, ಸ್ನೇಹ ಸಂಬಂಧಕ್ಕೆ ಮಾದರಿಯಾಗಿದ್ದಾರೆ ಎಂದು ಡಾ. ಗುರುಲಿಂಗ ಕಾಪಸೆ ಹೇಳಿದ್ದಾರೆ.

ಚೆನ್ನವೀರ ಕಣವಿಯವರು ಸೌಜನ್ಯದ ಕವಿ ಎಂದೇ ಹೆಸರಾದವರು. ಅವರು ಬದುಕಿದ್ದೂ, ಬರೆದದ್ದೂ ಒಂದೇ ಸಮತೋಲನದಲ್ಲಿ. ಕಾವ್ಯದಲ್ಲಿ ಹೇಗೋ ಗದ್ಯದಲ್ಲಿ ಅವರದು ಇದೇ ನಿಲುವು. ಸಾಹಿತ್ಯಗಳ ಬಗ್ಗೆ ಸಾಹಿತ್ಯ ಕೃತಿಗಳ ಬಗ್ಗೆ ಇನ್ನಷ್ಟು ಪ್ರೀತಿ, ಇನ್ನಷ್ಟು ಅರಿವು ಉಂಟು ಮಾಡುವ ಅವರ ಗದ್ಯ ಬರಹಗಳ ಹಿಂದೆ ಮಾಗಿದ ವ್ಯಕ್ತಿತ್ವವಿದೆ ಎಂದು ಡಾ. ಗಿರಡ್ಡಿಯವರು ಹೇಳಿರುವದು ಯಥಾರ್ಥವಾಗಿದೆ.

'ಕಣವಿಯವರ ಬಹುಪಾಲು ವಿಮರ್ಶಾ ಲೇಖನಗಳು, ಅಧ್ಯಯನ ಲಬ್ಧವಾದ ತಾತ್ವಿಕ ಹಿನ್ನೆಲೆ, ಕವಿಹೃದಯ ಲಬ್ಧವಾದ ರಸಗ್ರಹಣ ಶಕ್ತಿ ಮತ್ತು ಸಮಕಾಲೀನ ವಿಮರ್ಶೆಯಿಂದ ಲಬ್ಧವಾದ ಭಾಷಾಶೈಲಿಗಳನ್ನು ಒಳಗೊಂಡಿರುತ್ತದೆ. ನಿಷ್ಪಕ್ಷಪಾತ ಹಾಗೂ ವ್ಯಕ್ತಿನಿಷ್ಠವಲ್ಲದ ಕಾಳಜಿಗಳು ಅಲ್ಲಿ ಎದ್ದು ಕಾಣುವ ಗುಣಗಳು ಎಂದು ಡಾ. ಎಚ್. ಎಸ್. ರಾಘವೇಂದ್ರರಾವ್ ಹೇಳುತ್ತ ಕಣವಿಯವರ ವಿಮರ್ಶಾ ನಿಲುವುಗಳನ್ನು ಚರ್ಚಿಸಿದ್ದಾರೆ. ಸಾಹಿತ್ಯ ದರ್ಶನ ಮತ್ತು ಕೃತಿಯ ಆಕೃತಿಯನ್ನು ನೋಡಿ ಕಣವಿ ತಮ್ಮ ವಿಮರ್ಶಾ ನೋಟಗಳನ್ನು ರೂಪಿಸಿದರು.

ಹನ್ನೆರಡನೆಯ ಶತಮಾನದ ಬಸವಣ್ಣನವರಿಂದ ಹಿಡಿದು ಇತ್ತೀಚಿನ ಚೆನ್ನಣ್ಣ ವಾಲೀಕಾರರ 'ವ್ಯೋಮಾವ್ಯೋಮ'ದ ಬರೆದ ಕಣವಿಯವರ ಗದ್ಯ ಸಾಹಿತ್ಯದ ಹರಹು ಅತ್ಯಂತ ವಿಶಾಲವಾದದ್ದು. ಅದರ ಮುಖ್ಯ ಭಾಗ ಕಾವ್ಯ ವಿಮರ್ಶೆಯೇ ಆಗಿರುವದು ಅವರ ತೀವ್ರವಾದ ಕಾವ್ಯಾಸಕ್ತಿಯ ದ್ಯೋತಕವಾಗಿದೆ.

ಕಣವಿಯವರು ಯಾವುದೇ ಸಾಹಿತ್ಯ, ಸಾಹಿತಿ, ವಾದಗಳ ಪರವಾಗಿ ನಿಂತು ಯಾವುದೇ ಸಂಘರ್ಷಕ್ಕಿಳಿಯಲಿಲ್ಲ. ಅವರು ತೊಂಬತ್ತು ವರ್ಷಗಳ ಬಾಳಿನುದ್ದಕ್ಕೂ ಕನ್ನಡದ ಶಕ್ತಿಯನ್ನು ಮುನ್ನಡೆಸುವದಕ್ಕೆ ಮುಂದಾದರು. ಕನ್ನಡಪರ ಏಕೀಕರಣ ಚಳುವಳಿ, ಗೋಕಾಕ ಚಳುವಳಿಗಳಲ್ಲಿ ಧುಮುಕಿದರು. ಶಿಕ್ಷಣದಲ್ಲಿ ಕನ್ನಡದ ಸ್ಥಾನಮಾನಗಳಿಗಾಗಿ ನಡೆದ ಹೋರಾಟಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಚಳುವಳಿಗಳ ಜೊತೆ ಇರುತ್ತಲೇ ಚಳುವಳಿಯನ್ನು ಮೀರುವ ಕೆಲಸವನ್ನು ಕಣವಿಯವರು ಮಾಡಿದರು.

ಕಣವಿಯವರು ದಲಿತ ಬಂಡಾಯ ಚಳುವಳಿಯಲ್ಲಿ ಸ್ತ್ರೀಪರವಾದ ಆಂದೋಳನಗಳಲ್ಲಿಯೂ ಮೌನ ಪಾತ್ರ ತಾಳಲಿಲ್ಲ. ದಲಿತ ಬಂಡಾಯ ಸಾಹಿತ್ಯ ಕೃತಿಗಳನ್ನೂ, ಲೇಖಕಿಯರ ಕೃತಿಗಳನ್ನೂ ಸಮರ್ಥಿಸಿ ಅವರನ್ನು ಉತ್ತೇಜಿಸಿದರು.

ಸಾಂಸ್ಕೃತಿಕವಾದ ರಾಜಕಾರಣದಿಂದಲೂ ದೂರವಿದ್ದುಕೊಂಡು ಜಾತ್ಯತೀತ ಮೌಲ್ಯಗಳನ್ನು ಸಾಹಿತ್ಯ ಮತ್ತು ಬದುಕಿನಲ್ಲಿ ಅಳವಡಿಸಿಕೊಂಡು ಕಣವಿಯವರು ಹೆಜ್ಜೆಗಳನ್ನು ಹಾಕಿ, ಕಿರಿಯರಿಗೆ ಮಾದರಿಯಾಗಿದ್ದಾರೆ. ಸಾಹಿತ್ಯ ವಲಯದಲ್ಲಿ 'ಅಜಾತ ಶತ್ರು'ವಾಗಿರುವ ಕಣವಿಯವರು ಸಂಘಟನೆ, ಸಂವಾದ, ಬೌದ್ಧಿಕ ಪ್ರಾಮಾಣಿಕತೆಯಿಂದ ಅವಿನಾಭಾವ ಸಂಬಂಧವನ್ನು ನಿರ್ಮಿಸಿದ್ದಾರೆ. ಕಣವಿಯವರ ಚೇತೋಹಾರಿಯಾದ ಕವಿ ವ್ಯಕ್ತಿತ್ವವನ್ನು ಡಾ. ಎಚ್. ಎಸ್. ವೆಂಕಟೇಶಮೂರ್ತಿ ಅವರು 'ಸುನೀತಭಾವ'ದಲ್ಲಿ ಹೀಗೆ ಕಲಾತ್ಮಕವಾಗಿ ಸೆರೆಹಿಡಿದಿದ್ದಾರೆ.

> **ಎತ್ತರಗಳಿರದೆ ಕಣಿವೆಯಾಗುವುದು ಅಶಕ್ಯ. ಒಂದಲ್ಲ**
> **ಎರಡೆತ್ತರ ಹತ್ತಿರ ಬಂದಾಗ ಒಂದು ಆಳದ ಕಣಿವೆ.**
> **ಧಾರಿಣಿಯ ಜೋಡಿಗೈ ಮೊರೆಯೇ ಒಂದು ಅದ್ಭುತ**
> **ಆಳಮಾನ. ನನ್ನೆದೆಯಾಳದಲ್ಲಿ ಕಾರುಣ್ಯದ ತಿಳಿ ಝರಿ**
> **ಯೊಂದು ಬಿರುಬೇಸಗೆಯಲ್ಲೂ ಜುಳುಜುಳು ಹರಿಯಲಿ**
> **ಸದಾ ಎಂದು ಮುಗಿಲಿಗೊಡ್ಡಿದ ಹೆತ್ತಮ್ಮನ ಎತ್ತಿದ ಕೈ**
> **ಜೋಡಣೆ ನಮ್ಮ ಕಣವಿ. ಮರಗಳಲ್ಲಿ ಬೆರಳು. ಹೂ**
> **ವಲ್ಲಿ ಮೆಲುನಗೆ. ಕಣ್ಣಲ್ಲಿ ಅಕ್ಕತಂಗಿಯರ ಹೊಂಡ.**
> **ಮಂದಮಾರುತ ಸುಳಿದಾಗ ಯದುಗಿರಿ ಕಣಿವೆಯಲಿ**
> **ಮೌನವರಳಿದ್ದ ಬಲ್ಲೆವು ನಾವು. ಹಾಗೇ ಗರ್ಭ ಗುಡಿ**
> **ಯಲ್ಲಿ ಕಾರುಣ್ಯ ಕುಡಿ ಹತ್ತಿದ್ದ. ತೊಟ್ಟಿಲ ಮಡು ಪಕ್ಕ**
> **ಕೂತು ನೀವೂ, ನಿಮ್ಮ ಜೀವದ ಗೆಳೆಯ ಸಕ್ಕರೆಪೊಂಗಲ್ಲ**
> **ಸವಿದದ್ದೊಂದು ಸಿಹಿನೆನಪು. ಅಲ್ಲೇ ನಿಮ್ಮ ನಗೆಗಣ್ಣು**
> **ತುಪ್ಪತಪ್ತ ತೇಜಸ್ಸ ಪೊಂಗಲ್ಲ ಮೂಲದಲಿ ಕಂಡದ್ದು !**

ಚೆನ್ನವೀರ ಕಣವಿ ಬದುಕು – ಬರೆಹ

ಜನನ : ಹೊಂಬಳ, ತಾ. ಗದಗ, ಜಿ. ಗದಗ. ೨೮ ಜೂನ್ ೧೯೨೮

ಶಿಕ್ಷಣ : ಎಂ.ಎ.ಕನ್ನಡ (ಕರ್ನಾಟಕ ವಿಶ್ವವಿದ್ಯಾಲಯ) ೧೯೫೨

ವೃತ್ತಿ : ಕಾರ್ಯದರ್ಶಿ : ವ್ಯಾಸಂಗ ವಿಸ್ತರಣ– ಪ್ರಕಟನ ವಿಭಾಗ ಕ.ವಿ.ವಿ. ೧೯೫೨

ನಿರ್ದೇಶಕ : ಪ್ರಸಾರಾಂಗ ಕ.ವಿ.ವಿ. ೧೯೫೬

ಗೌರವ ಸಂದರ್ಶಕ ಪ್ರಾಧ್ಯಾಪಕ: ಕನ್ನಡ ಅಧ್ಯಯನ ಪೀಠ ಕ.ವಿ.ವಿ. ೧೯೮೨–೮೩

ಪ್ರಸಾರಾಂಗದಿಂದ ನಿವೃತ್ತಿ ೧೯೮೩

ಕೃತಿಗಳು

ಕಾವ್ಯ

ಕಾವ್ಯಾಕ್ಷಿ : ಕಲ್ಪನಾ ಗ್ರಂಥಮಾಲೆ, ಧಾರವಾಡ ೧೯೪೯

ಭಾವಜೀವಿ : ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ ೧೯೫೦

ಆಕಾಶಬುಟ್ಟಿ : ಪ್ರತಿಭಾ ಗ್ರಂಥಮಾಲೆ, ಧಾರವಾಡ ೧೯೫೩

ಮಧುಚಂದ್ರ : ಶಾರದಾ ಪ್ರಕಟನಾಲಯ, ಬೆಂಗಳೂರು ೧೯೫೪

ದೀಪಧಾರಿ : ಸುರುಚಿ ಪ್ರಕಾಶನ, ಮೈಸೂರು ೧೯೫೬

ಮಣ್ಣಿನ ಮೆರವಣಿಗೆ : ಶಾರದಾ ಪ್ರಕಟನಾಲಯ, ಬೆಂಗಳೂರು ೧೯೬೦

ನೆಲ–ಮುಗಿಲು : ಶಾರದಾ ಮಂದಿರ, ಮೈಸೂರು ೧೯೬೫, ೧೯೭೧

ಎರಡು ದಡ : ಗೀತಾ ಬುಕ್ ಹೌಸ್, ಮೈಸೂರು ೧೯೬೯

ನಗರದಲ್ಲಿ ನೆರಳು : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೧೯೭೪

ಚಿರಂತನ ದಾಹ (ಆಯ್ದ ಕವನಗಳು) : ವಿಶ್ವ ಕನ್ನಡ ಸಮ್ಮೇಳನ, ಮೈಸೂರು ೧೯೮೯

ಜೀವಧ್ವನಿ : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೮೦, ೧೯೮೩

ಹಕ್ಕಿಪುಚ್ಚ : ಭಾರತೀ ಸಾಹಿತ್ಯ ಭಂಡಾರ, ವಿಜಾಪುರ ೧೯೮೫

ಕಾರ್ತಿಕದ ಮೋಡ : ಶಾರದಾ ಪ್ರಕಟನಾಲಯ, ಬೆಂಗಳೂರು ೧೯೮೬

ಹೂವು ಹೊರಳುವವು ಸೂರ್ಯನ ಕಡೆಗೆ : ಐ.ಬಿ.ಎಚ್.ಪ್ರಕಾಶನ, ಬೆಂಗಳೂರು (ವಿವಿಧ ಪ್ರಕಾಶಕರಿಂದ ೫ ಆವೃತ್ತಿಗಳು) ೧೯೮೭

ಹೊಂಬೆಳಕು : (ಮೊದಲ ೧೨ ಸಂಗ್ರಹಗಳ ಸಂಪುಟ) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೮೯

ಜೀನಿಯಾ : ಸ್ನೇಹ ಪ್ರಕಾಶನ, ಬೆಂಗಳೂರು ೧೯೯೦
ಶಿಶಿರದಲ್ಲಿ ಬಂದ ಸ್ನೇಹಿತ : ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು ೧೯೯೪
ಕಣವಿ ಸಮಗ್ರ ಕಾವ್ಯ : ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ. ೧೯೯೬
ಬರೆದು ತೀರದ ಬದುಕು : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೨೦೦೦
ಸುನೀತ ಸಂಪದ : ಲೋಹಿಯಾ ಪ್ರಕಾಶನ ಬಳ್ಳಾರಿ. ೨೦೦೨
ಕಣವಿ ಸಮಗ್ರ ಕಾವ್ಯ : ಸಂವಹನ ಪ್ರಕಾಶನ, ಮೈಸೂರು ೨೦೦೩
ಚೆಂಬೆಳಕು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨೦೦೫
ಚಿಣ್ಣರ ಲೋಕವ ತೆರೆಯೋಣ : (ಮಕ್ಕಳ ಪದ್ಯಗಳು) ೨೦೦೬,
ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ ೨೦೦೮, ೨೦೧೪
ಮಾನಸ ಪೂಜೆ : ಸಾಹಿತ್ಯ ಸಿರಿ, ಸಿರಿಗೆರೆ ೨೦೦೬
ನೀವೇ ಪ್ರಮಾಣು : ಸುಮುಖ ಪ್ರಕಾಶನ, ಬೆಂಗಳೂರು ೨೦೦೭
ಕಣವಿ ಚುಟುಕುಗಳು : ವೈದ್ಯವಾರ್ತಾ ಪ್ರಕಾಶನ, ಮೈಸೂರು ೨೦೦೯
ಜೀವ – ಜೀವಾಳ : ಸಪ್ನ ಬುಕ್ ಹೌಸ್, ಬೆಂಗಳೂರು ೨೦೧೧
(ಆಯ್ದ ಕವನಗಳು)
ಭೂಮಿ – ಬದುಕು : ಸಪ್ನ ಬುಕ್ ಹೌಸ್, ಬೆಂಗಳೂರು ೨೦೧೨
ಕಣವಿ ಕಾವ್ಯ ಭಂಡಾರ : (ಎರಡು ಸಂಪುಟಗಳು)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೯

ಗದ್ಯ
ವಿಮರ್ಶೆ – ಪ್ರಬಂಧ ಇತ್ಯಾದಿ

ಸಾಹಿತ್ಯ ಚಿಂತನ : ಮಿಂಚಿನಬಳ್ಳಿ ಗ್ರಂಥಮಾಲೆ, ಧಾರವಾಡ ೧೯೬೬
ಕಾವ್ಯಾನುಸಂಧಾನ : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೧೯೭೧
ಸಮಾಹಿತ : ಭಾಂಡಗೆ ಪ್ರಕಾಶನ, ಗದಗ ೧೯೭೭
ಮಧುರಚೆನ್ನ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೪
ಸಮತೋಲನ : ಮಿಂಚಿನಬಳ್ಳಿ ಗ್ರಂಥಮಾಲೆ, ಹುಬ್ಬಳ್ಳಿ ೧೯೮೯
ವಚನಾಂತರಂಗ : ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ ೧೯೯೯
ಶುಭನುಡಿಯೆ ಹಕ್ಕಿ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ ೨೦೦೦
ಸಾಹಿತ್ಯ ಸಮಾಹಿತ : ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬
ಸದ್ಭಾವ : ಸಂವಹನ ಪ್ರಕಾಶನ, ಮೈಸೂರು ೨೦೦೮
ಕಣವಿ ಸಮಗ್ರ ಗದ್ಯ : (ಎರಡು ಸಂಪುಟಗಳು)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೧೦
ಬೇಂದ್ರೆ ಕಾವ್ಯದ ಕುಹುಕ್ಕುಹೂ : ಡಾ. ದ. ರಾ. ಬೇಂದ್ರೆ
ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ. ೨೦೧೨

ಅವಿನಾಭಾವ : ಕನ್ನಡನಾಡು ಲೇಖಕರ ಮತ್ತು ಓದುಗರ
ಸಹಕಾರ ಸಂಘ ನಿಯಮಿತ, ಗುಲಬರ್ಗಾ ೨೦೧೪

ಸ್ಮೃತಿ ಸೌರಭ : ಮನೋಹರ ಗ್ರಂಥಮಾಲಾ, ಧಾರವಾಡ ೨೦೧೬

ಸಂಪಾದನೆ

ನವಿಲೂರು ಮನೆಯಿಂದ (ಇತರರೊಡನೆ) ೧೯೫೨

ನವ್ಯ ಧ್ವನಿ (ಇತರರೊಡನೆ) : ಸಮಾಜ ಪುಸ್ತಕಾಲಯ, ಧಾರವಾಡ ೧೯೫೬

ನೈವೇದ್ಯ : ಬಾಲ ಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ,
ಧಾರವಾಡ ೧೯೬೦

ನಮ್ಮೆಲ್ಲರ ನೆಹರು (ಇತರರೊಡನೆ) ಭಾವಸಂಗಮ,
ಹಿಂದಿ ಪ್ರಚಾರ ಸಭಾ ಧಾರವಾಡ ೧೯೬೪

ಕನ್ನಡದ ಕಾಲು ಶತಮಾನ (ಇತರರೊಡನೆ) : ಮಿಂಚಿನಬಳ್ಳಿ ಗ್ರಂಥಮಾಲೆ,
ಧಾರವಾಡ ೧೯೬೫

ಸಿದ್ಧಿ ವಿನಾಯಕ ಮೋದಕ : ಗೋಕಾಕ ಷಷ್ಠ್ಯಬ್ದಿಪೂರ್ತಿ ಅಭಿನಂದನ ಸಮಿತಿ,
ಧಾರವಾಡ ೧೯೬೯

ಜೀವನಸಿದ್ಧಿ (ಇತರರೊಡನೆ) : ಎಸ್. ಶೆಟ್ಟರ, ಕೊಪ್ಪಳ ೧೯೭೧

ಆಧುನಿಕ ಕನ್ನಡ ಕಾವ್ಯ (ಇತರರೊಡನೆ) Modern Kannada Poetry
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೭

ಕವಿತೆಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೦

ಸುವರ್ಣ ಸಂಪುಟ (ಇತರರೊಡನೆ) : ಮೈಸೂರು ವಿಶ್ವವಿದ್ಯಾನಿಲಯ ೧೯೮೦

ರತ್ನಸಂಪುಟ (ಇತರರೊಡನೆ) : ಮೈಸೂರು ವಿಶ್ವವಿದ್ಯಾನಿಲಯ ೧೯೮೫

ದಶವಾರ್ಷಿಕ ಕವಿತೆಗಳು (ಇತರರೊಡನೆ) :
ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೮೫

ಎರಡು ದಶಕದ ಕವಿತೆಗಳು (ಇತರರೊಡನೆ) :
ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ

ಬಾಬಾ ಫರೀದ್ : (ಭಾಷಾಂತರ) ಕೇಂದ್ರ ಸಾಹಿತ್ಯ ಅಕಾಡೆಮಿ,
ನವದೆಹಲಿ ೧೯೯೩

ಅನುಭಾವ ಪಥ (ಇತರರೊಡನೆ) : ಉದ್ದಾನ ಶ್ರೀ ಪ್ರಕಾಶನ,
ಸಿದ್ಧಗಂಗಾಮಠ, ತುಮಕೂರು ೨೦೧೦

ಪ್ರಶಸ್ತಿ / ಬಹುಮಾನ

* ಮುಂಬಯಿ ರಾಜ್ಯದ ಪ್ರಥಮ ಬಹುಮಾನ :
'ಆಕಾಶಬುಟ್ಟಿ' ಕವನ ಸಂಕಲನಕ್ಕೆ, ೧೯೫೫

* ವಿಶಾಲ ಮೈಸೂರು ರಾಜ್ಯ ಸಂಸ್ಕೃತಿ ಪ್ರಸಾರ ಇಲಾಖೆ ಬಹುಮಾನ : 'ದೀಪಧಾರಿ' ಕವನ ಸಂಕಲನಕ್ಕೆ ೧೯೫೭
* ವಿಶಾಲ ಮೈಸೂರು ರಾಜ್ಯ ಸಂಸ್ಕೃತಿ ಪ್ರಸಾರ ಇಲಾಖೆ ಬಹುಮಾನ : 'ನೆಲ-ಮುಗಿಲು' ಕವನ ಸಂಕಲನಕ್ಕೆ.
* ಜ.ಚ.ನಿ.ಯವರಿಂದ 'ಕವನ ಕಲಾರವಿ' ಪ್ರಶಸ್ತಿಯೊಂದಿಗೆ ಚಿನ್ನದ ಪದಕ, ೧೯೬೭
* ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : 'ಜೀವಧ್ವನಿ' ಕವನ ಸಂಕಲನಕ್ಕೆ ೧೯೮೨
* ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೫
* ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೮೯
* ಬೆಂಗಳೂರಿನ ಸಂಗೀತಗಂಗಾ ಸಂಸ್ಥೆಯಿಂದ 'ಸುನೀತ ಸಾಮ್ರಾಟ್' ಪ್ರಶಸ್ತಿ, ೧೯೯೬
* ಧಾರವಾಡ – ಹುಬ್ಬಳ್ಳಿ ಮಹಾನಗರ ಪಾಲಿಕೆಯಿಂದ ಪೌರ ಸನ್ಮಾನ, ೧೯೯೬
* ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಕೃತಿ ಇಲಾಖೆಯ ಎಮೆರಿಟಸ್ ಫೆಲೊಶಿಪ್ ೧೯೯೬ ರಿಂದ ೧೯೯೮
* ಸಂಕೇಶ್ವರ ನಾಗರಿಕರಿಂದ ಪೌರ ಸನ್ಮಾನ ೧೯೯೭
* ಎಸ್. ಆರ್. ಪಾಟೀಲ (ಗುಲ್ಬರ್ಗ) ಪ್ರತಿಷ್ಠಾನ ಪ್ರಶಸ್ತಿ, ೧೯೯೭
* ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಬೆಂಗಳೂರು, 'ಸಾಹಿತ್ಯ ಚಿಂತಾಮಣಿ' ಪ್ರಶಸ್ತಿ ೧೯೯೯
* ಇಳಕಲ್ ಚಿತ್ತರಗಿ ವಿಜಯಮಹಾಂತೇಶ ಮಠದ 'ಬಸವಕಾರುಣ್ಯ ಪ್ರಶಸ್ತಿ' ೧೯೯೬
* ಕರ್ನಾಟಕ ಸರಕಾರದ 'ಪಂಪ ಪ್ರಶಸ್ತಿ' ಬನವಾಸಿ, ೧೯೯೯
* ಹಂಪಿ ಕನ್ನಡ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ 'ನಾಡೋಜ' ೨೦೦೨
* ಡಾ. ಮಲ್ಲಿಕಾರ್ಜುನ ಮನಸೂರ ಪ್ರತಿಷ್ಠಾನ (ರಾಯಚೂರು) ಪ್ರಶಸ್ತಿ. ೨೦೦೪
* ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ. ೨೦೦೪
* ಬಸವರಾಜ ಮನಸೂರ್ ಪ್ರಶಸ್ತಿ, ಧಾರವಾಡ ೨೦೦೬
* ಭಾರತೀಯ ಲಲಿತಕಲಾ ಸಂಸ್ಥೆ, ಬೆಂಗಳೂರು 'ಕರ್ನಾಟಕ ಕವಿರತ್ನ ಪ್ರಶಸ್ತಿ' ೨೦೦೬
* ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿ ಮಂಗಳೂರು ೨೦೦೭
* ಅ.ನ.ಕೃ. ನಿರ್ಮಾಣ ಪ್ರಶಸ್ತಿ ಬೆಂಗಳೂರು ೨೦೦೭

* ವಿಶ್ವವೀರಶೈವ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು
 'ಕಾಯಕ ಶ್ರೀ ಪ್ರಶಸ್ತಿ' ೨೦೦೮
* ಉಡುಪಿ ಪೇಜಾವರ ಮಠದಿಂದ 'ಶ್ರೀಕೃಷ್ಣ ಪ್ರಶಸ್ತಿ'
* ಯಕ್ಸಂಬಾ ಕನ್ನಡ ಬಳಗದಿಂದ 'ಕನ್ನಡ ಕುಲ ತಿಲಕ' ಪ್ರಶಸ್ತಿ
* ಸಿರಿಗನ್ನಡ ರಾಷ್ಟ್ರೀಯ ರತ್ನ ಪ್ರಶಸ್ತಿ, ಬೆಳಗಾವಿ ೨೦೧೦
* ಬೇಂದ್ರೆ ರಾಷ್ಟ್ರೀಯ ಕಾವ್ಯ ಪ್ರಶಸ್ತಿ, ಧಾರವಾಡ ೨೦೧೨
* ಬಸವ ವೇದಿಕೆ, ಬೆಂಗಳೂರು : 'ಬಸವ ಶ್ರೀ' ಪ್ರಶಸ್ತಿ, ೨೦೧೩
* ಮೃತ್ಯುಂಜಯ –ಮಹಾಂತ ಪ್ರಶಸ್ತಿ : ಮುರುಘಾಮಠ ಧಾರವಾಡ ೨೦೧೩
* ದೂರದರ್ಶನ 'ಚಂದನ ಪ್ರಶಸ್ತಿ' ಬೆಂಗಳೂರು ೨೦೧೪
* ವಿ.ಕೃ. ಗೋಕಾಕ ಪ್ರಶಸ್ತಿ, ಬೆಂಗಳೂರು ೨೦೧೪
* ಆಳ್ವಾಸ ನುಡಿಸಿರಿ ದಶಮಾನೋತ್ಸವ ಸನ್ಮಾನ ೨೦೧೪
* ಸಿದ್ಧಗಂಗಾ ಶ್ರೀ ಪ್ರಶಸ್ತಿ : ತುಮಕೂರು ೨೦೧೮
* ಬಂಗಾರಪ್ಪ ಸಾಹಿತ್ಯ ಪ್ರಶಸ್ತಿ, ಬೆಂಗಳೂರು ೨೦೧೮
* ಕೆ. ಎಸ್. ಎನ್. ಟ್ರಸ್ಟ ಕಾವ್ಯ ಪ್ರಶಸ್ತಿ ೨೦೧೮
* ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ : ಕಾವ್ಯ ಪ್ರಶಸ್ತಿ ೨೦೧೯
* ನೃಪತುಂಗ ಪ್ರಶಸ್ತಿ ೨೦೧೯

ಗೌರವ ಸದಸ್ಯತ್ವ – ಅಧ್ಯಕ್ಷತೆ ಇತ್ಯಾದಿ

* ಕೇಂದ್ರ ಸರಕಾರದ ಶಿಕ್ಷಣ ಇಲಾಖೆ :
 ಅಖಿಲ ಭಾರತ ಲೇಖಕರ ಪ್ರಥಮ ಶಿಬಿರ : ಕನ್ನಡದ ಪ್ರತಿನಿಧಿ
 (ಡಾ. ಡಿ.ಎಸ್. ಕರ್ಕಿಯವರೊಡನೆ
 ಕೃಷ್ಣರಾಜ ಸಾಗರ : ಬೃಂದಾವನ) ೧೯೬೨
* ಗಣರಾಜ್ಯೋತ್ಸವ ರಾಷ್ಟ್ರೀಯ ಕವಿ ಸಮ್ಮೇಳನ, ನವದೆಹಲಿ
 ಕನ್ನಡದ ಪ್ರತಿನಿಧಿ– ೧೯೬೫
* ಅ.ಭಾ. ಲೇಖಕರ ಸಮ್ಮೇಳನ ಎರ್ನಾಕುಲಂ :
 ಕ.ವಿ.ವಿ. ಪ್ರತಿನಿಧಿ ೧೯೬೫
* ಕೇಂದ್ರ ಸಾಹಿತ್ಯ / ಅಕಾಡೆಮಿ, ನವದೆಹಲಿ : ಜನರಲ್ ಕೌನ್ಸಿಲ್
 ಮತ್ತು ಕನ್ನಡ ಸಲಹಾ ಸಮಿತಿ ಸದಸ್ಯ ೧೯೬೯– ೧೯೭೯
* ನ್ಯಾಷನಲ್ ಬುಕ್ ಟ್ರಸ್ಟ್ : ಕನ್ನಡ ಸಲಹಾಸಮಿತಿ ಸದಸ್ಯ ೧೯೭೭–೧೯೮೦
* ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ೧೯೭೮–೧೯೮೪
* ಮೈಸೂರು ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ ೧೯೮೦
* ಗೋಕಾಕ ಚಳುವಳಿ ಅ.ಕ. ಕೇಂದ್ರ ಕ್ರಿಯಾ ಸಮಿತಿ.
 ಧಾರವಾಡ, ಉಪಾಧ್ಯಕ್ಷ ೧೯೮೨

* ಗೋಕಾಕ ಚಳುವಳಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ : ೧೯೮೩-೧೯೮೮
* ಗೌರವಾಧ್ಯಕ್ಷ, ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು ೧೯೮೫-೧೯೯೦
* ಮೈಸೂರು ಸಂಗೀತ ವಿದ್ಯಾಲಯ, ಮುಂಬಯಿ
  ಕಾವ್ಯೋತ್ಸವ ಉದ್ಘಾಟನೆ ೧೯೯೧
* ಪುಣೆ ಕರ್ನಾಟಕ ಸಂಘದ ನಾಡಹಬ್ಬ ಉದ್ಘಾಟನೆ ೧೯೯೧
* ಕನ್ನಡ ಸಾಹಿತ್ಯ ಪರಿಷತ್ತು, ಅಮೃತ ಮಹೋತ್ಸವ
  ಕವಿ ಸಮ್ಮೇಳನದ ಅಧ್ಯಕ್ಷತೆ ೧೯೯೧
* ಕನ್ನಡ ವಿಶ್ವವಿದ್ಯಾಲಯ, ಹಂಪಿ :
  ಕಾರ್ಯಕಾರಿ ಸಮಿತಿ ಸದಸ್ಯ ೧೯೯೧-೧೯೯೪
* ಪಂಪ ಪ್ರಶಸ್ತಿ ಆಯ್ಕೆ ಸಮಿತಿ : ಸದಸ್ಯ ೧೯೯೩
* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು : ಸದಸ್ಯ ೧೯೯೪-೧೯೯೬
* ಬೆಂಗಳೂರು ವಿಶ್ವವಿದ್ಯಾಲಯ : ಬೇಂದ್ರೆ ಕಾವ್ಯೋತ್ಸವ
  ಕವಿಗೋಷ್ಠಿ ಅಧ್ಯಕ್ಷತೆ : ೧೯೯೫
* ಕನ್ನಡ ರಾತ್ರಿ ಶಾಲೆಯ ಸುವರ್ಣ ಮಹೋತ್ಸವ
  ಕವಿ ಸಮ್ಮೇಳನದ ಅಧ್ಯಕ್ಷತೆ, ಮುಂಬಯಿ ೧೯೯೫
* ಹಂಪಿ ಉತ್ಸವ : ಕವಿ ಸಮ್ಮೇಳನ ಅಧ್ಯಕ್ಷತೆ : ೧೯೯೫
* ಬೇಂದ್ರೆ ಶತಮಾನೋತ್ಸವ ವಿಚಾರ ಸಂಕಿರಣ ಉದ್ಘಾಟನೆ
  ಆಕಾಶವಾಣಿ ಧಾರವಾಡ ೧೯೯೬
* ಸಂತ ಶಿಶುನಾಳ ಶರೀಫ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ : ೨೦೦೦
* ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ : ೨೦೦೦
* ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ೨೦೦೧-೨೦೦೪
* ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ವಜ್ರಮಹೋತ್ಸವದ ಉದ್ಘಾಟನೆ : ೧೯೯೨
* ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ, ಧಾರವಾಡ : ಅಧ್ಯಕ್ಷ ೧೯೯೧ ರಿಂದ
* ಅಖಿಲ ಭಾರತ ೬೫ ನೇ ಕನ್ನಡ ಸಾಹಿತ್ಯ ಸಮ್ಮೇಳನ (ಹಾಸನ) ಅಧ್ಯಕ್ಷತೆ : ೧೯೯೬
* ಬೆಳಗಾವಿಯ ನಾಡೋಜ ಪ್ರತಿಷ್ಠಾನದ ಉದ್ಘಾಟನೆ : ೨೦೦೩
* ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ
  ಶತಮಾನೋತ್ತರ ಸುವರ್ಣ ಮಹೋತ್ಸವ ಧಾರವಾಡ,
  ಕ್ರಿಯಾ ಯೋಜನಾ ಸಮಿತಿ ಅಧ್ಯಕ್ಷ ೨೦೦೫
* ಆಳ್ವಾಸ್ ನುಡಿಸಿರಿ ಸರ್ವಾಧ್ಯಕ್ಷತೆ, ಮೂಡಬಿದಿರೆ : ೨೦೦೮
* ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು : ಸದಸ್ಯ – ೨೦೦೬-೨೦೦೮
* ಡಾ. ವಿ. ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಹಾವೇರಿ, ಸದಸ್ಯ ೨೦೦೮ ರಿಂದ
* ವಿಶ್ವ ಕನ್ನಡ ಸಮ್ಮೇಳನ, ಬೆಳಗಾವಿ :
  ಸಿರಿಗನ್ನಡ ಕವಿಗೋಷ್ಠಿ ಅಧ್ಯಕ್ಷತೆ : ೨೦೧೧

* ಧಾರವಾಡ ಸಾಹಿತ್ಯ ಸಂಭ್ರಮ : ಗೌರವಾಧ್ಯಕ್ಷ ೨೦೧೩ ರಿಂದ
* ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು :
  ವಾರ್ಷಿಕ ಗೌರವ ಪ್ರಶಸ್ತಿ ಪ್ರದಾನ : ೨೦೧೫
* ಮೈಸೂರು ದಸರಾ ಉದ್ಘಾಟನೆ ೧ ಅಕ್ಟೋಬರ್ ೨೦೧೭

ವಿದೇಶ ಪ್ರವಾಸ ಇತ್ಯಾದಿ

* ಅಮೇರಿಕದ ಮೇರಿ ಲ್ಯಾಂಡಿನ ಬಾಲ್ಟಿಮೋರ : ೪ನೇ ವಿಶ್ವ ಕನ್ನಡ
  ಸಮ್ಮೇಳನ (ಅಕ್ಕ ಸಮ್ಮೇಳನ) ಕವಿಗೋಷ್ಠಿ ಅಧ್ಯಕ್ಷತೆ : ೨೦೦೭
* ದುಬೈ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ: ೨೦೧೦

ಭಾವಗೀತೆಗಳ ಧ್ವನಿಸುರುಳಿಗಳು

* ಜಿ.ವಿ. ಅತ್ರಿ ಸಂಗೀತ ನಿರ್ದೇಶನದ 'ಮಲ್ಲಿಗೆ ದಂಡೆ' ೧೯೯೨
* ಲಹರಿ ಕಂಪನಿಯ 'ಒಂದು ಮುಂಜಾವಿನಲಿ'
* ಜಯಶ್ರೀ ಅರವಿಂದ ಸಂಗೀತ ನಿರ್ದೇಶನದ 'ಮಧು ಕೋಗಿಲೆ'
* ಮೃತ್ಯುಂಜಯ ದೊಡವಾಡ ಸಂಗೀತ ನಿರ್ದೇಶನದ
  'ಬರುವುದೆಲ್ಲ ಬರಲಿಬಿಡು'

ಸಾಕ್ಷ್ಯಚಿತ್ರ

* ರಾಜ್ಯ ವಾರ್ತಾ ಇಲಾಖೆ, ಬೆಂಗಳೂರು
* ಭಾಷಾ ಸಂಸ್ಥೆ, ಮೈಸೂರು

ಚೆನ್ನವೀರ ಕಣವಿಯವರನ್ನು ಕುರಿತ ಗ್ರಂಥಗಳು

ಚೆನ್ನವೀರ ಕಣವಿ ಕಾವ್ಯ ದೃಷ್ಟಿ : ಗೌರೀಶ ಕಾಯ್ಕಿಣಿ,
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೧೯೭೮

ಚೆಂಬೆಳಕು (ಅಭಿನಂದನ ಗ್ರಂಥ) : ಸಂ : ಡಾ. ಗುರುಲಿಂಗ ಕಾಪಸೆ, ೧೯೮೦

ಚೆನ್ನವೀರ ಕಣವಿ ಹಾಗೂ ಜಿ.ಎಸ್. ಶಿವರುದ್ರಪ್ಪ ಅವರ ಕಾವ್ಯ :
ಸಂ : ಎ.ಬಿ. ಹಿರೇಮಠ ಅನ್ನದಾನೀಶ್ವರ ಕಾಲೇಜ, ಮುಂಡರಗಿ ೧೯೯೧

ಕಣವಿ ಸಾಹಿತ್ಯ ಸಂಪದ : ಸಂ : ನಿಜಲಿಂಗೇಶ್ವರ ಪ್ರಕಾಶನ ನಿಡಸೋಸಿ ೧೯೯೪

ಚೆನ್ನವೀರ ಕಣವಿ ಬದುಕು-ಬರಹ : ಕೀರ್ತಿನಾಥ ಕುರ್ತಕೋಟಿ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೭

ಕವಿ ಕಣವಿ : ಡಾ. ಜಿ. ಎಂ. ಹೆಗಡೆ
ನೆಲೆ ಪ್ರಕಾಶನ, ಸಿಂದಗಿ ೧೯೯೭, ೧೯೯೯, ೨೦೦೫

ಮುಗಿಯದ ಹಾಡು (ಕಾವ್ಯಾಭಿನಂದನ) : ಸಂ. ಡಾ. ಗುರುಲಿಂಗ ಕಾಪಸೆ
ರಾಘವೇಂದ್ರ ಪ್ರಕಾಶನ, ಅಂಕೋಲಾ ೧೯೯೮

ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ : (ಪಿಎಚ್.ಡಿ. ಪ್ರಬಂಧ) ೨೦೦೦
ಡಾ. ಗುಂಡಣ್ಣ ಕಲ್ಬುರ್ಗಿ: ಸೌಜನ್ಯ ಪ್ರಕಾಶನ, ಮೂಡಲಗಿ

ಬೆಳ್ಳಿ ತೇರಿನ ದಾರಿ (ವಿವಿಧ ವಿಮರ್ಶಕರು) :
ಸಂ: ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ :
ಅಂಕಿತ ಪ್ರಕಾಶನ, ಬೆಂಗಳೂರು ೨೦೦೩

ಕವಿ ಕಣವಿ ಸಂದರ್ಶನ : ಸಂ : ಡಾ. ಜಿ. ಎಂ. ಹೆಗಡೆ,
ಕನ್ನಡ ಜಾಗೃತಿ ಗ್ರಂಥ ಮಾಲೆ, ಚಿಂಚಣಿ ೨೦೦೩

ಕಣವಿಯವರ ಕವಿತೆ : ಹೊಸ ಓದು : ಸಂ. ಡಾ. ಗುರುಲಿಂಗ ಕಾಪಸೆ
ಡಾ. ಜಿ. ಎಂ. ಹೆಗಡೆ ಸುಮುಖ ಪ್ರಕಾಶನ, ಬೆಂಗಳೂರು ೨೦೦೮

ಕಣವಿಯವರ ಆಯ್ದ ಕವಿತೆಗಳ ಅನುಸಂಧಾನ :
ಸಂ : ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ :
ಸಪ್ನಾ ಬುಕ್ ಹೌಸ, ಬೆಂಗಳೂರು ೨೦೧೩

ಚೆನ್ನವೀರ ಕಣವಿ : ಸಂ : ಡಾ. ಗುರುಲಿಂಗ ಕಾಪಸೆ,
ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು ೨೦೦೯, ೨೦೧೨

ಚೆಂಬೆಳಕಿನ ಕವಿ ಚೆನ್ನವೀರ ಕಣವಿ : ಡಾ. ಜಿ. ಎಂ. ಹೆಗಡೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೨೦೧೭

ಚೆಂಬೆಳಕಿನ ಮಹಾಬೆಳಗು : ಡಾ. ಸಿ. ಕೆ. ನಾವಲಗಿ : ವಚನ
ಅಧ್ಯಯನ ಕೇಂದ್ರ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ ೨೦೧೭

ಚೆನ್ನವೀರ ಕಣವಿ ಸಂದರ್ಶನ : ಸಂ. ಡಾ. ಜಿ. ಎಂ. ಹೆಗಡೆ :
ಸಂವಹನ ಪ್ರಕಾಶನ, ಮೈಸೂರು ೨೦೧೮

ಚೆನ್ನವೀರ ಕಣವಿ ಕಾವ್ಯದರ್ಶನ : ವಿಕ್ರಮ ವಿಸಾಜಿ :
ಕೆ. ಎಸ್. ನರಸಿಂಹಸ್ವಾಮಿ ಟ್ರಸ್ಟ್, ಮಂಡ್ಯ ೨೦೧೮

ಚೆಂಬೆಳಕಿನ ಕವಿ ಚೆನ್ನವೀರ ಕಣವಿ : ಡಾ. ಜಿ. ಎಂ. ಹೆಗಡೆ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೧೯

Inviting Life : (ಆಯ್ದ ಕವಿತೆಗಳ ಇಂಗ್ಲಿಷ್ ಅನುವಾದ) ೨೦೦೩
ಸಂ : ಡಾ. ಕೆ. ರಾಘವೇಂದ್ರ ರಾವ್,
ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಮಾಯಣ್ಣ, ಬೆಂಗಳೂರು ನಗರ
ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ
ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ
ಶ್ರೀ ನಾಗಾನಂದ ಕೆಂಪರಾಜ್, ಕೋಲಾರ
ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ
ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು
ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ
ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ
ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ
ಡಾ. ವೈ.ಡಿ. ರಾಜಣ್ಣ, ಮೈಸೂರು
ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ
ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ
ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ
ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು
ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು
ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ
ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ
ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ
ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ
ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ
ಡಾ. ಲಿಂಗರಾಜ ರು. ಅಂಗಡಿ, ಧಾರವಾಡ
ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ
ಶ್ರೀ ಶರಣು ಗೋಗೇರಿ, ಗದಗ
ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ
ಶ್ರೀ ಸುರೇಶ ಚನಶೆಟ್ಟಿ, ಬೀದರ್
ಡಾ.ಬಸವಪ್ರಭು ಪಾಟೀಲ ಬೆಟ್ಟದೂರು,ರಾಯಚೂರು
ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ
ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ
ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ
ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ
ಡಾ. ತಮಿಳ್ ಸೆಲ್ವಿ, ತಮಿಳುನಾಡು
ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ
ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

೮೪ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
ಡಾ. ರಮೇಶ ಲಂಡನಕರ


ಸರ್ಕಾರದ ಪ್ರತಿನಿಧಿ :
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
ಡಾ. ವಸುಂಧರಾ ಭೂಪತಿ ಮತ್ತು
ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು
ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :
ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :
ಶ್ರೀ ಶೇಖರಗೌಡ ಮಾಲಿಪಾಟೀಲ



ನಿಮ್ಮ ಹಾಗೆ ನಿಮ್ಮ ಕವಿತೆ

ನಿರಂತರವಾಗಿ ತೊರೆ ಮೊರೆವ ಹಚ್ಚ ಹಸುರಿನ
ಕಣಿವೆ ; ಗುಡುಗು ಮಿಂಚುಗಳ ಗದ್ದಲವಿರದ
ಶ್ರಾವಣದ ಬೆಳ್ಮೋಡಗಳ ಹಾಯಾಗಿ ಹರಡಿ-
ಕೊಂಡಾಕಾಶ, ಚೆಂಬೆಳಕು ತುಳುಕುವಂಗಳದ-

ಮರಗಿಡ ಬಳ್ಳಿ ಹೂ ಹಕ್ಕಿ ನಾಯಿಗಳ ಜತೆಗೆ
ಮಾತನಾಡುತ್ತಲೇ ಸುತ್ತಣ ಜಗತ್ತಿಗೆದೆ
ತೆರೆದು ಮೌನದನುಸಂಧಾನ. ಮೃದುವಚನ
ಮೂಲೋಕವನೆ ಗೆಲ್ಲುವುದೆಂಬ ನಂಬಿಕೆ-

ಯನ್ನು ನಿಕಷಕ್ಕೊಡ್ಡಿ, ಈ ಪಂಚತಂತ್ರ ಪ್ರ-
ಪಂಚದಬ್ಬರದ ನಡುವೆಯೂ ತೂಕ
ತಪ್ಪದ ನಿಲುವು. ಅಲ್ಲಿಂದ ಇಲ್ಲಿಂದ ಎಲ್ಲಿಂದಲೋ
ಬಂದ ಬೆಳಕುಗಳನ್ನು ಪ್ರಸನ್ನತೆಯ ಪಾಕ-

ದಲ್ಲಿ ಹರಳುಗೊಳಿಸುತ್ತ ಸಾನೆಟ್ಟುಗಳ ಗುಡಿ
ಕಟ್ಟಿ ಒಳಗೊಂದು ಪ್ರೀತಿಯ ಹಣತೆ
ಹಚ್ಚಿಡುವ ಕಲೆಗಾರಿಕೆಗೆ ಲೋಕವೆ ಬೆರಗು;
ಬೇರೆ ಬಣ್ಣನೆ ಬೇಕೆ ? ನಿಮ್ಮ ಹಾಗೇ ನಿಮ್ಮ ಕವಿತೆ.

– ಜಿ.ಎಸ್. ಶಿವರುದ್ರಪ್ಪ

ರೂ.೧೨೦/-

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.